ದಶಕದ ದೃಶ್ಯಕಲಾ ಸಾಹಿತ್ಯ
ವಿಮರ್ಶಾತ್ಮಕ ಅಧ್ಯಯನ (೨೦೦೪-೨೦೧೪)

ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಸಂಶೋಧನ ಪ್ರಬಂಧ

ಸಂಶೋಧಕರು
ವೆಂಕಟೇಶ ಪಾಟೀಲ

ಮಾರ್ಗದರ್ಶಕರು
ಡಾ.ಲಕ್ಷ್ಮಣಸಿಂಗ್ ಆರ್.ರಾಥೋಡ್

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩ ೨೭೬

1195

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

Shri Mahantesh
BOOK BINDIN
Digital Colour Pri
Laser Prints & xe
1st Fllor Stadiam Complex KCD Ro

S|೧೦-1195 1195

ವಿದ್ಯಾರಣ್ಯ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

1195

ದಶಕದ ದೃಶ್ಯಕಲಾ ಸಾಹಿತ್ಯ

ವಿಮರ್ಶಾತ್ಮಕ ಅಧ್ಯಯನ

ಎಂ.ಫಿಲ್. ಪದವಿಯ ಭಾಗಶಃ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಸಂಶೋಧನ ಪ್ರಬಂಧ

ಶಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಶೋಧಕರು
ವೆಂಕಟೇಶ ಪಾಟೀಲ

ಮಾರ್ಗದರ್ಶಕರು
ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್
ಉಪನ್ಯಾಸಕರು
ಚಾಮರಾಜೇಂದ್ರ ಸರಕಾರಿ ದೃಶ್ಯಕಲಾ ಕಾಲೇಜು
ಮೈಸೂರು

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ-೫೮೩೨೭೬
೨೦೧೫

AKSHARA GRANTHALAYA
ACC.NO. 131599

709
PAT
131599

ಘೋಷಣಾ ಪತ್ರ

ದಶಕದ ದೃಶ್ಯಕಲಾ ಸಾಹಿತ್ಯ : ವಿಮರ್ಶಾತ್ಮಕ ಅಧ್ಯಯನ ಎಂಬ ಶೀರ್ಷಿಕೆಯ ಸಂಶೋಧನ ಪ್ರಬಂಧವನ್ನು ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಯ ಭಾಗಶ: ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸಲಾಗಿದೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗಾಗಿ ಎಲ್ಲಿಯೂ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Patil

ದಿನಾಂಕ : 26/08/2015
ಸ್ಥಳ : ವಿದ್ಯಾರಣ್ಯ

ವೆಂಕಟೇಶ ಪಾಟೀಲ
ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪ್ರಮಾಣ ಪತ್ರ

ವೆಂಕಟೇಶ ಪಾಟೀಲ ಅವರು **ದಶಕದ ದೃಶ್ಯಕಲಾ ಸಾಹಿತ್ಯ : ವಿಮರ್ಶಾತ್ಮಕ ಅಧ್ಯಯನ** ಎಂಬ ಶೀರ್ಷಿಕೆಯ ಸಂಶೋಧನ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿರುತ್ತಾರೆ.

ಪ್ರಸ್ತುತ ಈ ಸಂಶೋಧನ ಪ್ರಬಂಧವು ಈ ಮೊದಲು ಇಡೀಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್

ಉಪನ್ಯಾಸಕರು

ಚಾಮರಾಜೇಂದ್ರ ಸರಕಾರಿ ದೃಶ್ಯಕಲಾ ಕಾಲೇಜು, ಮೈಸೂರು

ದಿನಾಂಕ :

ಸ್ಥಳ :

ಪರಿವಿಡಿ:

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಆದಿಮ ಕಾಲದಿಂದ ಆಧುನಿಕಕಾಲದವರೆಗಿನ ಮನುಷ್ಯನ ಕ್ರಿಯಾಶೀಲತೆಯು ಈ ಭೂಮಿಯ ಮೇಲೆ ನಾಗರಿಕತೆ ಮತ್ತು ಸಂಸ್ಕೃತಿಗಳೆರಡನ್ನು ನೆಲೆಗೊಳಿಸುವಂತೆ ಮಾಡಿದೆ. ಮನುಷ್ಯನ ಕ್ರಿಯಾಶೀಲತೆಗೆ ಹಸಿವು ಮತ್ತು ಕುತೂಹಲಗಳೆಂಬ ಎರಡು ಸಂಗತಿಗಳು ಕಾರಣವಾಗುತ್ತಿವೆ ಎನ್ನಬಹುದು. ಮಾನವ ತನ್ನ ಮೂಲಭೂತ ಅಗತ್ಯತೆಗಳನ್ನು ಈಡೇರಿಸಿಕೊಳ್ಳುವುದರ ಜೊತೆಗೆ ತನ್ನ ಬದುಕನ್ನು ವಿಸ್ತರಿಸಿಕೊಳ್ಳುವ ದಿಶೆಯಲ್ಲಿ ಕಲೆಯು ಉದಯಿಸಿತೆನ್ನಬಹುದು. ಮನುಷ್ಯ ತನ್ನ ಸಾಮರ್ಥ್ಯದ ಇತಿಮಿತಿಗಳ ಪರಿಧಿಯಲ್ಲಿಯೇ ತನ್ನ ಅಗಮ್ಯ ಕಲ್ಪನೆಯನ್ನು ವಾಸ್ತವೀಕರಿಸುವ ಪ್ರಕ್ರಿಯೆಯಲ್ಲಿ ಸ್ಫುರಿತವಾದ ಕಲೆಯು ಸೃಜನಶೀಲ ಅಂಶವಾಗಿ, ಬದುಕಿನ ಭಾಗವಾಗಿ, ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿ ಇವತ್ತಿನ ಉನ್ನತವಾದ ಜೀವನಪ್ರಜ್ಞೆಗೆ ಕಾರಣವಾಯಿತು. ಹೀಗೆ ಬದುಕಿನ ಆತ್ಯಂತಿಕ ಪಾತ್ರವನ್ನು ನಿರ್ವಹಿಸುವ 'ಕಲೆ' ಸೃಷ್ಟಿಗೊಂಡ ಬೆನ್ನಲ್ಲೇ ಅದರ ಬಗೆಗಿನ ಸಿದ್ಧಾಂತಗಳೂ ಮೈದಳೆದವು. ಇಂದಿನ ವೈಜ್ಞಾನಿಕ ಮಾನವಿಕ ಚಿಂತನೆಗಳಂತೆ ಲಲಿತಕಲೆಗಳ ಚಿಂತನೆ, ವಿಮರ್ಶೆಗಳು ಬೆಳೆದವು. ಅದೇ ರೀತಿಯಲ್ಲಿ ದೃಶ್ಯಕಲೆಗಳಾದ ಚಿತ್ರ ಮತ್ತು ಶಿಲ್ಪಕಲೆಗಳ ಬಗೆಗೂ ಚಿಂತನೆಗಳು ನಡೆದಿರುವುದು ಕ್ರಾಂತಿಕಾರಿ ಬದಲಾವಣೆ ಎನ್ನಬಹುದು.

ದೃಶ್ಯಕಲೆಯ ಸ್ವರೂಪ, ವ್ಯಾಪ್ತಿ ಮತ್ತು ಅದರ ತಾತ್ವಿಕತೆಯನ್ನು ಕಂಡರಿಸುವ ನಿಟ್ಟಿನಲ್ಲಿ ಸಾಹಿತ್ಯವು ಒಂದು ಪ್ರಭಾವೀ ಮಾಧ್ಯಮವಾಗಿದೆ. ದೃಶ್ಯಭಾಷೆಗೆ ಒಂದು ಶಾಬ್ದಿಕಶರೀರ ಕೊಡುವುದರಲ್ಲಿ, ಕಲೆಯ ಆಳ-ಅಂತರಾಳಗಳನ್ನು ಅರಿತುಕೊಳ್ಳುವಲ್ಲಿ ಸಾಹಿತ್ಯದ ಪಾತ್ರ ಪ್ರಮುಖವಾದುದು. ಕಲೆಯನ್ನು ವಿಮರ್ಶಿಸುವ ಮತ್ತು ಅದರ ಸಾಧ್ಯತೆಗಳಿಗೆ ಶಾಬ್ದಿಕಆಯಾಮವನ್ನು ನೀಡುವ ಮೂಲಕ ಹೊಸ ಬಗೆಯಲ್ಲಿ ವಿವೇಚಿಸುವ ಮತ್ತು ಪ್ರವೇಶಿಸುವ ನಿಟ್ಟಿನಲ್ಲಿ ಕಲಾಸಾಹಿತ್ಯದ ಸ್ವರೂಪ ವಿಸ್ತಾರವಾದುದು ಎನ್ನಬಹುದು. ಇತ್ತೀಚಿನ ದಿನಗಳಲ್ಲಿ ಈ ಕಲಾಸಾಹಿತ್ಯ ಪ್ರತ್ಯೇಕವಾಗಿ ತನ್ನ ಅಸ್ತಿತ್ವವನ್ನು ಪಡೆಯುತ್ತಿದೆ. ಸೃಜನಸಾಹಿತ್ಯಕ್ಕೆ ಇರುವಂತೆ ವಿಮರ್ಶೆ, ಸಂಪಾದನೆ, ಜೀವನ ಚರಿತ್ರೆ, ಪ್ರವಾಸಸಾಹಿತ್ಯ, ವೈಚಾರಿಕತೆ ಮುಂತಾದ ಪ್ರಕಾರಗಳು ದೃಶ್ಯಕಲಾ ಸಾಹಿತ್ಯದಲ್ಲೂ ಇವೆ.

ಲಲಿತಕಲೆಗಳ ಕುರಿತಾಗಿ ಸಾಹಿತ್ಯವನ್ನು ಪಾಶ್ಚಿಮಾತ್ಯರು ಪ್ರತ್ಯೇಕವಾಗಿಯೇ ರಚಿಸುವ, ಅಭ್ಯಸಿಸುವ ಕ್ರಮವನ್ನು ಬಹಳ ಹಿಂದೆಯೇ ಕಂಡುಕೊಂಡಿದ್ದರು. ಆದರೆ ಭಾರತೀಯರು ಕಲಾಸಾಹಿತ್ಯವನ್ನು ಪ್ರತ್ಯೇಕವಾಗಿ ಕಾಣದೆ ಅಧ್ಯಯನವನ್ನು ಕೈಗೊಂಡು, ಸಾಂದರ್ಭಿಕವಾಗಿ ರಚಿಸತೊಡಗಿದರು. ಇಂದು ಈ ಲಲಿತಕಲಾ ಸಾಹಿತ್ಯವನ್ನು ಒಂದು ಪ್ರತ್ಯೇಕ ಜ್ಞಾನಶಿಸ್ತಿನ ನೆಲೆಯಲ್ಲಿ ರಚಿಸುವ ಮತ್ತು ಅಧ್ಯಯನ ಮಾಡುವ ದಿಶೆಯಲ್ಲಿ ಮಹತ್ವದ ಬದಲಾವಣೆಯನ್ನು ಕಂಡುಕೊಳ್ಳಲಾಗಿದೆ.

ಸಾಹಿತ್ಯದಲ್ಲಿ ಕತೆ, ಕಾದಂಬರಿ, ನಾಟಕ, ವಿಮರ್ಶೆ, ಸಂಶೋಧನೆ, ಸಂಪಾದನೆ, ಅನುವಾದ, ಪ್ರವಾಸ ಕಥನ, ಜೀವನಚರಿತ್ರೆಗಳಿರುವಂತೆ, ದೃಶ್ಯಕಲಾ ಸಾಹಿತ್ಯದಲ್ಲೂ ಇಂದು ಸಂಪಾದನೆ, ವಿಮರ್ಶೆ, ವೈಚಾರಿಕತೆ, ಪ್ರವಾಸಸಾಹಿತ್ಯ, ಪತ್ರಿಕಾಸಾಹಿತ್ಯ, ಕ್ಯಾಟಲಾಗ್‌ಗಳಲ್ಲಿ ವಿಸ್ತಿರಸಿರುವ ಕಲಾಸಾಹಿತ್ಯ ಇತ್ತೀಚಿನ ದಿನಗಳಲ್ಲಿ ಹೆಚ್ಚು ರಚಿತವಾಗುತ್ತಿರುವುರಿಂದ ಕಲಾಸಾಹಿತ್ಯದ ಒಟ್ಟು ಚರಿತ್ರೆಯ ಕಲ್ಪನೆಯನ್ನು ಒಂದೆಡೆ ಸೇರಿಸುವ ಅನಿವಾರ್ಯತೆ ಇದೆ. ಆಧುನಿಕ ಸಂದರ್ಭಲ್ಲಿ ಕಲಾಸಾಹಿತ್ಯ ವಿಮರ್ಶೆಯಲ್ಲಿ, ಸೌಂದರ್ಯಶಾಸ್ತ್ರದ ನೆಲೆಯಲ್ಲಿ ಮಾತ್ರ ಚರ್ಚೆಮಾಡದೆ, ಸಾಮಾಜಿಕ, ಧಾರ್ಮಿಕ, ವೈಚಾರಿಕ, ಸ್ತ್ರೀವಾದ ಮುಂತಾದ ವಿಷಯಗಳ ನೆಲೆಗಳನ್ನು ಕೂಡಾ ಕಾಣಬಹುದಾಗಿದೆ. ‘ಕಲೆ’ ಕೇವಲ ಮನರಂಜನೆಯ ಸಾಧನವಾಗಿರದೆ ಅದು ಸಾಮಾಜಿಕ, ವ್ಯವಹಾರಿಕ ಆಯಾಮವನ್ನು ಹೊಂದಿ, ಸಮಕಾಲೀನವಾಗುತ್ತಿರುವ ಅಂಶವನ್ನು ಕಂಡರಿಸುವ ದಿಶೆಯಲ್ಲಿ ಸಾಹಿತ್ಯವು ಪ್ರಮುಖಪಾತ್ರ ವಹಿಸುತ್ತದೆ. ಈ ರೀತಿಯಲ್ಲಿ ಮಹತ್ವದ ಅಂಶಗಳನ್ನು ತನ್ನೊಳಗೆ ಅಡಗಿಸಿಟ್ಟುಕೊಂಡ ಕಲಾಸಾಹಿತ್ಯವನ್ನು ಅಭ್ಯಸಿಸುವ ಮತ್ತು ಆ ಮೂಲಕ ‘ಸೃಷ್ಟಿ’ಕ್ರಿಯೆಯೊಂದನ್ನು ವಿವಿಧ ‘ದೃಷ್ಟಿ’ಕೋನದಲ್ಲಿ ನೋಡಿ, ಅದರ ಇತಿಮಿತಿ ಸಾಧ್ಯತೆಗಳನ್ನು, ಅದರ ವ್ಯಾಪಕತೆಯನ್ನು ಕಂಡುಕೊಳ್ಳುವುದು ಇಂದು ಮಹತ್ವವನ್ನು ಪಡೆಯುತ್ತದೆ ಎನ್ನಬಹುದು. ಈ ಹಿನ್ನೆಲೆಯಲ್ಲಿ ಕಲಾಸಾಹಿತ್ಯದ ವಿಮರ್ಶೆಯು ಇಲ್ಲಿ ಪರೋಕ್ಷವಾಗಿ ಕಲೆಯ ವಿಮರ್ಶೆಯೆ ಆಗಿರುತ್ತದೆ ಎಂದರೆ ತಪ್ಪಾಗದು.

ಕಲಾಸಾಹಿತ್ಯವನ್ನು ಪ್ರಾರಂಭದ ದಿನಗಳಲ್ಲಿ ಪ್ರಸಿದ್ಧ ಕವಿಗಳು, ಸಾಹಿತಿಗಳು, ರಚನೆಮಾಡಿದರು. ಭಾರತದಲ್ಲಿ ಬ್ರಿಟೀಷರ ಆಗಮನದ ನಂತರ ಎಲ್ಲ ಕ್ಷೇತ್ರದಲ್ಲೂ ಕ್ರಾಂತಿಯಾದಂತೆ ಕಲಾ ಕ್ಷೇತ್ರದಲ್ಲಿಯೂ ಬದಲಾವಣೆಗಳಾದ ಸಂದರ್ಭದಲ್ಲಿ, ಇ.ಬಿ.ಹ್ಯಾವೆಲ್‌ರು ಭಾರತೀಯ ಕಲೆಗೆ ತಮ್ಮದೇ ಆದ ಕೊಡುಗೆ ನೀಡಿದರು. ಪಾಶ್ಚಿಮಾತ್ಯರ ಕಲಾಭ್ಯಾಸದ ಮಾದರಿಯ ಜೊತೆಗೆ ಭಾರತೀಯ ಕಲೆಯ ಪುನರುತ್ಥಾನಕ್ಕೆ ಕಾರಣರಾದ ಹ್ಯಾವೆಲ್‌ರು ಕಲೆಗೆ ಪ್ರತ್ಯೇಕ ಅಸ್ತಿತ್ವವನ್ನು ತಂದುಕೊಟ್ಟರು. ಕಲೆಯ ಕುರಿತಾದ ಹ್ಯಾವೆಲ್‌ರ ಬರವಣಿಗೆಯು ಅಂದಿಗೆ ಸ್ವತಂತ್ರ್ಯ ಸ್ವರೂಪವನ್ನು ಪಡೆಯಿತೆನ್ನಬಹುದು. ಆನಂತರದಲ್ಲಿ ಆನಂದಕುಮಾರಸ್ವಾಮಿಯವರು ಭಾರತೀಯ ಕಲೆಯ ಕುರಿತಾಗಿ ಅಪಾರ ಕುತೂಹಲ ಹೊಂದಿದವರಾಗಿರುವರು. ಭಾರತೀಯ ಕಲೆಯ ಶ್ರೇಷ್ಠತೆಯನ್ನು ಅದರ ಧಾರ್ಮಿಕ, ಸಾಮಾಜಿಕ

ಸಂಬಂಧಗಳನ್ನು ತಮ್ಮ ಕೃತಿಗಳಲ್ಲಿ ಚರ್ಚಿಸಿದರು. ಭಾರತೀಯ ಕಲೆಯ ವೈಶಿಷ್ಟ್ಯವನ್ನು ವಿವರಿಸುವ ಮೂಲಕ ಭಾರತೀಯ ಜನಜೀವನದ ಜೀವವಾಳವನ್ನು ಕಂಡರಿಸಿದರು. ಕಲೆಯ ಮೂಲಕ ದೇಶದ ಸಂಸ್ಕೃತಿಯನ್ನು ಅರಿತುಕೊಳ್ಳುವ ದಿಶೆಯಲ್ಲಿ ಕುಮಾರಸ್ವಾಮಿಯವರ ಪ್ರಯತ್ನ ಅಮೋಘವಾದದ್ದೆನ್ನಬಹುದು. ಅಂತೆಯೇ ಅವರ ಕೃತಿಗಳೂ ಕೂಡಾ ಕಲಾಸಾಹಿತ್ಯದ ಅಗ್ರಪಂಕ್ತಿಯಲ್ಲಿ ಅಲಂಕರಿಸಿವೆ. ಅವರ The history of Indian & Indonesion art (1910), Rajaput (1916) painting Shivatandava (1918), Art and swadeshi, The Art and Sculpture Indian & Shilon (1913), Elements of Buddist Iconogaphy ಮುಂತಾದ ಕೃತಿಗಳು ಭಾರತೀಯ ಸಂಸ್ಕೃತಿ ಹಾಗೂ ಕಲೆಯ ಮೇಲೆ ಬೆಳಕು ಚೆಲ್ಲುತ್ತವೆ. ಅಂತೆಯೇ ಉತ್ತಮ ಕಲಾಸಾಹಿತ್ಯ ಕೃತಿಗಳಾಗಿವೆ. ಭಾರತೀಯ ಕಲಾಸಾಹಿತ್ಯ ಚರಿತ್ರೆಯಲ್ಲಿ ಮಹತ್ವದಪಾತ್ರವನ್ನು ವಹಿಸುತ್ತವೆ.

ಕನ್ನಡದಲ್ಲಿ ಕಲಾಸಾಹಿತ್ಯ ಚರಿತ್ರೆಯನ್ನು ವಿಶ್ಲೇಷಿಸುವುದಾದರೆ, ಕಲೆಯ ಕುರಿತಾಗಿಯೇ ಡಾ. ಶಿವರಾಮಕಾರಂತರು ಕೃತಿಗಳನ್ನು ರಚಿಸಿದ ಮೊದಲಿಗರೆನ್ನಬಹುದು. ಆ ಮೊದಲು ಕಲಾಸಾಹಿತ್ಯ ಕೃತಿಗಳು ಅಥವಾ ಕಲೆಯ ಕುರಿತಾದ ಲೇಖನಗಳು ವಿರಳವಾಗಿಯೇ ಕಾಣಸಿಗುತ್ತವೆ. ಶಿವರಾಮಕಾರಂತರು ಭಾರತೀಯ ಚಿತ್ರಕಲೆ, ಕಲಾಪ್ರಪಂಚ, ಭಾರತೀಯ ಕಲೆ, ಕಲೆಯದರ್ಶನ ಮುಂತಾದ ಕೃತಿಗಳನ್ನು ರಚಿಸಿ ಭಾರತೀಯ ಹಾಗೂ ಪಾಶ್ಚಿಮಾತ್ಯ ಕಲೆಯಮೇಲೆ ಬೆಳಕು ಚೆಲ್ಲಿದರು. ಅದರಂತೆ ವಿ. ಕೃ. ಗೋಕಾಕ್ ಅವರು ಕಲೆಯ ಮೀಮಾಂಸೆಯ ಕುರಿತಾಗಿ ತಮ್ಮ ಕೃತಿಗಳಲ್ಲಿ ಚರ್ಚಿಸಿದರು. ನಂತರ ಬಂದ ಸಾಹಿತಿಗಳಾದ ಎಂ. ವಿ. ಸೀತಾರಾಮಯ್ಯ, ಅ. ನ. ಕೃ, ಎಂ. ಎಚ್. ಕೃಷ್ಣಯ್ಯ, ಅ.ಲ.ನ, ಅ. ಸುಂದರ ಮುಂತಾದವರು ಕಲಾಸಾಹಿತ್ಯವನ್ನು ರಚಿಸಲು ಮೊದಲಾದರು. ಸೌಂದರ್ಯ ಮಿಮಾಂಸೆ, ವ್ಯಕ್ತಿಕೇಂದ್ರಿತ ಕೃತಿಗಳು ಮುಂತಾಗಿ, ಕನ್ನಡದ ಕಲಾಸಾಹಿತ್ಯದಲ್ಲಿ ಕೃತಿಗಳು ಪ್ರಕಟಗೊಂಡು, ಕಲೆಯ ಬಗೆಗಿನ ವೈವಿಧ್ಯಮಯ ವಿಷಯಗಳು ಬೆಳಕು ಕಂಡವು. ವಿ. ಕೃ. ಗೋಕಾಕ್, ಶಿವರಾಮಕಾರಂತರ ನಂತರದಲ್ಲಿ ಕೃತಿಗಳನ್ನು ಕನ್ನಡದ ಪ್ರಸಿದ್ಧ ವಿಮರ್ಶಕರಾದ ಕೀರ್ತಿನಾಥ ಕುರ್ತುಕೋಟಿಯವರು ಕಲೆಯ ಕುರಿತಾಗಿ ಕೆಲವು ಲೇಖನಗಳನ್ನು ಬರೆದರು. ಅವು ಕಲೆಯ ಮೀಮಾಂಸಾ ವಿಷಯಗಳನ್ನು ಒಳಗೊಂಡಿದ್ದು ಸತ್ವಯುತವಾದವುಗಳಾಗಿವೆ ಹಾಗೂ ಕಲೆಯ ವಿಮರ್ಶೆಯಲ್ಲಿ ಮಹತ್ವಪೂರ್ಣ ಸ್ಥಾನವನ್ನು ಪಡೆದಿವೆ. ಕುರ್ತುಕೋಟಿಯವರಂತೆ ಅ.ಸುಂದರ, ಎಂ. ಎಚ್. ಕೃಷ್ಣಯ್ಯ, ಅ.ಲ. ನರಸಿಂಹನ್, ಮರಿಶಾಮಾಚಾರ್, ಮುಂತಾದ ವಿದ್ವಾಂಸರು ಕಲಾಸಾಹಿತ್ಯಕ್ಕೆ ಅಪಾರವಾದ ಕೊಡುಗೆ ನೀಡಿದರು. ಇವರ ಕೃತಿಗಳು ಕಲಾಸಾಹಿತ್ಯಕ್ಕೆ ಭದ್ರವಾದ ನೆಲೆಯನ್ನು ಒದಗಿಸಿಕೊಟ್ಟವೆನ್ನಬಹುದು. ಇಂಗ್ಲೀಷ ಭಾಷೆಯಿಂದ ಕನ್ನಡಕ್ಕೆ ವಸಾಹಾತೋತ್ತರ ಕಾಲದಲ್ಲಿ ಹಲವಾರು ಕೃತಿಗಳು ಅನುವಾದಗೊಂಡವು. ಹೀಗೆ ಅನುವಾದ ಗೊಂಡವುಗಳಲ್ಲಿ ಲಿಯೋಟಾಲ್ಸ್ಟಾಯ್ ಅವರ ಕೃತಿ "What is Art" ಇದನ್ನು ಕನ್ನಡದಲ್ಲಿ

ಸಿ.ಪಿ.ಕೆ.ಯವರು ಅನುವಾದಿಸಿದರು. ೧೯೨೧ ರಲ್ಲಿ ವಿಶ್ವಕವಿ ರವೀಂದ್ರನಾಥರವರು ಕಲೆಯನ್ನು ಕುರಿತು ಬರೆದ ಇಂಗ್ಲೀಷ ಪ್ರಬಂಧವನ್ನು ಕನ್ನಡದಲ್ಲಿ ಕಲೆಯ ಅರ್ಥವೆಂದು ಎಚ್. ಎಸ್. ಶ್ರೀಮತಿಯವರು ಬರೆದಿದ್ದರು. ೧೯೭೬ ರಲ್ಲಿ ತೆಲಗು ಮೂಲದ ಕೃತಿಯನ್ನು ಕನ್ನಡದಲ್ಲಿ "ರಸ ರೇಖೆ" ಎಂದು ಹರಿಹರಪ್ರಿಯ ಅವರು ಬರೆದರು. ಹೀಗೆ ರಚಿತವಾದ ಕೃತಿಗಳು ಕನ್ನಡದಲ್ಲಿ ಪಾಶ್ಚಿಮಾತ್ಯ ಭಾರತೀಯ ಕಲೆಯ ಕುರಿತಾದ ವಿಫುಲಾದ ಮಾಹಿತಿಯನ್ನು ಒಳಗೊಂಡು ಓದುಗರಿಗೆ ಕನ್ನಡದಲ್ಲಿ ಜಾಗತಿಕಮಟ್ಟದ ಕಲೆಯ ಸ್ವರೂಪವನ್ನು ಪರಿಚಯಿಸಿದವು. ಹೀಗೆ ಅನುವಾದ, ಸಂಪಾದನೆ, ಪ್ರವಾಸ, ವಿಮರ್ಶೆ ಮುಂತಾದ ಪ್ರಕಾರಗಳಲ್ಲಿ ಕಲಾಸಾಹಿತ್ಯ ವಸಹಾತುಕಾಲ ಹಾಗೂ ನಂತರದಲ್ಲಿಯೂ ತನ್ನ ಅಸ್ತಿತ್ವವನ್ನ ಪಡೆಯಿತು.

ಪ್ರಾರಂಭದಲ್ಲಿ ಕಲಾಸಾಹಿತ್ಯ ಕಲಾವಿದವರಲ್ಲದವರಿಂದ ಪ್ರಾರಂಭವಾಯಿತೆನ್ನಬಹುದು. ಕ್ಷೇತ್ರವಲ್ಲದವರಿಂದ ರಚಿತವಾಗಿಯೂ, ಒಂದುಹಂತದಲ್ಲಿ ರಚನೆಗೊಂಡ ಸಾಹಿತ್ಯವು ಪ್ರಬುದ್ಧವಾಗಿ ರೂಪುಗೊಂಡು ಆರಂಭಿಕ ಹಂತದಲ್ಲಿ ವಿಸ್ತೃತಿಯನ್ನು ಹೊಂದಿತು. ಮುಂದೆ ಬರಬರುತ್ತ ಕಲಾವಿದರೇ ಕಲೆಯ ಬರವಣಿಗೆಗೆ ತೊಡಗಿದರು. ಇದರಿಂದ ಕಲೆಯ ವಾಸ್ತವಿಕ ಅಂಶಗಳನ್ನು ಕಂಡರಿಸಲು ಸಾಧ್ಯವಾಯಿತು. ಕಲೆಯನ್ನು ಆಳವಾಗಿ ಅಭ್ಯಸಿಸಲು ಹಾಗೂ ತಿಳಿಯಲು ಕಲಾವಿದರು ರಚಿಸಿದ ಕಲಾಬರವಣಿಗೆಗಳು ಪ್ರಮುಖವಾದವು. ಕಲೆಯ ರಚನೆ, ವಿಧಾನ, ತಂತ್ರಗಾರಿಕೆ, ಬಣ್ಣಗಾರಿಕೆ ಮಾಧ್ಯಮ, ಮೈವಳಿಕೆ ಮುಂತಾದ ಭೌತಿಕ ಅಂಶಗಳೊಂದಿಗೆ ಅದರ ವಸ್ತುವಿಷಯವನ್ನು ಹೇಳುವಲ್ಲಿ ಕಲಾವಿದರು ಸಮರ್ಥರಾದರು. ಅಲ್ಲದೆ ತಮ್ಮ ಬರವಣಿಗೆಯ ಮೂಲಕ ಸಾಫಲ್ಯ ಪಡೆದರು ಎನ್ನಬಹುದು. ಸರಳ ಹಾಗೂ ಸುಂದರವಾದ ಭಾಷೆಯಲ್ಲಿ ಬರೆದ ಕಲಾವಿದರು ಕಲೆಯನ್ನು ಇನ್ನಷ್ಟು ಸೊಗಸಾಗಿ ಅರ್ಥೈಸುವ ದಿಶೆಯಲ್ಲಿ ದಿಟ್ಟಹೆಜ್ಜೆಯನ್ನಿರಿಸಿದರೆಂದೇ ಹೇಳಬಹುದು. ಇಂದಿನ ದಿನಗಳಲ್ಲಿ ಕಲಾವಿದರು ಕಲೆಯನ್ನು ರಚಿಸುವ, ನೋಡುವ, ಗ್ರಹಿಸುವ, ಹಾಗೂ ವಿಮರ್ಶಿಸುವ, ಮಟ್ಟಕ್ಕೂ ಬೆಳೆದಿದ್ದಾರೆ ಎನ್ನಬಹುದು. ಕಲಾವಿದ ಕಲಾಕೃತಿಯ ಜೊತೆಗಿನ ತನ್ನ ಸಂಬಂಧವನ್ನು ತಿಳಿದಂತೆ, ಸಹೃದಯನ ಸಂಬಂಧವನ್ನು ಅರಿತುಕೊಳ್ಳುವ ದಿಶೆಯಲ್ಲಿ ಸಾಗುತ್ತಿದ್ದಾನೆ. ಈ ಹಿನ್ನೆಲೆಯಲ್ಲಿ ಕಲೆಯ ಬರವಣಿಗೆ ಸತ್ವಯುತವಾಗಿದೆ. ಕಲಾವಿದ ದೃಶ್ಯಭಾಷೆಗೆ ಶಾಬ್ದಿಕ ಆಯಾಮವನ್ನು ಒದಗಿಸುವಲ್ಲಿ ಉದಯೋನ್ಮುಖನಾಗುತ್ತಿದ್ದಾನೆ. ಈ ಎಲ್ಲ ಅಂಶಗಳಿಂದ, ಕಲಾಸಾಹಿತ್ಯ, ಆಧುನಿಕ ಸಂದರ್ಭದಲ್ಲಿ ಹೆಚ್ಚು ವಿಮರ್ಶಾ ಅಂಶಗಳನ್ನು ಒಳಗೊಳ್ಳುತ್ತಿದೆ. ಹಾಗೂ ಆಧುನಿಕ ಕಲೆಯ ಸಂದರ್ಭದಲ್ಲಿ ಸೃಜನಾತ್ಮಕ ಎಂಬ ಸಂಗತಿಯು ಮಹತ್ವ ಪಡೆದಂತೆ ಅದರ ಬಗೆಗಿನ ಸಾಹಿತ್ಯವೂಕೂಡಾ ಸೃಜನಶೀಲ ಸಂದರ್ಭದ, ಅಂದರೆ ನವ್ಯಕಲೆಯ ವಿಚಾರವನ್ನು ಅದರ ತಾತ್ವಿಕತೆಯನ್ನು ಒಳಗೊಂಡಿದೆ ಎಂದರೆ ತಪ್ಪಾಗದು. ಇಲ್ಲಿ ಇತಿಹಾಸದಲ್ಲಿ ಸೃಜನಶೀಲ ಎಂಬುದು ಮಹತ್ವ ಪಡೆಯದೆ ಸಮಕಾಲೀನ ಎನ್ನುವಲ್ಲಿ ಈ ಸೃಜನಶೀಲವು ಹೆಚ್ಚು ಅರ್ಥಪೂರ್ಣನಾಗುವಂತಹದ್ದು. ಹೊಸದನ್ನು ನಿರೀಕ್ಷೆ ಮಾಡುವ ಈ ಲೋಕದ ಪ್ರಸ್ತುತ

ಆಕಾಂಕ್ಷೆಗಳಿಗೆ ಪೂರಕವಾದುದನ್ನೆ ಸೃಜನಶೀಲವು ಒಳಗೊಳ್ಳುತ್ತದೆ. ಈ ಅಂಶವು ಲೋಕದಿಂದಲೇ ಪಡೆದು, ಲೋಕಕ್ಕೆ ಅರ್ಪಣೆ ಮಾಡುವ ಪ್ರಕ್ರಿಯೆಯಲ್ಲಿ ಕಲಾವಿದ ತನ್ನತನವನ್ನು ತುಂಬಿಕಳಿಸುವ ಒಂದು ವ್ಯವಸ್ಥೆಯಾಗಿದ್ದು, ಅದು ಸಮಕಾಲಿನದಿಂದ ಹೊರತಾಗದಂತಹದ್ದು ಎನ್ನಬಹುದು. ಇಲ್ಲಿ 'ಕಲೆ' ಸಮಾಜವನ್ನು ಹೊರತಾಗಿಲ್ಲ. ಮನುಷ್ಯ ಜೀವನವನ್ನ ಕೆರಳಿಸುವ ಶಕ್ತಿಯೇ ಕಲಾವಿದನನ್ನು ಕೆರಳಿಸುವ ಶಕ್ತಿಯಾಗುತ್ತದೆ ಎನ್ನಬಹುದು.[7] ಕಲೆ ಮತ್ತು ಜೀವನ ನಿರಂತರ ಪ್ರಕ್ರಿಯೆಗಳು ಅವುಗಳನ್ನು ಅರ್ವಾಚೀನವಾಗಿ ನೋಡಿದಾಗ ಮಾತ್ರ ಅವುಗಳ ನಿಜಸ್ವರೂಪ ಅರಿವಿಗೆ ಬರುತ್ತದೆ. ಈ ಹಿನ್ನೆಯಲ್ಲಿ ಕಲೆಯ ಕುರಿತಾದ ಸಾಹಿತ್ಯವೂ ಕೂಡಾ ಹೊರತಾಗದೆ ಪ್ರಸ್ತುತತೆಯನ್ನು ಪಡೆಯುತ್ತದೆ. ಅಂತೆಯೇ ಆಧುನಿಕ ಕಲಾಸಾಹಿತ್ಯದ ಅಧ್ಯಯನವು ಕೂಡಾ ಮಹತ್ವವನ್ನು ಪಡೆದುಕೊಳ್ಳುತ್ತದೆ. ಭೂತಕಾಲದಲ್ಲಿ ಪ್ರಾಚೀನ ಇತಿಹಾಸವನ್ನು ಭವಿಷ್ಯತ್ತಿನಲ್ಲಿ ಊಹೆಯನ್ನು ಅಧ್ಯಯನ ಮಾಡುವುದರ ಜೊತೆಗೆ ನಾವು ಇಂದು ಹಾಕುತ್ತಿರುವ ಹೆಜ್ಜೆಗಳನ್ನು ಪ್ರಸ್ತುತದಲ್ಲಿಯೇ ಗುರ್ತಿಸುವ ಅಭೂತಪೂರ್ವ ಕಾರ್ಯ ಆಗಬೇಕಾಗಿದೆ. ಈ ವಿಚಾರಕ್ಕೆ ಆಧುನಿಕ ಸಂದರ್ಭದಲ್ಲಿ ಕಲಾಸಾಹಿತ್ಯದ ಅಧ್ಯಯನ (ದಶಕದ ಕಲಾಸಾಹಿತ್ಯ) ಪ್ರಸ್ತುತವಾಗುತ್ತದೆ.

ಕಳೆದ ಹತ್ತುವರ್ಷಗಳಲ್ಲಿ, ಕಲಾಸಾಹಿತ್ಯದಲ್ಲಿ ಎಲ್ಲ ಪ್ರಕಾರದ ಸಾಹಿತ್ಯಗಳು ಬಂದಿವೆ. ವ್ಯಕ್ತಿಕೇಂದ್ರೀತ, ಸಂಪಾದನೆ ಪ್ರವಾಸಕಥನ, ವಿಮರ್ಶೆ ಹೀಗೆ ಕಲಾಸಾಹಿತ್ಯದ ಪ್ರಕಾರಗಳಲ್ಲಿ ಆಧುನಿಕತೆಯ ಪ್ರಭಾವವನ್ನು ಕಾಣಬಹುದಾಗಿದೆ. ಜಾಗತೀಕರಣದ ಈ ಸಂದರ್ಭದಲ್ಲಿ ಕಲೆಯಲ್ಲೂ ಆದ ಬದಲಾವಣೆಗಳನ್ನು, ಹಾಗೂ ಆಧುನಿಕ ಜೀವನ ಶೈಲಿಯಿಂದ ಬದಲಾದ ಕಲಾ ಸಂದರ್ಭಗಳನ್ನು ಕುರಿತಾಗಿ ಸಾಹಿತ್ಯದ ಅಧ್ಯಯನ ನಡೆಯಬೇಕಾಗಿದೆ. ಕನ್ನಡಸಾಹಿತ್ಯದ ಪ್ರಾರಂಭದ ಹಂತದಲ್ಲಿ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಗೊಂಡ ಕಲಾ ಅಂಶಗಳು ಇಂದು ಸರಳಗನ್ನಡದಲ್ಲಿ ಕಾಣಸಿಗುತ್ತವೆ. ಸಂಸ್ಕೃತ ಭಾಷೆಯ ಕಾವ್ಯಗಳಲ್ಲಿ ಕಲೆ, ಕಾವ್ಯದ ಸಂದರ್ಭಕ್ಕೆ ಸನ್ನಿವೇಶಕ್ಕೆ ತಕ್ಕಂತೆ ಚಿತ್ರಕಲಾ ಸಾಹಿತ್ಯ ರಚಿತವಾಗಿದೆ. ಉದಾ: ವಿಷ್ಣುಧರ್ಮೋತ್ತರ ಪುರಾಣ, ಶಿವತತ್ವರತ್ನಾಕರ, ಮಾನಸೊಲ್ಲಾಸ ಮುಂತಾದ ಕೃತಿಗಳು ಕನ್ನಡದಲ್ಲಿ ಅನುವಾದಗೊಂಡು ಸಂಸ್ಕೃತ ಸಾಹಿತ್ಯದ ಕಲಾಮಿಮಾಂಸೆಯ ಕಲೆಯಸಿದ್ಧಾಂತಗಳನ್ನು ಕಂಡರಿಸಿದ ಸಾಹಿತ್ಯಕೃತಿಗಳಾಗಿವೆ ಎನ್ನಬಹುದು. ಈ ರೀತಿಯ ಶಾಸ್ತ್ರಬದ್ಧವಾದ ಸಾಂಪ್ರದಾಯಿಕ ಕಲೆಯ ಕುರಿತಾದ ವಿಮರ್ಶೆಗಳು ರಚಿತವಾದ ನಂತರ ವ್ಯಕ್ತಿಕೇಂದ್ರೀತ, ಹಾಗೂ ಜನಪದ ಕಲೆಗಳ ಕುರಿತಾಗಿ, ಆಧುನಿಕ ಕಲಾಸಾಹಿತ್ಯ ರಚಿತಗೊಂಡಿತು. ಪ್ರಸ್ತುತ ಸಂದರ್ಭದಲ್ಲಿ ಸಮಕಾಲೀನ ಶಿಲ್ಪಕಲೆ, ಚಿತ್ರಕಲೆ, ಕುರಿತಾಗಿ ಪ್ರಾಚೀನ ಸಿದ್ಧಾಂತಗಳನ್ನು ಇಂದಿನ ದಿನಮಾನಗಳಲ್ಲಿ ಅಳವಡಿಸಿಕೊಂಡಿರುವ ಕಲೆಯಪರಿಯನ್ನು ಅರಿತುಕೊಳ್ಳುವ ಪ್ರಯತ್ನವನ್ನು ಈ ಸಂಶೋಧನೆಯ ಮೂಲಕ ಮಾಡಲಾಗಿದೆ. ಕಲಾಸಾಹಿತ್ಯದ ಭಾಷೆ ಮತ್ತು ವಿಚಾರವನ್ನ ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಕಲಾಸಾಹಿತ್ಯದ ಸಮಕಾಲಿನತೆಯನ್ನು

ವಿಮರ್ಶಿಸಿ, ವಿಶ್ಲೇಷಿಸುವ ಮತ್ತು ಸಾಹಿತ್ಯದ ಚರಿತ್ರೆಯನ್ನು ಸ್ಥೂಲವಾಗಿ ಕಟ್ಟಿಕೊಡುವ ಮತ್ತು ಅದರ ಸ್ವರೂಪವನ್ನು ಕಂಡರಿಸುವ ಉದ್ದೇಶವನ್ನು ಹೊಂದಲಾಗಿದೆ.

ಅಧ್ಯಯನದ ಸ್ವರೂಪ

ದಶಕದ ದೃಶ್ಯಕಲಾ ಸಾಹಿತ್ಯ: ಒಂದು ವಿಮರ್ಶಾತ್ಮಕ ಅಧ್ಯಯನ ಈ ವಿಷಯವಾಗಿ ಅಧ್ಯಯದ ಸ್ವರೂಪವನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ವಿವರಿಸಬಹುದಾಗಿದೆ.

- ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ವ್ಯಾಪ್ತಿಗಳನ್ನು ಕುರಿತು ಹೇಳಲಾಗಿದೆ.
- ಎರಡನೆ ಅಧ್ಯಾಯದಲ್ಲಿ ಕಲಾಸಾಹಿತ್ಯ ಚಾರಿತ್ರಿಕ ಹಿನ್ನಲೆಯನ್ನು ಸಾಹಿತ್ಯದ ಬೆಳವಣಿಗೆಯ ಹಂತಗಳನ್ನು ಕಟ್ಟಿಕೊಡಲಾಗಿದೆ.
- ಮೂರನೆ ಅಧ್ಯಾಯದಲ್ಲಿ ಸಂಪಾದನಾ ಸಾಹಿತ್ಯದ ಕುರಿತಾಗಿ ವಿವರಿಸಲಾಗಿದ್ದು ಇದರಲ್ಲಿ ಅಭಿನಂದನಾ ಸಾಹಿತ್ಯ, ಸ್ಮರಣ ಸಂಚಿಕೆಗಳು, ಸಂಕೀರ್ಣ ಸಂಪಾದನಾ ಸಾಹಿತ್ಯ ಕೃತಿಗಳನ್ನು ಕುರಿತು ವಿವೇಚಿಸಲಾಗಿದೆ.
- ನಾಲ್ಕನೆ ಅಧ್ಯಾಯದ ವ್ಯಕ್ತಿಕೇಂದ್ರೀತವಗಿ ರಚನೆಗೊಂಡ ಸಾಹಿತ್ಯವನ್ನು ವಿವೇಚಿಸಲಾಗಿದೆ.
- ಐದನೆ ಅಧ್ಯಾಯದಲ್ಲಿ ಸಂಕೀರ್ಣ ದೃಶ್ಯಕಲಾ ಸಾಹಿತ್ಯವನ್ನು ಅಧ್ಯಯನ ಮಾಡಲಾಗಿದೆ.
- ಆರನೆ ಅಧ್ಯಾಯದಲ್ಲಿ ಅನುವಾದಸಾಹಿತ್ಯವನ್ನ ಅಧ್ಯಯನ ಮಾಡಲಾಗಿದೆ.
- ಅಧ್ಯಾಯ ಏಳರಲ್ಲಿ ಸಮಾರೋಪವಾಗಿದ್ದು, ಮೇಲಿನ ಆರೂ ಅಧ್ಯಾಯಗಳ ಸಮೀಕ್ಷೆಯನ್ನು ಹಾಗೂ ಫಲಿತಗಳನ್ನು ಒಳಗೊಂಡಿದೆ.

ಅಧ್ಯಯನದ ವ್ಯಾಪ್ತಿ

ಸಮಗ್ರ ಕನ್ನಡ ದೃಶ್ಯಕಲಾ ಸಾಹಿತ್ಯದ ಸಮಕಾಲೀನ ಸಂದರ್ಭದಲ್ಲಿ ಕಲಾಸಾಹಿತ್ಯದ ಪ್ರಾರಂಭದ ಇತಿಹಾಸವನ್ನು ಪ್ರಾತಿನಿಧಿಕ ಅಂಶಗಳೊಂದಿಗೆ ಉದಾಹರಿಸುತ್ತಾ ಆಧುನಿಕ ಸಾಹಿತ್ಯವನ್ನು ಮುಖ್ಯವಾಗಿಸಿಕೊಂಡು, ೨೦೦೪ ರಿಂದ ೨೦೧೪ ರವರೆಗಿನ ಕಲಾಸಾಹಿತ್ಯವನ್ನು ಅಧ್ಯಯನದ ವ್ಯಾಪ್ತಿಗೆ ಬಳಸಿಕೊಳ್ಳಲಾಗಿದೆ. ಈ ಅವಧಿಯಲ್ಲಿ ಪ್ರಕಟಗೊಂಡ ಕೃತಿಗಳನ್ನು ವಿವಿಧ ಪ್ರಕಾರಗಳಲ್ಲಿ ವಿಭಾಗಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಸಂಪಾದನೆ, ಸಂಕೀರ್ಣ, ಅನುವಾದ, ವ್ಯಕ್ತಿಕೇಂದ್ರಿತ, ವಿಮರ್ಶೆ, ಪ್ರವಾಸಕಥನ, ಹೀಗೆ ಅನೇಕ ಪ್ರಕಾರಗಳಲ್ಲಿ ಬಂದ ಕೃತಿಗಳನ್ನು ಮೂಲ ಆಕರಗಳನ್ನಾಗಿ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಪ್ರಾಚೀನ ಗ್ರಂಥಗಳಲ್ಲಿ ಸಾಂದರ್ಭಿಕವಾಗಿ ಪ್ರಸ್ತಾಪವಾಗಿರುವ ಕಲಾ ಅಂಶಗಳನ್ನು ಅನುವಾದಿತ, ಸಂಪಾದಿತ ಕೃತಿಗಳನ್ನು ಅಧ್ಯಯನದ

ಆನುಷಂಗಿಕ ಆಕರ ಸಾಮಾಗ್ರಿಯಾಗಿಸಿಕೊಳ್ಳಲಾಗಿದೆ. ಹೆಚ್ಚು ಸಂಕೀರ್ಣ ಮತ್ತು ವ್ಯಾಪಕವಾದ ಪತ್ರಿಕೆ ಮತ್ತು ಕ್ಯಾಟಲಾಗ್ ಸಾಹಿತ್ಯವನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಂಡಿಲ್ಲ.

ಅಧ್ಯಯನದ ವಿಧಾನ

ಪ್ರಸ್ತುತ ಪ್ರಬಂಧದ ರಚನೆಗೆ ಮುಖ್ಯವಾಗಿ ಎರಡು ರೀತಿಯ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ. ೧. ಮೂಲ ಆಕರ ಸಾಮಗ್ರಿ ಹಾಗೂ ೨. ಆನಷಂಗಿಕ ಆಕರ ಸಾಮಗ್ರಿ. ಈ ಎರಡೂ ಮೂಲಗಳಿಂದ ವಿಷಯ ಸಂಗ್ರಹ ಮಾಡಿ ಈ ಪ್ರಬಂಧವನ್ನು ರೂಪಿಸಲಾಗಿದೆ.
ಮೂಲ ಆಕರ ಸಾಮಗ್ರಿಯಲ್ಲಿ ಮುಖ್ಯವಾಗಿ ಕ್ಷೇತ್ರಕಾರ್ಯವನ್ನು ಕೈಗೊಂಡು ರಾಜ್ಯದ ಪ್ರಮುಖ ಗ್ರಂಥಾಲಯಗಳಿಗೆ ಭೇಟಿ ನೀಡಿ ಪುಸ್ತಕಗಳನ್ನು ಪರಾಮರ್ಶನ ಮಾಡಲಾಗಿದೆ. ಹಾಗೆಯೇ ಕರ್ನಾಟಕ ಲಲತಕಲಾ ಅಕಾಡೆಮಿಗೆ ಹೋಗಿ ಅಲ್ಲಿರುವ ಪುಸ್ತಕಗಳನ್ನು ಸಂಗ್ರಹಿಸಿಕೊಂಡು ಬಂದು ಅಧ್ಯಯನ ಮಾಡಲಾಗಿದೆ. ಮತ್ತು ಅನೇಕ ಕಲಾ ಲೇಖಕರಿಂದ ಪುಸ್ತಕಗಳನ್ನು ಖರೀದಿಸಿ ಅಧ್ಯಯನ ಮಾಡಲಾಗಿದೆ. ಆನುಷಂಗಿಕ ಆಕರ ಸಾಮಗ್ರಿಯಲ್ಲಿ ಮುಖ್ಯವಾಗಿ ದಿನ ಪತ್ರಿಕೆ, ವಾರ ಪತ್ರಿಕೆ ಹಾಗೂ ಇತರ ಪುಸ್ತಕಗಳಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಬಂದಿರುವ ಪರಿಚಯ, ವಿಮರ್ಶೆ, ಅವಲೋಕನಗಳನ್ನು ಸಂಗ್ರಹಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಟಿಪ್ಪಣಿ :

೧. ಡಾ. ಕೆ. ಶಿವರಾಮ ಕಾರಂತ : ಕಲೆಯ ದರ್ಶನ : ಪು.ಸಂ.–೧೫

ಅಧ್ಯಾಯ – ಎರಡು

ದೃಶ್ಯಕಲಾ ಸಾಹಿತ್ಯದ ಚಾರಿತ್ರಿಕ ಹಿನ್ನೆಲೆ

ಅಧ್ಯಾಯ – ಎರಡು

ದೃಶ್ಯಕಲಾ ಸಾಹಿತ್ಯದ ಚಾರಿತ್ರಿಕ ಹಿನ್ನೆಲೆ

'ಲಿಪಿ', 'ಭಾಷೆ'ಗಳು ಅಸ್ತಿತ್ವಕ್ಕೆ ಬರುವ ಮೊದಲು ಮನುಷ್ಯ ತನ್ನ ಅನಿಸಿಕೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವಲ್ಲಿ ಬಳಕೆಯಾದ ಚಿತ್ರಕಲೆಯು ನಾಗರಿಕತೆ ಉದಯದ ಪರ್ವಕಾಲದಲ್ಲಿ ಕ್ರಾಂತಿಕಾರಕ ಬದಲಾವಣೆಯ ಕೇಂದ್ರಬಿಂದುವಾಯಿತು ಎನ್ನಬಹುದು. ಭಾಷೆಗಿಂತ ಮೊದಲು ಕಲೆ ಜಗತ್ತನ್ನು ವ್ಯಾಪಿಸಿದ ಒಂದು 'ಸಾರ್ವತ್ರಿಕ ಸಂವಹನ' ಅಂಶವಾಗಿದೆ. ಅಂತೆಯೆ ಯಾವುದೇ ಪ್ರದೇಶ ಜನಾಂಗಕ್ಕೆ ಸರಳವಾಗಿ ಗ್ರಾಹ್ಯವಾಗುವ ವೈಶಿಷ್ಟ್ಯ ಗುಣವನ್ನು ಉಳ್ಳದ್ದಾಗಿದೆ. ಮನುಷ್ಯ ತನ್ನ ಬಾಯಿಂದ ಹೊರಡಿಸಿದ ಧ್ವನಿಗೆ ರಚಿತವಾದ ಚಿತ್ರಲಿಪಿಗಳು ಕೇವಲ ಚಿತ್ರವಾಗಿರದೆ "ದೃಶ್ಯಭಾಷೆ' ಯಾದವುಗಳಾಗಿವೆ. ಅದರಂತೆ ಶಬ್ದ, ಧ್ವನಿಸಂಕೇತಗಳು ಈ ಲಿಪಿಸಂಸ್ಕಾರಿಂದ ಭಾಷೆಯಲ್ಲಿ ನಿರ್ದಿಷ್ಟತೆ ಮತ್ತು ವ್ಯಾಪಕತೆಯನ್ನು ಪಡೆದಿವೆ. ಈ ರೀತಿಯ ಪ್ರಕ್ರಿಯೆಯಲ್ಲಿ ಲಿಪಿ, ಭಾಷೆ ಮತ್ತು ಕಲೆ ಒಂದಕ್ಕೊಂದು ಪೂರಕವೇ. ಅಂತೆಯೇ ಕಲೆಯ ಬರವಣಿಗೆಯೂ ಕೂಡ ಪರೋಕ್ಷವಾಗಿ ಆದಿಮ ಸಂಸ್ಕೃತಿಯಿಂದಲೇ ಪ್ರಾರಂಭವಾಯಿತೆನ್ನಬಹುದು. ಹೀಗೆ ಪ್ರಾಚೀನದಿಂದಲೇ 'ಭಾಷೆ' ಹಾಗೂ ಕಲೆಗಳ ನಡುವಿನ ಅವಿನಾಭಾವವು ಆದಿಮದಿಂದ ಆಧುನಿಕದವರೆಗಿನ ಬಹುದೊಡ್ಡ ಕಾಲದ ಅಂತದಲ್ಲಿಯೂ ಮುಂದುವರೆದು ಇಂದಿನ ಕಲಾಸಾಹಿತ್ಯ ವರೆಗೂ ಪ್ರವಹಿಸಿದೆ ಎನ್ನಬಹುದು.

ಭಾರತೀಯ ಚಿತ್ರಕಲಾ ಸಾಹಿತ್ಯವು ವೇದಗಳ ಕಾಲದಿಂದಲೇ ಆರಂಭಗೊಳ್ಳುತ್ತದೆ. ವೇದಗಳಲ್ಲಿ ಬ್ರಹ್ಮ– ಜೀವ ಮುಂತಾದ ಗಹನವಾದ ವಿಚಾರಗಳನ್ನು ಹೇಳಲಾಗಿದೆ. ಪರಬ್ರಹ್ಮತ್ವದ ವಿರಾಟ ದರ್ಶನದಲ್ಲಿ ಸೃಷ್ಟಿ, ಆಕಾರ ಮುಂತಾದ ಅಂಶಗಳು ಅನೇಕ ರೂಪಗಳನ್ನು ತೋರಿಸುತ್ತವೆ. ವೇದಗಳಲ್ಲಿ ಇಡೀ ಸೃಷ್ಟಿಯನ್ನೇ ಬ್ರಹ್ಮಸ್ವರೂಪಿ ಎನ್ನಲಾಗಿದೆ. ಅಂತೆಯೇ ದೇವರ ಅಸ್ತಿತ್ವವನ್ನು ನಿರಾಕಾರ ಹಾಗೂ ಆಕಾರ ತತ್ವಗಳಲ್ಲಿ ಕಂಡರಿಸಲಾಗಿದೆ. ಬಣ್ಣ, ರೇಖೆ ಅಲಂಕಾರಗಳಂತಹ ಲೌಕಿಕ ಅಂಶಗಳನ್ನೂ ವರ್ಣಿಸಲಾಗಿದೆ. ಉಪನಿಷತ್ತುಗಳಲ್ಲಿ ಸೂರ್ಯನನ್ನು ಅಂಧಕಾರವನ್ನು ಓಡಿಸುವ ಪವಿತ್ರ ಶಕ್ತಿಯನ್ನಾಗಿ ಕಾಣಲಾಗಿದೆ. ನೆರಳುಬೆಳಕಿನ ಆಟಕ್ಕೆ ಕಾರಣನಾದ ಸೂರ್ಯನನ್ನು

ಜ್ಞಾನಸ್ವರೂಪಿಯಾಗಿಯೂ, ಸೃಷ್ಟಿಯ ಸಕಲ ಚೇತನಾ ಶಕ್ತಿಯಾಗಿಯೂ ಪೂಜ್ಯನೀಯ ಸ್ಥಾನನೀಡಲಾಗಿದೆ. ಅದರಂತೆ ಸೂರ್ಯನ ಕಿರಣಗಳಿಂದ ಹೊರಟ ಬೆಳಕಿನಿಂದ ಸಪ್ತವರ್ಣಗಳನ್ನು ಕಾಣಲಾಗಿದೆ. ಬೆಳಕಿನಿಂದ ಉಂಟಾದ ವಸ್ತುಗಳ ಮೇಲಿನ ಕಾಂತಿ ಹಾಗೂ ಹಿನ್ನೆಲೆಯಲ್ಲಿಯ ನೆರಳಿನಲ್ಲಿ, ಕತ್ತಲೆ ಬೆಳಕುಗಳ ಆಟವನ್ನು ವಿಶೇಷವಾಗಿ ಕಂಡು, ಮಂತ್ರ ಸಂಹಿತೆಗಳಲ್ಲಿ ವರ್ಣಿಸಲಾಗಿದೆ. ನೀರು, ಗಾಳಿ, ಆಕಾಶಗಳನ್ನು ಕೂಡಾ ಇದೇ ರೀತಿಯಲ್ಲಿ ಗ್ರಹಿಸಲಾಗಿದೆ. ಇಲ್ಲಿ ಭಾರತೀಯರ ಧಾರ್ಮಿಕ ಪ್ರಜ್ಞೆಯು ನಿತ್ಯಜೀವನದ ಸಂಗತಿಗಳನ್ನು ಒಳಗೊಂಡ ರಚನೆಯಾಗಿದೆ ಎನ್ನಬಹುದು. ವೇದ ಉಪನಿಷತಗಳ ಪ್ರಕಾರ ಕಲೆ ಧರ್ಮವನ್ನು ಹೊರತಾಗಿಲ್ಲ. ಅಂತೆಯೇ ಲೌಕಿಕವಿದ್ಯೆ ಎನಿಸುವ ಕಲೆಯ ಆಪ್ಯಾಯಮಾನವಾದ ಆನಂದದಲ್ಲಿ ದೈವತ್ವದ ಕಲ್ಪನೆಯನ್ನು ಒಳಗೊಂಡ ಭಾರತೀಯ ದರ್ಶನಪ್ರಜ್ಞೆಯು ವೈಶಿಷ್ಟ್ಯತೆ ಪಡೆದಿದೆ. ಈ ಹಿನ್ನೆಲೆಯಲ್ಲಿ ಕಲಾಸಾಹಿತ್ಯವು ಪ್ರತ್ಯೇಕವಾಗಿ ರಚಿತವಾಗದೆ ವಿಶ್ವಕೋಶಾತ್ಮಕ ಸಂಗತಿಗಳನ್ನು ಒಳಗೊಂಡೇ ಹೆಣೆಯಲ್ಪಟ್ಟಿದೆ. ವೈಧಿಕಸಾಹಿತ್ಯಲ್ಲಿ ಕಲೆಯು ಸೂಕ್ಷ್ಮವಾಗಿ ಹಾಗೂ ಸಂಕೀರ್ಣವಾಗಿಯೂ ಅಡಕವಾಗಿದೆ ಎನ್ನಬಹುದು.

ವೇದ–ಉಪನಿಷತಗಳಂತೆಯೆ ನಂತರದಲ್ಲಿ ರಚಿತವಾದ ಭಾರತೀಯರ ಉದ್ಗ್ರಂಥಗಳಾದ ರಾಮಾಯಣ, ಮಹಾಭಾರತದಲ್ಲಿಯೂ ಕೂಡಾ ಚಿತ್ರಕಲೆಯ ಕುರಿತಾದ ಉಲ್ಲೇಖಗಳಿವೆ. ಪ್ರಾಚೀನ ಬೌದ್ಧ, ಜೈನ ಸಾಹಿತ್ಯಕೃತಿಗಳನ್ನು ಒಳಗೊಂಡಂತೆ ಅನೇಕ ಪ್ರಾಚೀನ ಕೃತಿಗಳಲ್ಲಿ ಕಲೆಯ ಕುರಿತಾಗಿ ಸಾಂದರ್ಭಿಕ ವಿವರಣೆಗಳಿವೆ. ಕ್ರಿ. ಪೂ. ೨೦೦ರ ಸುಮಾರಿಗೆ ಜೈಮಿನಿಯ ಸೂತ್ರ, ಕ್ರಿ.ಪೂ. ೧೫೦ ಕಾಲದ ಪತಂಜಲಿಯ ಯೋಗಸೂತ್ರಗಳಲ್ಲಿ ಕಲೆಯ ಅಂಶಗಳು ದಾಖಲಾಗಿವೆ.

ಕ್ರಿ.ಪೂ. ಒಂದನೇ ಶತಮಾನದ ಕೃತಿ ಎಂದು ನಂಬಲಾದ ನಗ್ನಜಿತನ "ಚಿತ್ರ ಲಕ್ಷಣವು' ಚಿತ್ರಕಲೆಯನ್ನೇ ಪ್ರಧಾನವಾಗಿಸಿಕೊಂಡ ಕೃತಿಯಾಗಿದೆ. ಸಾಹಿತಿಕವಾಗಿಯೂ ಕೂಡಾ ಉತ್ತಮ ಕೃತಿಯಾಗಿದೆ. ಚಿತ್ರಲಕ್ಷಣದ ನಂತರ ಪ್ರಮುಖ ಭಾರತೀಯ ಭಾಷೆಯಾದ ಸಂಸ್ಕೃತದಲ್ಲಿ ಹಲವಾರು ಸಾಹಿತ್ಯಕೃತಿಗಳು ರಚನೆಯಾದವು. ಈ ಸಂದರ್ಭಲ್ಲಿ ಕಲೆಯ ಕುರಿತಾಗಿಯೇ ರಚನೆಯಾದ ಕೃತಿಗಳು ವಿರಳವೆಂದರೂ, ನಾಟಕ, ಕತೆ, ಮುಂತಾದ ಸಂದರ್ಭಲ್ಲಿ ಚಿತ್ರಕಲೆಯನ್ನು ಸಾಂದರ್ಭಿಕವಾಗಿ ಹೇಳಲಾಗಿದೆ. ಕ್ರಿ. ಶ. ೧ನೇ ಶತಮಾನಲ್ಲಿ ಅಶ್ವಘೋಷನ ಬುದ್ಧಚರಿತ, ಭಾಸನ ಮುಲವಿಕಾಗ್ನಿಮಿತ್ರ, ವಾಸವದತ್ತ, ಚಾರುದತ್ತ, ಊರುಭಂಗ, ಪಂಚರತ್ನ, ವಿಷ್ಣು ಶೂದ್ರಕಕವಿಶರ್ಮನ ಪಂಚತಂತ್ರ, ಶೂದ್ರಕವಿಯ ಮೃಚ್ಛಕಟಿಕ, ಗುಣಾಢ್ಯನ ಬೃಹತ್ಕಥಾಸಂಹಿತಾ, ಕಾಳಿದಾಸನ ಮೇಘದೂತ, ರಘುವಂಶ, ಬಾಣಕವಿಯ ಕಾಂಬರಿ, ಕೌಟಲ್ಯನ ಅರ್ಥಶಾಸ್ತ್ರ, ವಾತ್ಸಾಯನನ ಕಾಮಸೂತ್ರ, ಭರತನ ರಸಸೂತ್ರ(ನಾಟ್ಯ ಶಾಸ್ತ್ರ) ಇವುಗಳಲ್ಲಿ ಸಾಂದರ್ಭಿಕ ವಿವರಣೆಗಳಿವೆ.

ಚಿತ್ರಕಲೆಯ ಬಗ್ಗೆ ಅತ್ಯಂತ ಗಹನವಾಗಿ ಚರ್ಚಿಸಿದ ಗ್ರಂಥ ವಿಷ್ಣುಧರ್ಮೋತ್ತರ ಪುರಾಣವಾಗಿದೆ. ಮಾರ್ಕಂಡೆಯ ಮುನಿಯು ಬೋಧಿಸಿದ ಗ್ರಂಥವೆಂದು ಹೇಳಲಾದ ವಿಷ್ಣು ಧರ್ಮೋತ್ತರಪುರಾಣವು

ಒಂದು ವಿಶ್ವಕೋಶಾತ್ಮಕ ಗ್ರಂಥವಾಗಿದ್ದು, ಗ್ರಂಥದ ಮೂರನೇ ಖಂಡದ ಮೊದಲನೆ ಭಾಗದಲ್ಲಿ ಚಿತ್ರಸೂತ್ರ ಎಂಬ ಅಧ್ಯಾಯದಲ್ಲಿ ಬಣ್ಣತಯಾರಿಕೆ, ಕುಂಚ ತಯಾರಿಕೆ, ಚಿತ್ರಗಳರಚನಾ ಪ್ರಮಾಣ ಮುಂತಾಗಿ ವಿವರಿಸಲಾಗಿದೆ. ವಿಷ್ಣುಧರ್ಮೋತ್ತರ ಪುರಾಣ ಕನ್ನಡಕ್ಕೆ ಅನುವಾದಗೊಂಡ ಏಕೈಕ ಕೃತಿಯಾಗಿದೆ. ಕ್ರಿ.ಪೂ ೨೦೦-೩೦೦ರ ಅವಧಿಯಲ್ಲಿ ರಚಿತವಾಗಿರಬಹುದಾದ ವಾತ್ಸಾಯನನ ಕಾಮಸೂತ್ರದಲ್ಲಿ ಷಡಂಗ ಸೂತ್ರಗಳಲ್ಲಿ ಚಿತ್ರಕಲೆಯ ಲಕ್ಷಣಗಳನ್ನು ಗುರ್ತಿಸಲಾಗಿದೆ. ಭರತನ ನಾಟ್ಯಶಾಸ್ತ್ರದಲ್ಲಿ ರಸಗಳ ಕಲ್ಪನೆಯು ಇರುವುದರ ಜೊತೆಗೆ ರಸಗಳು ಒಂದೊಂದು ಬಣ್ಣಗಳ ಸಂಕೇತಗಳನ್ನು ಒಳಗೊಂಡಿವೆ.

ಅಲಂಕಾರ ಶಾಸ್ತ್ರ ಅಥವಾ ಗ್ರಂಥಗಳಲ್ಲಿಯೂ ಕೂಡಾ ಕಲೆಯ ಸಂಗತಿಗಳೊಂದಿಗೆ ಕಲಾ ವಿಮರ್ಶೆಯ ಅಂಶಗಳು ಪ್ರಸ್ತಾಪಗೊಂಡಿವೆ. ದಂಡಿಯ 'ಕಾವ್ಯಾದರ್ಶ', ಉದ್ಭಟನ 'ಕಾವ್ಯಾಲಂಕಾರಸಾರ', ಭಾಮಹನ 'ಕಾವ್ಯಾಲಂಕಾರ', ಆನಂದವರ್ಧನನ 'ಧ್ವನ್ಯಾಲೋಕ', ಅಭಿನವಗುಪ್ತನ 'ಲೋಚನ', ಭಟ್ಟಾತೌತನ 'ಕಾವ್ಯಕೌತುಕ', ಮುಂತಾದವುಗಳಲ್ಲಿ ಕಲೆಯು ಸಾಂದರ್ಭಿಕವಾಗಿ ಪ್ರಸ್ತಾಪಿತವಾಗಿದೆ.

ಕ್ರಿ.ಶ. ೧೦ನೇ ಶತಮಾನಲ್ಲಿ ಭಾರತೀಯ ಕಲಾಕ್ಷೇತ್ರದ ಸಾಹಿತ್ಯದಲ್ಲಿ ಅನೇಕ ಕೃತಿಗಳು ರಚಿತವಾದವು. ಶಂಕರಾಚಾರ್ಯರ 'ಸೌಂದರ್ಯಲಹರಿ' ಶ್ರೀಹರ್ಷನ 'ನೈಷಧಕಾವ್ಯ', ಬಾಲಚಂದ್ರಸೂರಿಯ 'ವಸಂತವಿಲಾಸ', ಸೋಮೇಶ್ವರನ 'ಸುರತೋತ್ಸವ', ಮುಂತಾದವುಗಳಲ್ಲಿ ಚಿತ್ರಕಲೆಯ ಸಾಂದರ್ಭಿಕ ವಿವರಣೆ ಕಂಡು ಬರುತ್ತದೆ. ಭಾರತೀಯ ವಿಶ್ವಕೋಶಾತ್ಮಕ ಗ್ರಂಥಗಳಲ್ಲಿಯೂ ಕೂಡಾ ಚಿತ್ರಕಲೆ ಉಲ್ಲೇಖಗೊಂಡಿದೆ. ಸಮಾರಾಂಗಣ ಸೂತ್ರಧಾರ, ಮಾನಸೊಲ್ಲಾಸ, ಶಿಲ್ಪರತ್ನ, ಕಶ್ಯಪಶಿಲ್ಪಶಾಸ್ತ್ರ, ಶಿವತತ್ವರತ್ನಾಕರ ಮುಂತಾದವುಗಳಲ್ಲಿ ಕಲಾಸಾಹಿತ್ಯವನ್ನು ಕಾಣಬಹುದಾಗಿದೆ.

ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನವಾದ ಚಿತ್ರರಚನೆಗಳು ಬಾದಾಮಿಯ ಅರೇಗುಡ್ಡ ಮತ್ತು ಹಿರೇಗುಡ್ಡ ಎಂಬ ಸ್ಥಳದಲ್ಲಿ ಕಂಡುಬಂದಿವೆ.[೧] ಅದೇ ಅವಧಿಯವುಗಳೆನ್ನಲಾದ ರಾಮದುರ್ಗದ ಕೊಳ್ಳದಲ್ಲಿಯೂ ಆದಿಮಾನವನ ಚಿತ್ರಗಳು ಕಂಡು ಬಂದಿವೆ. ಇವು ಕ್ರಿ. ಪೂ. ೪೦, ೦೦೦ ಗಳಷ್ಟು ಹಳೆಯದಾದ ಚಿತ್ರಗಳೆಂದು ಅಭಿಪ್ರಾಯ ಪಡಲಾಗಿದೆ.[೨] ನಂತರ ಶಿಲಾಯುಗದಲ್ಲಿ ಮತ್ತು ಶಿಲಾತಾಮ್ರ ಯುಗದಲ್ಲಿ ಹಿರೇಬೆನಕಲ್ಲು, ಕಲ್ಲೂರು, ಬೆಳಗಲ್, ಬಂಡಿಹರ್ಲಾಪುರ, ಕಳ್ಳೊಳ್ಳಿ, ಚಿಕ್ಕರಾಮಪುರ ಗಳಲ್ಲಿಯೂ ಆದಿಮಾನವನ ಕಲೆಯ ನೆಲೆಗಳನ್ನು ಗುರ್ತಿಸಲಾಗಿದೆ. ಈ ಎಲ್ಲ ಪ್ರದೇಶಗಳಲ್ಲಿ ಪ್ರಾಣಿಗಳಾದ ಕಾಡೆಮ್ಮೆ, ಕೋಣ, ಕಾಡುಹಂದಿ, ಜಿಂಕೆ, ಗೂಳಿ. ಮೊಸಳೆ, ಮಂಗ, ನರಿ, ಮುಂತಾದ ಪ್ರಾಣಿಗಳು ಕಂಡು ಬರುತ್ತವೆ. ಅಲ್ಲದೆ ಕುಣಿತ, ಪೂಜೆ, ಸಂಭೋಗ ದೃಶ್ಯಗಳು, ತಾಂತ್ರಿಕ ಆಚರಣೆಗಳ ಚಿತ್ರಗಳು ಕಂಡುಬರುತ್ತವೆ. ಈ ಚಿತ್ರಗಳು ಕ್ರಿ. ಪೂ. ೨೦೦೦ ವರ್ಷಗಳಷ್ಟು ಹಳೆಯದು ಎನ್ನಲಾಗಿದೆ. ಈ ಚಿತ್ರಗಳು ನಿತ್ಯಬದುಕಿನ ಘಟನಾವಳಿಗಳನ್ನು ಒಳಗೊಂಡಿವೆ. ಅವರ

ಸುತ್ತಲಿನ ಪ್ರಾಣಿ, ನಿಸರ್ಗ, ನಂಬಿಕೆ ಆಚರಣೆಗಳಿಗೆ ಸಂಬಂಧಿಸಿದ ಚಿತ್ರಗಳಾಗಿವೆ. ಈ ಚಿತ್ರಗಳು ಅವರ ಅಭಿವ್ಯಕ್ತಿಯ ನೇರನಿರೂಪಣೆಯಾಗಿದ್ದು ತಮಗೆ ಅನಿಸಿದ್ದನ್ನು ಚಿತ್ರಭಾಷೆಯ ಮೂಲಕ ಚಿತ್ರಿಸಿದ್ದಾರೆ. ಆದಿ ಮಾನವನ ಚಿತ್ರಗಳನ್ನು ಒಂದು ರೀತಿಯಲ್ಲಿ ಆ ಕಾಲದ ಚಿತ್ರರೂಪದ ದೃಶ್ಯಸಾಹಿತ್ಯ ಎನ್ನಬಹುದಾಗಿದೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಹಳೆಗನ್ನಡದಲ್ಲಿ, ಕಲೆಯ ಸಂಗತಿಗಳನ್ನು ಪ್ರಾಸಂಗಿಕವಾಗಿ ಉಲ್ಲೇಖಿಸಲಾಗಿದೆ. ಕವಿಗಳಾದ ಪಂಪ, ರನ್ನ, ಜನ್ನ, ನಾಗಚಂದ್ರ, ನೇಮಿಚಂದ್ರರು ಸಂದರ್ಭೋಚಿತವಾಗಿ ಚಿತ್ರನಿರ್ಮಿತಿಯನ್ನ ಮಾಡಿದ್ದಾರೆ. ಕನ್ನಡ ಕಲಾ ಸಾಹಿತ್ಯದ ಐತಿಹಾಸಿಕ ಅಧ್ಯಯನದಲ್ಲಿ ಈ ಕವಿಗಳ ಕೆಲವು ಪದ್ಯಗಳನ್ನು ಪ್ರಾತಿನಿಧಿಕವಾಗಿ ಆಯ್ದುಕೊಂಡು ಪರಾಮರ್ಶಿಸಬಹುದು ಹಾಗೂ ಅಭ್ಯಶಿಸಬಹುದಾಗಿದೆ. ಕವಿರಾಜಮಾರ್ಗಕಾರನಾದ ಶ್ರೀವಿಜಯನು ತನ್ನ ಕೃತಿಯಲ್ಲಿ ಬರುವ ಸೈನ್ಯದ ವರ್ಣನೆ ಮಾಡುತ್ತ ಈ ರೀತಿ ಹೇಳಿದ್ದಾನೆ.

ಪೊಳೆವ ಮಿಂಚುಗಳಂತಿರೆ ಕೇತುಗಳ್
ಜಳದವೃಂದ ಪೋಲಿಕೆ ಹಸ್ತಿಗಳ್
ಗಳಿದ ಧಾರೆಗಳಂತಿರೆ ಪತ್ತಿಗಳು
ಬಳಸಿ ಕಾರ್ಗೆಣೆಯಾಯ್ತು ಮಹಾಹವ

ಈ ಮೇಲಿನ ಪದ್ಯದಲ್ಲಿ ಹೊಳೆವ ಮಿಂಚುಗಳಂತೆ ಧ್ವಜಗಳು ಮೋಡದ ಸಮೂಹಗಳಂತೆ ಕಾಡಾನೆಗಳು ಧಾರಾವರ್ಷದಂತೆ ಕಾಲಾಳುಗಳು ಕಾಣಿಸಿಕೊಂಡಿರುವರು ಎಂದು ಹೇಳುವಲ್ಲಿ ವರ್ಣಮಯ ಚಿತ್ರಣವಿದೆ. ಅವನ ಕಲ್ಪನೆಯಲ್ಲಿ ಬಣ್ಣದ ವರ್ಣನೆ ಇದೆ.[೩]

ಕ್ರಿ.ಶ. ೯ನೇ ಶತಮಾನದಲ್ಲಿ ಗುಣವರ್ಮ(೧) ಕವಿ ಆಗಿ ಹೋಗಿದ್ದಾನೆ. ಅವನು ತನ್ನ ಪದ್ಯವೊಂದರಲ್ಲಿ ಹೆಣ್ಣಿನ ಸೌಂದರ್ಯವನ್ನು ಹೀಗೆ ವರ್ಣಿಸಿದ್ದಾನೆ.[೪]

ಸಣಂ ನಡು ತಿಣಂ ಮೂಲೆ
ಬಣಂ ಪಸುರ್ವೆಸರಿ ಬಣ್ಣವಧರಂ ಮಧುರಂ

ಈ ಪದ್ಯದಲ್ಲಿ ಹೆಣ್ಣನ್ನು ವರ್ಣಿಸಲಾಗಿದೆ. ಕವಿಯ ಮಾತಿನಲ್ಲಿ ಕಲಾತ್ಮಕ ವಿಚಾರಗಳು ವ್ಯಕ್ತವಾಗಿದ್ದು ಚಿತ್ರಕಲಾ ಸಾಹಿತ್ಯದ ಪರಿಯನ್ನು ತಿಳಿಸುತ್ತವೆ.

೧೦ನೇ ಶತಮಾನದಲ್ಲಿ ಕನ್ನಡದ ಶ್ರೇಷ್ಠ ಕವಿಗಳಾದ, ಪಂಪ, ಪೊನ್ನ, ರನ್ನ, ನಯಸೇನ ಕವಿಗಳು ತಮ್ಮ ಕೃತಿಗಳಲ್ಲಿ ಕಲಾ ಸಂಗತಿಗಳನ್ನು ಸಾಂದರ್ಭಿಕವಾಗಿ ಕಂಡರಿಸಿದ್ದಾರೆ.

ಆದಿಕವಿಯಾದ ಪಂಪನು ಕನ್ನಡ ಸಾಹಿತ್ಯ ಲೋಕಕ್ಕೆ ಮಹೋನ್ನತ ಕೊಡುಗೆ ನೀಡಿದ್ದಾನೆ. ಆತನ ಕೃತಿಗಳಲ್ಲಿ ಕಲೆಯು ರಮ್ಯವಾಗಿ ಚಿತ್ರಿತವಾಗಿದೆ. ಪಂಪಮಹಾಕವಿಯ ವಿಕ್ರಮಾರ್ಜುನನ ವಿಜಯದಲ್ಲಿ ಅರ್ಜುನ ಇಂದ್ರಕೀಲ ಪರ್ವತಕ್ಕೆ ಬಂದು, ಶರತ್ಕಾಲದ ವರ್ಣನೆ ಮಾಡುವಾಗ ಕಲೆಯ ಬಗೆಗಿನ ಸಂಗತಿಗಳು ಈ ಕೆಳಗಿನಂತೆ ವ್ಯಕ್ತವಾಗಿವೆ.

"ಪುಳಿಯಾಳ್ ಕರ್ಚಿದ ಬಾಳಬಣ್ಣ ಮನೆ ಪೋಲ್ವಾಕಾಶ ಮಕಾಶಮಂಡಳಯಂ ಪರ್ವಿದ ಬೆಳ್ಮುಗಿಲ್ ಮುಗಿಲು ಬೆಳ್ಪೊಳೊಕ್ಕು ತಳ್ದೊಯ್ಯೊ" ಪದ್ಯದಲ್ಲಿ ನೀಲಿ, ಬಿಳಿಬಣ್ಣ ಆಕಾರಗಳೆಂಬ ವಿಷಯಗಳು ವ್ಯಕ್ತವಾಗಿವೆ. ಬಣ್ಣಗಳ ಉಲ್ಲೇಖವನ್ನು ಪಂಪ ಬಳಸಿದ್ದು ಔಚಿತ್ಯಪೂರ್ಣವಾಗಿ ಉಲ್ಲೇಖಗೊಂಡಿದೆ. ಶರತ್ಕಾಲದ ವರ್ಣನೆ ಮಾಡುವ ಪದ್ಯ, ಕೆಂಪು, ಹಸಿರು, ಬಿಳುಪು, ನೀಲಿ ಮತ್ತು ಕಪ್ಪು ವರ್ಣಗಳ ಸಂಗಮಕಾಲವೇ ಮಳೆಗಾಲವಾಗಿವೆ, ಎಂದಿದ್ದಾನೆ.

ಕ್ರಿ.ಶ.೧೦ನೇ ಶತಮಾನದ ಮತ್ತೊಬ್ಬ ಕವಿ ಶಿವಕೋಟ್ಯಾಚಾರ್ಯನು ತನ್ನ ವಡ್ಡಾರಾಧನೆ ಎಂಬ ಕೃತಿಯಲ್ಲಿ ಕಥಾ ಪ್ರಸಂಗಗಳಲ್ಲಿ ಈ ರೀತಿ ವಿವರಣೆ ಮಾಡಿದ್ದಾನೆ.

"ಶರತ್ ಕಾಲದ ಮುಗಿಲೊಳೋರಂತಪುರ ನಾದ ಮಾನುಂದಿ ಚಿತ್ರ ಮಪ್ಪುದುಂ, ಸಹಸ್ರ ಕೂಟಗಳೆಂಬ ಜಿನಾಲಯ ಕಟ್ಟಿಸಿ", ಅದನ್ನು ಅನೇಕ ಚಿತ್ರಗಳಿಂದ ಅಲಂಕರಿಸಿದ ಎಂಬ ತಾತ್ಪರ್ಯ ಅಡಗಿದೆ.[೫]

೧೦ನೇ ಶತಮಾನ ಪ್ರಸಿದ್ಧ ಕವಿಯಾದ ರನ್ನ ತನ್ನ ಅಜಿತನಾಥ ಪುರಾಣದಲ್ಲಿ ಅನೇಕ ಬಗೆಯ ವರ್ಣನೆಗಳನ್ನು ಉಲ್ಲೇಖೀಸಿದ್ದಾನೆ.[೬] ಪ್ರಾಚೀನ ಕವಿಗಳ ನಂತರ ಕಾಲದಲ್ಲಿ ವಚನಯುಗದ ಆರಂಭದಲ್ಲಿ ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಯನ್ನು ಕಂಡಕಾಲವಾಗಿದೆ. ಅದೇರೀತಿ ಸಾಹಿತ್ಯಕ್ಷೇತ್ರದಲ್ಲಿಯೂ ಬದಲಾವಣೆ ಕಂಡ ಕಾಲವೆಂದರೆ ೧೨ನೇ ಶತಮಾನದ ವಚನ ಯುಗವಾಗಿದೆ. ಬಸವಣ್ಣನವರ ಒಂದು ವಚನದಲ್ಲಿ ಕಲೆ ಹೀಗೆ ನಿರೂಪಿತವಾಗಿದೆ.

ಅರ್ಥ ರೇಖೆಯಿದ್ದಲ್ಲಿ ಫಲವೇನು?
ಆಯುಷ್ಯ ರೇಖೆಯಿಲ್ಲದನ್ನಕ್ಕ
ಮಡಿಕೆಯ ಮಾಡುವಡೆ ಮಣ್ಣೆ ಮೊದಲು
ತೊಡುಗೆಯ ಮಾಡುವರೆ ಹೊನ್ನೆ ಮೊದಲು

ಈ ವಚನ ಸಾಲುಗಳಲ್ಲಿ ರೇಖೆ, ಆಕಾರ, ಚಿತ್ರ ಭಿತ್ತಿ ಮತ್ತು ಮಡಿಕೆ ಮುಂತಾಗಿ ಕಲಾತ್ಮಕ ಅಂಶಗಳನ್ನು ಹೇಳಲಾಗಿದೆ.[೭] ಜೀವನದ ವಾಸ್ತವಿಕ ನೆಲೆಯನ್ನು ಕಂಡರಿಸುವ ಪ್ರಯತ್ನವನ್ನು ಮಾಡುವ ಕವಿ (ವಚನಕಾರ) ವಚನದಲ್ಲಿ ಕಲಾತ್ಮಕ ಅಂಶಗಳು ಪರೋಕ್ಷವಾಗಿ ಗೋಚರಿಸುವವು.

ಅಭಿನವ ಪಂಪನೆಂದು ಹೆಸರಾದ ನಾಗಚಂದ್ರ (ಕ್ರಿ.ಶ.೧೧೦೦ ರಲ್ಲಿ) ತನ್ನ ಮಲ್ಲಿನಾಥ ಪುರಾಣದಲ್ಲಿ ಬಹುವಾಗಿ ಚಿತ್ರಕಲೆಯ ಅಂಶಗಳನ್ನು ಪ್ರಸ್ತಾಪಿಸಿದ್ದಾನೆ. ಚಿತ್ರಕಲೆಯ ರಚನೆ, ವರ್ಣಗಳ ಮಿಶ್ರಣ, ಮುಂತಾದ ಅಂಶಗಳನ್ನು ಹೇಳುತ್ತಾ ಚೀರಘಟ್ಟಿ ಎಂಬ ಕಲಾವಿದನ ಹೆಸರನ್ನು ದಾಖಲಿಸುತ್ತಾನೆ.[೮] ಈ ಚೀರಘಟ್ಟಿ ಹೆಸರು ಕಾವ್ಯಗಳಲ್ಲಿ ಪ್ರಸ್ತಾಪವಾದುದು ವಿಶೇಷವಾಗಿದೆ. ಈ ಚೀರುಘಟ್ಟಿ ಕಲಾವಿದನ ಉಲ್ಲೇಖವು ಕರ್ನಾಟಕದ ಕಲೆಯ ಪ್ರಾಚೀನತೆಯನ್ನು ಅರಿತುಕೊಳ್ಳುವಲ್ಲಿ ವಿದ್ವಾಂಸರಿಗೆ ಬಹು ಉಪಯುಕ್ತ ದಾಖಲೆಯಾಗಿದೆ.

ಹರಿಹರನು ತನ್ನ ಒಂದು ರಗಳೆಕಾವ್ಯದಲ್ಲಿ ಶಬರಿಯ ಮೈಬಣ್ಣವನ್ನ ವರ್ಣಿಸುತ್ತಾ ಒಂದು ಕಪ್ಪುಬಣ್ಣದಲ್ಲಿಯೇ ಅದರ ಅನೇಕ ಛಾಯೆಗಳನ್ನು ಹೀಗೆ ವಿಂಗಡಿಸಿದ್ದಾನೆ.

ಕಂ// ಎಣ್ಣೆಯೊಳರ ನೇರಲ ತನಿ/

ವಣ್ಣಮನುಣ್ಣಿಸಿದನಬ್ಜಭವನಿಸುವ ಮೈ//

ವಣ್ಣದ ಶಬರಿ ತಮಾಲದ /

ತಣ್ಣಳಲೋಳ್ ಕಣ್ಣ ಬೆಳಗೆ ಬೆಳಗಾಗಿರ್ದಳ್ //

ಶಬರಿಯ ಮೈಬಣ್ಣ ಎಣ್ಣೆಯಲ್ಲಿ ನುಣ್ಣಿಸಿದ ನೇರಳ ಹಣ್ಣಿನಂತಹದು ಎಂದರೆ ತೀರಾ ಕಪ್ಪು, ಆಕೆ ಕುಳಿತಿರುವುದು ತಮಾಲವೃಕ್ಷದ ಕೆಳಗೆ, ಅದೂ ಕಪ್ಪು ಆದರೆ ಅವಳ ಮೈಬಣ್ಣದಷ್ಟಲ್ಲ. ಈ ಶಬರಿಯ ದೃಶ್ಯ, ಪ್ರಕೃತಿಗಳನ್ನು ಚಿತ್ರಕಾರ ಕೃತಿಯಲ್ಲಿ ಚಿತ್ರಿಸುವ ಸಾಮರ್ಥ್ಯವನ್ನು ಹೊಗಳಿದ್ದಾನೆ.[6] ಹೀಗೆ ರಗಳೆ ಕವಿಯಾದಿಯಾಗಿ ಶಿವಶರಣರು ತಮ್ಮ ವಚನಗಳಲ್ಲಿ ಚಿತ್ರಗಳ ಕುರಿತಾಗಿ ಹೊಗಳಿದ್ದಾರೆ. ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ – ಭಿತ್ತಿಚಿತ್ರ ಲೆಕ್ಕಣಿಕೆ, ಟಿಪ್ಪಣಿ ಬರೆಯುವ ಚಿತ್ರಜ್ಞ ಮುಂತಾದ ಅಂಶಗಳನ್ನು ಬಸವಣ್ಣ, ಮಧುವಯ್ಯ, ಭಂಡಾರಿಶಾಂತರಸ, ಅಂಬಿಗರ ಚೌಡಯ್ಯ ಮುಂತಾದ ಶರಣರು ಕಲೆಯನ್ನು ಲಕ್ಷಣ ಸ್ವರೂಪಗಳ ಸಮೇತವಾಗಿ ಚಿತ್ರಿಸಿದ್ದಾರೆ. ರಾಘವಾಂಕ, ಕುಮಾರಸ್ವಾಮಿ ಮೊದಲಾದ ಹಳೆಗನ್ನಡದ ಕವಿಗಳು ತಮ್ಮ ಕಾವ್ಯಗಳನ್ನು ಸಾಂದರ್ಭಿಕವಾಗಿ ಕಲೆಯನ್ನು ಪ್ರಸ್ತಾಪಿಸಿದ್ದಾರೆ. ಅದರಂತೆ ಮುಂದೆ ಬಂದ ದಾಸಯುಗದಲ್ಲಿ ದಾಸವರೇಣ್ಯರಾದ ಕನಕಪುರಂಧರರು ತಮ್ಮ ಕೀರ್ತನೆಗಳಲ್ಲಿ ವಿಷ್ಣುವಿನ ದಶಾವತಾರಗಳನ್ನು ವರ್ಣಿಸುವಲ್ಲಿ ಕಲೆಯ ಅಂಶಗಳನ್ನು ಕಾಣಬಹುದು. ಕನಕದಾಸರ ಮೋಹನ ತರಂಗಣಿಯಲ್ಲಿ ಸೌರಾಷ್ಟ್ರದವರ್ಣನೆ ಕಾಣಬಹುದು. ಇಲ್ಲಿ ಕಲೆಯು ವ್ಯಕ್ತವಾಗಿದೆ. ಜಗನ್ನಾಥದಾಸರು ಹರಿಕಥಾಮೃತಸಾರದಲ್ಲಿ ಭಗವಂತನ ರೂಪ ಲಾವಣ್ಯಗಳನ್ನು ವರ್ಣಿಸಿದ್ದಾರೆ.–ಹೀಗೆ ಕನ್ನಡದ ಬಹುತೇಕ ಎಲ್ಲ ಪ್ರಕಾರದ ಸಾಹಿತ್ಯಲ್ಲಿಯೂ ಕೂಡಾ ಕಲೆಯ ಅಂಶಗಳು ಕಾಣಸಿಗುತ್ತವೆ. ಕನ್ನಡನಾಡಿನ ಶಾಸನಗಳಲ್ಲಿ ಕಲೆಯ ಕುರಿತಾದ ಸಾಹಿತ್ಯ ಅಂಶಗಳನ್ನು ಕಾಣಬಹುದಾಗಿದೆ.

ಪ್ರಾತಿನಿಧಿಕವಾಗಿ ಕೆಲವು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದಾಗಿದೆ.

* ಶ್ರವಣಬೆಳಗೊಳದ ಬಸದಿಯೊಂದರಲ್ಲಿ ಭಿತ್ತಿಚಿತ್ರದ ವರ್ಣನೆ ಕಂಡು ಬರುತ್ತದೆ. ಈ ಶಾಸನದಲ್ಲಿ ದಕ್ಷಿಣದ ಬೆಳ್ಗೊಳದಲ್ಲಿ, ಉತ್ತರದ ಕೊಪ್ಪಳದಲ್ಲಿ, ಭಿತ್ತಿ ಚಿತ್ರಗಳ ವೈಶಿಷ್ಟ್ಯವನ್ನು ಸಾರುವ ಶಾಸನದಲ್ಲಿ "ಬಹು ಚಿತ್ರ ಭಿತ್ತಿಯಂ ನೋಡಿದರಂ ಮನಂಗೋಂಳಿಸುವ ಬಸದಿ" ಎಂದು ಭಿತ್ತಿಚಿತ್ರದ ಉಲ್ಲೇಖವಿದೆ.

* ಕೃಷ್ಣರಾಜಪೇಟೆಯ ಮಾಳಗುಂದದ ೧೧೧೬ ರಲ್ಲಿ ರಚಿತವಾಯಿತೆನ್ನಲಾದ ಶಾಸನವು ಈ ಕೆಳಗಿನ ಸಾಲುಗಳಲ್ಲಿ ಕಲೆಯ ಅಂಶಗಳನ್ನು ದಾಖಲಿಸಿದೆ.

ಸ್ವಸ್ತಿ ಸಮಸ್ತ, ಪ್ರಶಸ್ತಿ ಸಹಿತರಪ್ಪ ಶ್ರೀಮನಮಯ ವಿಶ್ವಕರ್ಮ, ತೋಟಕಾಚಾರ್ಯನರಪ್ಪ,

ಹಸಕುಶಲತೆಯೋಳ್ ಹೇಮಕರ್ಮ, ಲೋಹಕರ್ಮ, ಶಿಲಾಕರ್ಮ, ರತ್ನಾಕರ್ಮ, ಕಾಷ್ಟಕರ್ಮ, ಚಿತ್ರಕರ್ಮ, ಪತ್ರಕರ್ಮ, ಪ್ರತಿಮಾಕರ್ಮ ಸಮಸ್ತ ಕುಶಲತೆಯುಳ್ಳ ವಿಶ್ವಕರ್ಮ ನಿರ್ಮಿತಪ್ಪ, ಗವರಾಚಾರ್ಯ ನಾತನ ಪುತ್ರ ಎಂದು ಬಣ್ಣಿಸಿದೆ.

* ಗದುಗಿನ ತ್ರಿಕೂಟೇಶ್ವರ ದೇವಾಲಯದ ಸಂಕೀರ್ಣದಲ್ಲಿ ಸರಸ್ವತಿ ಗುಡಿಯ ಮೇಲಿನ ಶಾಸನವು ಅಲ್ಲಿ ಕ್ರಿಯಾಶಕ್ತಿ ಪಂಡಿತ ಅನೇಕ ಚಿತ್ರ ಶಾಸ್ತ್ರಾದಿ ಪಂಡಿತನಾಗಿದ್ದನೆಂದು ಹೇಳುತ್ತದೆ.

* ಕ್ರಿ.ಶ. ೭೪೬ ರ ಶಾಸನವೊಂದು ಸರ್ವಕಲಾನ್ತಖ್ಯಾತಿ "ಚಿತ್ರ ಕಲಾಭೀಜ್ಞೀನ ವಿಶ್ವಕರ್ಮಾಚಾರ್ಯ"ಎಂದಿದೆ. ಹೀಗೆ ಕನ್ನಡದ ಶಾಸನಗಳಲ್ಲಿ ಕಲಾಸಹಿತ್ಯವು ಸೂಕ್ಷ್ಮವಾಗಿ ಗೋಚರಿಸಿದೆ.

ಆಧುನಿಕ ಕಾಲ ಸಂದರ್ಭದ ನವೋದಯ, ನವ್ಯ ಕಾಲದಲ್ಲಿಯೂ ಕವಿಗಳು ತಮ್ಮ ಸಾಹಿತ್ಯದಲ್ಲಿ ಚಿತ್ರಕಲೆಗಳನ್ನು ಕುರಿತಾಗಿ ಸಾಂದರ್ಭಿಕವಾಗಿ ನಿರೂಪಿಸಿದ್ದಾರೆ. ನವೋದಯದ ಸಂದರ್ಭದಲ್ಲಿ ಕವಿಗಳು ಪ್ರಕೃತಿ ವರ್ಣನೆಯನ್ನು ಮಾಡಿದಾರೆ. ಕಾವ್ಯದಲ್ಲಿ ಪ್ರಕೃತಿಯ ರಮ್ಯತೆಯನ್ನು ಚಿತ್ರಿಸುವಲ್ಲಿ ಮೂಡಿದ ಕಾವ್ಯದ ಸಾಲುಗಳು ಒಂದುಬಗೆಯ ಚಿತ್ರಕಾವ್ಯವೇ ಆಗಿವೆ ಎನ್ನಬಹುದು. ಕುವೆಂಪು, ಬೇಂದ್ರೆ, ಪು.ತಿ.ನ., ಕೆ.ಎಸ್.ಎನ್, ಡಿ.ವಿ.ಜಿ. ಮುಂತಾದ ಕವಿಗಳು ತಮ್ಮ ಸಾಹಿತ್ಯದಲ್ಲಿ ವರ್ಣಿಸಿದ ಕಲೆಯ ಅಂಶಗಳನ್ನು ಕೆಲವು ಪ್ರಾತಿನಿಧಿಕವಾಗಿ ಆಯ್ದುಕೊಳ್ಳ ಬಹುದಾಗಿದೆ.

ಪ್ರಕೃತಿ ಕವಿಯಾದ ಕುವೆಂಪು ಅವರು ತಮ್ಮ ಕವನಗಳಲ್ಲಿ ಕಲೆಯನ್ನು ಕುರಿತು, ಕಲೆಯ ಅಸ್ತಿತ್ವ, ಮಹತ್ವವನ್ನು ಕುರಿತು ರಮ್ಯವಾಗಿ ವರ್ಣಿಸಿದ್ದಾರೆ. ಅವರು ಬರೆದ ಕವನದ ಕೆಲವು ಸಾಲುಗಳನ್ನು ನೋಡಿದಾಗ ಅದು ಸ್ಪಷ್ಟವಾಗುತ್ತದೆ.

* ಕಲೆಯ ಕಣ್ಣಿಲ್ಲದವನಿಗೆ ಒಂದು ಕಲ್ಲು ಕಾಡು
  ಕಲಾವಂತನಿಗೆ ಅದು ಸಗ್ಗವೀಡು.

ಈ ಕವಿತೆಯಲ್ಲಿ ಮನುಷ್ಯನ ಕಲಾಪ್ರಜ್ಞೆಯನ್ನು ಅಂತ:ಚಕ್ಷು ಎಂದಿದ್ದಾರೆ. ಈ ಒಳಗಣ್ಣು ಇರದಿದ್ದರೆ, ಅದು ಸ್ವರ್ಗವೇ ಆಗಿದ್ದರೂ ಕೇವಲ ಕಲ್ಲಾಗಿ ಗೋಚರಿಸುವುದು ಎಂಬ ಮಾತಿನಲ್ಲಿ ಕಲೆಯು ನೀಡುವ ಆಪ್ಯಾಯಮಾನವಾದ ಆನಂದವಿದೆ.

ಡಿ.ವಿ.ಜಿ.ಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಕಲೆಯ ವಿರಾಟರೂಪವನ್ನು ಆಧ್ಯಾತ್ಮದ ಜೊತೆ ಸಮೀಕರಿಸಿ ತೋರಿಸಿದ್ದಾರೆ.

ಬಿಂದು ವಿಸರಗಳನು ಮಂಕುಸರಳನುವು/
ಚೆಂದ ಕಣ್ಣಿಗೆ ವರ್ಣವಿವಿಧಂಗಳನವು//
ಚೆಂದ ವೇಗ ಸ್ತಿಮಿತದನವು ಹುಳಿಯಪ್ಪುನವು.
ದ್ವಂದ್ವದನುವುಗಳಂದ–ಮಂಕುತಿಮ್ಮ

ಚುಕ್ಕಿ (ಬಿಂದು) ಮತ್ತು ವಿಸ್ತಾರದಗಳ ಹೊದಿಕೆ, ಡೊಂಕುಡೊಂಕಾದ, ನೇರವಾದ ಹೊದಿಕೆ, ವಿವಿಧ ಬಣ್ಣಗಳಿಂದ ಕೂಡಿದ ಆನಂದವಾಗಿ ಕಾಣುವ ಸುಂದರವಾದ ನೋಟ ಮತ್ತು ವೇಗವಾಗಿ ಹೋಗುವುದು ಮತ್ತು ಒಂದೆಡೆ ನಿಶ್ಚಲವಾಗಿ ನಿಲ್ಲುವುದು ಎಂದು ಎರಡು ದ್ವಂದ್ವ ತತ್ವಗಳನೆಲೆಯಲ್ಲಿ ಆನಂದವಿದೆ ಎನ್ನುವಲ್ಲಿ ಸೌಂದರ್ಯಾನುಭೂತಿಯು ಅಡಗಿದೆ.[೧೦] ಬಿಂದು ರೇಖೆ, ಬಣ್ಣಗಳ ಕಲ್ಪನೆ ಸಂದರ್ಭೋಚಿತವಾಗಿ ಕಾವ್ಯಕ್ಕೆ ಸಂದಿವೆ. ಅಂತೆಯೆ ತತ್ವವನ್ನು ಸಾರುವಂತೆ ಈ ರೀತಿಯ ಪ್ರಯೋಗಗಳಲ್ಲಿ ಕಲಾವರ್ಣನೆಯ ಅಂಶಗಳು ಹೆಣೆದುಕೊಂಡಿವೆ, ರಚಿಸಲ್ಪಟ್ಟಿವೆ.

ಬೇಂದ್ರೆಯವರು ತಮ್ಮ ಕವಿತೆ ಸಾಲೊಂದರಲ್ಲಿ– ಧೀಮೂಢತೆಯ ನೊಡೆದು ನಿಲ್ಲಿಸುವೆ ಚಿತ್ರವನು ಚಿತ್ರಿಸಿದ ಬೊಂಬೆಯಂತೆ ಎಂದಿದ್ದಾರೆ. ಕೆ.ಎಸ್.ನವರು ತಮ್ಮ ಮೈಸೂರು ಮಲ್ಲಿಗೆ ಕವನ ಸಂಕಲನದಲ್ಲಿ ಇನಿಯನ ಬರುವಿಕೆಯನ್ನು ನಿರೀಕ್ಷಿಸುತ್ತಿರುವ ಹೆಣ್ಣೊಬ್ಬಳ ಪ್ರಸಂಗವನ್ನು ಚಿತ್ರಿಸುತ್ತಾ ಮನೆಗೆಲಸ ಬೆಟ್ಟದಷ್ಟಿರಲು ಸುಮ್ಮನೆ ಇವಳು ಚಿತ್ರದಲ್ಲಿ ತಂದಂತೆ ಇಹಳು--- ಎಂದು ಚಿತ್ರದ ಸ್ತಬ್ಧ ರೂಪದಲ್ಲಿ, ಹೆಣ್ಣಿನ ಪರಿಸ್ಥಿತಿಯನ್ನು ಅವಳ ತುಮುಲವನ್ನು ನಿರೂಪಿಸಿದ್ದಾರೆ.

ಹೀಗೆ ಆದಿಮದಿಂದಲೂ ಹಾಗೂ ಪ್ರಾಚೀನ ಕನ್ನಡ ಸಾಹಿತ್ಯದಿಂದಲೂ ಆಧುನಿಕದವರೆಗೆ ಕಲೆ, ಸಾಹಿತ್ಯ ಕೃತಿಗಳಲ್ಲಿ ಪ್ರಸ್ತಾಪಿತವಾಗಿದೆ ಎನ್ನಬಹುದು. ಸ್ಥೂಲವಾಗುವಲ್ಲಿ, ವಿಸ್ತಾರವಾಗಿ, ಸೂಕ್ಷ್ಮವಾದಲ್ಲಿ ಸಂಕಿರ್ಣವಾಗಿ ಸಾಹಿತ್ಯಲ್ಲಿ 'ಕಲೆ ಬಿಂಬಿತವಾಗಿದೆ' ಎನ್ನಬಹುದು.
ಆಧುನಿಕ ಸಂದರ್ಭದಲ್ಲಿ ಕೇವಲ ದೃಶ್ಯಕಲೆಯನ್ನೇ ಕುರಿತಾಗಿ ಸಾಹಿತ್ಯ ವಸಾಹಾತು ಪೂರ್ವದಲ್ಲಿ ಪ್ರಾರಂಭಗೊಂಡು ವಸಾಹಾತು ನಂತರದಲ್ಲಿಯೂ ರಚಿತಗೊಳ್ಳುತ್ತಾ ವ್ಯಾಪಕವಾಗುತ್ತಿದೆ. ೪೦– ೬೦ ದಶಕದಲ್ಲಿ ಆರಂಭಗೊಂಡ ಕನ್ನಡ ಕಲಾ ಸಾಹಿತ್ಯ ೭೦ ರ ದಶಕದ ಹೊತ್ತಿಗೆ ಉನ್ನತಿಯನ್ನು ಕಂಡಿತು ಎನ್ನಬಹುದು.

ಕನ್ನಡ ಸಾಹಿತ್ಯಕ್ಕೆ ಅಪಾರವಾದ ಕೊಡುಗೆ ನೀಡಿದ ಮೊದಲಿಗರಲ್ಲಿ ಕಾರಂತರು ಪ್ರಮುಖರಾದವರು ಎನ್ನಬಹುದು. ಡಾ. ಕೆ. ಶಿವರಾಂ ಕಾರಂತರು ೬೦ರ ದಶಕದಲ್ಲಿಯೇ
ಕಲಾಸಾಹಿತ್ಯವನ್ನ ರಚಿಸತೊಡಗಿದರು. ಅವರ ಕಲೆಯ ದರ್ಶನ ಕೃತಿಯು ೧೯೬೫ ರಲ್ಲಿ ಪ್ರಕಟಗೊಂಡಿತು. ಈ ಕೃತಿ ಕೇವಲ ದೃಶ್ಯಕಲಾ ಅಂಶಗಳನ್ನು ಮಾತ್ರ ಒಳಗೊಂಡಿರದೇ ಅದು ಮನುಷ್ಯನ ಜೀವನ ದೃಷ್ಟಿ, ಜೀವನವೇ ಒಂದು ಕಲೆ ಎಂಬ ತಾತ್ಪರ್ಯವನ್ನು ಸಾರುವ ನಿಟ್ಟಿನಲ್ಲಿ ಕೃತಿಯು ಸಾಗುತ್ತಾ ವಾಸ್ತವಿಕ, ಭೌತಿಕ, ಆಧ್ಯಾತ್ಮಿಕ ಸಾಮಾಜಿಕ, ಆರ್ಥಿಕ ಹೀಗೆ ಮುಂತಾಗಿ ಚರ್ಚಿಸಲ್ಪಟ್ಟು ಜೀವನದ ಉದ್ದೇಶ ಹಾಗೂ ಜೀವನ ಸಾರ್ಥಕ್ಯದ ಸ್ವರೂಪವನ್ನು ಕಂಡರಿಸುವ ಕೃತಿಯಾಗಿದೆ. ಬಹುಶಃ ಕಲೆಯೊಂದಿಗೆ ಧರ್ಮ, ಸಮಾಜ, ಜೀವನ ಮುಂತಾದ ಅಂಶಗಳು ತಳಕು ಹಾಕಿ ಕೊಂಡಿರುವುದನ್ನು ಕಂಡರಿಸುವಲ್ಲಿ, ಕಲೆಯ ಕುರಿತಾಗಿ ಗಹನವಾದ ವಿಚಾರಗಳನ್ನು ಆಳವಾಗಿ ಹೊಕ್ಕು ಅವುಗಳನ್ನು ತಡವುದರಲ್ಲಿ ಕಾರಂತರೆ ಮೊದಲಿಗರೆನ್ನಬಹುದು. ಕಲೆ– ಸಮಾಜಗಳ ಸಂಬಂಧ ಹಾಗೂ ಅಂತರಗಳನ್ನು ಮುಂತಾಗಿ ಚರ್ಚಿಸಿ, ಕೃತಿಯಲ್ಲಿ ಕಲೆಯ ಪ್ರಜ್ಞೆಯನ್ನು

ಗುರ್ತಿಸುವಂತೆ ಮಾಡಿದ್ದಾರೆ. ಭಾರತೀಯ ಕಲೆ, ಭಾರತೀಯ ಕಲಾಪ್ರಪಂಚ (೧೯೭೮) ಮುಂತಾದ ಕೃತಿಗಳನ್ನು ರಚಿಸಿದ ಕಾರಂತರು ಸಾಹಿತ್ಯದಲ್ಲಿ ಬರೆದಂತೆ 'ಕಲೆಯನ್ನು ಕುರಿತೂ ಬರೆದಿದ್ದಾರೆ. ಕಲಾಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ವಿ. ಕೃ. ಗೋಕಾಕ್‌ರು ತಮ್ಮ 'ಕಲಾ ಸಿದ್ಧಾಂತ' ಎಂಬ ಕೃತಿಯಲ್ಲಿ ಕಲೆಯ ಬಗ್ಗೆ ಬರೆಯುತ್ತ ಸೌಂದರ್ಯ ಮೀಮಾಂಸೆಯನ್ನು ಚರ್ಚಿಸಿದ್ದಾರೆ. ಗೋಕಾಕರ ನಂತರ ಅ.ಲ. ನರಸಿಂಹನ್ ಅವರು ಕೂಡಾ ಕಲಾ ಸಾಹಿತ್ಯದ ಪ್ರಾರಂಭಿಕ ಹಂತದಲ್ಲಿ ಅಪಾರ ಸೇವೆಸಲ್ಲಿಸಿ, ಕಲಾಸಾಹಿತ್ಯ ಕ್ಷೇತ್ರದ ವಿಸ್ತಾರಕ್ಕೆ ಕಾರಣರಾಗಿದ್ದಾರೆ ಎನ್ನಬಹುದು. ಹಲವು ಸಂಪಾದನೆಗಳನ್ನು ಕೈಗೊಂಡ ಅ. ಲ. ನರಸಿಂಹನ್ ಅವರು, 'ವೈ. ನಾಗರಾಜು, ಎಸ್. ಆರ್. ಐಯ್ಯಂಗಾರ್' ಎಂಬ ಕೃತಿಗಳನ್ನು ವ್ಯಕ್ತಿಕೇಂದ್ರಿತವಾಗಿ ಬರೆದು 'ಶಿಲ್ಪಕಲಾ ಪ್ರಪಂಚ' ಕೃತಿಯನ್ನು ಸಂಪಾದಿಸಿದ್ದಾರೆ. ವಿಜಯನಗರ ಶಿಲ್ಪಕಲೆಯಂತಹ ಹಲವು ಕೃತಿಗಳನ್ನು ಬರೆದು ಕಲಾಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ವಿದ್ವಾಂಸರಾಗಿದ್ದಾರೆ.

ವಿ.ಸೀತಾರಾಮಯ್ಯನವರು ೧೯೭೬ ರಲ್ಲಿ ಕಲಾನುಭವ ಎಂಬ ಕೃತಿಯನ್ನು ರಚಿಸಿ ಮೀಮಾಂಸೆ ಕ್ಷೇತ್ರಕ್ಕೆ ಉನ್ನತವಾದ ಕೊಡುಗೆ ನೀಡಿದ್ದಾರೆ. ಇವರ ಕೃತಿಗಳು ಕಲಾಸಾಹಿತ್ಯ ಕ್ಷೇತ್ರದಲ್ಲಿ ಮಹತ್ವದ ವಿಮರ್ಶಾ ಕೃತಿಗಳಾಗಿವೆ. ಭಾಷೆಯ ದೃಷ್ಟಿಯಿಂದಲೂ ಕಲೆಯ ದೃಷ್ಟಿಯಿಂದಲೂ ಎಪ್ಪತ್ತರ ದಶಕದಲ್ಲಿ ಅನೇಕ ಕಲಾಬರಹಗಳು ಭಿನ್ನ ವಿಚಾರಧಾರೆಗಳಿಂದ ಕೂಡಿದ ಕೃತಿಗಳಾಗಿವೆ ಎನ್ನಬಹುದು. ಇದೇ ಸಂದರ್ಭದಲ್ಲಿ ನಾಡೋಜ ಎಂ. ಎಚ್. ಕೃಷ್ಣಯ್ಯನವರು ಕೂಡಾ ಬಹುದೊಡ್ಡ ಕಲಾ ವಿಮರ್ಶಕರಾಗಿ ಕೊಡುಗೆ ನೀಡಿದ್ದಾರೆ. ಎಂ. ಎಚ್. ಕೃಷ್ಣಯ್ಯ ಅವರ ಸಂಪಾದಕತ್ವದಲ್ಲಿ ಕಲೆ ಮತ್ತು ರಸಸ್ವಾದನೆ ೧೯೮೯ ರಲ್ಲಿ ಹೊರಬಂದ ಕೃತಿಯಾಗಿದ್ದು, ಅಂದಿನ ಕಲಾ ವಿಮರ್ಶೆವಲಯದಲ್ಲಿ ತುಂಬಾ ಸಂಚಲನ ಮೂಡಿಸಿದ ಕೃತಿಯಾಗಿದೆ. ಅನೇಕ ವಿದ್ವಾಂಸರ ಲೇಖನಗಳಿಂದ ಕೂಡಿದೆ– ಚಿತ್ರಕಲೆಯ ಪ್ರಾಚೀನ ಗ್ರಂಥಗಳಲ್ಲಿ ಕಲೆಯ ಪರಿಭಾಷೆ (ಅ.ಲ. ನರಸಿಂಹನ್), ಭಾರತೀಯ ಸಾಂಪ್ರದಾಯಿಕ ಶಿಲ್ಪಕಲೆ (ಡಿ.ವಿ.ವಾದಿರಾಜ್), ವಿವಿಧ ಕಲೆಗಳ ನಡುವಿನ ಸಂಬಂಧ (ಎಂ. ಎಚ್. ಕೃಷ್ಣಯ್ಯ) ಕಲೆ ಮತ್ತು ಮನಶಾಸ್ತ್ರ (ಡಾ. ಬಿ. ಸಿ. ರಾಮಚಂದ್ರ ಶರ್ಮ) ರಸತತ್ವ–ಸೌಂದರ್ಯ ಪ್ರಜ್ಞೆ (ಪ್ರೋ. ಅ.ರಾ.ಮಿತ್ರ) ಕರ್ನಾಟಕದಲ್ಲಿ ಚಿತ್ರಕಲೆ (ವಿ. ಜಿ. ಅಂದಾನಿ) ಕಲೆ ಎಂದರೇನು? (ಚಿ.ಸು. ಕೃಷ್ಣ ಶೆಟ್ಟಿ) ಮುಂತಾದ ಸತ್ವಯುತ ಲೇಖನಗಳನ್ನು ಒಳಗೊಂಡಿದೆ. ಈ ಕೃತಿ ವಿಮರ್ಶಾ ಕ್ಷೇತ್ರದಲ್ಲಿ ಬಹುಮುಖ್ಯ ಪಾತ್ರವಹಿಸಿದೆ. ಈ ರೀತಿಯ ಸಾಹಿತ್ಯ ಕೃತಿಗಳು ಪ್ರಾರಂಭದ ಹಾಗೂ ನಂತರದ ದಶಕಗಳಲ್ಲಿ ಕಲಾಕ್ಷೇತ್ರದಲ್ಲಿನ ಸಾಹಿತ್ಯದ ಕೊರತೆಯ ಕೊರಗನ್ನು ನೀಗಿಸುತ್ತಾ, ಒಂದು ಗಟ್ಟಿ ನೆಲೆಯನ್ನು ರೂಪಿಸಿದವು ಎಂದರೆ ಅತಿಶಯೋಕ್ತಿಯಾಗಲಾರದು.

ಎಸ್. ಸಂಜೀವನ್ ಅವರು ರಚಿಸಿದ ತೆಲುಗು ಕೃತಿ ೧೯೭೬ ರಲ್ಲಿ 'ರಸ ರೇಖೆ' ಎಂದು ಕನ್ನಡದಲ್ಲಿ ಹರಿಪ್ರಿಯ ಅವರಿಂದ ಅನುವಾದಗೊಂಡ ಮತ್ತೊಂದು ಮಹತ್ವದ ವಿಮರ್ಶಾ ಕೃತಿಯಾಗಿದೆ. ಕನ್ನಡದಲ್ಲಿ ಹರಿಪ್ರಿಯಾ ಅವರು ತಮ್ಮ ಈ ಕೃತಿಯನ್ನು ಮಹಾನ್ ಕಲಾವಿದರಾದ ಕೆ. ಕೆ. ಹೆಬ್ಬಾರ್ ಅವರಿಗೆ ಅರ್ಪಣೆ ಮಾಡಿದ್ದಾರೆ. ತೆಲುಗು ಮೂಲದಿಂದ ಕನ್ನಡಕ್ಕೆ ಅನುವಾದಗೊಂಡ ಈ ಕೃತಿಯಲ್ಲಿ ರವೀಂದ್ರನಾಥ ಟ್ಯಾಗೋರ್, ಅಮೃತಾ ಶೇರಗಿಲ್, ಅಸೀತ್‌ಕುಮಾರ ಅಲ್ದಾರ್, ಗಗನೇಂದ್ರಾನಾಥ ಟ್ಯಾಗೋರ್, ನಿಕೋಲಸ್ ರೋರಿಕ್ ಮುಂತಾದ ಪ್ರಸಿದ್ಧ ಕಲಾವಿದರ ಕುರಿತಾದ ಲೇಖನಗಳಿವೆ. ಈ ಕೃತಿಯಲ್ಲಿ ವ್ಯಕ್ತಿಕೇಂದ್ರಿತ ಲೇಖನಗಳಿದ್ದರೂ ಅವರ ವಿಮರ್ಶೆ, ನಿರೂಪಣ ಶೈಲಿಯನ್ನು ತುಂಬಾ ಸುಂದರವಾಗಿ ಒಳಗೊಂಡಿದೆ. ಲಾಮಾಗೋವಿಂದ.ಪಿ ಶೀರ್ಷಿಕೆಯ ಲೇಖನದಲ್ಲಿ ಕೆಲವು ಮಹತ್ವದ ಅಂಶಗಳು ಚರ್ಚಿತವಾಗಿವೆ. ಕಲೆ ಮತ್ತು ವಿಜ್ಞಾನಗಳ ಸ್ವರೂಪವನ್ನು ತೋರಿಸುವ ದಿಶೆಯಲ್ಲಿ ಹೃದಯ ಜೀವಿಗಳ್ಳದ್ದು ಅನುಭೂತಿ, ಬುದ್ಧಿ ಜೀವಿಗಳದ್ದು ಆಲೋಚನೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಮುಂದುವರೆದು ಹೃದಯ ಜೀವಿಗಳದ್ದು ಸಂಶ್ಲೇಷಣೆ, ಬುದ್ಧಿ ಜೀವಿಗಳದ್ದು ವಿಶ್ಲೇಷಣೆ ಎಂಬ ಅಂಶಗಳನ್ನು ಕಂಡರಿಸುತ್ತಾ ಒಂದು ವಿಜ್ಞಾನವಾದರೆ, ಇನ್ನೊಂದು ರಸಸೃಷ್ಟಿ, ಕಲೆ ಎಂಬ ನಿಲುವಿಗೆ ಬಂದಿರುವ ರೀತಿಯು ಮನೋಜ್ಞ ವಿಚಾರಗಳಿಂದ ಕೂಡಿದ್ದಾಗಿದೆ. ಇಂತಹ ವಿಮರ್ಶಾ ಕೃತಿಗಳು ೮೦ರ ದಶಕದಲ್ಲಿ ಬಹು ಉಪಯುಕ್ತ ಹಾಗೂ ಮಹತ್ವದ ಕೃತಿಗಳಾಗಿ ಕಲಾಸಾಹಿತ್ಯ ಕೇತ್ರದಲ್ಲಿ ಅಜರಾಮರತ್ವ ಪಡೆದಿವೆ. ಹೀಗೆ ಕೆಲವು ಉದಾಹರಣೆಗಳನ್ನು ಪ್ರಾತಿನಿಧಿಕವಾಗಿ ಪ್ರಸ್ತುತ ಸಂದರ್ಭದ ಅಧ್ಯಯನದಲ್ಲಿ ನೋಡಬಹುದಾಗಿದೆ.

ಕಲಾಸಾಹಿತ್ಯದಲ್ಲಿ ಅನೇಕ ಕೃತಿಗಳು ವ್ಯಕ್ತಿಕೇಂದ್ರಿತ ಹಾಗೂ ಸಂಕೀರ್ಣ ಸಾಹಿತ್ಯದ ಹಿನ್ನೆಲೆಯಲ್ಲಿ ರಚನೆಯಾಗಿದ್ದು ವಸಾಹಾತು ಪೂರ್ವದ ಹಂತದಲ್ಲಿ ವ್ಯಕ್ತಿಕೇಂದ್ರಿತ ಹಾಗೂ ಸೌಂದರ್ಯ ಮೀಮಾಂಸೆ, ಜನಪದ ಕಲೆಗಳು, ವಸ್ತುಕೇಂದ್ರಿತ, ಶಿಲ್ಪಕಲಾ ಕೇಂದ್ರಿತ ಕೃತಿಗಳು ಹೀಗೆ ಅನೇಕ ರೀತಿಯಲ್ಲಿ ರಚನೆಗೊಂಡಿದ್ದು, ವಿಮರ್ಶೆಯ ಅಂಶಗಳನ್ನು ಎಲ್ಲಾ ಬಗೆಯ ಸಾಹಿತ್ಯದಲ್ಲಿ ಗುರ್ತಿಸಬಹುದಾಗಿದೆ. ವಸಾಹತ್ತೋತ್ತರ ಕಾಲದಲ್ಲಿ ಶುದ್ಧವಾಗಿ ವಿಮರ್ಶೆಗೆಂದೇ ಹಲವಾರು ಕೃತಿಗಳು ರಚಿತವಾಗಿದ್ದು, ಬರಹಗಾರರಾದ, ಎಂ.ಎಚ್.ಕೃಷ್ಣಯ್ಯ, ವಿ.ಸೀತಾರಾಮಯ್ಯ, ಪಿ.ಆರ್.ತಿಪ್ಪೇಸ್ವಾಮಿ, ಅ.ಲ.ನರಸಿಂಹನ್, ಚಂದ್ರಕಾಂತ ಕುಸನೂರ, ಸಿ.ಪಿ.ಕೆ, ಶಿವರಾಮ ಕಾರಂತ, ಎನ್.ಮರಿಶಾಮಾಚಾರ್, ಜಿ.ಸು.ಕೃಷ್ಣಶೆಟ್ಟಿ, ಕೆ.ವಿ.ಸುಬ್ರಹ್ಮಣ್ಯಂ, ಅ.ನ.ಕೃಷ್ಣರಾವ್, ಕೀರ್ತಿನಾಥ ಕುರ್ತುಕೋಟಿ, ಎನ್.ವಿಶ್ವರೂಪಾಚಾರ್, ಬಿ.ವಿ.ಕೆ.ಶಾಸ್ತ್ರೀ, ಕೆ.ವಿಅಯ್ಯರ್, ಎಸ್.ಕೆ.ರಾಮಚಂದ್ರರಾವ್, ಕೆ.ಎಸ್.ಶ್ರೀನಿವಾಸಮೂರ್ತಿ ಮುಂತಾದ ಕಲಾ ಬರಹಗಾರರು, ವಿಮರ್ಶೆಯ ಜೊತೆಗೆ, ಹಾಗೂ ಕಲೆಯನ್ನು ಆಧರಿಸಿ ಕೃತಿಗಳನ್ನು ರಚಿಸಿದ್ದನ್ನು ನಾವು ಕಾಣಬಹುದಾಗಿದೆ. ಪ್ರಸ್ತುತ ದಶಕದಲ್ಲಿ ಎಂ.ಎಚ್.ಕೃಷ್ಣಯ್ಯ, ಅ.ಲ.ನರಸಿಂಹನ್, ಕೆ.ವಿ.ಸುಬ್ರಹ್ಮಣ್ಯಂ, ಡಿ.ಎ.ಉಪಾಧ್ಯ, ರವಿಕುಮಾರ ಕಾಶಿ, ಎಚ್.ಎ.ಅನಿಲ್ ಕುಮಾರ, ಡಾ.ಎಸ್.ಸಿ.ಪಾಟೀಲ್, ಡಾ ಶಿವಾನಂದ ಬಂಟನೂರ, ಜಿ.ಸು.ಕೃಷ್ಣ ಶೆಟ್ಟಿ,

ಎಂ.ಎಸ್.ಮೂರ್ತಿ, ಆರ್.ಎಚ್.ಕುಲಕರ್ಣಿ ಮುಂತಾದವರು ಪ್ರಮುಖ ಕಲಾಬರಹ ಗಾರರಾಗಿದ್ದಾರೆ. ಹಲವಾರು ಸಂಘಸಂಸ್ಥೆಗಳಿಂದ ಲಲಿತಕಲಾ ಅಕಾಡೆಮಿಯಿಂದ, ಈ ಬರಹಗಾರರ ಕೃತಿಗಳು ಪ್ರಕಾಶನ ಕಂಡಿವೆ. ವಾರ್ಷಿಕ, ತ್ರೈಮಾಸಿಕ, ಪತ್ರಿಕೆಗಳಲ್ಲಿಯೂ ಕೂಡಾ ಲೇಖನಗಳು ಪ್ರಕಟಗೊಂಡು ಕಲಾಸಕ್ತ ಓದುಗರಿಗೆ ಸುಲಭವಾಗಿ ತಲುಪುತ್ತವೆ.

ಡಾ.ಕೆ.ಶಿವರಾಂ ಕಾರಂತರ "ಶಿಲ್ಪ, ಚಿತ್ರ, ವಾಸ್ತು ಶಿಲ್ಪ," "ಕರ್ನಾಟಕದ ಚಿತ್ರಕಲೆ" "ಅಪೂರ್ವಪಶ್ಚಿಮ" ಮುಂತಾದ ಕೃತಿಗಳು ಪ್ರಾರಂಭದ ದಶಕದಲ್ಲಿ ಬಹುಮೌಲ್ಯಯುತ ಕೃತಿಗಳಾಗಿವೆ. ೧೯೮೦ ರಲ್ಲಿ ಹೊರಬಂದ ಕಾರಂತರ "ಭಾರತೀಯ ಚಿತ್ರಕಲೆ" ಕೃತಿಯಲ್ಲಿ ಕಲಾ ಮೀಮಾಂಸೆಯನ್ನು ಚರ್ಚಿಸಲಾಗಿದೆ. ಈ ಕೃತಿಯಲ್ಲಿ ಕಾರಂತರು ಅಪಸ್ತಂಭನೆಂಬ ಋಷಿಯನ್ನು ಉಲ್ಲೇಖೀಸುತ್ತಾ ಅವನ ಗ್ರಂಥವಾದ ಕರ್ಮಬುದ್ಧಿಸಾರವನ್ನು ಪ್ರಸ್ತಾಪಿಸಿದ್ದಾರೆ. ಇದು ಅಷ್ಟೊಂದು ಪ್ರಚಾರದಲ್ಲಿ ಇರದಿದ್ದರೂ, ಅದರ ವಿಷಯವಾಗಿ ಕಾರಂತರು ಪ್ರಥಮ ಬಾರಿಗೆ ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. ಇಂತಹ ಚಾರಿತ್ರಿಕ, ಐತಿಹಾಸಿಕ, ಮಹತ್ವವುಳ್ಳ ವಿಚಾರಗಳನ್ನು ನಿರೂಪಿಸಿದ್ದಾರೆ. ವಿ. ಕೃ. ಗೋಕಾಕ್‌ರು ಕಾರಂತರಂತೆ ಶುದ್ಧ ಕಲೆಗಾಗಿಯೇ ಸಾಹಿತ್ಯ ರಚಿಸದಿದ್ದರೂ ಕೂಡಾ ಅವರ ಸಾಹಿತ್ಯ ಕೃತಿಗಳಲ್ಲಿ ಸೌಂದರ್ಯದ ಪರಿಕಲ್ಪನೆ, ರಸಾನುಭವಗಳಂತಹ ಅಂಶಗಳನ್ನು ಪರೋಕ್ಷವಾಗಿ ಒಳಗೊಂಡಿರುವ ಸಾಧ್ಯತೆಗಳು ಹೆಚ್ಚಾಗಿವೆ ಎನ್ನಬೇಕು. ಗೋಕಾಕರ "ಕಲೆಯ ನೆಲೆ" ಕೃತಿಯು ಪರೋಕ್ಷವಾಗಿ ಕಲೆಯ ಅಂಶಗಳನ್ನು ಧ್ವನಿಸುತ್ತದೆ ಎನ್ನಬಹುದು. ಈ ರೀತಿಯಲ್ಲಿ ಕಲಾ ಸಾಹಿತ್ಯದಲ್ಲಿ ಮಹನೀಯರ ಕೊಡುಗೆಗಳನ್ನು ಪ್ರಾರಂಭಿಕ ಹಂತದಲ್ಲಿ ಕಾಣಬಹುದಾಗಿದೆ.

ಅನುವಾದದ ಸಾಹಿತ್ಯ ಪ್ರಕಾರಗಳಲ್ಲಿ ಅನೇಕ ಕೃತಿಗಳು ಇಂಗ್ಲೀಷ್ ಹಗೂ ಇತರ ಭಾಷೆಗಳಿಂದ ಅನುವಾದ ಗೊಂಡಿದ್ದು, ಕೆಲವು ಕೃತಿಗಳಿಂದ ಅವುಗಳನ್ನು ಉದಾಹರಿಸ ಬಹುದಾಗಿದೆ. ೧೯೭೭ರಲ್ಲಿ ಮ್ಯೂರಲ್ ಪೇಟಿಂಗ್ ಇನ್ ಇಂಡಿಯಾ ಎಂಬ ಇಂಗ್ಲೀಷ್ ಪ್ರಕೃತಿ ಜೆ.ಸಿ.ನಾಗಪಲ್ಲಿವರದ್ದಾಗಿದ್ದು, ಅದು ಕನ್ನಡದಲ್ಲಿ "ಭಾರತ ಭಿತ್ತಿ ಚಿತ್ರಗಳು" ಎಂದು ಶಿರ್ಷಿಕೆಯಲ್ಲಿ ಅನುವಾದಿತಗೊಂಡಿದೆ. ೧೯೭೯ ರಲ್ಲಿ ಕಲೆ ಮತ್ತು ಸಾಮಾಜಿಕ ಜೀವನ ಎಂಬ ಕೃತಿಯ ಎಸ್.ಕೆ.ರಾಮಚಂದ್ರ ಮೂರ್ತಿಯವರಿಂದ ಅನುವಾದಿತಗೊಂಡಿದೆ. 'ಪ್ಲಖನೊವ್' ರವರ ಇಂಗ್ಲೀಷ್ ಮೂಲದ್ದಾಗಿದೆ. ಅದೇ ರೀತಿಯಲ್ಲಿ ಸಿ.ಪಿ.ಕೃಷ್ಣಕುಮಾರವರು ಅನುವಾದಿತ ಕೃತಿ ಕಲೆ ಎಂದರೇನು? ಮೂಲದಲ್ಲಿ ಟಾಲಸ್ಟಾಯ್‌ನ ಕೃತಿಯಾಗಿದ್ದು, ಕಲಾಸಾಹಿತ್ಯಕ್ಷೇತ್ರದಲ್ಲಿ ವಿವಿಧ ಪಾಶ್ಚಿಮಾತ್ಯ ಮೀಮಾಂಸೆಗಳನ್ನು ಅರಿತುಕೊಳ್ಳುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. 'ಆಟಮಾಟ', ಶ್ರೀನಿವಾಸ ಮೂರ್ತಿಯವರ ಅನುವಾದಿತ ಕೃತಿಯಾಗಿದೆ. ಪ್ರಸ್ತುತ ದಶಕದಲ್ಲಿ ಮೈಕೆಲೆಂಜಿಲೋ ಆತ್ಮಕಥನ ನುಗ್ಗೆಹಳ್ಳಿಯವರಿಂದ, ಕಲೆಯಲ್ಲಿ ಮಾನವತಾವಾದ ಕೃತಿಯು ಎಸ್.ಕೆ.ರಾಘವೇಂದ್ರರಾವ್ ಅವರಿಂದ ಮತ್ತು 'ನೋಡುವ ಬಗೆ' ಎಚ್.ಎ.ಅನಿಲಕುಮಾರ್ ಅವರಿಂದ ಅನುವಾದಗೊಂಡ ಪ್ರಮುಖ ಕೃತಿಗಳಾಗುತ್ತವೆ.

ಕಲಾವಿದರ ಜೀವನ ಸಾಧನೆಗಳನ್ನು ವಿವರಿಸುವ ಹಾಗೂ ವಿಮರ್ಶೆಯ ನೆಲೆಯಲ್ಲಿ ಕಲೆಯನ್ನು, ಕಲಾವಿದರನ್ನು ಕಂಡರಿಸುವ ದಿಶೆಯಲ್ಲಿ ವ್ಯಕ್ತಿಕೇಂದ್ರೀತ ಸಾಹಿತ್ಯ ಪ್ರಮುಖವಾಗಿವೆ. ಮಹಾನ್ ಕಲಾವಿದರ ಚರಿತ್ರೆಯನ್ನು ಸಾರುವ ಕೃತಿಗಳು, ರಾಷ್ಟ್ರ ಮತ್ತು ಅಂತರಾಷ್ಟ್ರ ಖ್ಯಾತಿಯ ಕಲಾವಿದರನ್ನು ಚಿತ್ರಿಸುವುದರ ಜೊತೆಗೆ ಅವರ ಕಲಾಪರಿಸರ, ಸಾಮಾಜಿಕ ಜೀವನ ಮುಂತಾದ ಅಂಶಗಳನ್ನು ತೋರಿಸುವಲ್ಲಿ ಮುಖ್ಯವಾಗುತ್ತವೆ. ಖ್ಯಾತ ಬರಹಗಾರರಾದ ಮರಿಶಾಮಾಚಾರ ಅವರು ತಮ್ಮ ಕೃತಿಗಳಲ್ಲಿ ಕಲಾವಿದರ ಚರಿತ್ರೆಯನ್ನು ರೂಪಿಸಿದ್ದಾರೆ. "ಅವರ ಭಾರತದ ದೃಶ್ಯಕಲಾವಿದರು" ಎಂಬ ಕೃತಿಯು ಅವನೀಂದ್ರನಾಥ ಟ್ಯಾಗೋರ್, ನಂದಲಾಲ್ ಬೋಸ್, ಗಗನೇಂದ್ರನಾಥ, ಕ್ಷಿತೀಂದ್ರನಾಥ, ವೆಂಕಟಪ್ಪ, ಜಾಮಿನಿರಾಯ್, ಅಸಿತಕುಮಾರ್ ಅಲ್ದಾರ್, ಶೈಲಜ್ ಮುಖರ್ಜಿ, ರಾಮಕಿಂಕರ್ ಬೈಜ್, ಅಮೃತಾ ಶೇರಗಿಲ್, ಎನ್.ಎಸ್.ಬೇಂದ್ರೆ, ಕೆ.ಕೆ.ಹೆಬ್ಬಾರ, ಫಣಿಕ್ಕರ್, ಕೆ.ಜಿ.ಸುಬ್ರಹ್ಮಣ್ಯಂ, ಮುಂತಾದ ರಾಷ್ಟ್ರ ಮಟ್ಟದ ಕಲಾವಿದರ ಬಗೆಗಿನ ವಿಫುಲವಾದ ಮಾಹಿತಿಯನ್ನು ಒಳಗೊಂಡಿದೆ. ೧೯೯೪ ರಲ್ಲಿ ಪ್ರಕಟವಾದ ರಾಜಾರವಿವರ್ಮ ಕೃತಿಯೂ ಕೂಡಾ ಎನ್.ಮರಿಶಾಮಾಚಾರ್ ಅರ ಕೃತಿಯಾಗಿದ್ದು ಇದು ರವಿವರ್ಮನ ಜೀವನದ ಮೇಲೆ ಬೆಳಕುಚೆಲ್ಲುವ ಕೃತಿಯಾಗಿದೆ.

ಬಿ.ಪಿ.ಬಾಯಿರಿ ಅವರು ರಚಿಸಿದ ಅನೇಕ ಕೃತಿಗಳು ವ್ಯಕ್ತಿಕೇಂದ್ರಿತ ಕೃತಿಗಳಾಗಿವೆ. "ನವ್ಯ ಕಲೆ ಹಾಗೂ ಕಲೆಗಾರರು" "ಪಾಶ್ಚಿಮಾತ್ಯ ಕಲಾವಿದರು" "ಕಲೆಗಾರರ ಕತೆಗಳು" ಮುಂತಾದ ಕೃತಿಗಳು ೧೯೮೦ರ ಅವಧಿಯಲ್ಲಿ ಪ್ರಕಟಗೊಂಡಿವೆ. ೧೮೮೮ರಲ್ಲಿ ಕಟ್ಟಂಗೇರಿ ಕೃಷ್ಣ ಹೆಬ್ಬಾರ ಎಂಬ ಕೃತಿಯನ್ನು ಕು.ಶಿ.ಹರಿದಾಸ ಭಟ್ಟ ಅವರು ಬರೆದಿದ್ದು, ಉಡುಪಿಯ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರದಿಂದ ಪ್ರಕಟಗೊಂಡಿದೆ. ಆನಂದ ಕುಮಾರಸ್ವಾಮಿ ಎಂಬ ಕೃತಿಯು ಎಸ್.ಕೆ.ರಾಮಚಂದ್ರರಾವ್ ಅವರಿಂದ ರಚನೆಯಾಗಿದೆ.

*ರುಮಾಲೆ ಚೆನ್ನಬಸವಯ್ಯ ಕೃತಿ ಕೆ. ಎಸ್. ಶ್ರೀನಿವಾಸಮೂರ್ತಿ(೧೯೯೦) ಅವರದ್ದಾಗಿದೆ.

*ಎಸ್.ಎಸ್.ಕುಕ್ಕೆ: ವಿ.ಟಿ.ಎಸ್.ರಾವ್(೧೯೯೭),

*ಎ.ಸಿ.ಚ್.ಆಚಾರ್ಯ: ಬೇಕಾ ಮೂರ್ತೀಶ್ವರಯ್ಯ (೧೯೯೦),

*ವೈ.ನಾಗರಾಜು: ಅ.ಲ.ನರಸಿಂಹನ್,

*ಮಧುಗಿರಿರಾಮು: ಯು.ಎಸ್.ವೆಂಕಟ್‌ರಾಮನ್(೧೯೯೭),

*ಎಂ.ಎ.ಚಟ್ಟಿ: ಅನ್ನದಾನಿ ಹಿರೇಮಠ(೧೯೮೫),

*ಎನ್.ಜೆ. ಪಾವಂಜೆ: ಎಂ. ಟಿ. ವಿ ಆಚಾರ್ಯ,

*ಪಿಕಾಸೋ: ಸುರೇಶ ಕುಲಕರ್ಣಿ (೧೯೮೨),

*ಕಲಾತಪಸ್ವಿ ಎಂ.ವ್ಹಿ.ಮಿಣಜಗಿ: ಶಂಕರ ಪಾಟೀಲ ಮುಂತಾದ ವ್ಯಕ್ತಿಕೇಂದ್ರಿತ ಕೃತಿಗಳು ಕಲಾಸಾಹಿತ್ಯದಲ್ಲಿ ಪ್ರಕಟಣೆ ಕಂಡಿದೆ.

ಪ್ರವಾಸ ಸಾಹಿತ್ಯದಲ್ಲಿ

*ತುಳುನಾಡಿನ ಚಿತ್ರಕಲೆ–೧೯೯೨–ಅ. ಲ. ನ ಪ್ರವಾಸ ಸಾಹಿತ್ಯ ೧೯೮೮ ಗೋಕಾಕರ ಕೃತಿ, ೧೯೯೩ ರಲ್ಲಿ ವೆಂಕಟಾಚಾರ್ ಪುಂಚಿತ್ತಾಯ್ ಅವರು ಬರೆದ "ಕೇರಳದ ವರ್ಣ ಚಿತ್ರಲೋಕ,

* ೧೯೯೩ರಲ್ಲಿ ಡಾ. ಕೃಷ್ಣಾನಂದ ಕಾಮತ್ ಅವರು ಬರೆದ ಮಧ್ಯಪ್ರದೇಶದ ಮಡಿಲಲ್ಲಿ ಇನ್ನೂ ಅನೇಕ ಕೃತಿಗಳು ಪ್ರವಾಸ ಕೇಂದ್ರಿತ ದೃಶ್ಯಕಲಾಸಾಹಿತ್ಯದ ಅಡಿಯಲ್ಲಿ ಸೇರುವಂತಹವುಗಳಾಗಿವೆ. ಹೀಗೆ ಪ್ರವಾಸ, ವ್ಯಕ್ತಿಕೇಂದ್ರಿತ, ಸಂಪಾದನಾ ಮುಂತಾಗಿ ಹಲವು ಪ್ರಕಾರಗಳಲ್ಲಿ ಕೃತಿಗಳು ಪ್ರಕಟವಾಗಿವೆ.

ಪ್ರಾಚೀನದಿಂದ ಹಿಡಿದು ಆಧುನಿಕ ಕಾಲದವರೆಗಿನ ಕನ್ನಡ ನಾಡಿನ ಕಲಾಸಾಹಿತ್ಯ ಚರಿತ್ರೆಯಲ್ಲಿ ಕಲಾಸಾಹಿತ್ಯಕ ಅಂಶಗಳನ್ನು ಗುರ್ತಿಸಬಹುದಾಗಿದೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ, ಶಾಸನಗಳಲ್ಲಿ, ಹಸ್ತಪ್ರತಿಗಳಲ್ಲಿ ಪ್ರಾಸಂಗಿಕವಾಗಿ ಕಲಾಸಾಹಿತ್ಯವನ್ನ ಕಾಣಬಹುದಾಗಿದೆ. ಕನ್ನಡದ ಹಲವು ಪ್ರಕಾರಗಳಲ್ಲಿ ಅಲ್ಲದೆ ಅನೇಕ ಹಂತಗಳಲ್ಲಿ, ಅಂದರೆ ಹಳೆಗನ್ನಡ, ನಡುಗನ್ನಡ, ಆಧುನಿಕ ಕನ್ನಡ ಮುಂತಾದ ಸ್ತರದ ಸಾಹಿತ್ಯದಲ್ಲಿ ಕಲೆಯ ಕುರಿತಾದ ಅಂಶಗಳು ದಾಖಲಾಗಿವೆ. ಕನ್ನಡದ ಪ್ರಾಚೀನ ಪ್ರಕಾರವಾದ ಚಂಪೂಕಾವ್ಯ, ಗದ್ಯಕಾವ್ಯಗಳಂತೆ ಮಹತ್ವದ ಘಟ್ಟಗಳಾದ ರಗಳೆ, ವಚನ, ಕೀರ್ತನೆಗಳಲ್ಲಿಯೂ ಕಲೆಯ ಸಂಗತಿಗಳನ್ನು ಪರೋಕ್ಷವಾಗಿ ಗುರ್ತಿಸಬಹುದಾಗಿದೆ.

ನವ್ಯ, ನವ್ಯೋತ್ತರ ಸಮಕಾಲೀನದಲ್ಲಿಯೂ ಪ್ರಾಸಂಗಿಕವಾಗಿ ಕಲಾ ಅಂಶಗಳನ್ನು ಒಳಗೊಂಡ ಸಾಹಿತ್ಯವನ್ನು ಹಾಗೂ ಪ್ರಸ್ತುತದಲ್ಲಿ ಶುದ್ಧವಾದ ಕಲಾಸಾಹಿತ್ಯದ ಬೆಳವಣಿಗೆಯನ್ನು ಕಾಣಬಹುದಾಗಿದೆ.

೨೦೦೪ ರಿಂದ ೨೦೧೪ ರ ದಶಕದಲ್ಲಿ ಅನೇಕ ಕಲಾಸಾಹಿತ್ಯ ಕೃತಿಗಳು ವಿವಿಧ ಸಂಘ ಸಂಸ್ಥೆಗಳಿಂದ, ಅಕಾಡೆಮಿಗಳಿಂದ, ವಿಶ್ವವಿದ್ಯಾಲಯಗಳ ಪ್ರಸಾರಾಂಗಗಳಿಂದ ಪ್ರಕಟಗೊಂಡಿವೆ. ನಿಯತಕಾಲಿಕೆಗಳೂ ಪಾಕ್ಷಿಕ, ತ್ರೈಮಾಸಿಕ, ವಾರ್ಷಿಕ ಪತ್ರಿಕೆಗಳಲ್ಲಿ ಲೇಖನರೂಪದಿಂದಲೂ ಸಾಹಿತ್ಯವು ಓದುಗರನ್ನು ತಲುಪುತ್ತ ಕಲಾಕ್ಷೇತ್ರವೂ ಕೂಡಾ ಬರಹರೂಪದ ಮಾಧ್ಯಮದಿಂದ ಪ್ರಸಾರವನ್ನು ಪಡೆದುಕೊಳ್ಳುತ್ತದೆ. ಪ್ರಸ್ತುತ (ಕಳೆದ) ದಶಕದಲ್ಲಿ ಜನಪದ ಕಲೆಗಳಾದ, ಕಸೂತಿ, ಶೀಗಿ, ಹಚ್ಚೆ, ರಂಗೋಲಿ, ತೊಗಲುಗೊಂಬೆ ಮುಂತಾದ ಕಲೆಗಳ ಬಗೆಗೆ ಕೃತಿಗಳು ರಚಿತವಾಗಿವೆ. ಸಾಂಪ್ರಾದಾಯಿಕ ಕಲೆಗಳಾದ ಗಂಜೀಫಾ, ಮೂರ್ತಿ ಶಿಲ್ಪಕಲೆಗಳು ಮುಂತಾದ ಕಲೆಗಳ ಕುರಿತಾಗಿ ಸಾಹಿತ್ಯ ರಚನೆಗೊಂಡಿದೆ. ಶಿಲ್ಪಕಲೆ, ಚಿತ್ರಕಲೆಗಳ ವಿವಿಧ ಆಯಾಮವನ್ನು ಕಂಡರಿಸುವ ಸಾಮಾಜಿಕ ಸಂಬಂಧಗಳನ್ನು ತೋರ್ಪಡಿಸುವ ನಿಟ್ಟಿನಲ್ಲಿ ವಿಮರ್ಶೆ, ವ್ಯಕ್ತಿವೈಶಿಷ್ಟ್ಯವನ್ನು ತೋರಿಸುವ ವ್ಯಕ್ತಿಕೇಂದ್ರಿತ, ವಸ್ತುವೈಶಿಷ್ಟ್ಯದ ವಸ್ತುಕೇಂದ್ರಿತ, ಪ್ರವಾಸದ ಹಿನ್ನೆಲೆಯಲ್ಲಿ ಕಲೆಯನ್ನ ಮಧ್ಯವರ್ತಿಯಾಗಿಸಿಕೊಂಡು ರಚಿಸಿದ ಪ್ರವಾಸ ಸಾಹಿತ್ಯ ಮುಂತಾದ ಪ್ರಕಾರಗಳ ನೆಲೆಯಲ್ಲಿ ಸಾಹಿತ್ಯವು ರೂಪಗೊಂಡಿದೆ. ವಿವಿಧ ಭಾಷೆಗಳಲ್ಲಿ ಕಲಾಮೀಮಾಂಸೆ, ಆಧುನಿಕ ವಿಮರ್ಶೆ ಮುಂತಾದ ವಿಷಯಗಳ ಉಪಲಬ್ಧವನ್ನ ಕನ್ನಡೀಕರಿಸುವ ಅನುವಾದಿತಸಾಹಿತ್ಯ ರಚಿತವಾಗಿದೆ.

ವಿವಿಧ ವಿಷಯಗಳ ಕುರಿತಾದ ಲೇಖನಗಳನ್ನು ಅನೇಕ ವಿದ್ವಾಂಸರಿಂದ ಸಂಗ್ರಹಿಸಿ ಸಂಪಾದಿಸಿದ ಸಂಪಾದನಾ ಸಾಹಿತ್ಯ ಸೇರಿದಂತೆ ಅನೇಕ ಪ್ರಕಾರಗಳಲ್ಲಿ ಕಾಣಬಹುದಾಗಿದೆ.

ಟಿಪ್ಪಣಿಗಳು :

೧. ಡಾ.ಎಸ್.ಸಿ.ಪಾಟೀಲ : ಜನಪದ ಚಿತ್ರಕಲೆ–ಪು.ಸಂ–೪೪

೨. ಅ.ಸುಂದರ : ಕರ್ನಾಟಕ ಪ್ರಾಗೈತಿಹಾಸಿಕ ಕಲೆ–ಪು.ಸಂ.–೨೨

೩. ಪಿ. ಟಿ. ಲಕ್ಕಣ್ಣನವರ :ಕರ್ನಾಟಕ ಚಿತ್ರಕಲಾ ಸಾಹಿತ್ಯ–ಪು.ಸಂ.–೩೨

೪. ಪಿ. ಟಿ. ಲಕ್ಕಣ್ಣನವರ :ಕರ್ನಾಟಕ ಚಿತ್ರಕಲಾ ಸಾಹಿತ್ಯ–ಪು.ಸಂ.–೩೩,

೫. ಅದೇ : – „ – –೩೪

೬. ಪಿ. ಟಿ. ಲಕ್ಕಣ್ಣನವರ : ಕರ್ನಾಟಕ ಚಿತ್ರಕಲಾ ಸಾಹಿತ್ಯ–ಪು.ಸಂ.–೪೩

೭. ಅದೇ : – „ – –ಪು.ಸಂ.–೪೩

೮. ಅ.ಲ. ನರಸಿಂಹನ್ ಎನ್ ಮರಿಶಾಮಾಚಾರ್(ಸಂ) : ಚಿತ್ರಕಲಾ ಪ್ರಪಂಚ–ಪು.ಸಂ. ೧೭೧

೯. ಅದೇ – „ – – ಪು.ಸಂ.–೧೮೫

೧೦. ಶ್ರೀಕಾಂತ (ಸಂ) : ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗತಾತ್ಪರ್ಯ ಪು.ಸಂ–೧೫೩

ಅಧ್ಯಾಯ – ಮೂರು

ಸಂಪಾದನಾ ದೃಶ್ಯಕಲಾ ಸಾಹಿತ್ಯ

ಅಧ್ಯಾಯ – ಮೂರು

ಸಂಪಾದನಾ ದೃಶ್ಯಕಲಾ ಸಾಹಿತ್ಯ

ಸಾಹಿತ್ಯದಲ್ಲಿ ಸಂಪಾದನಾ ಸಾಹಿತ್ಯ ಪ್ರಕಾರದಂತೆ ಚಿತ್ರಕಲಾ ಕ್ಷೇತ್ರದಲ್ಲಿಯೂ ಕೂಡಾ ಸಂಪಾದನಾ ಸಾಹಿತ್ಯ ವೈವಿಧ್ಯಮಯವಾಗಿ ಬೆಳೆದು ಬಂದಿದೆ. ಕಲಾಸಂಪಾದನಾ ಸಾಹಿತ್ಯದಲ್ಲಿ, ಕಲಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕಲಾವಿದರಿಗೆ ಸಲ್ಲಿಸುವ ಅಭಿನಂದನೆ ಹಿನ್ನೆಲೆಯಲ್ಲಿ ಹೊರತಂದ ಕೃತಿಗಳು ಒಂದು ರೀತಿಯಲ್ಲಿ ಸಂಪಾದನೆಗಳಾದರೆ, ಶಾಲೆ– ಕಾಲೇಜು, ಸಂಘ– ಸಂಸ್ಥೆಗಳು ತಮ್ಮ ವಾರ್ಷಿಕ ಸಮಾರಂಭಗಳಲ್ಲಿ ಸ್ಮರಣಸಂಚಿಕೆ ರೂಪದಲ್ಲಿ ಹೊರತಂದ ಕೃತಿಗಳು ಇನ್ನೊಂದು ಬಗೆಯ ಸಂಪಾದನೆಗಳಾಗುತ್ತವೆ.

ಈ ಸಂಪಾದನಾ ಸಾಹಿತ್ಯದಲ್ಲಿ ಹಲವಾರು ವಿದ್ವಾಂಸರಿಂದ ರಚಿತವಾದ ಲೇಖನಗಳು ಒಂದೆಡೆ ಕೃತಿರೂಪದಲ್ಲಿ ಕಾಣಬಹುದಾಗಿದೆ. ಕಲಾಸಾಹಿತ್ಯದದ ಆರಂಭಿಕ ಹಂತದಲ್ಲಿ, ಸಮಗ್ರವಾಗಿ ಒಂದೊಂದೆ ಕೃತಿಗಳು ಹೊರಬರುವ ಮೊದಲು ಕಲಾಬರವಣಿಗೆ ವಿರಳವಾಗಿದ್ದ ಸಂದರ್ಭಕ್ಕೆ ಲೇಖನ, ಪತ್ರಿಕೆಗಳ ಬರಹ ಮುಂತಾಗಿ ಕಲಾಸಾಹಿತ್ಯ ರಚಿತವಾಗಿದ್ದನ್ನು ಕಾಣುತ್ತೇವೆ. ಈ ಲೇಖನಗಳನ್ನು ಸಂಯೋಜಿಸಿ ಒಂದೆಡೆ ಹಾಕುವ ದಿಶೆಯಲ್ಲಿ ರಚಿತವಾಗಿ, ಸಂಪಾದನಾ ಸಾಹಿತ್ಯ ತನ್ನ ಅಸ್ತಿತ್ವವನ್ನು ಪಡೆಯಿತು. ಕಲಾಸಾಹಿತ್ಯದ ಪ್ರಾರಂಭ ಹಂತದಲ್ಲಿಯೇ ಈ ಸಂಪಾದನಾ ಸಾಹಿತ್ಯ ಹೆಚ್ಚಾಗಿ ರಚಿತವಾಯಿತು ಎನ್ನಬಹುದು.

ವ್ಯಕ್ತಿಕೇಂದ್ರಿತ ಕಲಾಸಾಹಿತ್ಯ ಹಾಗೂ ಚಿತ್ರಕಲೆಯ ವಿವಿಧ ಆಯಾಮವನ್ನು ಕಂಡರಿಸುವ ಸಾಹಿತ್ಯ ಇಂದು ಸಂಪಾದನೆಗೊಳ್ಳುತ್ತಿದೆ ಕಲೆಯ ಇತಿಹಾಸ, ಕಲೆಯ ಸಾಮಾಜಿಕ ಚಿಂತನೆ, ಕಲೆ ಮತ್ತು ಸಾಹಿತ್ಯ, ಕಲೆ ಮತ್ತು ಇತರ ಪೂರಕ ಕ್ಷೇತ್ರಗಳ ಸಂಬಂಧ ಹೀಗೆ ಅನೇಕವಿಷಯಗಳನ್ನು ಆಧರಿಸಿದ ಲೇಖನಗಳನ್ನು ಒಂದೆಡೆ ಹಾಕುವ ಪ್ರಯತ್ನವನ್ನ ಈ ಕಲಾಸಂಪಾದನಾ ಸಾಹಿತ್ಯಲ್ಲಿ

ಕಾಣಬಹುದಾಗಿದೆ. ಈ ಸಂಪಾದನಾ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ಈ ಕೆಳಗಿನಂತೆ ಮೂರು ವಿಭಾಗಗಳಾಗಿ ವಿಂಗಡಿಸ ಬಹುದಾಗಿದೆ.

೧. ಅಭಿನಂದನೆ ಹಿನ್ನೆಲೆಯ ಸಂಪಾದನಾ ಸಾಹಿತ್ಯ

೨. ಸ್ಮರಣ ಸಂಚಿಕೆ ಹಿನ್ನೆಲೆಯ ಸಂಪಾದನಾ ಸಾಹಿತ್ಯ

೩. ಸಂಕೀರ್ಣ ಹಿನ್ನೆಲೆಯ ಸಂಪಾದನಾ ಸಾಹಿತ್ಯ

ಅಭಿನಂದನಾ ಹಿನ್ನೆಲೆಯಲ್ಲಿ ಹಲವಾರು ಕೃತಿಗಳನ್ನು ಉದಾಹರಿಸಬಹುದಾಗಿದೆ. ೧೯೭೪ ರಲ್ಲಿ ಬಾಲಕೃಷ್ಣ ವಾಮನ ಜೋಗ ಅವರು ಸಂಪಾದನೆ ಮಾಡಿದ ಶ್ರೀ ಶಂಕರರಾವ್ ಆಳಂದಕರ್ ಕೃತಿ ಆಳಂದಕರರ ಅಭಿನಂದನೆಗಾಗಿ ರಚಿತವಾದ ಸಂಪಾದನಾ ಗ್ರಂಥವಾಗಿದೆ. ಅದೇ ರೀತಿ ೧೯೯೧ ರಲ್ಲಿ ಮುರಿಗೆಪ್ಪ ಚೆಟ್ಟಿಯವರಿಗೆ ಅಭಿನಂದಿಸಿದ ಮಹಾಲಿಂಗ ಯಾಳಗಿಯವರು ಸಂಪಾದಿಸಿದ ಕಲಾ ತಪಸ್ವಿ ,ಕಲಾವಿದ ಶ್ರೀ ವಿ. ಸಿ. ಮಾಲಗತ್ತಿ ಅವರ ಅಭಿನಂದನಾ ಸಮಾರಂಭಕ್ಕೆ ಹೊರತಂದ 'ಚೈತನ್ಯ' ಭೋಜ ಮತ್ತು ರಾಘವೇಂದ್ರ ಜೋಷಿ ಸಂಪಾದಿಸಿದ ಕೃತಿಯಾಗಿದೆ.

'ಕಲಾವಿದ ಅಂದಾನಿ ಐವತ್ತು' ಎಂಬ ಕೃತಿಯನ್ನು ಅಂದಾನಿಯವರ ಸ್ಮರಣೆಗಾಗಿ ಅಭಿನಂದನಾ ಕೃತಿಯಾಗಿದ್ದು, ಚಂದ್ರಹಾಸ ವೈ. ಜಾಲಿಹಾಳ ಇವರು ಸಂಪಾದಿಸಿದ್ದಾರೆ. 'ಚಿತ್ರಕಲಾ' ಎಂಬ ಕೃತಿಯು ಚುಡಾಮಣಿ ನಂದಗೋಪಾಲ ಅವರು ಸಂಪಾದಿಸಿದ ಕೃತಿಯು 'ಎಂ. ಎಸ್. ನಂಜುಂಡ್‌ರಾವ್ ಅವರ ಅಭಿನಂದನಾ ಕೃತಿಯಾಗಿದೆ. 'ಸೃಷ್ಟಿ' ಎಂಬ ಕೃತಿಯು ಬಿ. ಕೆ. ಹಿರೇಮಠರಿಗೆ ಅಭಿನಂದಿಸಿದ ಕೃತಿಯಾಗಿದೆ. ಅದರಂತೆ 'ನಿಜದ ನೆಲೆ" ಎಂಬ ಸಂಪಾದನಾ ಕೃತಿಯು ಡಾ. ಎಸ್. ಸಿ. ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ ಅವರ ಸಂಪಾದಕತ್ವದಲ್ಲಿ ಹೊರಬಂದ ಬಿ. ಕೆ. ಹಿರೇಮಠರ ಅಭಿನಂದನಾ ಕೃತಿಯಾಗಿದೆ. – ಹೀಗೆ ಅನೇಕ ಕೃತಿಗಳು ಪ್ರಾರಂಭದಲ್ಲಿ ರಚಿತಗೊಂಡ ಅಭಿನಂದನಾ ಕೃತಿಯಾಗಿವೆ. ವಿಶೇಷ ಸಂದರ್ಭಕ್ಕೆ ಈ ಅಭಿನಂದನಾ ಕೃತಿಗಳಲ್ಲಿ ಕಲೆಯ ಕುರಿತಾಗಿ ವೈವಿಧ್ಯಮಯ ವಿಷಯಗಳು ಅಡಕವಾಗಿರುತ್ತವೆ. ಈ ಸಂಪಾದನಾ ಕೃತಿಗಳು ಒಂದರ್ಥದಲ್ಲಿ ಕಲಾಸಾಧಕನ ಜೀವನ, ಕಲೆ ಮುಂತಾದ ಅಭಿನಂದನಾ ವಿಷಯವಾಗಿ ದಾಖಲೆಗಳನ್ನು ಒದಗಿಸುವುದರ ಜೊತೆಗೆ ಕಲಾಕ್ಷೇತ್ರದಲ್ಲಿ ವ್ಯಕ್ತಿಯ ಸ್ವರೂಪವನ್ನು ಕಂಡರಿಸುವ ದಿಶೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ.

ಅಭಿನಂದನಾ ಸಂಪಾದನಾ ಸಾಹಿತ್ಯದಂತೆ ಸಂಕೀರ್ಣ ಹಿನ್ನೆಲೆಯಲ್ಲಿಯ ಸಾಹಿತ್ಯವೂ ಕೂಡಾ ಪ್ರಮುಖವೆನಿಸುತ್ತದೆ. ಅದೇ ರೀತಿ ಅಭಿನಂದನಾ ಹಿನ್ನೆಲೆಯಲ್ಲಿ ಮತ್ತು ಸ್ಮರಣಸಂಚಿಕೆಯ ಹಿನ್ನೆಲೆಯಲ್ಲಿ ರಚಿಸಲಾದ ಸಾಹಿತ್ಯದಲ್ಲಿ ಮುಖ್ಯವಾಗಿ ವ್ಯಕ್ತಿಕೇಂದ್ರಿತ, ಸಂಸ್ಥೆಕೇಂದ್ರಿತ ಕಲಾ ವಿಷಯಗಳು ಒಳಗೊಂಡಿರುವ ಸಾಧ್ಯತೆಗಳು ಹೆಚ್ಚಾಗಿವೆ. ಈ ಸಂಕೀರ್ಣ ಸಾಹಿತ್ಯದ ಹಿನ್ನೆಲೆಯಲ್ಲಿ ಕಲೆಯ ಕುರಿತಾಗಿ ವೈವಿಧ್ಯಮಯ ವಿಷಯಗಳನ್ನು ಆಧರಿಸಿ ಸಾಹಿತ್ಯ ರಚಿತವಾದುದನ್ನು ನಾವು ಗುರ್ತಿಸಬಹುದಾಗಿದೆ. ಒಂದರ್ಥದಲ್ಲಿ ವಿಶ್ವಕೋಶಾತ್ಮಕ ಕೃತಿಗಳಾಗಿಯೂ ಈ ಸಂಕೀರ್ಣ

ಸಂಪಾದನಾ ಕೃತಿಗಳು ಗುರ್ತಿಸಿಕೊಳ್ಳುತ್ತವೆ. ಅಭಿನಂದನಾ ಹಿನ್ನೆಲೆಯಲ್ಲಿ ಎನ್. ಮರಿಶಾಮಾಚಾರ ಅವರ ಅಭಿನಂದನೆಗೆ ಮತ್ತು ವಾಸುದೇವ ಅವರ ಅಭಿನಂದನೆಗೆ ಕೃತಿಗಳು ಪ್ರಕಟವಾಗಿವೆ.- ಮರಿಯವರಿಗೆ ಅಭಿನಂದಿಸಿ ನಡೆದಾಡುವ ಕಲಾಕೋಶ ವಾಸುದೇವ ಅವರ ಅಭಿನಂದನಾ ಕೃತಿಯಾದ ವಾಸುದೇವ ವೃಕ್ಷ ಕೃತಿಗಳು ಪ್ರಮುಖವಾಗಿವೆ.

"ಚಿತ್ರಕಲಾ ಪ್ರಪಂಚ" ಸಂಪಾದನಾ ಕೃತಿಯು ಒಂದು, ಸಂಕೀರ್ಣ ಸಂಪಾದನಾ ಕೃತಿಗೆ ಉತ್ತಮ ಉದಾಹರಣೆಯಾಗಿದೆ. ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡ ಕೃತಿ, ಅ. ಲ .ನರಸಿಂಹನ್, ಎನ್. ಮರಿಶಾಮಾಚಾರ, ಪಿ.ಆರ್.ತಿಪ್ಪೇಸ್ವಾಮಿ ಅವರಿಂದ ಸಂಪಾದನೆ ಕಂಡಿದೆ. ಅದರಂತೆ ಅಭಿನಂದನಾ ಹಿನ್ನೆಲೆಯಲ್ಲಿ ಬಿ.ಕೆ.ಹಿರೇಮಠರಿಗೆ ಅಭಿನಂದಿತವಾಗಿ ಕೃತಿ ಮೌಲ್ಯಯುತವಾಗಿ ಮೂಡಿಬಂದಿರುವುದು (೨೦೦೩ರಲ್ಲಿ) ಈ ಸಂದರ್ಭದಲ್ಲಿ ದಾಖಲಿಸಬಹುದಾಗಿದೆ.

೨೦೦೪ ರಿಂದ ಈಚೆಗೆ ಕೆಲವು ಸಂಪಾದನಾ ಕೃತಿಗಳು ಹೊರಬಂದಿದ್ದು, ಲಲಿತಕಲಾ ಅಕಾಡೆಮಿ ಮತ್ತು ಶಿಲ್ಪಕಲಾ ಅಕಾಡೆಮಿ ಹಾಗೂ ಇತರ ಸಂಘಟನೆಗಳಿಂದ ಸಂಪಾದನೆಗೊಂಡು ಪ್ರಕಟವಾಗಿವೆ. ರಾಜ್ಯದ ಅನೇಕ ಕಲಾಶಾಲೆಗಳು, ಕಲಾಸಂಸ್ಥೆಗಳೂ ಕೂಡಾ ಅನೇಕ ಸಂಪಾದನಾ ಕೃತಿಗಳನ್ನು ಹೊರತಂದಿವೆ.

ಶಿಲ್ಪಕಲಾ ಅಕಾಡೆಮಿಯಿಂದ ಪ್ರಕಟವಾದ ಸಂಪಾದನೆ ಕೃತಿಗಳು ಶಿಲ್ಪಕಲೆ, ಪ್ರಾಚೀನ ಶಿಲ್ಪಕಲೆಗಳ ಪ್ರಕಾರಗಳು, ರಾಜಮನೆತನಗಳ ಅವಧಿಯಲ್ಲಿ ಅಸ್ತಿತ್ವಲ್ಲಿದ್ದ ಶಿಲ್ಪಕಲೆ ಮುಂತಾಗಿ ಸಂಪಾದನೆ ಕೃತಿಗಳು ಪ್ರಕಟವಾಗಿವೆ.

ಚಿತ್ತಾರದಗೊಂಬೆ, ನಾಗರಾಧನೆ, ಪಲ್ಲವಚೋಳ ಕಲೆ, ಕಲ್ಯಾಣ, ಚಾಲುಕ್ಯ ಕಲೆ, ಕರ್ನಾಟಕ ಆರಂಭಿಕ ಶಿಲ್ಪಕಲೆ, ಬಾದಾಮಿ ಚಾಲುಕ್ಯ ಶಿಲ್ಪಕಲೆ, ಹಚ್ಚೆಕಲೆ, ವಿಜಯನಗರ ಶಿಲ್ಪಕಲೆ, ಗಂಗರ ಶಿಲ್ಪಕಲೆ, * ಕರ್ನಾಟಕ ಕಲಾದರ್ಶನ ಸಂಪುಟ- ೧ ಮತ್ತು ೨ * ಎಂ. ಎಚ್. ಕೃಷ್ಣಯ್ಯ ಅವರ ಸಂಪಾದಕತ್ವಲ್ಲಿ ಮತ್ತು ದೃಶ್ಯ, ಎಸ್.ಮಂಜುನಾಥ ಅವರ ಸಂಪಾದನೆಯಲ್ಲಿ, ಹಚ್ಚೆ ಚಿತ್ರಕಲೆ ಡಾ.ಎಸ್.ಸಿ.ಪಾಟೀಲರ ಸಂಪಾದನೆಯಲ್ಲಿ ಬೆಳದಿಂಗಳ ಚಿತ್ರಕಲೆ, ಆನಂದ ಕೆ.ಪೂಜಾರರ ಸಂಪಾದನೆಯಲ್ಲಿ ದೃಶ್ಯಕಲಾ ಪರಂಪರೆ ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ ಅವರ ಸಂಪಾದನೆಯಲ್ಲಿ ಹೀಗೆ ಇನ್ನೂ ಅನೇಕ ಸಂಪಾದನಾ ಕೃತಿಗಳು ಸಮಕಾಲೀನ ಸಂದರ್ಭದಲ್ಲಿ ವಿವಿಧ ಸಂಸ್ಥೆಗಳಿಂದ ಪ್ರಕಟಗೊಂಡು ಪ್ರಮುಖ ಕೃತಿಗಳಾಗಿವೆ.

ಲಲಿತಕಲಾ ಅಕಾಡೆಮಿಯ ಜನಪ್ರೀಯ ದೇಶಿಕಲಾ ಮಾಲೆಯಲ್ಲಿ ಹಲವಾರು ಜನಪದ ಕಲೆಗಳ ಕುರಿತಾದ ಸಾಹಿತ್ಯ ಕೃತಿಗಳು ಬೆಳಕನ್ನು ಕಂಡಿವೆ. ಅಂಥವುಗಳಲ್ಲಿ ಚಿತ್ತಾರದ ಗೊಂಬೆ, ನಾಗರಾಧನೆ ಮತ್ತು ಚಿತ್ರಕಲೆ, ಬೆಳದಿಂಗಳ ಚಿತ್ರಕಲೆ, ಹಚ್ಚೆ ಚಿತ್ರಕಲೆ ಮುಂತಾದವು ಪ್ರಮುಖವಾಗಿವೆ.

ಚಿತ್ತಾರದ ಗೊಂಬೆ ಕೃತಿಯು ಪೀಟರ್ ಎ.ಲೂಯಿಸ್‌ರವರ ಸಂಪಾದನೆಯಲ್ಲಿ ೨೦೦೪ ರಲ್ಲಿ ಅಕಾಡೆಮಿಯಿಂದ ಪ್ರಕಟಗೊಂಡಿದೆ. ಗೊಂಬೆ ಎಂಬ ಸ್ಥಿರವಾದ ವಸ್ತುವಿನ ಅಸ್ಥಿರ ಆಯಾಮವನ್ನು

ಕಂಡು ಅಚ್ಚರಿಗೊಂಡ ಲೇಖಕರು ಗೊಂಬೆಗಳು ಪ್ರಪಂಚದಾದ್ಯಂತ ಪ್ರಾಚೀನದಲ್ಲಿಯೇ ಅಸ್ತಿತ್ವದಲ್ಲಿದ್ದವು. ಹಲವಾರು ಪ್ರಾಚೀನ ನಾಗರಿಕತೆಯ ಸಂದರ್ಭದಲ್ಲಿ ಆಗಲೇ ಈ ಗೊಂಬೆಗಳು ವಿವಿಧ ಉದ್ದೇಶಗಳಿಂದ ರಚನೆಯಾಗಿದ್ದವು ಎಂದು ವಿವರಿಸುತ್ತ ಮಕ್ಕಳ ಆಟದಿಂದ ಹಿಡಿದು ಧಾರ್ಮಿಕ ಉದ್ದೇಶ, ಹಲವು ಪಾರಂಪಾರಿಕ ನಂಬಿಕೆ, ಆಚರಣೆ, ಇಂದ್ರಜಾಲದ ಹಿನ್ನೆಲೆಯಲ್ಲಿ ರೂಪತಳೆದ ಗೊಂಬೆಗಳಲ್ಲಿ ಸೂತ್ರದ ಗೊಂಬೆಗಳು ಕೂಡಾ ಮನರಂಜನೆಯ ಹಾಗೂ ಧಾರ್ಮಿಕ ನೆಲೆಯಲ್ಲಿ ರಚಿತಗೊಂಡಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ತೊಗಲು ಗೊಂಬೆಯಾಟ ವಿಶ್ವದ ಎಲ್ಲ ಭಾಗಗಳಲ್ಲಿಯೂ ಕಂಡು ಬರುತ್ತದೆ. ಮತ್ತು ಭಾರತದಲ್ಲಿ ಈ ಗೊಂಬೆಯಾಟದ ವೈವಿಧ್ಯಮಯ ಸ್ವರೂಪ ಕಂಡಿದೆ ಹಾಗೂ ಅದನ್ನು ಬೇರೆ ಬೇರೆ ಭಾಗದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಕನ್ನಡದಲ್ಲಿ ತೊಗಲುಗೊಂಬೆಯಾಟ, ಕಿಳ್ಳಿಕೇತರಾಟ, ಗೊಂಬೆರಾಮರಾಟವೆಂದು ಕರೆದರೆ, ಮಹಾರಾಷ್ಟ್ರದಲ್ಲಿ “ಚಮಡ್ಯಾಚ್ ಭೌಲೆ” ಎಂದು ಕರೆಯುತ್ತಾರೆ. ಒರಿಸ್ಸಾದಲ್ಲಿ “ರಾವಣ ಛಾಯಾ” ಎಂದು ಕರೆಯುತ್ತಾರೆ. ಹೀಗೆ ಕರೆಯಲು ದೈವವಾದ “ರಾಮ” ನನ್ನ ಬೆಳಕಿನ ಹಿನ್ನೆಲೆಯಲ್ಲಿ ಕಾಣುಲಾಗುತ್ತಿದ್ದು, ನೆರಳು ಎಂದರೆ “ತಮ” (ಕತ್ತಲೆ) ಎಂಬ ಗ್ರಹಿಕೆಯಲ್ಲಿ ರಾವಣನನ್ನ ಕಂಡು ರಾವಣಛಾಯಾ ಎಂಬನ್ನು ಹೆಸರು ಪ್ರಚಲಿತವಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧] ತಮಿಳಿನಲ್ಲಿ ತೋಲುಬೊಮ್ಮಲಾಟಂ, ಕೇರಳದಲ್ಲಿ ತೋಲಪಾದಕತ್ತು ಎಂದು ಕರೆಯಲಾಗುತ್ತದೆ ಎಂದು ವಿವಿಧ ಭಾಗಗಳಲ್ಲಿ ಕರೆಯಲಾದ ಹೆಸರುಗಳ ಅರ್ಥಸ್ವರೂಪಗಳನ್ನು ವಿರಿಸಿದ್ದಾರೆ. ಅದೇರೀತಿ ಬೊಂಬೆಗಳ ರಚನಾ ವಿಧಾನ, ರಂಗಸಜ್ಜಿಕೆ ಪ್ರದರ್ಶನಾ ಕೌಶಲ್ಯ ಮುಂತಾದವುಗಳನ್ನು ತಮ್ಮ ಪುಸ್ತಕದಲ್ಲಿ ವಿವರಿಸಿದ್ದಾರೆ. ತೊಗಲುಗೊಂಬೆಯಾಟವು ಜಾನಪದ ಆಯಾಮ ಮಾತ್ರವಾಗಿರದೆ ಅದು ಪ್ರದರ್ಶನಾತ್ಮಕ ಪೌರಾಣಿಕ, ಸಾಮಾಜಿಕ ಹಾಗೂ ಕಲಾತ್ಮಕತೆಯಿಂದಲೂ ಕೂಡಿದೆ. ಎಂದು ಲೇಖಕರು ತಮ್ಮ ಕೃತಿಯಲ್ಲಿ ಕಲೆಯ ಕುರಿತಾಗಿ ಪರೋಕ್ಷವಾಗಿ ವಿಶ್ಲೇಷಿಸಿದ್ದಾರೆ.

೨೦೦೪ ರಲ್ಲಿ ಡಾ.ಎಸ್.ಸಿ.ಪಾಟೀಲರು ಸಂಪಾದಕತ್ವದಲ್ಲಿ ಉಪಾಧ್ಯಾಯ ಮೂಡುಬೆಳ್ಳೆಯವರು ಬರೆದ ‘ನಾಗಾರಾಧನೆ ಮತ್ತು ಚಿತ್ರಕಲೆ’ ಕೃತಿಯು ಅಕಾಡೆಮಿಯಿಂದ ಪ್ರಕಟಗೊಂಡಿದೆ. ವಿಶ್ವದ ಅನೇಕ ಭಾಗಗಳಲ್ಲಿ ಪೂಜಿಸಲ್ಪಡುವ ನಾಗರಾಜ ಪ್ರಾಚೀನ ಸಂಸ್ಕೃತಿಗಳು ಆರಾಧಿಸಲ್ಪಟ್ಟ ಪ್ರಾಣಿಗಳಲ್ಲಿ ಅಗ್ರಗಣ್ಯನಾಗಿದ್ದಾನೆ. ನಾಗಾರಾಧನೆ ಇರದ ದೇಶಗಳು ಬಹಳ ವಿರಳವೆಂದೇ ಹೇಳುವ ಲೇಖಕರು ಆಧುನಿಕ ವಿಚಾರವಾದಿಗಳು ಮೂಡನಂಬಿಕೆಯ ಹಿನ್ನೆಲೆಯಲ್ಲಿ ನಾಗಾರಾಧನೆಯನ್ನು ಕಾಣುತ್ತಾರೆ ಎಂಬ ಅಂಶವನ್ನು ಕಂಡರಿಸಿದ್ದಾರೆ. ಇಂತಹದರಲ್ಲೂ ನಾಗಾರಾನೆ ವಿವಿಧ ಪ್ರದೇಶಗಳಲ್ಲಿ ಸಂಸ್ಕೃತಿಯಲ್ಲಿ ಕಂಡು ಬರುತ್ತಿದ್ದು, ಮೆಡಿಟೇರಿಯನ್ ತೀರದಿಂದ ಮಲೇಶಿಯಾದವರೆಗೆ, ಆಸ್ಟ್ರೇಲಿಯಾದಿಂದ ಅಮೇರಿಕಾದ ಮೂಲನಿವಾಸಿ ಪ್ರದೇಶಗಳವರೆಗೆ ಸರ್ಪವು ಪೂಜ್ಯನೀಯವಾಗಿದೆ.[೨] ಮಂದಿರಗಳಲ್ಲಿ ಆರಾಧನಾಮೂರ್ತಿಯಾಗಿಯೂ, ಅರಸರ ಕಿರೀಟದಲ್ಲಿ

ಅಧಿಕಾರದ ಸೂಚಕವಾಗಿಯೂ, ಕುಲಪಂಗಡಗಳ ಲಾಂಛನವಾಗಿಯೂ, ರಕ್ಷಣೆಮಾಡುವ ದೇವನಾಗಿಯೂ, ಮಳೆ, ಬೆಳೆ, ಫಲವತ್ತತೆ, ಸಂತಾನಾಭಿವೃದ್ಧಿ ಮುಂತಾದ ಭಾಗ್ಯಗಳ ಅಧಿದೇವತೆಯಾಗಿಯೂ ಕಾಣಲಾಗುತ್ತದೆ ಎಂದು ನಾಗನನ್ನು ಕುರಿತು ಹೇಳುತ್ತಾ, ಮಲೆನಾಡಿನ ಸಂಸ್ಕೃತಿಯನ್ನು ವಿವರಿಸಿದ್ದಾರೆ, ಜನಪದ ಹಾಗೂ ಶಿಷ್ಟಪದ ಆಚರಣೆಯಲ್ಲಿಯ ಕಲೆಯ ಸ್ವರೂಪ ಹಾಗೂ ಅಸ್ತಿತ್ವವನ್ನು ವಿವರಿಸಿದ್ದಾರೆ.[೧೪] ನಾಗಾರಾಧನೆಯ ಹಿನ್ನೆಲೆಯಲ್ಲಿ ರಚಿಸಲಾಗುವ ನಾಗಮಂಡಲಚಿತ್ರ, ರಂಗೋಲಿಯ ಕಲೆಯಲ್ಲಿ ಬರೆಯಲಾದ ಆಕಾರಗಳನ್ನು ವಿಶೇಷವಾಗಿ ಗುರ್ತಿಸಲಾಗಿದೆ. ಮತ್ತು ಕಲೆಯ ದೃಷ್ಟಿಯಿಂದ ಮಹತ್ವ ಪಡೆದ ಕೃತಿಯು ಒಟ್ಟು ಮಲೆನಾಡಿನ ನಾಗಾರಾಧನೆಯ ಸಂಸ್ಕೃತಿಯನ್ನು ಒಳಗೊಂಡಿದೆ. ಈ ಕೃತಿಯಲ್ಲಿ ಕಲೆ ಹಾಗೂ ಅನ್ಯಕ್ಷೇತ್ರಗಳ ಸಂಬಂಧದಲ್ಲಿ ಧರ್ಮ, ಸಮಾಜ, ಜನಪದ ಮುಂತಾದವುಗಳು ಹೇಗೆ ಪರಸ್ಪರ ಪೂರಕವಾಗುತ್ತವೆ ಎಂದು ಗುರ್ತಿಸಬಹುದಾಗಿದೆ. ಸರಳವಾದ ಬರವಣಿಗೆಯಿಂದ ಕೂಡಿದ ಕೃತಿಯು ಮಲೆನಾಡಿನ ಅನನ್ಯ ಸಂಸ್ಕೃತಿಯಲ್ಲೊಂದಾದ ನಾಗಾರಾಧನೆಯನ್ನು “ಕಲೆಯ” ಮುಖಾಂತರ ಪರಿಚಯಿಸುತ್ತದೆ.

ಬೆಳದಿಂಗಳ ಚಿತ್ರಕಲೆ ಆನಂದ ಕೆ. ಪೂಜಾರ ಅವರು ಬರೆದ ಕೃತಿಯಾಗಿದೆ. ೨೦೦೪ ರಲ್ಲಿ ‘ಪೀಟರ್ ಲೂಯಿಸ್’ ಪ್ರಧಾನ ಸಂಪಾದಕತ್ವದಲ್ಲಿ ಡಾ.ಎಸ್.ಸಿ.ಪಾಟೀಲರಿಂದ ಸಂಪಾದಿಸಿ ಅಕಾಡೆಮಿಯಿಂದ ಪ್ರಕಟಗೊಂಡಿದೆ. ಹುಣ್ಣಿಮೆಯಂದು ಆಚರಿಸುವ ಹಬ್ಬದ ಸಂದರ್ಭದಲ್ಲಿ ಬರೆಯುವ ಚಿತ್ರಕಲೆಯನ್ನು ಕುರಿತಾದ ಈ ಕೃತಿಯು ಸರಳ ಬರವಣಿಗೆಯಿಂದ ವಿಷಯವನ್ನು ಪ್ರಕಟಿಸುತ್ತದೆ. ಉತ್ತರ ಹಾಗೂ ದಕ್ಷಿಣ ಕರ್ನಾಟಕದ ಆಚರಣೆಯಲ್ಲಿರುವ ಚಂದಿರ ಪೂಜೆ, ಹಲವು ಆಚರಣೆಗಳನ್ನು ಒಳಗೊಂಡಿದೆ. ಕರ್ನಾಟಕದಲ್ಲಿ ಭಾರತಹುಣ್ಣಿಮೆ ಅಥವಾ ಗುಡಿಹುಣ್ಣಿಮೆ ಸಂದರ್ಭದಲ್ಲಿ ಚಂದ್ರನ ಆರಾಧನೆ ಪ್ರಚಲಿತವಾಗಿದೆ. ಈ ಸಂದರ್ಭದಲ್ಲಿ ಜನಪದರು ತಮ್ಮ ಹಳ್ಳಿಗಳಲ್ಲಿ ಮನೆಯ ಗೋಡೆಯ ಮೇಲೆ ವೈವಿಧ್ಯಮಯವಾದ ಚಿತ್ರಗಳನ್ನು ರಚಿಸುತ್ತಾರೆ. ಚಿತ್ರದಲ್ಲಿ ಸೂರ್ಯ, ಚಂದ್ರ, ನವಿಲು, ಜಿಂಕೆ, ಬಸವ, ತೇರು, ನಾಗ, ಚೇಳು, ಶಿವಲಿಂಗ, ಚುಕ್ಕಿ ರಂಗೋಲಿ, ಹೂವಿನ ಚಿತ್ರ ಮುಂತಾದ ಚಿತ್ರಗಳನ್ನು ಸುಣ್ಣದಿಂದ ರಚಿಸುತ್ತಾರೆ. ಈ ಎಲ್ಲವನ್ನು ಚಿತ್ರಕಲಾ ವಿಷಯಗಳನ್ನು ವಿವರಿಸುವ ಕೃತಿ ಜನಪದ ಕಲೆಯೊಂದನ್ನು ಓದುಗನ ಮುಂದೆ ಅನಾವರಣಗೊಳಿಸುತ್ತದೆ.

ಹಚ್ಚೆ ಚಿತ್ರಕಲೆ ಕೃತಿಯು ಲಲಿತಕಲಾ ಅಕಾಡೆಮಿಯಿಂದ ೨೦೦೪ ಲ್ಲಿ ಪ್ರಕಟವಾಗಿದೆ. ಡಾ.ಎಸ್.ಸಿ.ಪಾಟೀಲರಿಂದ ರಚಿತವಾದ ಅವರ ಕೃತಿಯು ಜಾನಪದ ಕಲೆಯಾದ ಹಚ್ಚೆಕಲೆಯ ವೈಶಿಷ್ಟ್ಯ, ಸ್ವರೂಪಗಳನ್ನು ಹೇಳುತ್ತದೆ. ಹಚ್ಚೆ ಪ್ರಪಂಚ ಎಲ್ಲ ಪ್ರದೇಶದಲ್ಲೂ ಕಂಡುಬರುತ್ತದೆ. ಅಲ್ಲದೆ ಎಲ್ಲ ಸಮುದಾಯದವರೂ ಹಚ್ಚೆ ಹಾಕಿಸಿಕೊಳ್ಳುತ್ತಾರೆ ಎಂದು ಹಲವಾರು ಅಂಶಗಳನ್ನು ವಿವರಿಸುವ ಲೇಖಕರು ಹಚ್ಚೆಚಿತ್ರಕಲೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಜನಪದ ಹಾಡುಗಳನ್ನು ಪ್ರಕಟಿಸಿದ್ದಾರೆ.

ದೇಹದ ಭಾಗಗಳಲ್ಲಿ ಹೇಗೆ ಹಚ್ಚೆ ಸ್ವರೂಪ ಪಡೆಯುತ್ತದೆ ಮುಂತಾದ ವಿಷಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಡಾ.ಎಚ್.ಎಸ್.ಗೋಪಾಲ್‌ರಾವ್ ನೇತೃತ್ವದಲ್ಲಿ ೨೦೦೮ ರಲ್ಲಿ ಶಿಲ್ಪಕಲಾ ಅಕಾಡೆಮಿ ಇಂದ ಕಲ್ಯಾಣ ಚಾಲುಕ್ಯ ಶಿಲ್ಪಕಲೆಯು ಪ್ರಕಟಗೊಂಡಿದೆ. ಡಾ.ಕರುಣಾ ವಿಜಯೇಂದ್ರ ಈ ಕೃತಿಯನ್ನು ರಚಿಸಿದ್ದಾರೆ. ಕಲ್ಯಾಣಿ ಚಾಲುಕ್ಯರ ರಾಜಕೀಯ ಇತಿಹಾಸದಿಂದ ಹಿಡಿದು ಅಂದಿನ ಶಿಲ್ಪಕಲಾ ವೈಶಿಷ್ಟ್ಯ, ಸ್ಮಾರಕಶಿಲ್ಪಗಳು ದೇವಾಲಯಗಳಲ್ಲಿನ ಶಿಲ್ಪಗಳು ಮುಂತಾದ ವಿಷಯಗಳನ್ನು ಕೃತಿಯಲ್ಲಿ ಕಾಣಬಹುದಾಗಿದೆ. ಶೈವ, ವೈಷ್ಣವ, ಬೌದ್ಧ, ಜೈನ ಧರ್ಮದ ಶಿಲ್ಪಗಳು ಅಲ್ಲದೆ ಸಪ್ತ ಮಾತ್ರಿಕೆಗಳು, ಅಷ್ಟದಿಕ್ಪಾಲಕರು, ದುರ್ಗೆ, ಮಹಾಕಾಳಿ, ಮಹಿಷಾಸುರಮರ್ದಿನಿ, ಕುಬೇರ, ಕಥನ ಶಿಲ್ಪಗಳು, ಅಲಂಕಾರಿಕ ಶಿಲ್ಪಗಳಲ್ಲಿ, ದ್ವಾರಬಂಧ ತೋರಣ, ಕಂಬ ಮತ್ತು ದ್ವಾರಪಟ್ಟಿಕೆಗಳಲ್ಲಿನ ಶಿಲ್ಪಗಳ, ಜಾಲಂದ್ರಗಳು, ಸಾಲಭಂಜಿಕಾ– ಮದನಿಕಾಶಿಲ್ಪಗಳು, ಸುಂದರ ಸ್ತ್ರೀ, ನಗ್ನಕನ್ನಿಕಾ ಮುಂತಾದ ಶಿಲ್ಪಗಳು ಗುಣಲಕ್ಷಣಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ. ಕೃತಿಯು ಬರವಣಿಗೆಯ ಹಿನ್ನೆಲೆಯಲ್ಲಿ ಮಹತ್ವವನ್ನು ಪಡೆದಂತೆ ಶಿಲ್ಪಕಲೆ ಮತ್ತು ಚರಿತ್ರೆಯ ದೃಷ್ಟಿಯಿಂದಲೂ ಮೌಲಿಕವಾಗಿದೆ.

ಲೇಖಕ ಡಾ. ದೇವರಕೊಂಡಾರೆಡ್ಡಿ ಅವರು ಬರೆದ **ಗಂಗ ಶಿಲ್ಪಕಲೆ** ಕೃತಿಯು ಶಿಲ್ಪಕಲಾ ಅಕಾಡೆಮಿಯಿಂದ ೨೦೦೮ ರಲ್ಲಿ ಪ್ರಕಟಣೆಗೊಂಡಿದ್ದು ಡಾ.ಎಚ್.ಎಸ್.ಗೋಪಾಲರಾವ್ ಅವರಿಂದ ಸಂಪಾದನೆಗೊಂಡಿದೆ. ಲೇಖಕರು ತಮ್ಮ ಕೃತಿಯಲ್ಲಿ ಗಂಗಕಾಲದ ಶಿಲ್ಪವನ್ನು ವಿವರಿಸುತ್ತಾ ಶಿಲ್ಪಗಳು ಹೆಚ್ಚಾಗಿ ಕಪ್ಪು ಶಿಲೆಯಲ್ಲಿ ರಚಿತವಾಗಿರುವುದನ್ನು ಗಮನಿಸಿದ್ದಾರೆ. ಕಲ್ಲಿನ ಅಳತೆಗೆ ತಕ್ಕಂತೆ ಮೂರ್ತಿಗಳನ್ನು ಬಿಡಿಸಿದ್ದಾರೆ. ಕಲ್ಲಿನ ಗಾತ್ರ ಚಿಕ್ಕದಾಗಿದ್ದ ಸಂದರ್ಭದಲ್ಲಿ ಕಲ್ಲಿಗೆ ತಕ್ಕ ಆಕಾರವನ್ನು ಮಾಡಿ ಇದ್ದುದರಲ್ಲಿಯೇ ಕೆತ್ತುವ ಸೃಜನಶೀಲತೆಯನ್ನು ಗಮನಿಸಿದ್ದಾರೆ. ಅವರು ಮೂರ್ತಿಶಿಲ್ಪಗಳಲ್ಲಿ ಆಯುಧಗಳು ನೇರವಾಗಿರದೆ ಅವು ಬಾಗಿರುವುದನ್ನು ಗುರ್ತಿಸಿ ಬರೆದಿದ್ದಾರೆ.[೩]

ಅಂಗಾಂಗಗಳನ್ನು ಬಿಡಿಸುವಾಗ ಉಬ್ಬುಶಿಲ್ಪಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುವ ಗಂಗರು ತಮ್ಮ ಕಾಲದ ಶಿಲ್ಪಗಳಲ್ಲಿ ಮುಂಭಾಗದಷ್ಟು ಹಿಂಭಾಗವನ್ನು ಸುಂದರ ಗೊಳಿಸಿಲ್ಲ ಎಂದು ಹೇಳುವ ಲೇಖಕರು ಶಿಲ್ಪಕಲೆಯ ಹತ್ತುಹಲವು ಸಂಗತಿಗಳನ್ನು, ಗಂಗರ ಕಾಲದ ಧಾರ್ಮಿಕ ಹಾಗೂ ಲೌಕಿಕ ಶಿಲ್ಪಗಳ ಸ್ವರೂಪವನ್ನು ಕಂಡರಿಸಿದಾರೆ. ಗಂಗರ ರಾಜಕೀಯ ಚರಿತ್ರೆಯಿಂದ ಪ್ರಾರಂಭಿಸಲಾದ ಕೃತಿಯು ಕರ್ನಾಟಕ ಶಿಲ್ಪಕಲೆಯ ಚರಿತ್ರೆಯಲ್ಲಿ ಗಂಗ ಶಿಲ್ಪಕಲೆಯ ಪಾತ್ರವನ್ನು ತೋರಿಸಿದ್ದಾರೆ. ಚಾರಿತ್ರಿಕವಾಗಿ, ಶಿಲ್ಪಕಲಾತ್ಮಕವಾಗಿ ಕೃತಿ ಪೂರ್ಣಗೊಂಡು ಸಾಂದರ್ಭಿಕವಾಗಿ ಶಿಲ್ಪಗಳ ಛಾಯಾಚಿತ್ರಗಳನ್ನು ಒಳಗೊಂಡಿದೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ೨೦೦೮ ರಲ್ಲಿ ಪ್ರಕಟವಾದ **ಕರ್ನಾಟಕದ ಆರಂಭಿಕ ಶಿಲ್ಪಕಲೆ** ಕೃತಿಯು ಡಾ.ಆರ್.ಎಚ್.ಕುಲಕರ್ಣಿ ಅವರಿಂದ ರಚಿತವಾಗಿದೆ. ಡಾ.ಎಚ್.ಎಸ್.ಗೋಪಾಲರಾವ್ ಅವರಿಂದ ಸಂಪಾದಿತವಾಗಿದೆ. ಈ ಕೃತಿಯನ್ನು ಲೇಖಕರು

ಕರ್ನಾಟಕದ ಆರಂಭಿಕ ಶಿಲ್ಪಕಲೆಯನ್ನು ಹೇಳುತ್ತ ಸನ್ನತಿಯ ಬೌದ್ಧ ಸ್ತೂಪಗಳು, ಕದಂಬರ ಕಾಲದ ಹಲವಾರು ಮೂರ್ತಿ ಶಿಲ್ಪಗಳಿಗಿಂತಲೂ ಪ್ರಾಚೀನವಾಗಿರುವ ಅಂಶವನ್ನು ವ್ಯಕ್ತಪಡಿಸಿದ್ದಾರೆ. ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಕಲೆಯ ಆರಂಭಿಕ ಹಂತವನ್ನು ಕಾಣಬಹುದು ಎಂದು ಇಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಪ್ರಾಚೀನ ಕರ್ನಾಟಕದ ಶಿಲ್ಪಕಲೆಯಲ್ಲಿ ಬೌದ್ಧ, ಜೈನ,ಧರ್ಮದ ಶಿಲ್ಪಗಳಂತೆ ವೈಧಿಕದ ನಾರಸಿಂಹ, ಹರಿಹರ, ಗಣೇಶ ಶಿಲ್ಪಗಳ ಕಾಲಮಾನವನ್ನು ಗುರ್ತಿಸಿ ಅವುಗಳ ಸೌಂದರ್ಯದ ಆಯಾಮವನ್ನು ಕಂಡರಿಸಿದ್ದಾರೆ. ಚಾರಿತ್ರಿಕ ಅಂಶಗಳನ್ನು ಒಳಗೊಂಡ ಈ ಕೃತಿಯು ಮೌಲಿಕವಾಗಿದೆ.

ಬಾದಾಮಿ ಚಾಲುಕ್ಯ ಶಿಲ್ಪಕಲೆ ೨೦೦೮ ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡಮಿಯಿಂದ ಪ್ರಕಟವಾಗಿದೆ. ಡಾ.ಶಿಲಾಕಾಂತ ಪತ್ತಾರ ಅವರ ಕೃತಿಯಾಗಿದ್ದು ಡಾ.ಎಚ್.ಎಸ್.ಗೋಪಾಲರಾವ್ ಅವರ ಸಂಪಾದಕತ್ವದಲ್ಲಿ ಹೊರಬಂದಿದೆ. ಡಾ.ಶಿಲಾಕಾಂತ ಪತ್ತಾರರು ತಮ್ಮ ಕೃತಿಯಲ್ಲಿ ಧಾರ್ಮಿಕ ಶಿಲ್ಪಗಳು, ಚಾಲುಕ್ಯ ಕಲೆಯ ವೈಶಿಷ್ಟ್ಯದ ಜೊತೆಗೆ ಶಿಲ್ಪಕಲೆಯ ಸೌಂದರ್ಯ, ಹಾಗೂ ಅದರ ಸ್ವರೂಪವನ್ನು ಕಂಡರಿಸಿದ್ದಾರೆ. ವಿಶೇಷವಾಗಿ ಬಾದಾಮಿ, ಐಹೊಳೆಗಳನ್ನು ಮುಖ್ಯವಾಗಿರಿಸಿಕೊಂಡು ಶಿಲ್ಪಕಲೆಯ ಸ್ವರೂಪವನ್ನು ತೋರಿಸಿದ್ದಾರೆ. ಈ ಕೃತಿಯು ಕಲಾದೃಷ್ಟಿಯಿಂದಲೂ ಚರಿತ್ರೆ ದೃಷ್ಟಿಯಿಂದಲೂ ಮಹತ್ವ ಪಡೆದಿದೆ.

ಪಲ್ಲವ ಚೋಳ ಶಿಲ್ಪಕಲೆ ೨೦೦೮ ರಲ್ಲಿ ಶಿಲ್ಪಕಲಾ ಅಕಾಡೆಮಿಯಿಂದ ಪ್ರಕಟಗೊಂಡು, ಡಾ. ತಮಿಳು ಸೆಲ್ವಿಯವರಿಂದ ರಚಿತವಾಗಿ, ಡಾ.ಎಚ್.ಎಸ್.ಗೋಪಾಲರಾವ್ ಅವರಿಂದ ಸಂಪಾದಿತವಾಗಿದೆ. ಪಲ್ಲವ ಚೋಳ ರಾಜಮನೆತನದ ಕಾಲಘಟ್ಟದಲ್ಲಿ ಮಹತ್ವ ಪಡೆದಿದೆ. ಚಾರಿತ್ರಿಕ ಮಹತ್ವದೊಂದಿಗೆ ಶಿಲ್ಪಕಲೆಯ ಕುರಿತಾಗಿ ಲೇಖಕರು ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾ ಮನುಷ್ಯ ಮುಖಭಾವ ಮನುಷ್ಯ ಸ್ವಭಾವಗಳಾದ, ಕೋಪತಾಪ, ರೋಷ, ಶಾಂತಿ ಮುಂತಾದವುಗಳಿಂದ ಹೊರತಾಗದೆ ಮಾನವ ಸ್ವಬಾವದ ಪ್ರತಿಬಿಂಬಗಳಾಗಿವೆ. ನಮ್ಮ ಶಿಲ್ಪಗಳು ಮಾನವ ಕಲ್ಪಿತ ದೇವರುಗಳನ್ನು ಮಾನವರಂತೆಯೇ ಬಹುಮಟ್ಟಿಗೆ ತೊರಿಸಿವೆ ಎಂದೂ ಮನುಷ್ಯ ಸ್ವಭಾವದ ಚೌಕಟ್ಟನ್ನು ಮೀರದ ಶಿಲ್ಪಗಳು ಆಯಾ ಪ್ರದೇಶ, ಕಾಲ, ಮುಂತಾದ ಅಂಶಗಳೊಂದಿಗೆ ವೈವಿಧ್ಯಮಯವಾಗಿರುಯತ್ತವೆ ಎಂದು ಅಭಿಪ್ರಾಯ ಪಡುತ್ತಾರೆ. ಅಂತೆಯೆ ಚೋಳ ಹಾಗೂ ಪಲ್ಲವ ಸಂಸ್ಕೃತಿಯ ಜನತೆಯ ದೈಹಿಕ ಹಾಗೂ ಸಾಂಸ್ಕೃತಿಕ ಚಹರೆ ಅವರ ಶಿಲ್ಪದಲ್ಲಿ ಗೋಚರಿಸಿದೆ ಎಂಬ ವಾದವನ್ನು ಒಳಗೊಂಡು ಈ ಎರಡು ರಾಜಮನೆತನದ ಕಾಲದಲ್ಲಿ ಶಿಲ್ಪಕಲೆಯ ಕಲಾತ್ಮಕ ನೆಲೆಯನ್ನು ಸ್ವರೂಪವನ್ನು ಕಂಡರಿಸಿದ್ದಾರೆ.

ವಿಜಯನಗರ ಶಿಲ್ಪಕಲೆ ೨೦೦೮ ರಲ್ಲಿ ಪ್ರಸಿದ್ಧ ಬರಹಗಾರರಾದ ಡಾ.ಅ.ಲ.ನರಸಿಂಹನ್ ಅವರು ರಚಿಸಿದ ಕೃತಿಯಾಗಿದೆ. ಡಾ.ಎಚ್.ಎಸ್.ಗೋಪಾಲ್‌ರಾವ್ ಅವರು ಇದನ್ನು ಸಂಪಾದಿಸಿದ್ದಾರೆ. ವಿಜಯನಗರ ಕಾಲದ ಚರಿತ್ರೆ ಹಾಗೂ ಕಲೆಯನ್ನು ಗುರ್ತಿಸಿದ ಲೇಖಕರು ಆ ಕಾಲದ ಧಾರ್ಮಿಕ,

ಸಾಮಾಜಿಕ ಹಾಗೂ ಶಿಲ್ಪಕಲೆಯ ಕುರಿತಾಗಿ ವಿವರಿಸಿದ್ದಾರೆ. ಆಂಜನೇಯ, ಬೃಂದಾವನಗಳಲ್ಲಿಯ ಬಹಳ ಸೂಕ್ಷ್ಮವಾಗಿ ಅಧ್ಯಯನ ಮಾಡಿ ಕೃತಿಯಲ್ಲಿ ಅವುಗಳ ವೈಶಿಷ್ಟ್ಯವನ್ನು ಕಂಡರಿಸಿದ್ದಾರೆ. ಕೃತಿಯಲ್ಲಿ ಸರಳವಾದ ಭಾಷಾ ಶೈಲಿಯ ಪ್ರಯೋಗ ಸುಂದರವಾಗಿ ನಿರೂಪಿತಗೊಂಡಿದೆ. ಈ ಎಲ್ಲ ಅಂಶಗಳಿಂದ ಈ ಸಾಹಿತ್ಯ ಕೃತಿಯು ಮೌಲಿಕವಾಗಿದೆ.

ದೃಶ್ಯ ವಸಾಹತೋತ್ತರ ದೃಶ್ಯ ಸಂಸ್ಕೃತಿಗೊಂದು ಪರ್ಯಾಯ ಚಿಂತನೆ ಈ ಕೃತಿ ಸಂಪಾದನಾ ಕೃತಿಯು ಎಸ್.ಮಂಜುನಾಥರವರಿಂದ ನಮ್ಮ ಸಂಸ್ಕೃತಿಯಿಂದ ಪ್ರಕಟವಾಗಿ ಸಂಪಾದಿತವಾಗಿದೆ. ಇದರಲ್ಲಿ ಒಟ್ಟು ಎಂಟು ಲೇಖನಗಳಿವೆ. ರಮೇಶಚಂದ್ರ ಅವರ "ಕೆ.ವೆಂಕಟಪ್ಪನವರ 'ವೀಣೆಯ ಹುಚ್ಚು", ಡಾ.ಆರ್.ಎಚ್.ಕುಲಕರ್ಣಿಯವರ ಎನ್ ಹನುಮಂತ್ಯನವರ 'ಮುತ್ತಗದ ಮರ', ಸಂಧ್ಯಾ ಅಣ್ಣಯ್ಯನವರ ಎಸ್.ಎನ್.ಸ್ವಾಮಿಯವರ 'ರೇಖಾ' ಛಾಯಾಚಿತ್ರ ಪುಸ್ತಕ, ವೆಂಕಟೇಶ, ಕೆ.ಎನ್.ರವರ 'ಆರ್.ಎಂ.ಹಡಪದರ ಸಮೂಹ ಶಿಲ್ಪ', ಪ್ರೋ.ಎಂ.ಎಚ್.ಕೃಷ್ಣಯ್ಯ ಅವರ ಆರ್.ಎಂ.ಹಡಪದರ "ಜೋಕುಮಾರ ಸ್ವಾಮಿ" ನಾಟಕದ ದೃಶ್ಯಪರಿಕಲ್ಪನೆ, ಪ್ರಿಯಾ ಸೆಲ್ವಕುಮಾರರ 'ವೇಣುಗೊಪಾಲ, ಮೈಸೂರ ಸಾಂಪ್ರದಾಯಿಕ ಚಿತ್ರ, ಎಚ್.ಎಅನಿಲಕುಮಾರರ ಕೆ.ಟಿ.ಶಿವಪ್ರಸಾದರ "ಹುಲಿವೇಷ" ಮತ್ತು ಉಮೇಶ ಮದ್ದನ ಹಳ್ಳಿಯವರ "ನೇಲಾಕೃತಿ"ಗಳೇ ಇದರಲ್ಲಿಯ ಲೇಖನಗಳು, ಬಹಳ ಚಿಕ್ಕದಾದ ಕೃತಿಯು ತುಂಬಾ ಆಸಕ್ತ ವಿಷಯಗಳನ್ನು ಒಳಗೊಂಡಿದೆ. ಇದರಲ್ಲಿಯ ವಿಷಯದ ಆಯ್ಕೆ ಸಮಕಾಲೀನ ಸಂದರ್ಭದಲ್ಲಿ ಔಚಿತ್ಯಪೂರ್ಣವಾಗಿದೆ, ಪ್ರಸ್ತುತ ವೇಳೆಯಲ್ಲಿ ಕಲೆ ಎಂದರೇನು ಕಲೆಯ ತತ್ವ ಸಿದ್ಧಾಂತಗಳ ಸ್ವರೂಪಗಳೆಂಥವುಗಳು ಮುಂತಾಗಿ ರಸತತ್ವದ ಹಿನ್ನಲೆಯಲ್ಲಿಯೂ ಮತ್ತು ಇಂದಿನ ಓದುಗನಿಗೆ ಬೇಡವಾದ ಕಲಾಮೀಮಾಂಸಾ ಸಿದ್ಧಾಂತಗಳ ನೆಲಯಲ್ಲಿ ಸಾಹಿತ್ಯವನ್ನು ಬರೆಯದೆ, ಇಂದಿನ ಮಾಡರ್ನ ಆರ್ಟನ ಹಲವು ಆಯಾಮಗಳಿಗೆ ಪೂರಕವಾಗುವ ಕೆಲವು ಉದಾಹರಣೆಯಾಗಿರಿಸಿಕೊಂಡು ಬರೆದ ಬರಹಗಳು ಈ ಕೃತಿಯಲ್ಲಿ ಕಾಣಸಿಗುತ್ತವೆ. ಹೀಗೆ ಸರಳ ಹಾಗೂ ಸಮಕಾಲೀನ ವಿಷಯದ ಸಂಬಂಧಿ ಬರವಣಿಗೆಯೂ ಕೂಡಾ ಒಂದು ಬಗೆಯಲ್ಲಿ ಇಂದಿನ 'ಕಲೆ' ಎಂಬ ಮಾಯಾಮೃಗವನ್ನು ವಿಮರ್ಶೆ ಎಂಬ ಬಲೆಯಲ್ಲಿ ಹಿಡಿದುದು ಪರೋಕ್ಷವಾಗಿ ಮಿಮಾಂಸೆಯ ದೃಗ್ಗೋಚರ ಮಾನದಂಡವೊಂದು ಸೃಷ್ಟಿಗೊಂಡಿದೆ ಎನ್ನಬಹುದು. ಈ ಹಿನ್ನೆಲೆಯಲ್ಲಿ ಮುತ್ತಗದ ಮರ ಕುರಿತು ಹೇಳುವ ಡಾ. ಆರ್.ಎಚ್. ಕುಲಕರ್ಣಿಯವರು ಸ್ವತಂತ್ರ್ಯಪೂರ್ವ ಕರ್ನಾಟಕದ ಕಲೆಯ ಸ್ವರೂಪ ಅದರಂತೆ ಭಾರತ ಸಂದರ್ಭದಲ್ಲಿ ಕಲಾ ಶಾಲೆಗಳ ಮೇಲಾದ ಆಂಗ್ಲ ಸಂಸ್ಕೃತಿಯ ಪ್ರಭಾವ ಹೀಗೆ ಅನೇಕ ಚಾರಿತ್ರಿಕ ಅಂಶಗಳೊಂದಿಗೆ ಕಲಾತ್ಮಕ ಅಂಶಗಳನ್ನು ವಿಶ್ಲೇಷಿಸಿದ್ದಾರೆ.

ಎಂ.ಎಚ್.ಕೃಷ್ಣಯ್ಯ ಅವರು ತಮ್ಮ ಆರ್.ಎಂ. ಹಡಪದರ ಕಲಾಕೃತಿ ಜೋಕುಮಾರ ಸ್ವಾಮಿಯ ಕುರಿತು ಬರೆಯುತ್ತಾ ಪ್ರದರ್ಶನಾತ್ಮಕ ಕಲೆಯಾದ "ನಾಟಕ" ಕಾಲಬದ್ಧ ಸ್ವರೂಪ ಪಡೆದಿದೆ. ಚಿತ್ರಕಲೆ ಇದರಿಂದ ತೀರಾ ವಿಭಿನ್ನವಾದುದಾಗಿಯೂ ಅದರ (ನಾಟಕ ಕಲೆ)ಯ ಸಂಬಂಧವನ್ನು ಹೊಂದಿದೆ.

ಕ್ಯಾನ್‌ವಾಸ್‌ನ, ಚಿತ್ರಪಟದ ತೆರಪನ್ನು ರೇಖೆ, ವರ್ಣಗಳು ಆವರಿಸುತ್ತವೆ. ಇದರಲ್ಲಿ ನಾಟಕದಂತೆ ಕ್ಷಣಕ್ಷಣಕ್ಕೆ ಘಟನೆಯಿಂದ ಘಟನೆಗೆ ಕಾಲಬದ್ಧವಾದ ಅನುಕ್ರಮವಾದ ಕ್ರಿಯೆ ಇರುವುದಿಲ್ಲ. ಅದು ಚಿತ್ರ ಸ್ಥಿರವಾಗಿರುತ್ತದೆ. ಹಾಗೆಂದ ಮಾತ್ರಕ್ಕೆ ಅದು ಜಡವೆಂದಾಗುವುದಿಲ್ಲ. ನೋಡುಗನ ನೋಟವು ಬಿಂದುವಿನಿಂದ ಹೊರಟು ಪಟದಎಲ್ಲ ಭಾಗಕ್ಕೂ ಚಲಿಸುತ್ತಾ ಆಸ್ವಾದನೆಗೆ ಪೂರಕವಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ಲೇಖಿಸಿದ್ದಾರೆ.

ಅನ್ಯಶಿಸ್ತಿನ ಸಂಬಂಧದ ಸ್ವರೂಪದಲ್ಲಿ ಪರಸ್ಪರ ಕಲೆಗಳ ಇತಿಮಿತಿ, ಮಾಧ್ಯಮ, ತಂತ್ರಗಳ ಹಿನ್ನೆಲೆಯಲ್ಲಿ ಎರಡು ಕಲೆಗಳ "ದೂರ ಮತ್ತು ಸಾಮಿಪ್ಯ"ಗಳ ಸ್ವರೂಪವನ್ನು ಕಂಡರಿಸಿದ್ದಾರೆ.

ದೃಶ್ಯ ಸಂಪಾದಿತ ಕೃತಿಯಲ್ಲಿ ಅನಿಲಕುಮಾರರ ಮೂರು ಲೇಖನಗಳಿದ್ದು ಲೇಖಕರು ಕೆ. ಟಿ. ಶಿವಪ್ರಸಾದರ ಹುಲಿವೇಷದಲ್ಲಿ ಲೇಖಕರು ಕಲಾಕೃತಿಯನ್ನು ವಸ್ತುನಿಷ್ಟ ನೆಲೆಯಲ್ಲಿ ಅಲ್ಲಿನ ಅಂಶಗಳನ್ನು ವಿವರಿಸಿದ್ದು ತೀರಾ ಭೌತಿಕ ಅಂಶಗಳನ್ನು ಹಾಗೂ ತಾಂತ್ರಿಕ ಅಂಶಗಳನ್ನು ವಿವರಿಸುವಂತೆ ಬರಹಮೂಡಿ ಬಂದಿದೆ ಎಂದೆನಿಸಿದರೂ ಹೀಗೆ ಬರೆಯುವುದರ ಹಿಂದೆ ಕೃತಿಗಳ ಕುರಿತಾದ ಆಂತರಿಕ, ತಾತ್ವಿಕ ಅಂಶಗಳನ್ನು ಕಂಡರಿಸುವ ಪ್ರಯತ್ನ ಮಾಡಿದ್ದಾರೆ.

ಡಾ.ಮಲ್ಲಿಕಾರ್ಜುನ.ಸಿ.ಬಾಗೋಡಿಯವರ ಸಂಪಾದಕತ್ವದಲ್ಲಿ **ಹೈದರಾಬಾದ- ಕರ್ನಾಟಕ ದೃಶ್ಯಕಲಾ ಪರಂಪರೆ** ಕೃತಿಯು ೨೦೧೨ ರಲ್ಲಿ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯಿಂದ ಪ್ರಕಟವಾಗಿದೆ ಇದರಲ್ಲಿ ವಿವಿಧ ಲೇಖಕರು ರಚಿಸಿದ ೧೨ ಲೇಖನಗಳಿವೆ. ಬರಹಗಾರರಾದ ಡಾ.ಯಾದಪ್ಪ.ಪರದೇಶಿ, ಡಾ.ಶಿವಾನಂದ ಬಂಟನೂರ, ಡಾ.ಮಲ್ಲಿಕಾರ್ಜುನ ಬಾಗೊಡಿ, ಡಾ.ಎಸ್.ಸಿ.ಪಾಟೀಲ, ಪ್ರೊ.ಎ.ಎಸ್.ಪಾಟೀಲ, ಡಾ.ಶರಣಬಸಪ್ಪ ಕೋಲ್ಕಾರ್ ಮುಂತಾದವ ಲೇಖನಗಳು ಹೈದರಬಾದ ಕರ್ನಾಟಕದ ಚಿತ್ರಕಲೆಯನ್ನು ಕುರಿತು ಅನೇಕ ವಿಷಯಗಳನ್ನು ಮಂಡಿಸಿದ್ದಾರೆ. ದೃಶ್ಯಕಲಾ ಸಾಹಿತ್ಯ ಮತ್ತು ಸಂಶೋಧನೆ ಲೇಖನದಲ್ಲಿ ಶಿವಾನಂದ ಬಂಟನೂರ "ಕಲೆ ಮತ್ತು ಸಾಹಿತ್ಯದ" ಕುರಿತು ಅವುಗಳ ಅನನ್ಯತೆತನ್ನು ಕುರಿತು ಹೇಳುತ್ತಾ, ಶಾಬ್ದಿಕ ಮಾಧ್ಯಮವಾದ ಸಾಹಿತ್ಯ ಕಲಾಕೃತಿಗಳೊಂದಿಗೆ ಹಿಂದಿನಿಂದಲೂ ಅವಿನಾಭಾವವನ್ನು ಹೊಂದಿವೆ ಎಂದು ಪ್ರಸ್ತಾಪಿಸುತ್ತಲೇ ಇಂದು ದೃಶ್ಯಕಲೆಗೆಂದೆ ಸಾಹಿತ್ಯ ರಚಿತವಾಗುತ್ತಿರುವ ಸಂದರ್ಭವನ್ನು ಪುನಃ ನೆನಪಿಸಿದಂತಿದೆ. ಈ ಸಂಪಾದನಾಕೃತಿ ಹೈ.ಕ.ದ ಕಲಾ ಪರಂಪರೆಯ ಕುರಿತಾಗಿ ವಿವರಿಸುವ ಚಿಕ್ಕ ಕೃತಿಯಾಗಿದೆ.

ಯಕ್ಷಗಾನ ಮತ್ತು ಚಿತ್ರಕಲೆ ಡಾ. ಎಸ್. ಸಿ. ಪಾಟೀಲರ ಸಂಪಾದಕತ್ವದಲ್ಲಿ ೨೦೦೪ ರಲ್ಲಿ ಲಲಿತಕಲಾ ಅಕಾಡಮಿಯಿಂದ ಪ್ರಕಟಗೊಂಡ ಕೃತಿ ಉಪಾಧ್ಯಾಯ ಮೂಡಬೆಳ್ಳಿಯವರಿಂದ ಬರೆಯಲ್ಪಟ್ಟಿದೆ. ಮಲೆನಾಡು ಕರ್ನಾಟಕದ ಪ್ರಮುಖ ಜನಪದ ಪ್ರಕಾರವಾದ ಯಕ್ಷಗಾನದಲ್ಲಿ ಚಿತ್ರಕಲೆಯ ಬಳಕೆಯನ್ನು ಕಲೆಯ ವೈಶಿಷ್ಟ್ಯವನ್ನು ತಿಳಿಸುವ ಕೃತಿಯು ಯಕ್ಷಗಾನದ ಸಂದರ್ಭಲ್ಲಿ ಬಳಸುವ ವೇಷಭೂಷಣಗಳಲ್ಲಿ ಬಣ್ಣ, ರೇಖೆಗಳ ಪಾತ್ರ ವಿನ್ಯಾಸವನ್ನು ವಿವರಿಸುತ್ತದೆ. ಯಕ್ಷಗಾನದಲ್ಲಿ

ವೈವಿಧ್ಯಪೂರ್ಣ ಪಾತ್ರಗಳಿಗನ್ವಯಿಸಿ ಪರಿಕರಗಳ ಸ್ವರೂಪಕ್ಕೆ ತಕ್ಕಂತೆ ದೃಶ್ಯಕಲೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಈ ಕಲೆಯಿಂದ ಯಕ್ಷಗಾನ ಕಲೆಗೆ ಒಂದು ಬಗೆಯ ಶಕ್ತಿ ಒದಗಿದೆ. ಅಲ್ಲದೆ ಕಲೆಯನ್ನು ರಮ್ಯ ಗೊಳಿಸಿದೆ ಎಂಬ ಅಭಿಪ್ರಾಯವನ್ನು ತಿಳಿಸಿಕೊಡುವ ಈ ಕೃತಿಯು ಯಕ್ಷಗಾನ ಹಾಗೂ ಚಿತ್ರಕಲೆಗಳ ಸಂಬಂಧವನ್ನು ದೇಶಬದ್ಧ ಹಾಗೂ ಕಾಲಬದ್ಧ ಕಲೆಗಳ ಸಮ್ಮಿಳತ ನೆಲೆಯನ್ನು ಅರಿವಿಗೆ ತರುತ್ತದೆ.

೨೦೧೦ ರಲ್ಲಿ **ದೃಶ್ಯಕಲಾ ಪ್ರಶಸ್ತಿ ಪುರಸ್ಕೃತರು** ಎಂಬ ಕೃತಿಯು ಗುಲಬರ್ಗಾ ವಿಶ್ವ ವಿದ್ಯಾಲಯದಿಂದ ಪ್ರಕಟವಾಗಿದೆ. ಡಾ. ವಿ. ಜಿ. ಅಂದಾನಿ, ಡಾ. ಡಿ. ವಿ. ನಾಯಕರು ಕೃತಿಯ ಸಂಪಾದನೆ ಮಾಡಿದ್ದಾರೆ. ಹಿರಿಯ ಕಲಾವಿದರ ಕುರಿತಾಗಿ ಲೇಖನಗಳಿವೆ. ಶಂಕರ್‌ರಾವ್ ಆಳಂದಕರ್ ಅವರ ಕುರಿತು ರಾಜಕುಮಾರ್ ಎಸ್. ಕಾಳೆ, ಶಂಕರಗೌಡ ಬೆಟ್ಟದೂರು ಅವರ ಕುರಿತು ಡಾ. ಡಿ. ಬಿ. ನಾಯಕ್, ಡಾ. ಜೆ. ಎಸ್. ಖಂಡೇರಾವ್ ಅವರ ಕುರಿತು ಡಾ. ಶಿವಾನಂದ ಬಂಟನೂರ, ವಿಜಯ ಹಾಗರಗುಂಡಗಿ ಅವರ ಕುರಿತು ಡಾ. ಮಲ್ಲಿಕಾರ್ಜುನ ಬಾಗೋಡಿಯವರು ಹೀಗೆ ಅನೇಕ ಲೇಖನಗಳು ವಿವಿಧ ಲೇಖಕರಿಂದ ಬರೆಯಲ್ಪಟ್ಟಿವೆ. ಸುಮಾರು ೭೦ಕ್ಕೂ ಹೆಚ್ಚು ಸಮಕಾಲಿನ ಕಲಾವಿದರ ಕುರಿತಾಗಿ ಸಂಕ್ಷಿಪ್ತ ಮಾಹಿತಿ ದೊರಕುವಂತೆ ನಿರೂಪಿತವಾಗಿರುವ ಕೃತಿಯಲ್ಲಿ ಕಲಾವಿದರ ಒಂದೊಂದು ಕಲಾಕೃತಿಗಳ ಬಣ್ಣದ ಛಾಯಾಚಿತ್ರಗಳನ್ನು ಪ್ರಕಟಿಸಲಾಗಿದೆ. ಸಮಕಾಲೀನ ಕಲಾವಿದರ ಮಾಹಿತಿಯಿಂದ ಕೃತಿ ಅರ್ವಾಚೀನ ಆಯಾಮವನ್ನು ಹೊಂದಿ ಮಹತ್ವ ಪಡೆದಿದೆ ಎನ್ನಬಹುದು.

ಅಭಿನಂದನಾ ಹಿನ್ನೆಲೆಯಲ್ಲಿ ಬಂದ ಕೃತಿಗಳು

೧. ನಡೆದಾಡುವ ಕಲಾಕೋಶ

ಅಭಿನಂದನೆ ಹಿನ್ನೆಲೆಯಲ್ಲಿ ಮರಿಶಾಮಾಚಾರ್ ಅವರಿಗೆ ಅಭಿನಂದನೆಯಾಗಿ ಎಚ್.ಎ.ಅನಿಲ್ ಕುಮಾರ್ ಅವರ ಸಂಪಾದತ್ವದಲ್ಲಿ ಹೊರಬಂದ **ನಡೆದಾಡುವ ಕಲಾಕೋಶ** ಎಂಬ ಕೃತಿಯು ಸಂಯೋಜಿತ ಟ್ರಸ್ಟ್ ೨೦೧೧ರಲ್ಲಿ ಪ್ರಕಟಗೊಂಡಿದ್ದು, ಹಲವಾರು ಲೇಖನಗಳನ್ನು ಮರಿಶಾಮಾಚಾರ್ ಕುರಿತಂತೆ ಬರೆಯಲ್ಪಟ್ಟಿವೆ. ಹಿರಿಯ ಕಲಾವಿದ ಕಲಾವಿಮರ್ಶಕರಾದ ಎನ್. ಮರಿಶಾಮಾಚಾರ್ ಅವರು ಕಲೆಯ ಮೀಮಾಂಸಾ ಕ್ಷೇತ್ರದಲ್ಲಿ ಶಿಲ್ಪಚಿತ್ರಗಳ ಕುರಿತಂತೆ ಪ್ರಾಚೀನ ಸಾಹಿತ್ಯ ಗ್ರಂಥಗಳನ್ನು ಹುಡುಕಾಡಿದವರು ಮತ್ತು ಅನೇಕ ಮೀಮಾಂಸಾ ನೆಲೆಗಳನ್ನು ತಡುಕಾಡಿ, ತಮ್ಮ ಬರವಣಿಗೆ ಮಾಡಿದವರು. ಹೀಗೆ ಕಲಾಕ್ಷೇತ್ರದಲ್ಲಿ ಸಾಹಿತ್ಯ ಮಾಧ್ಯಮದಿಂದ ತಮ್ಮನ್ನು ತಾವು ಸಕ್ರೀಯವಾಗಿ ತೊಡಗಿಸಿಕೊಂಡ ಮರಿಶಾಮಾಚಾರ್‌ರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳಲ್ಲಿ, ಉಲ್ಲೇಖಗೊಂಡ ವಿಶ್ವಕರ್ಮ, ಮಯರಿಂದ ಹಿಡಿದು ಆಧುನಿಕ ಕಲಾವಿದರವರೆಗೂ ವಿವರಗಳು ಲಭ್ಯವಾಗುತ್ತವೆ. ಭಾರತದ ಕಲೆಯಂತೆ ಪಾಶ್ಚಾತ್ಯ ಕಲೆಯ ಇತಿಹಾಸವನ್ನು ಅರಿತಿರುವ

ಮರಿಶಾಮಾಚಾರ್‌ರವರು ವಿಶೇಷವಾಗಿ ಕಲಾ ಇತಿಹಾಸವನ್ನು ಅಧ್ಯಯನ ಮಾಡಿದವರು. ಕನ್ನಡದ ಕಲಾಬರಹಗಾರರ ಅಗ್ರಪಂಕ್ತಿಯಲ್ಲಿ ನಿಲ್ಲುವ ಇವರು ಪಾರಂಪಾರಿಕ ಕಲೆಯನ್ನಷ್ಟೇ ಅಲ್ಲದೆ ಆಧುನಿಕ ಸಮಕಾಲೀನ ಕಲೆಯ ಕುರಿತಾಗಿಯೂ ಬರವಣಿಗೆ ಮಾಡಿದವರು ಇವರ ಕುರಿತಂತೆ ಇವರ ಸ್ಮರಣೆಗಾಗಿ ಅವರ ಅಭಿಮಾನಿ ಬಳಗ ಅಭಿನಂದನಾ ಗ್ರಂಥವಾಗಿ ಈ ಕೃತಿಯನ್ನು ಹೊರತಂದಿದೆ. ಅವರಿಗೆ ೬೦ ತುಂಬಿದ ಸಂದರ್ಭಕ್ಕೆ ಹೊರಬಂದ ಕೃತಿಯಾಗಿದೆ.

ನಡೆದಾಡುವ ಕಲಾಕೋಶ ಕೃತಿಯು, ಪ್ರಸಿದ್ಧ ಕಲಾವಿಮರ್ಶಕರಿಂದ ಬರೆಯಿಸಿದ ಲೇಖನಗಳ ಸಂಪಾದನಾ ಕೃತಿಯಾಗಿದೆ. ಇದರಲ್ಲಿ ಪ್ರೊ.ಕೆ.ವಿ.ಸುಬ್ರಹ್ಮಣ್ಯಂ, ಎಚ್.ಎ.ಅನಿಲ್ ಕುಮಾರ್, ಡಾ.ಅ.ಲ.ನರಸಿಂಹನ್, ಎಸ್.ಜಿ.ವಾಸುದೇವ್, ದೇವು ಪತ್ತಾರ್, ಸುಬಾಷ ಕಮ್ಮಾರ್, ಎಲ್.ಶಿವಲಿಂಗಪ್ಪ, ಕಲಾವಿದ ಸಿಹಿ ಕಹಿ ಚಂದ್ರು, ಡಾ.ಶಿವಾನಂದ ಬಂಟನೂರ, ಐ.ಎಂ.ವಿಠ್ಠಲ ಮೂರ್ತಿ, ಪ್ರೊ.ಎಂ.ಎಚ್.ಕೃಷ್ಣಯ್ಯ ಮುಂತಾದವರು ಲೇಖನಗಳನ್ನು ಮರಿಶಾಮಾಚರ್‌ರವರ ಕುರಿತು ಬರೆದಿದ್ದಾರೆ.

ಮರಿಶಮಾಚಾರ್ ಅವರ ಬದುಕು ಮತ್ತು ಸಾಧನೆಗಳನ್ನು ತಿಳಿಸುವ ಲೇಖನಗಳು ತುಂಬಾ ಅಪರೂಪದ ಮಾಹಿತಿಗಳನ್ನು ಒದಗಿಸುತ್ತವೆ. ಲೇಖಕರು ತಾವು ಕಂಡಂತೆ ಮರಿಯವರನ್ನು ಚಿತ್ರಿಸಿ ತಮ್ಮ ಅಭಿಮಾನ ತುಂಬಿದ ಕಂಠದಿಂದ ಮುಕ್ತವಾಗಿ ಹೊಗಳಿದ್ದಾರೆ. ಅವರ ಸಾಧನೆಗೆ ಪೂರಕವಾಗಿಯೂ ಈ ಹೊಗಳಿಕೆ ಇಲ್ಲಿ ಔಚಿತ್ಯ ಪೂರ್ಣವಾಗಿದೆ. ಅವರ ಪ್ರಶಸ್ತಿ ಪುರಸ್ಕಾರಗಳು ಸನ್ಮಾನಗಳು ಸಾಧನೆಗಳಿಗೆ ಸಂದ ವಿಚಾರಗಳನ್ನು ಸಚಿತ್ರವಾಗಿ ಈ ಕೃತಿಯಲ್ಲಿ ಕಂಡರಿಸಲಾಗಿದೆ. ಮರಿಯವರ ಮಹತ್ವದ ಹಾಗೂ ಅಪರೂಪದ ಕ್ಷಣಗಳು ಬರಹದಲ್ಲಿ ಮತ್ತು ಚಿತ್ರದಲ್ಲೂ ರಚಿತವಾಗಿ ಕೆಲವೆಡೆ ವಿಮರ್ಶಾತ್ಮಕವಾಗಿ ರಚಿಸಲ್ಪಟ್ಟಿವೆ. ಕೆಲವು ವಿದ್ವಾಂಸರ ಲೇಖನಗಳು ಒಟ್ಟು ಅವರ ಜೀವನದ ಮೌಲ್ಯಗಳ ಸ್ವರೂಪವನ್ನು ಕಂಡರಿಸುವಲ್ಲಿ ಯಶಸ್ವಿಯಾಗಿವೆ. ಬರಹಗಾರರ ಕುರಿತಾಗಿ ಬಂದ ಕೃತಿಗಳಲ್ಲಿ ಮೌಲಿಕವಾದುದಾಗಿ ಮೂಡಿಬಂದ ಕೃತಿ ದಶಕದ ಸಾಹಿತ್ಯದ ಇತಿಹಾಸದಲ್ಲಿ ನಿಜದನೆಲೆಯ ನಂತರ(೨೦೦೩ ರಲ್ಲಿ ಪ್ರಕಟವಾದ ಕೃತಿ ನಿಜದ ನೆಲೆ) ಕಲಾ ಬರಹಗಳ ಕೇಂದ್ರಿತವಾಗಿ ಅನನ್ಯವಾಗುತ್ತದೆ.

ಬಂಗಾರ ಬಣ್ಣ

ಡಾ. ಬಸವರಾಜ ಗವಿಮಠರ ಅಭಿನಂದನಾ ಗ್ರಂಥವಾದ ಈ ಕೃತಿಯು ಅವರ ೫೦ನೇ ವಸಂತ, ಸಂಭ್ರಮಾಚರಣೆಯ ಸಂದರ್ಭಕ್ಕೆ ಹೊರಬಂದ ಕೃತಿಯಾಗಿದೆ. ಅವರ ಅಭಿಮಾನಿ ಬಳಗ ಅವರಿಗೆ ಅಭಿನಂದನೆಯನ್ನಯ ಸಲ್ಲಿಸುವ ಸಲುವಾಗಿ ಈ ಕೃತಿಯನ್ನು ತಂದಿದ್ದಾರೆ. ಇದರಲ್ಲಿ ೫೯ ಲೇಖನಗಳು ವಿವಿಧ ಬರಹಗಾರರಿಂದ ಹಿಡಿದು ಪ್ರಮುಖ ಬರಹಗಾರರಾದ ಡಾ.ಎಸ್.ಸಿ.ಪಾಟೀಲ, ಡಾ.ಶಿವಾನಂದ ಬಂಟನೂರ, ಡಾ.ಪ್ರಕಾಶಖಾಡೆ, ಡಾ.ವಿಜಯಕುಮಾರ ಕಟಗಿಹಳ್ಳಿಮಠ ಮುಂತಾದವರು ತಮ್ಮ ಲೇಖನದಲ್ಲಿ ಬಸವರಾಜ ಗವಿಮಠರ ಬದುಕು ಸಾಧನೆಗಳನ್ನು ಕುರಿತು

ಬರದಿದ್ದಾರೆ. ಕೇವಲ ಹಾರೈಕೆ, ಶ್ರೀಗಳ ನುಡಿಗಳು, ಛಾಯಾಚಿತ್ರಗಳಿಂದ ತುಂಬಿರುವ ಕೃತಿ, ಚೊಕ್ಕಟವಾದ ನಿರೂಪಣಾ ದೃಷ್ಟಿಯಿಂದ ಕೂಡಿಲ್ಲ, ಕೆಲವು ಲೇಖನಗಳನ್ನು ಹೊರತು ಪಡಿಸಿದರೆ ಕೃತಿಯು ಪೇಲವವಾಗುತ್ತದೆ ಎನ್ನಬಹುದು. ಅಧ್ಯಯನ ಸಂಬಂಧಿಯಾಗಿ ಕೃತಿಯು ಅಷ್ಟೇನು ಮೌಲಿಕವಾಗಿಲ್ಲವೆನ್ನಬಹುದು. ಇದರಲ್ಲಿ ಗವಿಮಠರು ತಮ್ಮ ಬಗ್ಗೆ ತಾವೇ ಬರೆದುಕೊಂಡಿರುವುದು ವಿಶೇಷವಾಗಿದೆ.

ಸಂಪಾದನಾ ಸಾಹಿತ್ಯವು ಇತ್ತೀಚಿಗಷ್ಟೆ ಹೆಚ್ಚು ರಚಿತವಾಗುತ್ತಿದೆ. ಹಲವಾರು ವಿಷಯಗಳನ್ನು ಆಧರಿಸಿ ಚಿಕ್ಕ ಚಿಕ್ಕ ಲೇಖನಗಳು ಒಂದೆಡೆ ಕೂಡಿಸಿ ಒಂದು ಕೃತಿಯನ್ನಾಗಿಸಿ ಅನೇಕ ವಿಷಯಗಳನ್ನು ಓದುಗರಿಗೆ ಸುಲಭದಲ್ಲಿ ಎಟುಕುವಂತೆ ಮಾಡುವ ಈ ಸಂಪಾದನಾ ಕೃತಿಗಳು ಬಹುಉಪಯುಕ್ತವಾದವುಗಳು. ಕಳೆದ ದಶಕದಲ್ಲಿ ಅಕಾಡೆಮಿಯಿಂದ ವಿವಿಧ ಸಂಸ್ಥೆಗಳಿಂದ ಪ್ರಕಟಗೊಂಡ ಸಾಹಿತ್ಯ ಕೃತಿಗಳಲ್ಲಿ ಸಂಪಾದನಾ ಕೃತಿಗಳೂ ಕೂಡಾ ತಮ್ಮ ಮಹತ್ವ ಪಾತ್ರವನ್ನು ನಿರ್ವಹಿಸಿವೆ. ಅನೇಕ ವಿದ್ವಾಂಸರಿಂದ ಬರೆಯಿಸಿ ಲೇಖನಗಳ ಸಂಗ್ರಹ ಒಬ್ಬರಿಂದ ಸಂಗ್ರಹಿತವಾಗುವುದು ಒಂದೆಡೆಯಾದರೆ, ಒಬ್ಬ ಲೇಖಕ ಒಂದು ವಿಷಯದ ಕುರಿತಾಗಿ ಬರೆದಾಗ ಕೂಡಾ ಅದನ್ನು ಬೇರೆ ಒಬ್ಬರೇ ಕೈಗೆತ್ತಿಕೊಂಡು ಸಂಪಾದಿಸಿದ ಉದಾಹರಣೆಗಳು ಅನೇಕ. ಲಲಿತಕಲಾ ಅಕಾಡೆಮಿಯು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಒಂದು ವ್ಯವಸ್ಥಿತವಾದ ಕ್ರತಿಯ ಪ್ರಕಟನಾ ಕ್ರಮವನ್ನು ಅನುಸರಿಸಿದೆ ಎನ್ನಬಹುದು.

ದಶಕದ ಸಾಹಿತ್ಯದಲ್ಲಿ ಲಲಿತಕಲಾ ಅಕಾಡೆಮಿಯಿಂದ ಅನೇಕ ಕೃತಿಗಳು ಹೊರಬಂದಿದ್ದು, ಅವುಗಳಲ್ಲಿ ಜಾನಪದ ಕಲೆಗಳ ಹಿನ್ನೆಲೆಯಲ್ಲಿ ಹಚ್ಚೆಕಲೆ, ನಾಗರಾಧನೆ ಕಲೆ, ಸೂತ್ರದಗೊಂಬೆ, ಬೆಳದಿಂಗಳ ಚಿತ್ರಕಲೆ, ಮುಂತಾದವುಗಳು ಡಾ. ಎಸ್.ಸಿ. ಪಾಟೀಲ ಅವರ ಸಂಪಾದಕತ್ವದಲ್ಲಿ ಬೆಳಕು ಕಂಡಿವೆ. ಜಾನಪದ ಕಲೆಗಳಲ್ಲಿ ಅಡಗಿರುವ ಪ್ರಾದೇಶಿಕ ಕಲೆ,ಪರಂಪರೆಗಳ ಆಚರಣೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕಲೆಗಳ ಮುಂತಾದ ಗ್ರಾಮೀಣ ಬದುಕಿನ ಅನೇಕ ಲಕ್ಷಣದ ಅಂಶಗಳನ್ನು ಆಧರಿಸಿ ಕಲೆಯ ಸಂಕೀರ್ಣ ಸಂಸ್ಕೃತಿಯನ್ನು, ಜನಪದ ಬದುಕಿನಲ್ಲಿ ಕುರುಹಾಗಿ ಹೊಳೆಯುವ ಕಲೆಯನ್ನು ಅರಿತು ಕೊಳ್ಳುವಲ್ಲಿ ಈ ಜನಪದ ಕಲೆಗಳ ಕುರಿತಾದ ಸಂಪಾದನಾ ಕೃತಿಗಳು ಸಹಾಯಕವಾಗುತ್ತವೆ. ಭಾರತೀಯ ವೈವಿಧ್ಯಮಯ ಸಂಸ್ಕೃತಿಯಲ್ಲಿ ಜನಪದರ ಆಚರಣೆಗಳೂ ಮಹತ್ವ ಪಡೆಯುತ್ತವೆ. ಯಾವುದೇ ಒಂದು ಪ್ರದೇಶದ ನಂಬಿಕೆ ಧಾರ್ಮಿಕ ಆಚರಣೆಗಳು ವೃತ್ತಿಮೂಲದ ನಂಟನ್ನು ಒಳಗೊಂಡು ಧರ್ಮ ಹಾಗೂ ವೃತ್ತಿಗಳೆರಡೂ ಸೌಂದರ್ಯಕ್ಕೆ ದಾರಿ ಮಾಡಿಕೊಡುತ್ತವೆ.

ಈ ಹಿನ್ನೆಲೆಯಲ್ಲಿ ಜನಪದರ 'ಕೌಶಲ್ಯವು' ಧರ್ಮಕ್ಕೆ ಆರೋಪಿತವಾಗಿ ಒಮ್ಮೊಮ್ಮೆ ಬಲವಾದ ನಂಬಿಕೆಯ ತಳಹದಿಯಲ್ಲಿ ನೆಲೆಗೊಳ್ಳುತ್ತದೆ. ಈ ರೀತಿಯ ವೃತ್ತಿ, ಧರ್ಮ, ಕಲೆಗಳು ಪರಸ್ಪರ ಅವಿನಾಭಾವಿಯಾಗಿಯೇ ಒಂದು ಅಪೂರ್ವವಾದ ಜನಪದ ಕಲಾಸಮಾಜವನ್ನು ನಿರ್ಮಿಸುತ್ತದೆ. ಈ ಎಲ್ಲ ಸಂಗತಿಗಳಿಂದ ಜನಪದ ಕಲೆಗಳ ಅಧ್ಯಯನ ದೇಶಿಸಂಸ್ಕೃತಿಯ ಒಟ್ಟು ಚಿಂತನೆಯ

ಕಲ್ಪನೆಯಲ್ಲಿ ಕೈಬಿಟ್ಟು ಹೊಗದಂತಹದ್ದು. ಒಂದು ದೇಶದ ಕಲೆಯನ್ನು ಅರಿತುಕೊಳ್ಳಬೇಕಾದರೆ ಆ ದೇಶದ ಪ್ರಾದೇಶಿಕ ಚೌಕಟ್ಟಿನ ನೆಲೆಯನ್ನು ಪ್ರವೇಶಿಸಿದಾಗ ಮಾತ್ರವೇ ಸಾಧಿತವಾಗುವುದು. ಇಂತಹ ಚಿಂತನೆಯನ್ನು ಕಲಾ ಚಿಂತಕರಾದ ಆನಂದ ಕುಮಾರ ಸ್ವಾಮಿಯವರು ತಮ್ಮ ವಿಚಾರದ ಮೂಲಕ ವಿಮರ್ಶಿಸಿದ್ದಾರೆ. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಅಲ್ಲೋಲಕಲ್ಲೋಲವಾದ ದೇಶಿಕಲೆ ತನ್ನ ಸೃಜನಶೀಲತೆಯನ್ನು ಕಳೆದುಕೊಂಡಿದೆ ಎಂದೂ, ಬದುಕನ್ನು ಹಸನುಗೊಳಿಸುವ ಸೃಜನಶೀಲವು ಒಂದು ರೀತಿಯ ಸಹಜಕ್ರಿಯೆ ಎನ್ನುವ ಕುಮಾರಸ್ವಾಮಿಯವರು ಅಭಿಪ್ರಾಯಮಾನ್ಯವಾದುದು ಇಂದಿನ ಜಾಗತೀಕರಣದ ಯಾಂತ್ರಿಕ ಬದುಕು ಒಂದು ರೀತಿಯ ಭೌತಿಕವಾದದಾಗಿ ಕಲೆಯ ವಿನಾಶಕ್ಕೆ ಎಡೆ ಮಾಡಿಕೊಡುವಂತಹದ್ದು ಎಂದು ಅಭಿಪ್ರಾಯಪಟ್ಟಿದ್ದಾರೆ. ಆನಂದದ ಅಭಿವ್ಯಕ್ತಿಯ ಕಲ್ಪನೆಯೇ ತನ್ನತನವನ್ನು ಕಳೆದು ಕೊಳ್ಳುತ್ತಿರುವ ಪ್ರಸ್ತುತ ಸಂದರ್ಭಕ್ಕೆ ಜನಪದ ಕಲೆಗಳು ಇತಿಹಾಸದ ಪುಟವನ್ನು ಸೇರುತ್ತಿರುವೆ. ಹೀಗಿರುವಾಗ ಅವುಗಳ ಕುರಿತಾದ ಮಾಹಿತಿಯನ್ನು ಪಡೆಯುವುದು ಅನಿವಾರ್ಯವಾಗಿದೆ. ಈ ಎಲ್ಲ ಅಂಶಗಳನ್ನು ಗಮನಿಸಿ ಲಲಿತಕಲಾ ಅಕಾಡೆಮಿಯು ಜನಪದ ಕಲೆಗಳ ಕುರಿತಾಗಿ ಕೃತಿಗಳನ್ನು ಸಂಪಾದಿಸಿ ಕಲೆಯ ವಿಷಯಗಳನ್ನು ಜನರಿಗೆ ತಲುಪಿಸುವ ಧ್ಯೆಯಉದ್ದೇಶವನ್ನು ಹೊತ್ತು ಕಾರ್ಯನಿರ್ವಹಿಸುತ್ತದೆ.

ಸಂಪಾದನಾ ಕೃತಿಗಳಲ್ಲಿ ಅಕಾಡೆಮಿಯಿಂದ ಹೊರಬಂದ ಜನಪದ ಕಲೆಗಳ ಕುರಿತಾದ ಕೃತಿಗಳಲ್ಲಿ ಕಳೆದ ದಶಕದಲ್ಲಿ ಕೆಲವು ಮಹತ್ವದ ಕೃತಿಗಳು ಕಾಣಸಿಗುತ್ತವೆ. ಈ ಕೃತಿಗಳು ಕೇವಲ ಮಾಹಿತಿಯಿಂದ ಕೂಡಿದ ಕೃತಿಗಳಾಗಿರದೆ ವಿಮರ್ಶಾತ್ಮಕವಾಗಿಯೂ ರಚಿತವಾಗಿವೆ. ಕೆಲವು ಭೌತಿಕ ವಸ್ತುಗಳನ್ನು ಇಟ್ಟುಕೊಂಡು ಆಧ್ಯಾತ್ಮ, ಮಿಮಾಂಸೆ, ಸಮಾಜ ಮುಂತಾದ ಸಂಗತಿಗಳನ್ನು ಒಳಗೊಂಡು ಅನೇಕ ಹೊಸ ದೃಷ್ಟಿಕೋನಗಳನ್ನು ಓದುಗರ ಗಮನಕ್ಕೆ ತರುತ್ತವೆ. "ಚಿತ್ತಾರದ ಗೊಂಬೆ" ಎಂಬ ಕೃತಿಯು ಅಂತಹ ಮಾತಿಗೆ ಒಂದು ಉದಾಹರಣೆಯಾಗಿದೆ. ಈ ಕೃತಿಯಲ್ಲಿ ಲೇಖಕರು ಗೊಂಬೆಯ (ಸೂತ್ರದ ಗೊಂಬೆಯ) ಭೌತಿಕ ಅಂಶಗಳೊಂದಿಗೆ ಕಲ್ಪನಾತೀತವಾದ ಅತೀತಕಲ್ಪನೆಯೊಂದಿಗೆ ಕಾಣುವ ಪರಿ ಅಮೋಘವಾಗಿದೆ. ಮನುಷ್ಯರೆಲ್ಲರೂ ಒಂದುಬಗೆಯಲ್ಲಿ ದೇವರು ಎನ್ನುವ ವಿಶೇಷ ಆತ್ಮನ ಆಧೀನದಲ್ಲಿ ಗೊಂಬೆಗಳು ಎನ್ನುವಲ್ಲಿ ಬರಹಗಾರ ವೈಚಾರಿಕತೆ ಗೋಚರಿಸುತ್ತದೆ.

ನಾಗಾರಾಧನೆ, ಬೆಳದಿಂಗಳ ಕಲೆ, ಹಚ್ಚೆ ಕಲೆ, ಯಕ್ಷಗಾನ ಕಲೆ ಮುಂತಾದ ಕೃತಿಗಳಲ್ಲಿ ಆಯಾ ಕಲೆಯ ಸ್ವರೂಪ ಅಸ್ತಿತ್ವಗಳ ಜೊತೆಗೆ ಅನೇಕ ಪ್ರದೇಶಗಳ ಸ್ಥಳನಾಮಗಳು, ಆಚರಣೆಯ ಸ್ವರೂಪಗಳು, ಆಯಾ ಪ್ರದೇಶದ ಜನಸಮುದಾಯಗಳು, ಭಾಷೆ, ಮುಂತಾದ ಚಾರಿತ್ರಿಕ ಮಹತ್ವವುಳ್ಳ ಅಂಶಗಳನ್ನು ಕಾಣಬಹುದಾಗಿದೆ. ಕಲೆಯ ಅಧ್ಯಯನದ ಉದ್ದೇಶ ಕಲೆಯೊಂದನ್ನು ಹುಡುಕುವ ದಿಶೆಯಲ್ಲಿ ಮಾತ್ರವಲ್ಲದೆ ಇನ್ನಿತರ ಕ್ಷೇತ್ರಗಳ ಅಧ್ಯಯನದಲ್ಲಿ ಒಂದು ರೀತಿಯ ಕಲೆಯ ಗುರುತಾಗಿಯೂ ಮಾರ್ಪಡಬಲ್ಲದ್ದಾಗಿದೆ. ವೃತ್ತಿಮೂಲ, ಧರ್ಮ ಮೂಲ ಮತ್ತು ಮನರಂಜನಾ ಮೂಲದ ಹಿನ್ನೆಲೆಯಲ್ಲಿ ವಿಭಾಗಿತವಾಗಿ ಅಧ್ಯಯನಗೊಳ್ಳುತ್ತಿರುವ ಜನಪದ ಕಲೆಗಳು ಇಂದು ಪುನಃ

ಶೋಧಿತವಾಗಿ ಸಮಕಾಲೀನಗೊಳ್ಳುತ್ತ ಮುಂದಿನವರಿಗೂ ಅದು ಪರಿಚಿತವಾಗುವವುದನ್ನು ಕುರಿತು ಇಂದು ಬರವಣಿಗೆ ರಚಿತಗೋಳ್ಳುತ್ತಿರುವುದು ಒಂದು ರೀತಿಯ ಮಹತ್ವದ ಬದಲಾವಣೆಯೇ ಯಾಗಿದೆ. ಅದೇರೀತಿ ಇತ್ತೀಚಿನ ಸಂಪಾದಿತ ಕೃತಿಗಳಲ್ಲಿ ಮೌಲಿಕವಾದ ಜನಪದ ಕಲಾ ಸಾಹಿತ್ಯ ರಚಿತವಾಗಿದೆ ಎನ್ನಬಹುದು.

ಸಂಪಾದನಾ ಸಾಹಿತ್ಯ ಕೃತಿಗಳಲ್ಲಿ ಶಿಲ್ಪಕಲಾ ಅಕಾಡಮಿಯಿಂದ ಅನೇಕ ಕೃತಿಗಳು ಪ್ರಕಟವಾಗಿವೆ. ಕಳೆದ ದಶಕದಲ್ಲಿ ಕರ್ನಾಟಕದ ಶಿಲ್ಪಕಲೆಯನ್ನು ಆಧರಿಸಿದ ಕೃತಿಗಳು ರಚಿತವಾಗಿವೆ. ಗಂಗ ಶಿಲ್ಪಕಲೆ, ಚಾಲುಕ್ಯ ಶಿಲ್ಪಕಲೆ, ವಿಜಯನಗರ ಶಿಲ್ಪಕಲೆ, ಕರ್ನಾಟಕದ ಆರಂಭಿಕ ಶಿಲ್ಪಕಲೆ, ಬಾದಾಮಿ ಚಾಲುಕ್ಯರ ಅಲಂಕಾರಿಕ ಶಿಲ್ಪಗಳು(ಶಿಲಾಕಾಂತ ಪತ್ತಾರ), ಕಲ್ಯಾಣ ಚಾಲುಕ್ಯರ ಶಿಲ್ಪಕಲೆ, ಮುಂತಾದ ಕೃತಿಗಳು ಶಿಲ್ಪಕಲಾ ದೃಷ್ಟಿಯಿಂದ ಮಹತ್ವ ಪಡೆದಿವೆ. ಕರ್ನಾಟಕದ ಹಲವು ಪ್ರಸಿದ್ಧ ರಾಜಮನೆತನದ ಕಾಲಕ್ಕೆ ರಚಿತವಾದ ಹಲವಾರು ಕಲಾ ಶೈಲಿಗಳ ಪರಿಚಯವನ್ನು ಮಾಡಿಕೊಡುವವಲ್ಲದೆ ಶಿಲ್ಪಸೌಂದರ್ಯದ ಹಿನ್ನೆಲೆಯಾಗಿ, ಪ್ರತಿಮಾಶಾಸ್ತ್ರದ ಹಿನ್ನೆಲೆಯಾಗಿ, ಪುರಾತತ್ವ ಶಾಸ್ತ್ರದ ದೃಷ್ಟಿಯಿಂದ ಹೀಗೆ ಅನೇಕ ದೃಷ್ಟಿಕೋನಗಳಿಂದಲೂ ಈ ಕೃತಿಗಳು ಮಹತ್ವವನ್ನು ಪಡೆದಿವೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಪರಿಗಣಿತವಾದ ಕೃತಿಗಳು ಶಿಲ್ಪಶಾಸ್ತ್ರದ ಅಧ್ಯಯನಕ್ಕೆ ಪೂರಕವಾದರತೆ ಇಂದು ಅನನ್ಯವೂ ಆಗಿವೆ.

ದೃಶ್ಯ ಮತ್ತು ಹೈದರಾಬಾದ್ ಕರ್ನಾಟಕದ ದೃಶ್ಯಕಲಾ ಪರಂಪರೆ ಕೃತಿಗಳು ಚಿಕ್ಕದಾದ ಕೃತಿಗಳಾದರೂ ತುಂಬಾ ವಿಮರ್ಶಾಯುಕ್ತ ಕೃತಿಗಳಾಗಿವೆ. ದೃಶ್ಯ ಕೃತಿಯಲ್ಲಿ ಕೆಲವು ಲೇಖನಗಳಿದ್ದು ಅವುಗಳಲ್ಲಿಯೇ ಚಿಕ್ಕದಾಗಿ ಹಾಗೂ ಚೊಕ್ಕದಾಗಿ ಬರೆದಿರುವ ಬರಹಗಳು ವಿಷಯ ಗಾತ್ರದಲ್ಲಿ ವಿಸ್ತಾರವಾದವುಗಳಾಗಿವೆ. ಬಾಗೋಡಿಯವರ ಸಂಪಾದಕತ್ವದಲ್ಲಿ ಬಂದ ಹೈದರಾಬಾದ್ ಕರ್ನಾಟಕ ದೃಶ್ಯಪರಂಪರೆಯು ಹೈದರಾಬಾದ್ ಕರ್ನಾಟಕದ ಹಿಂದುಳಿದ ಪ್ರಾದೇಶಿಕ ಹಣೆಪಟ್ಟಿಯನ್ನು ಸರಿಸಿ ಆ ಪ್ರದೇಶದ ಕಲಾ ಶ್ರೀಮಂತಿಕೆಯನ್ನು, ಕಾಲಗರ್ಭದಲ್ಲಿ ಹುದುಗಿದ ಕಲೆಯ ಚಾರಿತ್ರಿಕ ಅಂಶಗಳನ್ನು ಎತ್ತಿತೋರಿಸಿದಲ್ಲಿ ಕೃತಿಯು ಸಾಫಲ್ಯ ಪಡೆದಿದೆ. ಚಿಕ್ಕ ಚಿಕ್ಕ ಅಂಶಗಳನ್ನು ಅನೇಕ ಹಂತಗಳಲ್ಲಿ ಒಳಗೊಳ್ಳುವ ದಿಶೆಯಲ್ಲಿ ಮಹತ್ವದ ಹೆಜ್ಜೆಯಾದ ಸಂಪಾದನಾ ಸಾಹಿತ್ಯ ಇಂದು ಬಹುಮುಖ್ಯವಾಗಿ, ಪ್ರಚುರವಾಗುವ ಬರವಣಿಗೆಯ ಪ್ರತೀಕವಾಗಿದೆ. ಈ ಮಾತು ಕಲಾಸಾಹಿತ್ಯಕ್ಕೂ ಹೊರತಾಗದಂತಹದ್ದು ಎಂದರೆ ತಪ್ಪಾಗದು. ಸಂಪಾದನ ಕೃತಿಗಳು ವಿವರಣಾತ್ಮಕವಾಗಿರದೆ ವಿಮರ್ಶೆ ವಿಶ್ಲೇಷಣೆಗಳಿಂದಲೂ ಕೂಡಿವೆ.

ಅಭಿನಂದನಾ ಹಿನ್ನೆಲೆಯಲ್ಲಿ ಸಂಪಾದಿತಗೊಂಡ ಕೃತಿಗಳು ತೀರಾ ಕಡಿಮೆಯಾಗಿ ಇತ್ತೀಚಿನ ದಶಕದಲ್ಲಿ ಕಾಣಸಿಗುತ್ತವೆ. ಎಚ್. ಎ.ಅನಿಲ್ ಕುಮಾರ್ ಅವರ ಸಂಪಾದತ್ವದಲ್ಲಿ ಬಂದ ವಾಸುದೇವ ಅವರಿಗೆ ಅಭಿನಂದಿಸಿದ ವೃಕ್ಷ ಮತ್ತು ಮರಿಶಾಮಾಚಾರ್ ಅವರ ಅಭಿನಂದನೆಗಾಗಿ ಬಂದ

ನಡೆದಾಡುವ ಕಲಾಕೋಶ ಕೃತಿಗಳು ಮುಖ್ಯವಾಗಿವೆ. ಹೀಗೆ ಮೂರು ರೀತಿಯ ಸಂಪಾದನಾ ಕೃತಿಗಳನ್ನು ದಶಕದ ಕಲಾ ಸಾಹಿತ್ಯ ಸಂದರ್ಭದಲ್ಲಿ ವಿವೇಚಿಸಬಹುದಾಗಿದೆ.

ಸ್ಮರಣಸಂಚಿಕೆ ಹಿನ್ನೆಲೆಯಲ್ಲಿ ಕಲಾಸಾಹಿತ್ಯ

ವಿವಿಧ ಕ್ಷೇತ್ರಗಳಂತೆ ಕಲಾಕ್ಷೇತ್ರದ ಸಾಹಿತ್ಯದಲ್ಲೂ ಸ್ಮರಣಸಂಚಿಕೆಗಳು ಹೆಚ್ಚು ಜನಪ್ರಿಯ ಮತ್ತು ಪ್ರಚಲಿತವಾಗುತ್ತವೆ. ಬೃಹತ್ ಕೃತಿಗಳಿಂದ ಹಿಡಿದು ಸಣ್ಣಸಣ್ಣ ಕೃತಿಗಳು ರಚಿತವಾಗುವುದರ ಜೊತೆಜೊತೆಗೆ ಲೇಖನರೂಪ ಸಾಹಿತ್ಯಕ್ಕೆ ಒಂದು ಚೌಕಟ್ಟು ರೂಪಿತವಾಗುವ ಸಂದರ್ಭವನ್ನು ಈ ಸ್ಮರಣಸಂಚಿಕೆಗಳ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಸಂಕೀರ್ಣ ಕಲಾಸಾಹಿತ್ಯದಲ್ಲಿ ಒಂದು ವಿಷಯಕ್ಕೆ ಸಂಬಂಧಿಸಿ ಒಂದೇ ಕೃತಿ ರಚಿತವಾಗುವ ಅಂಶವನ್ನು ಕಾಣುತ್ತೇವೆ. ಆದರೆ ಸ್ಮರಣಸಂಚಿಕೆ ಹಿನ್ನೆಲೆಯಲ್ಲಿ ವಿವಿಧ ವಿದ್ವಾಂಸರ ಲೇಖನಗಳ ಸಂಗ್ರಹವಾಗಿವೆ ಎನ್ನಬಹುದು. ಸ್ಮರಣಸಂಚಿಕೆಗಳಲ್ಲಿ ವ್ಯಕ್ತಿಕೇಂದ್ರಿತ ಹಾಗೂ ಸಂಕೀರ್ಣ ಸಾಹಿತ್ಯವನ್ನು ಕಾಣಬಹುದಾಗಿದೆ. ಬಹು ವಿಷಯಗಳನ್ನು ಒಳಗೊಳ್ಳುವ ಸಂಕೀರ್ಣ ಸಾಹಿತ್ಯವೂ ಕೂಡಾ ಸ್ಮರಣಸಂಚಿಕೆ ಸಾಹಿತ್ಯದಲ್ಲಿ ಪ್ರಮುಖವಾಗುತ್ತದೆ. ಹೀಗೆ ವೈವಿಧ್ಯಮಯ ಬರವಣಿಗೆಯ ಆಯಾಮದಿಂದ ಕೂಡಿದ ಸ್ಮರಣಸಂಚಿಕೆಗಳು ಸಾಂಸ್ಥಿಕ ವ್ಯಾಪ್ತಿಯಲ್ಲಿ ಬಹುವಾಗಿ ರಚಿತಗೊಂಡು ಸಂಪಾದನೆಗೊಳ್ಳುತ್ತವೆ.

ರಾಜ್ಯದ ಸಂಸ್ಥೆಗಳು ಸಂಪಾದಿಸುವ ಸ್ಮರಣ ಸಂಚಿಕೆಗಳಲ್ಲಿ ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಸಾಧನೆಗೈದ ಕಲಾವಿದರ ಕುರಿತಾಗಿ, ಕಲೆಯ ಕುರಿತಾಗಿ ಹಲವಾರು ಲೇಖನಗಳನ್ನು ಬರೆಯಿಸಿ ಸಂಪಾದಿಲಾಗಿವೆ. ಕಲೆಯನ್ನು ವಿಮರ್ಶಾ ನೆಲೆಯಲ್ಲಿ ಕಂಡು ಸೌಂದರ್ಯ, ಮೀಮಾಂಸೆ ರಸತತ್ವ ವಿಚಾರ, ತತ್ವಜ್ಞಾನ, ಆಧ್ಯಾತ್ಮ, ಸಮಾಜ ಮುಂತಾದ ಅಂಶಗಳೊಂದಿಗೆ ಸಂವೇದನಾಶೀಲವಾಗಿ ಸ್ಪಂದಿಸುವ ಮತ್ತು ಸುಲಭದಲ್ಲಿ ಓದುಗರ ಕೈಗೆಟಕುವಲ್ಲಿ ಸ್ಮರಣಸಂಚಿಕೆಗಳು ಇಂದಿನ ಅಧ್ಯಯನಶೀಲರ ಕೊರತೆಯನ್ನು ನೀಗಿಸುವಲ್ಲಿ ಪ್ರಾಮುಖ್ಯತೆ ಪಡೆದಿವೆ.

ಕನ್ನಡದಲ್ಲಿ ಅನೇಕ ಶೈಕ್ಷಣಿಕ ಸಂಸ್ಥೆಗಳು ಕಲಾಪರವಾದ ಚಿಂತನೆಗೆ ತೊಡಗಿವೆ. ಅಂಥವುಗಳಲ್ಲಿ ಕೆಲವು ಪ್ರಮುಖ ಸಂಸ್ಥೆಗಳು ತಮ್ಮನ್ನು ತಾವು ಸಕ್ರೀಯವಾಗಿ ತೊಡಗಿಸಿಕೊಂಡಿವೆ. ಅವುಗಳು ದೃಶ್ಯಕಲೆಯ ರಚನಾತ್ಮಕ ಆಯಾಮವಾದ ಕಲಾ ಪ್ರಾತ್ಯಕ್ಷಿಕೆ, ಕಲಾ ಚಿಂತನಾಗೋಷ್ಠಿಗಳನ್ನು ನಡೆಸುವ ಮುಖಾಂತರ ಕಲೆಯ ಅಸ್ತಿತ್ವವನ್ನು ಅದರ ಜೀವಂತಿಕೆಯನ್ನು ಸಾಕ್ಷೀಕರಿಸುತ್ತವೆ. ಕಲೆಯ ನಿತ್ಯತ್ವದ ಕುರಿತಾಗಿ ಪ್ರಸರಣ ಮಾಧ್ಯಮದ ಸಾಧ್ಯತೆಗಳಾಗಿ ಕಾರ್ಯನಿರ್ವಹಿಸುತ್ತವೆ. ಅದೇರೀತಿ ಸ್ಮರಣಸಂಚಿಕೆಗಳು ಆಧುನಿಕವಾಗಿ ಸಮಕಾಲೀನ ಸಂದರ್ಭವನ್ನು ಒಳಗೊಳ್ಳುವಂತೆ ಕಲೆಯನ್ನು ಪರೋಕ್ಷವಾಗಿ ಪ್ರೇರೆಪಿಸುತ್ತವೆ. ತನ್ನ ವಿಮರ್ಶಾ ಕ್ರಿಯೆಯಿಂದ ಕಲಾವಿದ ಮತ್ತು ಕಲೆಗಳನ್ನು ಕಾಲದ ಜೊತೆ ಜೊತೆಗೆ ಸಾಗುವಂತೆ ಮಾಡುವಲ್ಲಿ ಒಂದು ಮಟ್ಟದ ಪೂರಕ ಅಂಶವಾಗಿ ಇಂದು ರೂಪತಳೆದಿವೆ. ವಿವಿಧ ಕಲಾ ಶಾಲೆಗಳು, ಕಲಾಸಂಸ್ಥೆಗಳು ತಮ್ಮ ಸಂಸ್ಥೆಯ ವಿಶೇಷ ಸಂದರ್ಭಲ್ಲಿ ವಾರ್ಷಿಕ ಸಮ್ಮೇಳನಗಳಲ್ಲಿ ಸಂದರ್ಭದ ಸ್ಮರಣೆಯ ಕುರುಹಾಗಿ ಸ್ಮರಣಸಂಚಿಕೆಗಳನ್ನು ತರುತ್ತಾರೆ.

ಹಾಗೆ ತಂದ ಸಂಸ್ಥೆಗಳಲ್ಲಿ ಕೆಲವೊಂದು ಮಾತ್ರ ದಶಕದ ಅವಧಿಯಲ್ಲಿ ಪ್ರಾತಿನಿಧಿಕವಾಗುತ್ತವೆ ಎನ್ನಬಹುದು.

ಕರ್ನಾಟಕದ ಕೆಲವು ಕಲಾ ಶಾಲೆಗಳಲ್ಲಿ ಮೈಸೂರು ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ, ವಿಜಯಕಲಾ ಮಂದಿರ ಗದಗ, ಬಳ್ಳಾರಿ ಚಿತ್ರಕಲಾ ಶಿಕ್ಷಕರ ಸಂಘಗಳು ಮುಂತಾದವುಗಳು ಸ್ಮರಣಸಂಚಿಕೆಗಳನ್ನು ಹೊರತಂದಿವೆ.

ಕಳೆದ ದಶಕದಲ್ಲಿ ರೂಪಕಲ್ಪ, ಸುವರ್ಣ ವಿಜಯ, ಬಿಸಿಲು ಬೆಳದಿಂಗಳು (ಗುಲಬರ್ಗ ವಿಭಾಗ ಮಟ್ಟದ ಸಮ್ಮೇಳನ ಸಂದರ್ಭದಲ್ಲಿ ಬಳ್ಳಾರಿ ಚಿತ್ರಕಲಾ ಶಿಕ್ಷಕರ ಸಂಸ್ಥೆಗಳು) ಪ್ರಮುಖ ಸ್ಮರಣ ಸಂಚಿಕೆಗಳಾಗಿವೆ.

ಕರ್ನಾಟಕದ ಸುಮಾರು ಕಲಾಸಂಸ್ಥೆಗಳು ಸ್ಮರಣ ಸಂಚಿಕೆಯನ್ನು ತರುವಲ್ಲಿ ಹಿಂಜರಿದಿವೆ ಎನ್ನಬಹುದು. ಇಚ್ಛಾಶಕ್ತಿಯ ಕೊರತೆಯಿಂದಲೋ ಬರಹಗಾರರ ಕೊರತೆಯೋ ಎಂಬ ಪ್ರಶ್ನೆ ನಮ್ಮೆದುರು ಇಂದು ಬಂದು ನಿಲ್ಲುತ್ತದೆ. ಈ ಪ್ರಶ್ನೆಗೆ ಸಂಘಟನೆಯ ಕೊರತೆಯೇ ಮೂಲ ಕಾರಣವಾಗಿ ಗುರ್ತಿಸಿಲು ಸಾಕಷ್ಟು ಮಾರ್ಗಗಳಿವೆ. ಅನೇಕ ಜನ ಕಲಾ ಬರಹಗಾರರಿದ್ದಾಗಲೂ ಬರಹಗಾರರ ಲೇಖನಗಳನ್ನು ಸಂಗ್ರಹಿಸಿ, ಸಂಪಾದಿಸಿ ಒಂದೆಡೆ ಹಾಕುವ ಇಚ್ಛೆಯಾಗಲೀ ಕಾಳಜಿಯಾಗಲಿ ಕಂಡು ಬರದೆ ಬಹುತೇಕ ಸಂಸ್ಥೆಗಳು ಬಹಳ ಉದಾಸೀನ ನಿಲುವನ್ನು ವ್ಯಕ್ತ ಪಡಿಸುವುದು ಇಂದಿನ ವೇಳೆಗೆ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಆಯ್ದ ಕೆಲವು ಕೃತಿಗಳು ನಮ್ಮೆದುರು ಪ್ರಾಮುಖವಾಗುತ್ತವೆ.

ರೂಪಕಲ್ಪ ಸಂಚಿಕೆ ೨೦೦೯ ರಲ್ಲಿ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ ಮೈಸೂರಿನಿಂದ ಪ್ರಕಟವಾಗಿದ್ದು, ಡಿ.ಎ.ಉಪಾಧ್ಯಾಯ ಅವರ ಸಂಪಾದಕತ್ವದಲ್ಲಿ ಹೊರಬಂದ ಸ್ಮರಣಸಂಚಿಕೆಯಾಗಿದೆ. ಇದರಲ್ಲಿ ಉಪಾಧ್ಯಾಯ ಅವರ "ಮಾನವೇತರ ಜೀವಿಗಳ ಕಲೆ", ಲಕ್ಷ್ಮಣಸಿಂಗ್.ಆರ್.ರಾಥೋಡ್‌ರ "ಅನ್ವಯಿಕ ಕಲೆ" ಗಳನ್ನೊಳಗೊಂಡಂತೆ ಸಂಸ್ಥೆಯ ಪ್ರಥಮ ಹಾಗೂ ದ್ವಿತಿಯ ಕಲೆಯ ಮೂಲ ಮತ್ತು ಪದವಿ ವಿದ್ಯಾರ್ಥಿಗಳಿಂದ ಬರೆಯಲಾದ ಲೇಖನಗಳು, ಕವಿತೆಗಳು ಪ್ರಕಟವಾಗಿವೆ. ಸ್ಮರಣಸಂಚಿಕೆ ರಚನೆಯಲ್ಲಿ ಯುವಪ್ರತಿಭೆಗಳಿಗೆ ಒಂದು ರೀತಿಯಲ್ಲಿ ಪ್ರೋತ್ಸಾಹಿಸಿ ಅವಕಾಶಗಳನ್ನು ಕಲ್ಪಿಸಿಕೊಟ್ಟು ಹೊಸ ಪ್ರಯೋಗವನ್ನು ಮಾಡಿದ ಅಂಶವು ಗಮನಾರ್ಹವಾಗಿದೆ. ಕೇವಲ ಕಲೆಯಷ್ಟೇ ಅಲ್ಲದೆ ವಿವಿಧ ವಿಷಯಗಳ ಕುರಿತಾದ ಲೇಖನಗಳು ಸಾಹಿತ್ಯಾಸಕ್ತರ ಕವಿತೆಗಳು, ಅದರಲ್ಲಿ ಮೂಡಿ ಬಂದಿರುವುದು ಕಲಾ ಸಂಸ್ಥೆಗಳ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ. ಅದೇ ರೀತಿ ರಾಜ್ಯದ ವಿವಿಧ ಭಾಗಗಳ ಸಂಸ್ಥೆಗಳಿಂದ ಪ್ರಕಟವಾದ ಸಂಚಿಕೆಗಳಲ್ಲಿ ಗದಗದ ವಿಜಯ ಕಲಾ ಮಂದಿರದ ವಜ್ರಮಹೋತ್ಸವ ಸಮೀತಿಯಿಂದ ೨೦೦೭-೦೮ನೇ ಸಾಲಿನ ಸ್ಮರಣ ಸಂಚಿಕೆ ವಜ್ರ ವಿಜಯ ಅನೇಕ ವಿದ್ವಾಂಸರಿಂದ ಬಹು ಮೌಲ್ಯಯುತ ಲೇಖನಗಳನ್ನು ಒಳಗೊಂಡಿದೆ. ಇದರಲ್ಲಿ, ಕಲಾಗುರುದೇವ, ಶ್ರೀ ಟಿ.ಪಿಅಕ್ಕಿಯವರು- ಡಾ.ಬಿ.ಕೆ.ಹಿರೇಮಠ, ಮಾನಸಿಕ ದೂರ- ಡಾ.ಎಸ್.ಸಿ.ಪಾಟೀಲ, ಗದುಗಿನ

ಕಲಾ ಮಂದಿರದ ವಿಜಯ–ಶ್ರೀ ಸುರೇಶ ಕುಲ, ಭಾರತೀಯ ಚಿತ್ರಕಲೆ– ಒಂದು ಜಿಜ್ಞಾಸೆ– ಮಹಾದೇವ ಕವಿಶೆಟ್ಟ, ಸಮಕಾಲೀನ ದೃಶ್ಯಕಲೆ– ಮೈವಳಿಕೆ–ಡಾ. ಶಿವಾನಂದ ಬಂಟನೂರ, ಸಾಂಪ್ರದಾಯಿಕ ಭಿತ್ತಿ ಚಿತ್ರಕಲೆ– ಡಾ.ಯಾದಪ್ಪ.ಪರದೇಶಿ, ರೇಖಾ ಚಿತ್ರಕಲೆ– ಡಾ.ಮೋಹನರಾವ್.ಬಿ.ಪಂಚಾಳ ಮುಂತಾದವರು ಬರೆದ ಲೇಖನಗಳು ಪ್ರಮುಖವಾಗಿದ್ದು ಅನೇಕ ಹೊಸ ಹೊಸ ವಿಷಯಗಳ ಕುರಿತಾಗಿ ಮೂಡಿಬಂದಿವೆ. ಸಾಂಸ್ಥಿಕ ನೆಲೆಯಲ್ಲಿ ರೂಪಿತವಾಗುವ ಚಿಕ್ಕ ಚಿಕ್ಕ ಕೃತಿಗಳಾದರೂ ಅವುಗಳಲ್ಲಿಯೇ ಪ್ರಾದೇಶಿಕ ಕಲೆಯಿಂದ ಹಿಡಿದು ವಿಶ್ವಮಟ್ಟದವರೆಗೂ ವಿಷಯಗಳನ್ನು ಒಳಗೊಳ್ಳುವಲ್ಲಿ ಇಂತಹ ಕೃತಿಗಳು ಮಹತ್ವ ಪಡೆಯುತ್ತವೆ. ಅಂತೆಯೇ ಸ್ಮರಣ ಸಂಚಿಕೆಯೂ ಕೂಡಾ ಬರವಣಿಗೆ ಕ್ಷೇತ್ರಕ್ಕೆ ತನ್ನ ವ್ಯಾಪ್ತಿಯಲ್ಲಿ ಚಿಕ್ಕದಾದರೂ ಚೊಕ್ಕದಾಗಿ ವಿಸ್ತರಿಸಿಕೊಂಡಿದೆ.

ಬಿಸಿಲು ಬೆಳದಿಂಗಳು ಸ್ಮರಣಸಂಚಿಕೆ ೨೦೧೪ ರಲ್ಲಿ ಬಳ್ಳಾರಿ ಚಿತ್ರಕಲಾ ಸಂಘದವತಿಯಿಂದ ವಿಭಾಗಮಟ್ಟದ ಶೈಕ್ಷಣಿಕ ಮಹಾಸಮ್ಮೇಳನದ ಸಂದರ್ಭಕ್ಕೆ ಪ್ರಕಟಗೊಂಡಿದೆ. ಉದಯೋನ್ಮುಖ ಬರಹಗಾರರಿಂದ ರಚಿತವಾದ ಲೇಖನಗಳು ಈ ಸ್ಮರಣ ಸಂಚಿಕೆಯಲ್ಲಿ ಮೂಡಿ ಬಂದಿವೆ. ಡಾ.ಎಸ್.ಸಿ.ಪಾಟೀಲರ ವಿಜಯನಗರ ಚಿತ್ರಕಲೆಯು ಪರಂಪರೆ ಮತ್ತು ಲಕ್ಷಣಗಳು, ಡಾ.ಕೃಷ್ಣವೇಣಿಯವರ ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಜನಪದೀಯ ಅಂಶಗಳು, ಡಾ. ಮೋಹನರಾವ್.ಬಿ.ಪಾಂಚಾಳರ ತೊಗಲುಗೊಂಬೆಯಾಟ, ಒಂದು ಜನಪ್ರೀಯ ಕಲಾ ಪ್ರಕಾರಗಳು ಸಾಂಪ್ರದಾಯಿಕ ಹಾಗೂ ಜನಪದ ಚಿತ್ರಕಲೆಯ ಕುರಿತಾಗಿ ರಚಿತವಾದ ಲೇಖನಗಳಾಗಿವೆ. ಜಾಹಿರಾತುಗಳಲ್ಲಿ ಚಿತ್ರಕಲೆಯ ಮಹತ್ವ ಕಂಪ್ಯೂಟರ್ ಚಿತ್ರಕಲೆ ಕಲೆಗಳಲ್ಲಿ ತಂತ್ರಜ್ಞಾನದ ಪ್ರಯೋಜನ, ಮುಂತಾದ ಲೇಖನಗಳು ಆಧುನಿಕ ಕಲೆಯ ಕುರಿತಾಗಿ ಮಾಹಿತಿ ಒದಗಿಸುವವುಗಳಾಗಿವೆ. ಇನ್ನು ಅನೇಕ ಲೇಖನಗಳು ವ್ಯಕ್ತಿಕೇಂದ್ರಿತ ಸಮಕಾಲೀನ ಕಲಾವಿದರ ಕುರಿತು ಹಾಗೂ ವಿ.ಟಿ. ಕಾಳೆಯವರ ಕುರಿತು ರಚಿತಗೊಂಡಿದ್ದು, ಒಟ್ಟಾರೆ ಚಾರಿತ್ರಿಕ ಹಿನ್ನೆಲೆಯಲ್ಲಿ ಕಲೆಯ ಕುರಿತಾಗಿ ಲೇಖನಗಳು ರೂಪಿತವಾಗಿವೆ ಎನ್ನಬಹುದು. ಸಮಕಾಲೀನ ಸಂದರ್ಭದಲ್ಲಿ ಇಂತಹ ಸಂಚಿಕೆಗಳು ವಿಭಾಗ ಹಾಗೂ ಸಂಕೀರ್ಣ ಪ್ರಾದೇಶಿಕ ಮಟ್ಟದಲ್ಲಿ ಕಲೆಯ ಜೀವಂತಿಕೆಯನ್ನು ತೋರಿಸುವಲ್ಲಿ ಮಹತ್ವದ ಗುರುತುಗಳಾಗಿವೆ ಎನ್ನಬಹುದು.

ಟಿಪ್ಪಣಿಗಳು :

೧. ಡಾ. ಗೋವಿಂದರಾಜು (ಸಂ) : ಚಿತ್ತಾರದ ಗೊಂಬೆ – ಪು.ಸಂ.–೧೨

೨. ಉಪಾಧ್ಯಾಯ ಮೂಡುಬೆಳ್ಳೆ : ನಾಗಾರಾಧನೆ ಮತ್ತು ಚಿತ್ರಕಲೆ ಪು.ಸಂ.–೪

೩. ದೇವರಕೊಂಡಾರೆಡ್ಡಿ : ಗಂಗರ ಶಿಲ್ಪಕಲೆ ಪು.ಸಂ.–೩೩

• ಸಂಪಾದನ ದೃಶ್ಯಕಲಾ ಸಾಹಿತ್ಯಕೃತಿಗಳು



• ಸಂಪಾದನ ದೃಶ್ಯಕಲಾ ಸಾಹಿತ್ಯಕೃತಿಗಳು



- ಅಭಿನಂದನಾ ಸಂಪಾದನ ದೃಶ್ಯಕಲಾ ಸಾಹಿತ್ಯಾಕೃತಿಗಳು,ಸ್ಮರಣ ಸಂಚಿಕೆಗಳು



ಅಧ್ಯಾಯ – ನಾಲ್ಕು

ವ್ಯಕ್ತಿಕೇಂದ್ರಿತ ದೃಶ್ಯಕಲಾ ಸಾಹಿತ್ಯ

ಅಧ್ಯಾಯ – ನಾಲ್ಕು

ವ್ಯಕ್ತಿಕೇಂದ್ರಿತ ದೃಶ್ಯಕಲಾ ಸಾಹಿತ್ಯ

ಕಲಾಸಾಹಿತ್ಯದಲ್ಲಿ ಬಹುಪಾಲು ಕಲಾವಿದಕೇಂದ್ರಿತ ಸಾಹಿತ್ಯದ್ದು ಸಿಂಹಪಾಲು. ಕಲಾಕೃತಿಯನ್ನು ನೋಡಿ ಅರ್ಥೈಸಿಕೊಂಡು ವಿಮರ್ಶಿಸುವುದರ ಜೊತೆಗೆ ಕಲೆಗೆ ಕಾರಣನಾದ ಕಲಾವಿದನ ಜೀವನವನ್ನು ಪರಾಮರ್ಶಿಸುವುದು ಪರೋಕ್ಷವಾಗಿ ಕಲೆಯ ವಿಮರ್ಶೆಯೇ ಆಗುತ್ತದೆ. ಇದರಿಂದ ಕಲಾಕೃತಿಯನ್ನು ಇನ್ನಷ್ಟು ಗಾಢವಾಗಿ ತಿಳಿದುಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿಯೇ ಕಲಾಕ್ಷೇತ್ರದಲ್ಲಿ ಕಲಾವಿದ ಕೇಂದ್ರಿತ ಸಾಹಿತ್ಯ ಹೇರಳವಾಗಿದೆ. ಕಲಾವಿದನ ಕುರಿತಾದ ಅಧ್ಯಯನವು ಕಲಾಕೃತಿ, ಕಲಾವಿದ, ಸಹೃದಯ ಈ ಮೂರು ಅಂಶಗಳನ್ನು ಒಳಗೊಂಡಿದ್ದು, ಅವುಗಳ ಪರಸ್ಪರ ಸಂಬಂಧ ಹಾಗೂ ಅಂತರಗಳ ಸೂಕ್ಷ್ಮತೆಯನ್ನು ತಿಳಿಸಿಕೊಡುವುದು ತುಂಬಾ ಮಹತ್ವವೆನಿಸಿದೆ. ಕಲಾಕೃತಿಯ ಆಸ್ವಾದನೆಯೊಂದಿಗೆ ಸಂತೋಷಕ್ಕೆ ಕಾರಣನಾದ ಕಲಾವಿದನನ್ನ ಮರೆಯುವಂತಿಲ್ಲ. ಅದಕ್ಕಾಗಿಯೇ ಕಲಾವಿದರ ಜೀವನದ ಬಗ್ಗೆ ಕಳಕಳಿ ಇರುವ ಸಹೃದಯರು ಕಲಾವಿದನ ಕುರಿತಾಗಿಯೇ ಅತ್ಯಂತ ಬಹುವಾಗಿ ಸಾಹಿತ್ಯಕೃತಿಗಳನ್ನು ರಚಿಸಿದ್ದಾರೆ ಎನ್ನಬಹುದು.

ಕಲಾವಿದಕೇಂದ್ರಿತ ಸಾಹಿತ್ಯ ಕೃತಿಗಳು ಕೇವಲ ವ್ಯಕ್ತಿಯ ಬಗೆಗೆ ನೇರವಾಗಿ, ಸರಳವಾಗಿ ವಿವರಿಸುವ ಕೃತಿಗಳಾಗಿರದೆ ಅವು ವಿಮರ್ಶಾ ಕೃತಿಗಳೂ ಆಗಿವೆ. ವ್ಯಕ್ತಿಯ ಕಲಾಶ್ರೀಮಂತಿಕೆಗೆ ಕಾರಣವಾದ ಪರಿಸರ, ಅವನ ಜೀವನದ ಬಹುಮುಖ್ಯ ಘಟನೆಗಳು, ಅವನ ಮೇಲಾದ ಪ್ರಭಾವ ಪ್ರೇರಣೆಗಳು– ಹೀಗೆ ಇನ್ನೂ ಅನೇಕ ಅಂಶಗಳನ್ನು ಒಳಗೊಳ್ಳುತ್ತವೆ.

ಕನ್ನಡ ಕಲಾಸಾಹಿತ್ಯದಲ್ಲಿ ೭೦ ರಿಂದ ೯೦ ರ ದಶಕದಲ್ಲಿ ಹಲವಾರು ಕಲಾವಿದರ ಕುರಿತಾಗಿ ಸಾಹಿತ್ಯ ರಚನೆಗೊಂಡಿದೆ. ರಾಷ್ಟ್ರೀಯ–ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿವೆತ್ತ ಕಲಾವಿದರ ಬಗೆಗಿನ ಜೀವನವನ್ನ ಈ ವ್ಯಕ್ತಿಕೇಂದ್ರಿತ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಕನ್ನಡದಲ್ಲಿ ಮರಿಶಾಮಾಚಾರ್, ಬಿ.ಪಿ.ಬಾಯಿರಿ, ಅ.ಲ.ನರಸಿಂಹನ್, ಕೆ.ವಿ.ಸುಬ್ರಹ್ಮಣ್ಯಂ, ಕೆ.ಎಸ್. ಶ್ರೀನಿವಾಸಮೂರ್ತಿ

ಮುಂತಾದವರು ಪ್ರಮುಖ ಬರಹಗಾರರಾಗಿದ್ದು, ಅನೇಕ ಕಲಾವಿದರ ಕುರಿತಾಗಿ ತಮ್ಮ ಕೃತಿಗಳನ್ನು ರಚಿಸಿದ್ದಾರೆ.

ಮರಿಶಾಮಾಚಾರ್ ಅವರು ತಮ್ಮ ಸಾಹಿತ್ಯಕೃತಿಗಳಲ್ಲಿ ಕಲಾವಿದರಿಗಾಗಿಯೇ ಬಹುಪಾಲು ಸ್ಥಾನವನ್ನು ಮೀಸಲಾಗಿಸಿದ್ದಾರೆ. ಜಾಗತಿಕ ಖ್ಯಾತಿಯ ಕಲಾವಿದರೂ ಮತ್ತು ರಾಷ್ಟ್ರಖ್ಯಾತಿಯ ಕಲಾವಿದರು, ಮರಿಶಾಮಾಚಾರ್ ರವರ ಲೇಖನಿಯಲ್ಲಿ ಚಿತ್ರಿತಗೊಂಡಿದ್ದಾರೆ. ಮರಿಯವರ ಭಾರತೀಯ ದೃಶ್ಯಕಲಾವಿದರು, ಕೃತಿಯಲ್ಲಿ ಅವನೀಂದ್ರನಾಥ, ನಂದಲಾಲ್‌ಬೋಸ್, ಗಗನೇಂದ್ರನಾಥ, ಕ್ಷಿತೀಂದ್ರನಾಥ, ವೆಂಕಟಪ್ಪ, ಜಾಮಿನಿರಾಯ್, ಅಸೀತಕುಮಾರ್ ಅಲ್ದಾರ್, ಶೈಲಜ್ ಮುಖರ್ಜಿ, ರಾಮಕಿಂಕರ ಬೈಜ್, ಅಮೃತಾ ಶೇರಗಿಲ್, ಎನ್.ಎಸ್.ಬೇಂದ್ರೆ, ಕೆ.ಕೆ. ಹೆಬ್ಬಾರ್, ಫಣಿಕ್ಕರ್, ಕೆ.ಜಿ.ಸುಬ್ರಹ್ಮಣ್ಯನ್ ಮುಂತಾದ ಪ್ರಸಿದ್ಧ ಕಲಾವಿದರ ಕುರಿತಾದ ಲೇಖನಗಳನ್ನು ಕಾಣಬಹುದಾಗಿದೆ.

ಮರಿಶಾಮಾಚಾರ್‌ರು ೧೯೯೪ ರಲ್ಲಿಯ ರಾಜಾ ರವಿವರ್ಮ ಎಂಬ ಕೃತಿಯೂ ಕೂಡಾ ಒಂದು ಕಲಾವಿದ ಕೇಂದ್ರಿತ ಕೃತಿಯಾಗಿದ್ದು, ರಾಜಾರವಿವರ್ಮನ ಜೀವನ ಕುರಿತಾದ ಮಹತ್ವದ ಘಟನೆಗಳನ್ನು ಒಳಗೊಂಡಿದೆ. ಕಥನರೂಪದ ಬರವಣಿಗೆಯು ಮರಿಶಾಮಾಚಾರರ ವೈಶಿಷ್ಟ್ಯವಾಗಿದೆ. ಇದು ಓದುಗರಿಗೆ ನೇರವಾಗಿ ವಿಷಯ ತಲುಪಿಸುವಲ್ಲಿ ಪೂರಕವಾಗಿ, ರಮಣೀಯ ಭಾಷೆಯಿಂದ ವಾಸ್ತವಿಕ ಅಂಶವನ್ನು ಮರೆಮಾಚುವ ಸಂದರ್ಭಗಳನ್ನು ಹೊಂದಿದೆ.

ಬಿ.ಪಿ.ಬಾಯಿರಿಯವರ 'ಕಲೆಗಾರರ ಕಥೆಗಳು' ನವ್ಯಕಲೆ ಮತ್ತು ಕತೆಗಾರರೂ ಕೃತಿಗಳು ಕಲಾವಿದ ಕೇಂದ್ರಿತ ಕೃತಿಗಳಾಗಿವೆ. ಇದರಲ್ಲಿ ಪಾಶ್ಚಿಮಾತ್ಯ ಕಲಾವಿದರ ಜೀವನ ಸಾಧನೆಯನ್ನು ನೋಡಬಹುದಾಗಿದೆ. ೧೯೮೮ ರಲ್ಲಿ ಕು. ಶಿ. ಹರಿದಾಸ ಭಟ್ಟ ಅವರು ರಚಿಸಿದ ಕಟ್ಟಿಂಗೇರಿ, 'ಕೃಷ್ಣ ಹೆಬ್ಬಾರ್' ಕೃತಿ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನಕೇಂದ್ರ ಉಡುಪಿಯಿಂದ ಪ್ರಕಟಗೊಂಡಿದೆ. 'ರುಮಾಲೆ ಚನ್ನಬಸಪ್ಪ' ಎಂಬ ಕೃತಿಯು ೧೯೯೦ ರಲ್ಲಿ ಅಕಾಡೆಮಿಯಿಂದ ಪ್ರಕಟಗೊಂಡಿದೆ. ಕೆ.ಎಸ್.ಶ್ರೀನಿವಾಸಮೂರ್ತಿಯವರು ಇದನ್ನ ಬರೆದಿದ್ದಾರೆ. ೧೯೯೦ರಲ್ಲಿಯೇ ಬೆ.ಕಾ.ಮೂರ್ತಿಶ್ವರಯ್ಯ ಅವರು 'ಎ.ಸಿ.ಎಚ್.ಆಚಾರ್ಯ' ಎಂದು ಕಲಾವಿದರ ಕುರಿತಾಗಿ ಅದೇ ಶೀರ್ಷಿಕೆಯಿಂದ ಬರೆದಿದ್ದಾರೆ. ಇದು ಅಕಾಡೆಮಿಯಿಂದ ಪ್ರಕಟವಾಗಿದೆ. ೧೯೯೭ರಲ್ಲಿ 'ಎಸ್.ಎಸ್.ಕುಕ್ಕೆ' ಎಂಬ ಕೃತಿಯನ್ನು ವಿ.ಟಿ.ಎಸ್.ರಾವ್ ಅವರು ಬರೆದಿದ್ದಾರೆ.

'ವೈ ನಾಗರಾಜು' ಎಂಬ ಕೃತಿಯನ್ನು ೧೯೮೭ ರಲ್ಲಿ ಅ.ಲ.ನರಸಿಂಹನವರು ಬರೆದಿದ್ದಾರೆ. ೧೯೯೭ ರಲ್ಲಿ 'ಮಧುಗಿರಿ ರಾಮು' ಎಂಬ ಕೃತಿಯನ್ನು ಯ.ಎಸ್.ವೆಂಕಟರಾಮನ್ ಅವರು ರಚಿಸಿದ್ದಾರೆ. 'ಕಲಾಗುರು ದಂಡಾವತಿಮಠ' ಎಂಬ ಕೃತಿಯನ್ನು ಡಾ.ಬಿ.ಕೆಹಿರೇಮಠರು ರಚಿಸಿದ್ದಾರೆ, ೧೯೮೨ ರಲ್ಲಿ 'ಪಿಕಾಸೋ' ಎಂಬ ಕೃತಿಯನ್ನು ಸುರೇಶ ಕುಲಕರ್ಣಿಯವರು ಬರೆದಿದ್ದಾರೆ. ೧೯೯೧ ರಲ್ಲಿ 'ಸೃಜನಶೀಲ ಕಲಾವಿದರು' ಎನ್ನುವ ಕೃತಿಯನ್ನು ಗವೀಶ ಹಿರೇಮಠರು ರಚಿಸಿದ

ಪುಸ್ತಕವಾಗಿದೆ. ಈ ರೀತಿಯಲ್ಲಿ ಕಲಾವಿದ ಕೇಂದ್ರಿತವಾದ ಕೃತಿಗಳನ್ನು ಪ್ರಾನಿಧಿಕವಾಗಿ ಉಲ್ಲೇಖಿಸಬಹುದಾಗಿದೆ.

ಕಳೆದ ದಶಕದಲ್ಲಿ ಅನೇಕ ಕಲಾವಿದರನ್ನು ಕುರಿತಾಗಿ ಸಾಹಿತ್ಯ ಕೃತಿಗಳು ರಚನೆಯಾಗಿದ್ದು, ಬಹುತೇಕ ಕೃತಿಗಳು ಲಲಿತಕಲಾ ಅಕಾಡೆಮಿಯ ಪ್ರಕಟಣೆಗಳಾಗಿವೆ. ಚಿತ್ರಕಲೆ ಹಾಗೂ ಶಿಲ್ಪಕಲೆ ಕಲಾವಿದರ ಜೀವನವನ್ನ ಒಳಗೊಂಡ ಕೃತಿಗಳು ಕಲಾವಿದರ ಅಂತರಂಗವನ್ನು ತಕ್ಕಮಟ್ಟಿಗೆ ಅರಿತುಕೊಳ್ಳುವ ದಿಕ್ಕಿನಲ್ಲಿ ಮಾರ್ಗದರ್ಶಕವಾಗಿವೆ. ಕಲಾಕೃತಿಗಳಿಂದ ಕಲಾವಿದನ ಆಕಾಂಕ್ಷೆ, ಅಭಿವ್ಯಕ್ತಿ ನೆಲೆಗಳನ್ನು ತಿಳಿದುಕೊಳ್ಳುವ ಬಗೆಯು ಒಂದು ರೀತಿಯಲ್ಲಿ ಕಲೆಯ ಅಧ್ಯಯನವಾದಂತೆ ವ್ಯಕ್ತಿಯ ಜೀವನದ ಬಗೆಗಿನ ತಿಳಿವಳಿಕೆಯೂ ಕೂಡಾ ಕಲೆಯ ಅನ್ವೇಷಣೆಯಾಗಿದೆ. ಕಲಾಸಾಹಿತ್ಯದ ಮುಖಾಂತರ ವ್ಯಕ್ತಿಯಸಾಧನೆ ಜೀವನ ಹಾಗೂ ಕಲೆಯನ್ನು ತಿಳಿದುಕೊಳ್ಳಬಹುದು. ಕಲಾವಿದಕೇಂದ್ರಿತ ಸಾಹಿತ್ಯಕ್ಕೆ ಶಿಲ್ಪ ಹಾಗೂ ಲಲತಕಲಾ ಅಕಾಡೆಮಿಗಳ ಶ್ರಮ ಗಮನಾರ್ಹವಾಗಿದೆ. ಇವುಗಳ ಮುಖಾಂತರ ಬೆಳಕುಕಂಡ ಕೃತಿಗಳು, ಪರೋಕ್ಷವಾಗಿ ಕಲಾಬರಹಗಾರರನ್ನು ನಾಡಿನ ಜನತೆಗೆ ಪರಿಚಯಿಸಿದೆ. ಕಳೆದ ದಶಕದಲ್ಲಿ ಕೆ.ವಿ.ಸುಬ್ರಹ್ಮಣ್ಯಂ, ಎನ್.ಮರಿಶಾಮಾಚಾರ್, ಎಲ್.ಶಿವಲಿಂಗಪ್ಪ, ಎಸ್.ಎಂ.ಜಂಬುಕೇಶ್ವರ, ಡಾ.ಶಿವಾನಂದ ಬಂಟನೂರ, ಡಾ.ಎಸ್.ಸಿ. ಪಾಟೀಲ, ಸುರೇಶ. ಡಿ.ಹಾಲಭಾವಿ, ಎಸ್.ವೆಂಕಟೇಶ, ಬಿ.ಗಣೇಶ ಸೋಮಯಾಜಿ, ಡಾ.ಸಿದ್ಧಲಿಂಗಸ್ವಾಮಿ ಹಿರೇಮಠ, ಶಂಕರಪ್ಪ ಕುಂದಗೋಳ್ ಮುಂತಾದ ಕಲಾಬರಹಗಾರರು ವ್ಯಕ್ತಿಕೇಂದ್ರೀತ ಹಾಗೂ ಸಂಕೀರ್ಣ ಸಾಹಿತ್ಯದ ಕುರಿತಾದ ಕೃತಿಗಳನ್ನು ರಚಿಸಿದ್ದಾರೆ. ಈ ಎಲ್ಲ ಬರಹಗಾರರು ತಾವುಕಂಡ ಕಲಾವಿದರ ಬಗ್ಗೆ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಸಮಕಾಲಿನ ಹಾಗೂ ಸಮಕಾಲೀನವಲ್ಲದ ಕಲಾವಿದರ ಕುರಿತಾಗಿಯೂ ಬರಹಗಳನ್ನು ಮಾಡಿದ್ದಾರೆ. ಒಟ್ಟಾರೆ ದಶಕದ ಸಾಹಿತ್ಯದಲ್ಲಿ ಇತರ ಪ್ರಕಾರದ ಸಾಹಿತ್ಯಗಳಿಗೆ ಹೋಲಿಸುವುದಾದರೆ ಬಹುಪಾಲು ಕೃತಿಗಳು ಕಲಾವಿದ ಕೇಂದ್ರವಾಗಿ ರಚಿಸಲ್ಪಟ್ಟಿವೆ.

ಕಲಾವಿದರಾದ ಎಂ.ಬಿ.ಲೋಹಾರ್, ವಿ.ಬಿ.ಹಿರೇಗೌಡರ, ರಘೋತ್ತಮ ಪುಟ್ಟಿ, ಕೆ.ಕೇಶವಯ್ಯ, ಎಂ.ಆರ್.ಬಾಳಿಕಾಯಿ, ವಿ.ಜಿ.ಅಂದಾನಿ, ವಿ.ಟಿ.ಕಾಳೆ, ರಘೋತ್ತಮ ಕಾರಂತ, ಕೆ.ಕೆ.ಹೆಬ್ಬಾರ್, ಸುಭಾಷಣಿ ದೇವಿ, ಡಾ.ಬಿ.ಕೆ.ಹಿರೇಮಠ ಚಿತ್ರಕಲಾವಿದ ವಾಚೇದಮಠ ಮುಂತಾದ ಕಲಾವಿದರು ವಿವಿಧ ಬರಹಗಾರರ ಕೃತಿಗಳಲ್ಲಿ ಚಿತ್ರಿಸಲ್ಪಟ್ಟಿದ್ದಾರೆ.

ಡಾ.ಎಸ್.ಎಂ.ಪಂಡಿತ್ ಎಂಬ ಕೃತಿಯು, ಡಾ.ಮೋಹನರಾವ್ ಪಂಚಾಳ ಅವರಿಂದ ರಚಿತವಾದ ಹಂಪಿ ಕನ್ನಡ ವಿಶ್ವವಿದ್ಯಾಲಯದ (ಪ್ರಸಾರಾಂಗ) ದಿಂದ ೨೦೧೦ ರಲ್ಲಿ ಪ್ರಕಟವಾಗಿದೆ.

ಎಂ. ವೀರಪ್ಪ ಎನ್ನುವ ಕೃತಿಯು ಎಲ್ ಶಿವಲಿಂಗಪ್ಪ ಅವರ ರಚನೆಯಾಗಿದ್ದು ೨೦೧೪ ರಲ್ಲಿ ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರ ಇವರ ಪ್ರಕಾಶನಲ್ಲಿ ಹೊರಬಂದಿದೆ. **ರಘೋತ್ತಮ ಪುಟ್ಟಿ** ಎಸ್.ವೆಂಕಟೇಶ ಆರ್. ಕೇಶವಯ್ಯ, ಸುರೇಶ ಹಾಲಭಾವಿಯವರಿಂದ ರಚಿತವಾಗಿದೆ. ಎಂ. ಆರ್.

ಬಾಳಿಕಾಯಿ, ಬಿ.ಗಣೇಶ ಸೋಮಯಾಜಿಯವರ **ಪುರುಷೋತ್ತಮ ಕಾರಂತ,** ಶಂಕರಪ್ಪ ಕುಂದಗೋಳ್‌ರ **ವಾಚೇದಮಠ,** ಡಾ. ಶಿವಾನಂದ ಬಂಟನೂರರ **ವಿ.ಜಿ.ಅಂದಾನಿ,** ಡಾ.ಎಸ್.ಸಿ.ಪಾಟೀಲರ **ವಿ.ಟಿ.ಕಾಳೆ,** ಮರಿಶಾಮಾಚಾರರ **ಕೆ.ಕೆ.ಹೆಬ್ಬಾರ್,** ಕೆ.ವಿ.ಸುಬ್ರಹ್ಮಣ್ಯಂರವರ **ವೆಂಕಟಾಚಲಪತಿ** ಮುಂತಾದ ಕೃತಿಗಳು ವ್ಯಕ್ತಿಕೇಂದ್ರೀತವಾಗಿ ರಚಿತಗೊಂಡಂಥವುಗಳಾಗಿವೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ೨೦೦೪ ರಲ್ಲಿ ಪ್ರಕಟಣೆಗೊಂಡ ಸಿ.ಪಿ.ರಾಜಾರಾಂ ಕೃತಿ ಕೆ.ವಿ.ಸುಬ್ರಹ್ಮಣ್ಯಂರವರ ರಚನೆಯಾಗಿದೆ. ಗಾತ್ರದಲ್ಲಿ ತೀರಾ ಚಿಕ್ಕ ಪುಸ್ತಕವಾಗಿದ್ದು, ಕೆಲವೇ ಪುಟಗಳಲ್ಲಿ ಸಿ.ಪಿ.ರಾಜಾರಾಂ ಅವರ ಜೀವನವನ್ನು ಕಂಡರಿಸುವ ಪ್ರಯತ್ನ ಮನೋಜ್ಞವಾಗಿದೆ. ಕೊಡಗಿನವರಾದ ಚಪ್ಪುಡಿರ ಪೊನ್ನಪ್ಪ ರಾಜಾರಾಂ ಅವರು ಒಬ್ಬ ಮಿಲಿಟರಿ ಅಧಿಕಾರಿಗಳಾಗಿದ್ದು ಕೂಡಾ ಶಿಲ್ಪಕಲೆಯನ್ನೇ ರೂಢಿಸಿಕೊಂಡ ಸಂಗತಿಗಳನ್ನು ಕೆ.ವಿ.ಸುಬ್ರಹ್ಮಣ್ಯಂ ಅವರು ಕೆಲವೇ ಪುಟಗಳಲ್ಲಿ ಬರೆದರೂ ಪ್ರಭಾವಿಯಾಗಿ ಕಲಾವಿದರ ಜೀವನ ಸಾಧನೆಗಳನ್ನು ಚಿತ್ರಿಸಿದ್ದಾರೆ. ಭಾಷೆಯ ದೃಷ್ಟಿಯಿಂದ ಉತ್ತಮವಾದ ಕೃತಿಯಾಗಿದ್ದು ಮೌಲಿಕವಾಗಿದೆ. ಸುಂದರ ಮುಖಪುಟ ವಿನ್ಯಾಸದಿಂದ ಕೂಡಿದ ಕೃತಿ ಸಿ.ಪಿ.ರಾಜಾರಾಂ ಅವರ ಭಾವಚಿತ್ರ ಹಾಗೂ ಅವರ ಕೆಲವು ಶಿಲ್ಪಕೃತಿಗಳ ಭಾವಚಿತ್ರಗಳನ್ನು ಒಳಗೊಂಡ ಕೃತಿಯಾಗಿದೆ. ಈವರೆಗೂ ಅಜ್ಞಾತಸಾಧಕನ ಪರಿಚಯವನ್ನು ಮಾಡಿಕೊಡುವಲ್ಲಿ ಕೃತಿ ಉಪಯುಕ್ತವಾಗಿದೆ. ಸೃಜನಶೀಲವಾಗಿ ರೂಪಗೊಂಡ ಕೃತಿ ಓದುಗನಿಗೆ ಒಂದುರೀತಿಯ ಮುದನೀಡುವಂತೆ ಬರಹ ರೂಪತಳೆದಿದೆ. ವಿಷಯವನ್ನು ಓದುಗನಿಗೆ ತಲುಪಿಸುವಲ್ಲಿ ಸಾಫಲ್ಯ ಪಡದಿದೆ.

"ರಘೋತ್ತಮ ಪುಟ್ಟಿ" ಈ ಕೃತಿಯು ದಿಲೀಪಕುಮಾರ ಕಾಳೆವರು ರಚಿಸಿದಾರೆ. ೨೦೦೪ ರಲ್ಲಿ ಲಲಿತಕಲಾ ಅಕಾಡೆಮಿಯಿಂದ ಪ್ರಕಾಶನ ಕಂಡಿದೆ. ತುಂಬಾ ಸರಳವಾದ ಆಡು ಮಾತಿನಂತೆಯೇ ರಚಿತವಾದ ಕೃತಿಯಲ್ಲಿ ಕಲಾವಿದನ ಚರಿತ್ರೆಯನ್ನು ಸರಳವಾಗಿ ಚಿತ್ರಿಸಲಾಗಿದೆ. ಲೇಖಕರು ತೀರಾ ಸಾಮಾನ್ಯ ಓದುಗನಿಗೆ ಸರಳವಾಗಿ ಅರ್ಥವಾಗುವ ರೀತಿಯಲ್ಲಿ ನಿರೂಪಣೆ ಮಾಡಿದ್ದಾರೆ. ರಘೋತ್ತಮ ಪುಟ್ಟಿ ಅವರ ಜೀವನ ಸಾಧನೆಯನ್ನು ನೇರವಾಗಿಯೇ ಕಂಡರಿಸುವ ಕೃತಿಯು ಅವರು ರಚಿಸಿದ ನಿಸರ್ಗ ಚಿತ್ರಣಗಳ ಭಾವಚಿತ್ರಗಳನ್ನು ಒಳಗೊಂಡಿದೆ. ಕಲಾವಿದರ ಕುರಿತಾಗಿ ಮಾಹಿತಿಯನ್ನ ಓದುಗನಿಗೆ ತಲುಪಿಸುವ ಒಂದು ಮಟ್ಟದ ಸಾಮರ್ಥ್ಯ ಇದಕ್ಕಿದೆ ಎನ್ನಬಹುದು. ಇಂಗ್ಲೀಷನ ಅನುವಾದವನ್ನು ಕೃತಿ ಒಳಗೊಂಡಿರುವುದರಿಂದ ಕೃತಿಯನ್ನು ಓದುವವರ ಸಂಖ್ಯೆ ಹೆಚ್ಚಬಹುದಾಗಿದೆ.

'ಕೆ. ಕೇಶವಯ್ಯ' ಕೃತಿಯು ೨೦೦೪ ರಲ್ಲಿ ಅಕಾಡೆಮಿಯಿಂದ ಪ್ರಕಟಣೆಗೊಂಡಿದೆ. ಎಸ್. ವೆಂಕಟೇಶ ಅವರು ಕೃತಿಯ ಕತೃಗಳಾಗಿದ್ದು ಮೂಲತಃ ಇತಿಹಾಸದ ವಿದ್ಯಾರ್ಥಿಯಾಗಿದ್ದಾರೆ. ಕಲೆಯ ಬಗ್ಗೆ ಆಸಕ್ತಿಯನ್ನುವುಳ್ಳವರಾಗಿದ್ದಾರೆ. ವಿಶೇಷವಾಗಿ ಭಿತ್ತಿಚಿತ್ರ ಕಲೆಯನ್ನು ಅಧ್ಯಯನ ಮಾಡಿದ ಎಸ್.ವೆಂಕಟೇಶ ಅವರು ಚಿತ್ರಕಲೆಯ ಕುರಿತಾಗಿ ಅನೇಕ ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ

ಕೆ.ಕೇಶವಯ್ಯ ಕೃತಿಯು ಮೈಸೂರ ಸಂಸ್ಥಾನದಲ್ಲಿದ್ದ ಕೇಶವಯ್ಯನನ್ನು ಆಧರಿಸಿದೆ. ಕಲಾವಿದ ಕೇಶವಯ್ಯ ರಚಿಸಿದ ಚಿತ್ರಗಳು ಅರಮನೆಗೆ ಸಂಬಂಧಿಸಿದ್ದಾಗಿದ್ದು, ನೈಜಚಿತ್ರಕಲೆಗೆ ಹೆಚ್ಚು ಒತ್ತುಕೊಟ್ಟು ರಚಿಸಿದ ಅಂಶವನ್ನು ಲೇಖಕರು ವಿಶೇಷವಾಗಿ ಗಮನಿಸಿದ್ದಾರೆ. ಕಲಾವಿದ ರಚಿಸಿದ ಭಾವಚಿತ್ರಗಳಲ್ಲಿ ಮುಖಭಾವಕ್ಕೆ ಹೆಚ್ಚು ಸಂಯಮದಿಂದ ಆಸಕ್ತಿವಹಿಸಿ, ಉಜ್ವಲವಾದ ಬೆಳಕನ್ನು ಮುಖಕ್ಕೆ ನೀಡಿ, ಹಿನ್ನೆಲೆಯಲ್ಲಿ ನೆರಳು–ಬೆಳಕುಗಳನ್ನು ಸಂಯೋಜಿಸುವಲ್ಲಿ ಸಿದ್ಧಹಸ್ತರು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೇಶವಯ್ಯ ತಮ್ಮ ಕೃತಿಗಳಲ್ಲಿ ನೆರಳು–ಬೆಳಕು ಮೈವಳಿಕೆ; ಒನ್ನೆಲೆ, ಮುನ್ನೆಲೆ ಇತ್ಯಾದಿಗಳನ್ನು ಸೂಕ್ಷ್ಮವಾಗಿ ಗಮನಿಸಿ ದುಡಿಸಿಕೊಂಡಿರುವಂತೆಯೇ ಏಕತಾನತೆಯನ್ನು ಕೈ ಬಿಟ್ಟಿಲ್ಲ ಎಂದು ಲೇಖಕರು ತಿರ್ಮಾನಿಸಿ ತಮ್ಮ ಬರಹದ ಮೂಲಕ ತೋರ್ಪಡಿಸಿದ್ದಾರೆ. ಮೈಸೂರು ಸಂಸ್ಥಾನದ ಬಹುತೇಕ ಕಲಾಕೃತಿಗಳು ಕೇಶವಯ್ಯನವರ ರಚನೆಗಳಾಗಿವೆ. ನಾಲ್ವಡಿ ಕೃಷ್ಣರಾಜ ಒಡೆಯರರವರ ತೈಲವರ್ಣ, ಕೆಂಪನಂಜಮ್ಮಣ್ಣಿಯವರ ಕೃತಿ, ಆಲಮೇಲಮ್ಮ, ಮೀನಾಕ್ಷಮ್ಮ ಮುಂತಾದವು ಭಾವಚಿತ್ರಗಳಾಗಿವೆ. ದಸರಾದರ್ಬಾರಿಗೆ ಸಂಬಂಧಿಸಿದ ಚಿತ್ರಗಳೂ ಪ್ರಾಮುಖ್ಯವಾಗಿವೆ ಎಂದು ಚಿತ್ರಸಮೇತ (ಫೋಟೋ) ವಾಗಿ ಲೇಖಕರು ಕೃತಿಯಲ್ಲಿ ವಿಷಯ ಸಂಬಂಧಿಯಾಗಿ ಪ್ರಕಟಿಸಿದ್ದಾರೆ.

ಕೃತಿಯಲ್ಲಿ ಮೈಸೂರ ಸಂಸ್ಥಾನದಲ್ಲಿ ಕಲಾವಿದ ಚಿತ್ರಿಸಿದ ಕೃತಿಯನ್ನ ಪ್ರಕಟಿಸಿರುವುದು ಕೃತಿಯ ಮೌಲ್ಯವನ್ನ ಹೆಚ್ಚಿಸಿದೆ. ಭಾಷೆಯ ದೃಷ್ಟಿಯಿಂದ ಉತ್ತಮ ಕೃತಿಯಾಗಿದ್ದು, ಒಬ್ಬ ನೈಜ ಚಿತ್ರಕಲಾವಿದನು ಆಧುನಿಕ ಪರಿಸರದಲ್ಲಿ ಮರೆತುಹೋಗುವ ಸಂದರ್ಭಕ್ಕೆ ಮತ್ತೆ ನೆನಪಿಸುವ ಪ್ರಯತ್ನ ಈ ಕೃತಿಯ ಮೂಲಕ ಆಗಿದೆ ಎನ್ನಬಹುದು. ಕೃತಿಯಲ್ಲಿ ನಮ್ಮ ಕಲೆ ಹಾಗೂ ಚರಿತ್ರೆಯ ಪರಂಪರೆಯಲ್ಲಿ ಖ್ಯಾತಿವೆತ್ತ ಒಬ್ಬ ಮಹಾನ್ ಕಲಾವಿದನನ್ನು ಮತ್ತೆ ಸಮಕಾಲೀನದಲ್ಲಿ ನೆನದುಕೊಳ್ಳುವಲ್ಲಿ ಕೃತಿಕಾರನ ಧನ್ಯತಾಭಾವ ಅಡಕವಾಗಿದೆ.

ಸುರೇಶ.ಡಿ.ಹಾಲಭಾವಿಯಿಂದ ಕೃತಿ **'ಎಂ.ಆರ್.ಬಾಳಿಕಾಯಿ'** ಅಕಾಡೆಮಿಯಿಂದ ೨೦೦೪ ರಲ್ಲಿ ಪ್ರಕಟಗೊಂಡಿದೆ. ಬಾಳಿಕಾಯಿಯವರ ಕುರಿತಾದ ಕೃತಿ ಕಲಾವಿದನ ಜೀವನ ಸಾಧನೆಗಳನ್ನು ಸಂಕ್ಷಿಪ್ತವಾಗಿ ಕಂಡರಿಸಿದೆ. ಅವರ ವೃತ್ತಿಜೀವನ, ಬಾಲ್ಯಜೀವನ, ಕಲಾಕೃತಿಗಳ ಕುರಿತಾಗಿ ಸರಳವಾಗಿ ವಿವರಿಸಲಾಗಿದೆ. ಬಾಳಿಕಾಯಿಯವರ ಕಲಾಕೃತಿಗಳು ಹಾಗೂ ಅವರು ನೀಡಿದ ಪ್ರಾತ್ಯಕ್ಷಿಕೆಗಳ ಕುರಿತಾಗಿ ಫೋಟೋಗಳನ್ನು ಪ್ರಕಟಿಸಿರುವುದು ಕೃತಿಗೆ ಹೆಚ್ಚು ಮಹತ್ವ ಬರಲು ಕಾರಣವೆನ್ನಬಹುದು.

ವಿ.ಜಿ.ಅಂದಾನಿ ಕಲಾ ವಿಮರ್ಶಕರಾದ ಡಾ.ಶಿವಾನಂದ.ಬಂಟನೂರ ಅವರ ಕೃತಿಯಾಗಿದ್ದು, ೨೦೦೪ ರಲ್ಲಿ ಅಕಾಡೆಮಿಯಿಂದ ಪ್ರಕಟಗೊಂಡಿದೆ. ವಿ.ಜಿ.ಅಂದಾನಿಯವರ ಕುರಿತಾದ ಬರವಣಿಗೆಯಲ್ಲಿ ಕೃತಿಕಾರರು ಕಲಾವಿದನ ಜೀವನ ಸಾಧನೆಗಳ ಜೊತೆಗೆ, ಅವರ ಊರಿನ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಪರಿಸರವನ್ನು ಚಿತ್ರಿಸಿದ್ದಾರೆ. ಕೃತಿಯಲ್ಲಿ ತಲ್ಲೀನತೆ ಎಂಬ ಶಿರ್ಷಿಕೆಯಲ್ಲಿ ಅಂದಾನಿಯವರ ಕೆಲಸದ ಸಾಮರ್ಥ್ಯ ಗೋಚರಿಸುತ್ತದೆ. ಅವರ ತನ್ಮಯತೆಯೇ ಅವರ ಸಾಧನೆಗೆ

ಕಾರಣವೆಂಬುದಾಗಿ ಲೇಖಕರು ಅಭಿಪ್ರಾಯವನ್ನು ಓದುಗರೊಂದಿಗೆ ಹಂಚಿಕೊಂಡಿದ್ದಾರೆ. ಕಲಾಸೃಷ್ಟಿ ಎಂಬ ಶೀರ್ಷಿಕೆಯಲ್ಲಿ, ಅಂದಾನಿಯವರ ಭಾವತೀವ್ರತೆ ಕ್ರಿಯಾಶೀಲತೆಗಳನ್ನು ಕಂಡರಿಸುತ್ತಾ, ಅವರ ರಚನಾತ್ಮಕ ಕೆಲಸಗಳನ್ನು ವಾಸ್ತವಕ್ಕೆ ಪೂರಕವಾಗಿ ಹೇಳುವಲ್ಲಿ ಸಫಲವಾದ ಬರಹ ತುಂಬಾ ಸುಂದರವಾಗಿದೆ. ಸೃಜನಶೀಲ ಬರವಣಿಗೆಯಾದರೂ ನಿಜಸ್ಥಿತಿಯನ್ನು ಕಂಡರಿಸುವಲ್ಲಿ ಕೃತಿ ಪೂರ್ಣಗೊಂಡಿದೆ. ಉನ್ನತ ಮಟ್ಟದ ಬರವಣಿಗೆಯ ಮುಖಾಂತರವೇ ವ್ಯಕ್ತಿಕೇಂದ್ರಿತವಾಗಿ ಬರೆಯುವುದು ಸುಲಭದ ಮಾತಲ್ಲ, ಅಲ್ಲಲ್ಲಿ ರೂಪಕ, ಉಪಮೆಗಳ ಪ್ರಯೋಗ ಬರಹದ ವಿನ್ಯಾಸದಲ್ಲಿ ಕಾಣಬಹುದಾಗಿದೆ. ಒಂದು ಚಿಂತನೆಗೆ ಅವಕಾಶ ಮಾಡಿಕೊಡುವ ಸಾಮರ್ಥ್ಯವನ್ನು ಬರಹ ಒಳಗೊಂಡಿದೆ. "ಮೂಲ ಸೆಲೆ" ತಲೆಬರಹದ ಅಡಿಯಲ್ಲಿ ಅಂದಾನಿಯವರ ಜೀವನ ಸಂಬಂಧಿ ಸಂಗತಿಯನ್ನು ವಿವರಿಸುತ್ತಾ, ಅಂದಾನಿಯವರು ಭಾರತದ ಸ್ವಾತಂತ್ರ್ಯದ ವರ್ಷದಲ್ಲಿಯೇ (೧೯೪೭) ಜನಿಸಿದ ಅಂಶವನ್ನೇ, ಭಾರತದ ಸ್ವಾತಂತ್ರ್ಯಕ್ಕೆ ಎಷ್ಟುವರ್ಷ ಅಂದಾನಿಯವರಿಗೂ ಅಷ್ಟೇವರ್ಷ ಎಂಬ ಅನಿಸಿಕೆಯಲ್ಲೂ ಒಂದು ಬಗೆಯ ಕಾವ್ಯಸಾಮರ್ಥ್ಯ ಕಾಣಬಹುದಾಗಿದೆ. ಈ ರೀತಿಯ ವಿಚಾರಧಾರೆಗಳಿಂದ ವಿ.ಜಿ.ಅಂದಾನಿ ಕೃತಿಯು ಬಹುಮೌಲಿಕವಾಗಿದೆ. ಅಂದಾನಿಯವರ ಚಿತ್ರರಚನೆಯ ಫೋಟೋಗಳನ್ನು ಒಳಗೊಂಡು, ಇಂಗ್ಲೀಷಿನ ಅನುವಾದವನ್ನು ಒಳಗೊಂಡು ಉಪಯುಕ್ತವಾಗಿದೆ.

ಬಿ.ಗಣೇಶ ಸೋಮಯಾಜಿಯವರ **ಪುರುಷೋತ್ತಮ ಕಾರಂತ** ಕೃತಿಯು ಅಕಾಡೆಮಿಯಿಂದ ೨೦೦೪ರಲ್ಲಿ ಪ್ರಕಟಗೊಂಡಿದೆ. ಕೃತಿಕಾರರು ವಿಮರ್ಶೆಮಾಡುತ್ತಲೇ ಪುರುಷೋತ್ತಮ ಕಾರಂತರನ್ನು ಪ್ರವೇಶಿಸಿದ್ದಾರೆ. ತಮ್ಮ ಮನದಲ್ಲಿ ಹುಟ್ಟಿದ ಜಿಜ್ಞಾಸುಗಳನ್ನು ಕಾರಂತರ ಜೀವನ ಸಾಧನೆಯಲ್ಲಿ ಹುಡುಕಿದ್ದಾರೆ. ಒಂದರ್ಥದಲ್ಲಿ ತಮ್ಮ ಮನದಾಳದ ದ್ವಂದ್ವಗಳಿಗೆ ಎಲ್ಲೋ ಒಂದುಕಡೆ ಉತ್ತರ ಪಡೆಯುವ ಮತ್ತು ವಿಮರ್ಶೆಗೆ ಎಡೆಮಾಡಿಕೊಡುವ ದಿಶೆಯಲ್ಲಿ ಅವರ ಕೃತಿಗಳ ಮೌಲ್ಯವನ್ನು ತೋರಿಸುತ್ತಾ ಒಬ್ಬ ಉತ್ತಮ ವ್ಯಕ್ತಿಯನ್ನಾಗಿ ಪುರುಷೋತ್ತಮ ಕಾಮತ್‌ರವರನ್ನು ಸ್ವೀಕರಿಸಿದ್ದಾರೆ.

ಗಣೇಶ ಸೋಮಯಾಜಿಯವರು ಲೌಕಿಕ ಮತ್ತು ಪಾರಮಾರ್ಥಗಳೆಂಬ ತತ್ವಗಳ ನೆಲೆಯಲ್ಲಿ ಚಿತ್ರಕಲೆ ಹೇಗೆ ತಾನು ರೂಪಗೊಳ್ಳಬಲ್ಲದು, ಎಂಬ ಪ್ರಶ್ನೆಯನ್ನ ಓದುಗರ ಮುಂದುರಿಸಿ, ಪುರುಷೋತ್ತಮ ಕಾರಂತರು ವಿರಕ್ತಿ ಜೀವನವನ್ನ ವಿಶೇಷವಾಗಿ ತಳೆದವರಲ್ಲದಿದ್ದರೂ ಒಂದು ಬಗೆಯಲ್ಲಿ ವಿರಕ್ತರೇ[೨] ಎಂಬ ಅಭಿಪ್ರಾಯವನ್ನು ಹೇಳುತ್ತಾ ವಿರಕ್ತ ಭಾವ ಮತ್ತು ಚಿತ್ರಕಲೆಯನ್ನು ಒಟ್ಟೊಟ್ಟಿಗೆ ಜೀವನದ ಅವಿಭಾಜ್ಯ ಆಯ್ಕೆಯಾಗಿ ಅಳವಡಿಸಿಕೊಂಡಿರುವಂತಹ ವ್ಯಕ್ತಿತ್ವಗಳು ಅತ್ಯಂತ ವಿರಳ ಎಂಬ ಅಭಿಪ್ರಾಯವನ್ನು ತೋರ್ಪಡಿಸಿದ ಲೇಖಕರು ಪುರುಷೋತ್ತಮ ಕಾರಂತರ ಜೀವನ ವಿಮರ್ಶೆಯಲ್ಲಿ, ಆಧ್ಯಾತ್ಮ, ತ್ಯಾಗ, ಭೋಗ, ಮುಂತಾದ ನೆಲೆಯಲ್ಲಿ ಪರಿಪರಿಯಾಗಿ ತರ್ಕಿಸಿದ್ದಾರೆ. ಪರೋಕ್ಷವಾಗಿ ಒಬ್ಬ ಕಲಾವಿದನ ಜೀವನ ವಯಕ್ತಿಕ ನೆಲೆಯಾಗಿರದೆ, ಅದು ಸಾರ್ವತ್ರಿಕ, ಸಾಮಾಜಿಕ ಗೊಳ್ಳುತ್ತಾ ಹೋಗಬಲ್ಲದು ಎಂಬ ತಾತ್ಪರ್ಯವನ್ನು ಕಲಾವಿದರ ಜೀವನವನ್ನು ನಿದರ್ಶಿಸಿ, ಕೃತಿಯಲ್ಲಿ

ಲೇಖಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೃತಿ ಸರಳ ಭಾಷೆಯ ಬರವಣಿಗೆಯಿಂದ ಕೂಡಿದ, ಆಳವಾದ ವಿಚಾರಮಂಥನಕ್ಕೆ ಎಡೆಮಾಡಿಕೊಡುವುದಾಗಿದೆ.

ವಿ.ಟಿ.ಕಾಳೆ ಈ ಕೃತಿಯ ಡಾ.ಎಸ್.ಸಿ.ಪಾಟೀಲರಿಂದ ಬರೆಯಲ್ಪಟ್ಟಿದ್ದು, ೨೦೦೪ ರಲ್ಲಿ ಅಕಾಡೆಮಿಯಿಂದ ಪ್ರಕಟವಾಗಿದೆ. ಸರಳ ಬರಹದ ಮೂಲಕ ನಿರೂಪಿತವಾಗಿರುವ ಕೃತಿ ವಿ.ಟಿ. ಕಾಳೆಯವರ ಬದುಕಿನ ಹಾಗೂ ಕಲೆಯ ವಸ್ತುಸ್ಥಿತಿಯನ್ನು ತೋರಿಸುತ್ತದೆ. ವಿ. ಟಿ. ಕಾಳೆಯವರು ತಮ್ಮ ಬದುಕಿನ ವಿವಿಧ ಘಟನೆಗಳನ್ನು ಆಪ್ತರೊಂದಿಗೆ ಹಂಚಿಕೊಳ್ಳುತ್ತಿದ್ದ ಅಂಶವನ್ನು, ಅಲ್ಲದೆ ಅವರ ಜೀವನಾನುಭವಗಳನ್ನು ನೇರವಾಗಿ ಹೇಳುವ ತೆರದಲಿ ಲೇಖಕರು ಕೃತಿಯಲ್ಲಿ ನಿರೂಪಿಸಿದ್ದಾರೆ. ಬಾಲ್ಯಜೀವನ, ವೃತ್ತಿಜೀವನ, ಕಲೆಯಸಾಧನೆ, ನಿವೃತ್ತಿಜೀವನ[೪] ಮುಂತಾದ ವಿಷಯಗಳ ಕುರಿತಾಗಿ ಈ ಕೃತಿಯಲ್ಲಿ ಓದುಗನಿಗೆ ಸುಲಭವಾಗುವ ರೀತಿಯಲ್ಲಿ ಮೂಡಿಬಂದಿವೆ. ಕಾಳೆಯವರ ಭಾವಚಿತ್ರದೊಂದಿಗೆ ಕಲಾಕೃತಿಗಳ ಚಿತ್ರವನ್ನು ಒಳಗೊಂಡ ಕೃತಿ ಇಂಗ್ಲೀಷನಲ್ಲಿಯೂ ಬರೆಯಲ್ಪಟ್ಟಿದೆ.

ಸುಭಾಷಿಣಿ ದೇವಿ ಈ ಕೃತಿಯು ಎಲ್.ಶಿವಲಿಂಗಪ್ಪ ಅವರಿಂದ ರಚಿತವಾಗಿ ಅಕಾಡೆಮಿಯಿಂದ ೨೦೦೭ ರಲ್ಲಿ ಮುದ್ರಣಗೊಂಡಿದೆ. ಸರಳ ಸುಂದರ ಬರವಣಿಗೆಯಿಂದ ಕೂಡಿದ ಪುಸ್ತಕದಲ್ಲಿ ಬಹುತೇಕ ವಿಚಾರಗಳು ಕಲಾವಿದೆ ಸುಬಾಷಿಣಿದೇವಿಯವರನ್ನು ಕುರಿತಾಗಿ ಸಂಕ್ಷಿಪ್ತ ಬರಹದಲ್ಲಿಯೇ ವಿವರಿಸಿದೆ. ಕಲಾವಿದೆಯ ಭಾವಚಿತ್ರದೊಂದಿಗೆ ಕಲಾವಿದೆಯು ಕೃತಿಗಳನ್ನು ಚಿತ್ರಗಳು (ಫೋಟೋ) ಗಳನ್ನು ಒಳಗೊಂಡಿದೆ. ಶ್ರೀಮಂತ ಮನೆತನದ ಕಲಾವಿದೆಯಾದ ಶುಬಾಷಿಣಿದೇವಿಯವರ ಮೇಲಾದ ಪ್ರಭಾವ ಪ್ರೇರಣೆಗಳು ಯಾವವು ಎಂಬುದಾಗಿ ಚರ್ಚಿಸುತ್ತಾ ಸಾಗುವ ಕೃತಿ, ಕಲಾವಿದೆಯು ಮಾಡಿದ ಭಾಷಣಗಳ ಸ್ವರೂಪವನ್ನು ಕಂಡರಿಸಿದೆ. ಇದರಿಂದ ಕೃತಿಯ ಮೌಲ್ಯ ಹೆಚ್ಚಿದೆ. ಇಂಗ್ಲಿಷನಲ್ಲಿಯೂ ಕೃತಿ ಅನುವಾದಗೊಂಡಿದೆ.

ಚಿತ್ರಕಲಾವಿದ **ಎಮ್.ಜಿ.ವಾಚೇದಮಠ** ಕೃತಿಯು ಶಂಕರಪ್ಪ ಕುಂದಗೋಳ ಅವರಿಂದ ರಚಿತವಾಗಿ, ಅಕಾಡೆಮಿಯಿಂದ ಪ್ರಕಟವಾಗಿದೆ. ಸಹಜವಾದ ಭಾಷೆಯ ಬರಹದಿಂದ ಕೂಡಿದ ಕೃತಿಯಲ್ಲಿ ವಾಚೇದಮಠರ ಜೀವನ ಸಾಧನೆಗಳನ್ನು ಕ್ರಮಬದ್ಧವಾಗಿ ನಿರೂಪಿಸಲಾಗಿದೆ. ಕೃತಿಯಲ್ಲಿ ವಾಚೇಮಠರ ಸಂಸಾರ, ಕಲಾಪ್ರದರ್ಶನ[೫], ಚಿತ್ರಸೃಷ್ಟಿ[೬], ರೇಖಾಚಿತ್ರಗಳು[೭], ವಿವಿಧ ಭಂಗಿಯ ನೃತ್ಯಭಂಗಿಗಳು[೮], ರೇಖಾಭಾವ ಚಿತ್ರಗಳು, ಪೂರ್ಣಭಾವಚಿತ್ರಗಳು, ಸಂಯೋಜನಾ ಚಿತ್ರಗಳು, ರಾಶಿಪೂಜೆ, ಮಾರ್ಕೆಟ್, ಮದುವೆ ಮುಂತಾದ ಶಿರ್ಷಿಕೆಯಲ್ಲಿ ಜೀವನ ಕಲಾಕೃತಿಗಳ ವಿವರಣೆಗಳನ್ನು ಒಳಗೊಂಡಿದೆ. ವಾಚೇದಮಠರು ರಚಿಸಿದ ಶಿವರಾಂ ಕಾರಂತ, ಕುವೆಂಪು, ಇಂದಿರಾಗಾಂಧಿ, ಮಹಾತ್ಮಾಗಾಂಧೀಜಿ, ಲಾಲ್‌ಬಹದ್ದೂರಶಾಸ್ತ್ರಿ ಮುಂತಾದವರ ಭಾವಚಿತ್ರಗಳ ಫೋಟೋಗಳಿಂದ ಕೃತಿಯು ಸುಂದರವಾಗಿದೆ.

ಡಾ.ಬಿ.ಕೆ. ಹಿರೇಮಠ ಕೃತಿಯು ಡಾ. ಸಿದ್ಧಲಿಂಗ ಸ್ವಾಮಿ ಹಿರೇಮಠರಿಂದ ರಚಿಸಲ್ಪಟ್ಟಿದೆ. ೨೦೦೮ ರಲ್ಲಿ ಅಕಾಡೆಮಿಯಿಂದ ಪ್ರಕಟಗೊಂಡಿದೆ. ಕೃತಿಯಲ್ಲಿ ಬಿ.ಕೆ.ಹಿರೇಮಠರ ಚಿತ್ರಕಲಾ ಪ್ರಪಂಚವನ್ನು

ಪರಿಚಯಿಸುತ್ತದೆ. ಹಸ್ತಪ್ರತಿಶಾಸ್ತ್ರದ ಅಧ್ಯಯನಕಾರರಾಗಿ, ಸಾಹಿತಿಗಳಾಗಿ ಖ್ಯಾತರಾದ ಹಿರೇಮಠರ ಕಲಾವಂತಿಕೆಯ ಆಯಾಮವನ್ನು ಗುರ್ತಿಸಿ ತೋರಿಸುವ ದಿಶೆಯಲ್ಲಿ ಕೃತಿ ಮಹತ್ವ ಪಡೆಯುತ್ತದೆ. ಬಹುಮುಖ ಪ್ರತಿಭೆಯಾದ ಬಿ. ಕೆ. ಹಿರೇಮಠರು ಸಾಹಿತ್ಯ ಲೋಕಕ್ಕೆ ಬೇಕಾದಷ್ಟೆ ಕಲಾಲೋಕಕ್ಕೂ ಅನನ್ಯರಾದವರು ಎಂಬ ಅಂಶವನ್ನು ಸ್ಪಷ್ಟಪಡಿಸುವ ನಿಟ್ಟಿನಲ್ಲಿ ಕೃತಿಯ ಆಶಯ ಗೋಚರಿಸುತ್ತದೆ. ಹಲವಾರು ವಿಚಾರ ಧಾರೆಗಳನ್ನು ತನ್ನೊಳಗೆ ಅಡಗಿಸಿಕೊಂಡ ಬಿ.ಕೆ.ಹಿರೇಮಠರ ಚಿತ್ರಕಲಾ ಕೃತಿಗಳನ್ನು ಕಂಡರಿಸುವ ಹಿನ್ನೆಲೆಯಲ್ಲಿ ವಿಮರ್ಶಾತ್ಮಕವಾದ ಬರಹ ನಿರೂಪಿತವಾಗಿದೆ. ದೇವರು ಮತ್ತು ಧರ್ಮ,[೯] ಸತ್ಯ, ಸಹನೆ, ಮಾನವೀಯತೆಯ ಕೈಗಳು, ಕೃಷ್ಣ ಮತ್ತು ಗೋಪಿಕೆಯರು, ಮಡಿಕೇರಿಗೆವಿದಾಯ, ಅಭಿಸಾರಿಕಾ,[೧೧] ನನ್ನ ಸಂಸ್ಕೃತಿ, ಕಾನನ ದಾಳದ ಸಂಗೀತ, ಸೆರೆ, ದುರ್ಗಾ, ಕಲಿ ಮುಂತಾದ ಶಿರೋನಾಮೆಯಿಂದ ಕೂಡಿದ ಚಿತ್ರಕೃತಿಗಳ ಕುರಿತಾಗಿ ವಿಮರ್ಶಾತ್ಮವಾಗಿ ಕೃತಿಕಾರರು ಬರೆದಿದ್ದಾರೆ.

ಹಿರೇಮಠರ ಸಾಹಿತ್ಯದ ಕುರಿತಾಗಿಯೂ ಲೇಖಕರು ವಿವರಿಸಿದ್ದಾರೆ. ದೊಡ್ಡ ಪ್ರತಿಭೆಯೊಂದರ ಕುರಿತಾದ ಕೃತಿಯು ವಿಚಾರದ ದೃಷ್ಟಿಯಿಂದ ಮಹತ್ವವನ್ನು ಪಡೆದಿದೆ.

ರೇಖಾಋಷಿ ಪ್ರೋ.ವಿ.ಬಿ.ಹಿರೇಗೌಡರ್ ಕೃತಿಯು ೨೦೧೦ ರಲ್ಲಿ ಅಕಾಡೆಮಿಯಿಂದ ಪ್ರಕಟವಾದ ಕೃತಿಯಾಗಿದ್ದು ಎಸ್.ಎಂ.ಜಂಬುಕೇಶ್ವರವರಿಂದ ರಚಿಸಲ್ಪಟ್ಟಿದೆ. ಸರಳವಾಗಿ ವಿವರಣಾತ್ಮಕವಾಗಿ ಮೂಡಿಬಂದ ಕೃತಿಯು ಹಿರೇಗೌಡರ್‌ರವರ ಜೀವನದ ಹಲವು ಮಜಲುಗಳನ್ನು ಕಂಡರಿಸುತ್ತದೆ. ಅವರ (ಹಿರೇಗೌಡರ) ಆರ್ಥಿಕ ಪರಿಸ್ಥಿತಿಯನ್ನು ಒಳಗೊಂಡಂತೆ ಅವರ ಕಲಾಜೀವನ ಹಾಗೂ ಸರಕಾರಿ ನೌಕರಿ ತೊರೆದು ಚಿತ್ರಕಲಾ ಶಿಕ್ಷಕರಾಗಿ ನೇಮಕ ಹೊಂದುವ ವಿಷಯಗಳನ್ನು ವಿವರಿಸಲಾಗಿದೆ. ಭಾವಚಿತ್ರ, ಪೂರ್ಣಭಾವಚಿತ್ರ, ಪ್ರಕೃತಿಚಿತ್ರಗಳು ಮುಂತಾಗಿ ವಿವರಣಾತ್ಮಕವಾಗಿ ಹೇಳಲಾಗಿದೆ. ದಾವಣಗೇರಿಯಿಂದ ಅವರ ವೃತ್ತಿಜೀವನ ಹಾಗೂ ಸಾಧನೆಗಳನ್ನು ಕಂಡರಿಸಲಾಗಿದೆ. ಕಲಾವಿದರ ರೇಖಾಚಿತ್ರ, ಭಾವಚಿತ್ರ, ಸಂಯೋಜನಾಚಿತ್ರ ಮುಂತಾದ ಫೋಟೊಗಳಿಂದ ಕೃತಿಯು ಸುಂದರವಾಗಿದೆ.

ಮೌಲ್ಡರ್ ರಾಜಣ ಈ ಕೃತಿಯು ಶಿಲ್ಪಕಲಾ ಅಕಾಡೆಮಿಯಿಂದ ಪ್ರಕಟವಾಗಿ ಎಲ್. ಶಿವಲಿಂಗಪ್ಪ ಅವರಿಂದ ರಚಿತವಾಗಿದೆ. ಸುಮಾರು ೭೫ ಪುಟಗಳನ್ನು ಒಳಗೊಂಡ ಕೃತಿಯು ಶಿಲ್ಪಿ ಮೌಲ್ಡರ್ ರಾಜಣ್ಣರ ಜೀವನ ಸಾಧನೆ ಕುರಿತಾಗಿ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಚಲನಚಿತ್ರ ರಂಗದಲ್ಲಿ ಶಿಲ್ಪಕಲಾವಿದರಾಗಿ ಕೆಲಸ ನಿರ್ವಹಿಸಿ ತಮ್ಮ ಜೀವನದ ಬಹುಪಾಲು ಸಮಯವನ್ನು ಚಿತ್ರರಂಗದಲ್ಲಿಯೇ ಸೇವೆಸಲ್ಲಿಸುವುದಕ್ಕೆ ಮೀಸಲಿಟ್ಟರೆಂದೂ ಅದರ ಕುರಿತಾಗಿ ವಿಶೇಷವಾಗಿ ವಿವರಿಸಿದೆ.[೧೧] ಮೌಲ್ಡರ್ ರಾಜಣ್ಣರು ರಚಿಸಿದ ಬೃಹದಾಕಾರವಾದ ಮೂರ್ತಿಗಳು ವಿವಿಧ ಮಾಧ್ಯಮದಿಂದ ರಚಿಸಿದ ಚಲನಚಿತ್ರ ಸಂಬಂಧಿ ವಸ್ತುಗಳನ್ನು ಸಚಿತ್ರವಾಗಿ ಕೃತಿಯಲ್ಲಿ

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮುದ್ರಿಸಲಾಗಿದೆ. ಅವರ ಕಲೆಯ ಜೊತೆಗೆಯೇ ಅವರ ಒಟ್ಟು ಬದುಕನ್ನು ಕಂಡರಿಸುವ ಬರಹ ಓದುಗರನ್ನ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ.

೨೦೧೨ ರಲ್ಲಿ **ರೇಖಾಚಿತ್ರ ಪ್ರವೀಣ ಸಿ. ಕುಪ್ಪಾಚಾರ್ಯ**ಎಂಬ ಕೃತಿಯು ಎಲ್. ಶಿವಲಿಂಗಪ್ಪ ಅವರು ಬರೆದಿದ್ದಾರೆ. ಶಿಲ್ಪಕಲಾ ಅಕಾಡೆಮಿಯಿಂದ ಕೃತಿ ಪ್ರಕಟಣೆಗೊಂಡಿದೆ. ಚಿತ್ರಕಲೆ ಶಿಲ್ಪಕಲೆಗಳೆರಡರಲ್ಲೂ ಪ್ರವೀಣರಾದ ಕುಪ್ಪಾಚಾರ್ಯರ ಜೀವನ ಕಣ್ಣೆದುರಿಗೆ ಬರುವಂತೆ ಕಥಾನಕ ರೂಪದಲ್ಲಿ ಬರಹ ಮೂಡಿಬಂದಿದೆ. ಸರಳ ಬರವಣಿಗೆಯಿಂದ ಕೂಡಿದ ಕೃತಿಯಲ್ಲಿ ಕುಪ್ಪಾಚಾರ್ಯರ ರಚನಾತ್ಮಕ ಕಾರ್ಯವನ್ನು ಕಂಡರಿಸಲಾಗಿದೆ. ಅವರ ರೇಖಾಚಿತ್ರ, ಶಿಲ್ಪ ಕೃತಿಗಳು, ಅವರ ರಚನೆಯ (ಚಾರಿತ್ರಿಕ ಹಿನ್ನೆಲೆಯಲ್ಲಿ) ಕೃಷ್ಣದೇವರಾಯನ ಹಾಗೂ ಆತನ ಹೆಂಡತಿ ಚಿನ್ನಾಂಬಾ ಮತ್ತು ತಿರುಮಾಂಬಾರ ಮೂರ್ತಿ ಫೋಟೊಗಳನ್ನು ಮುದ್ರಿಸಿದ ಕೃತಿಯು ಒಬ್ಬ ಖ್ಯಾತ ಕಲಾವಿದನನ್ನು ಪರಿಚಯಿಸುವ ದಿಶೆಯಲ್ಲಿ ಮಹತ್ವದ್ದಾಗಿದೆ. ಕಲಾವಿದರಾದ ಕುಪ್ಪಾಚಾರ್ಯರು ಬರೆದ ಕವಿತೆಗಳನ್ನು ಸಂದರ್ಭೋಚಿತವಾಗಿ ಕೃತಿದಲ್ಲಿ ಕಂಡರಿಸಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ ಎನ್ನಬಹುದು.

131599

ಲೋಹಫಲಕ ಮಾಂತ್ರಿಕ ಎಲ್.ಪಿ.ಅಂಚನ್ ಚಿ.ಸು.ಕೃಷ್ಣಶೆಟ್ಟಿಯವರು ರಚಿಸಿದ್ದಾರೆ. ೨೦೦೬ ರಲ್ಲಿ ಶಿಲ್ಪಕಲಾ ಅಕಾಡೆಮಿಯಿಂದ ಪ್ರಕಟಗೊಂಡಿದೆ. ವ್ಯಕ್ತಿಕೇಂದ್ರಿತವಾದ ಪುಸ್ತಕವಾದರೂ ಇದು ವ್ಯಕ್ತಿಜೀವನದೊಂದಿಗೆ ವಿಮರ್ಶಾತ್ಮವಾಗಿಯೂ ಮೂಡಿಬಂದಿದೆ. ಕೃತಿಕಾರರಾದ ಚಿ.ಸು.ಕೃಷ್ಣಶೆಟ್ಟಿಯವರು ಪರಂಪರೆ ಮತ್ತು ಪ್ರಗತಿಪರರ ನಡುವಿನ ಕಾಲದ ಅಂತರದ ಸ್ವರೂಪವು ಬದಲಾವಣೆಯಲ್ಲಿಯ ಸ್ಥಿತಿಗತಿಗಳಲ್ಲಿ ಕಲಾವಿದನ ವೈವಿಧ್ಯಮಯ ಸಂಸ್ಕೃತಿ ಹೇಗೆ ರೂಪಿತವಾಗುತ್ತದೆ. ಕಲಾವಿದನ ಕಲೆಯಲ್ಲಿ ಕಲಾವಿದನ ಮಹತ್ವವು ನಿರೂಪಿತ ಗೊಂಡಿರುವ ಬಗೆ ಮುಂತಾಗಿ, ವಿಮರ್ಶಾತ್ಮಕವಾಗಿ ರಚಿತವಾಗಿದೆ. ವರ್ತಮಾನದೊಂದಿಗೆ ಪರಂಪರೆಯ ಬೆಸುಗೆಯನ್ನ ಕಲಾವಿದನಲ್ಲಿ ಕಾಣುತ್ತೇವೆ[೧೨] ಎಂಬ ಒಟ್ಟು ಅಭಿಪ್ರಾಯದಲ್ಲಿ ಕಲಾವಿದನ "ಸಮನ್ವಯ" ಪ್ರತಿಭೆಯ ಮೇಲೆ ಬೆಳಕು ಚೆಲ್ಲುತ್ತದೆ. ಅಂತೆಯೇ ವೈಚಾರಿಕ ಅಂಶಗಳನ್ನು ವ್ಯಕ್ತಿಕೇಂದ್ರಿತವಾಗಿಯೂ ಬರೆಯುವಾಗಲೂ ನಿರೂಪಿಸಿರುವ ಕೃತಿ ಸೃಜನಾತ್ಮಕವಾಗಿ ಮೂಡಿ ಬಂದಿದೆ.

ಶಿಲ್ಪಿ ವೆಂಕಟಾಚಾರ್ ೨೦೦೬ ರಲ್ಲಿ ಎಲ್.ಶಿವಲಿಂಪ್ಪ ಅವರು ಬರೆದ ಕೃತಿಯಾಗಿದ್ದು ಶಿಲ್ಪಕಲಾ ಅಕಾಡೆಮಿಯಿಂದ ಪ್ರಕಟಣೆಗೊಂಡಿದೆ. ಪೈಲ್ವಾನ್ ವೆಂಕಟಾಚಾರ್‌ರವರ ಲೋಹಶಿಲ್ಪಕಲೆಯ ವೈಶಿಷ್ಟ್ಯವನ್ನು ತೋರ್ಪಡಿಸುವ ಕೃತಿಯು, ಉತ್ತಮ ಬರಹಶೈಲಿಯಿಂದ ಕೂಡಿದೆ. ಅವರ (ಕಲಾವಿದರ) ಜೀವನ ಸಾಧನೆಗಳನ್ನು ವಿವರಿಸುತ್ತಾ ಲೇಖಕರು, ಸಾಂಪ್ರದಾಯಿಕ ಕಲಾವಿದ ತಮ್ಮ ಆಶಯವನ್ನು ಕಲೆಯಲ್ಲಿ ಹೇಗೆ ತುಂಬುವರು ಎಂಬುದನ್ನು ಚಿತ್ರಿಸಿದ್ದಾರೆ. ಕಲಾವಿದರು ರಚಿಸಿದ ವೆಂಕಟಪ್ಪನವರ ಭಾವಶಿಲ್ಪ, ಲಕ್ಷ್ಮೀನರಸಿಂಹ, ಗರುಡ, ಸರ್ವಜ್ಞ, ಕುವೆಂಪು, ಟಿಪ್ಪುಸುಲ್ತಾನ್ ಮುಂತಾದ ಶಿಲ್ಪಗಳ ಛಾಯಾಚಿತ್ರವನ್ನು ಒಳಗೊಂಡ ಕೃತಿಯು ಸುಂದರವಾಗಿ ರೂಪ ಪಡೆದಿದೆ.

ಕೆ.ಕೆ.ಹೆಬ್ಬಾರ್ ಕೃತಿಯು ೨೦೦೮ ರಲ್ಲಿ ಮರಿಶಾಮಾಚಾರ್‌ರವರಿಂದ ರಚಿಸಲ್ಪಟ್ಟು, ಅಕಾಡೆಮಿಯಿಂದ ಪ್ರಕಟಗೊಂಡಿದೆ. ಪ್ರಸಿದ್ಧ ಕಲಾವಿದರಾದ ಹೆಬ್ಬಾರರ ಜೀವನ ಮತ್ತು ಸಾಧನೆಗಳನ್ನು ಹೇಳುವ ಕೃತಿಯು, ಕಥಾನಕ ರೂಪದಲ್ಲಿ ಮೂಡಿಬಂದಿದೆ. ಹೆಬ್ಬಾರರ ಬದುಕನ್ನು ಹೇಳುವ ದಿಶೆಯಲ್ಲಿ ಪೂರಕವಾದ ಅಂಶಗಳನ್ನು ಹೆಚ್ಚು ವಿಸ್ತಾರಮಾಡುತ್ತಾ ಹೋದಾಗ ಮೂಲ ವಿಷಯದ ಕುರಿತು ಪ್ರಸ್ತಾಪವಾಗದೆ ಕೃತಿಯಲ್ಲಿ ವೈವಿಧ್ಯಮಯ ವಿಚಾರಗಳು ಮೂಡಿಬಂದಿವೆ. ಸಾಮಾನ್ಯ ಓದುಗನಿಗೆ ಸರಳವಾಗಿ ಅರ್ಥವಾಗದೆ, ಓದುಗರನ್ನು ಬೇರೆ ಎಲ್ಲೆಲ್ಲೊ ಕರೆದೊಯ್ಯುವಂತೆ ಕೃತಿಯ ಬರಹ ರೂಪಿತವಾಗಿದೆ. ಆದಾಗ್ಯೂ ಹೆಬ್ಬಾರರಿಂದ ರಚಿತವಾದ ಚಿತ್ರಗಳು ಛಾಯಾಚಿತ್ರಗಳಿಂದ ಕೃತಿಗೆ ಮೌಲ್ಯ ಬಂದಿದೆ. ಒಬ್ಬ ಮಹಾನ್ ಕಲಾವಿದನೊಬ್ಬನ ಪರಿಚಯಿಸುವ ದೃಷ್ಟಿಯಲ್ಲಿ ಕೃತಿ ಮಹತ್ವ ಪಡೆದಿದೆ. ಕೃತಿಯಲ್ಲಿ ವೈವಿಧ್ಯಮಯ ವಿಚಾರಗಳು ಮೂಡಿಬಂದಿವೆ. ಸಾಮಾನ್ಯ ಓದುಗನಿಗೆ ಸರಳವಾಗಿ ಅರ್ಥವಾಗದೆ, ಓದುಗರನ್ನು ಬೇರೆ ಎಲ್ಲೆಲ್ಲೊ ಕರೆದೊಯ್ಯುವಂತೆ ಕೃತಿಯ ಬರಹ ರೂಪಿತವಾಗಿದೆ.

ಎಂ.ವೀರಪ್ಪ ಕೃತಿಯು ಎಲ್ ಶಿವಲಿಂಗಪ್ಪ ಅವರಿಂದ ರಚಿತವಾದ ಕೃತಿಯಾಗಿದೆ. ಶ್ರೀ ಶಿವರಾತ್ರೇಶ್ವರ ಗ್ರಂಥಮಾಲೆ ಮೈಸೂರ ಅವರಿಂದ ಪ್ರಕಟವಾದ ಚಿಕ್ಕ ಪುಸ್ತಕ ಇದಾಗಿದೆ. ಶಿವಶರಣರ ಜೀವನ ಚರಿತ್ರೆಯನ್ನು ತನ್ನ ಚಿತ್ರಕೃತಿಯಲ್ಲಿ ಹೊರತಂದ ಎಂ. ವೀರಪ್ಪ ಅವರ ಕುರಿತಾಗಿ ಕೃತಿ ಸಂಕ್ಷಿಪ್ತವಾಗಿ ದಾಖಲಿಸುತ್ತದೆ. ಪೌರಾಣಿಕ, ಧಾರ್ಮಿಕ ರಾಜಕೀಯ ಸಂಬಂಧಿ ಚಿತ್ರಗಳಲ್ಲದೆ ಶರಣರ ವಚನಗಳನ್ನು ಆಧರಿಸಿ ಬರೆದ ಚಿತ್ರಕೃತಿಗಳ ಕುರಿತಾದ ವಿವರಣೆಯನ್ನು ಕೃತಿ ಒಳಗೊಂಡಿದ್ದು, ಸಾಂದರ್ಭಿಕವಾಗಿ ಸಂಬಂಧಿಸಿದ ಛಾಯಾಚಿತ್ರಗಳನ್ನು ಬಳಸಿ ಪ್ರಕಟಿಸಲಾಗಿದೆ.

೨೦೦೯ ರಲ್ಲಿ ಮರಿಶಾಮಾಚಾರ್ ಅವರ ಹಲವಾರು ಕಲಾವಿದರ ಜೀವನವನ್ನು ಕಂಡರಿಸುವ ಕೃತಿ ಕಲಾದಿಗ್ಗಜರು (ಸಿ.ಎನ್.ಎಂ) ಪ್ರಕಾಶನದಿಂದ ಪ್ರಕಟವಾಗಿದೆ. ಈ ಕೃತಿಯು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಕಲಾವಿದರ ಕುರಿತದದ್ದಾಗಿದೆ. ಲಿಯೋನಾಡೋ-ಡ-ವಿಂಚಿ, ಮೈಕಲ್‌ಎಂಜಿಲೋ, ಪಾಲ್ ಗೊಗಿನ್, ರುಬೆನ್ಸ್, ಹೆನ್ರಿಮತ್ತೀಸ, ಪಾಬ್ಲೋ ಪಿಕಾಸೋ ಮುಂತಾದ ಪಾಶ್ಚಿಮಾತ್ಯ ಕಲಾವಿದರಲ್ಲದೆ ರಾಜಾರವಿವರ್ಮ, ವೆಂಕಟಪ್ಪ, ಅವನೀಂದ್ರನಾಥ, ಅಮೃತಾ ಶೇರಗಿಲ್, ಕೆ.ಕೆ.ಹೆಬ್ಬಾರ್, ಎಂ.ಎಫ್.ಹುಸೇನ್, ರವೀಂದ್ರನಾಥ ಟಾಗೋರ್ ಮುಂತಾದ ಪ್ರಸಿದ್ಧ ಭಾರತದ ಕಲಾವಿದರ ಜೀವನ ಸಾಧನೆಗಳನ್ನು ಲೇಖಕರು ಪರಿಚಯಿಸಿದ್ದಾರೆ. ಕಲಾವಿದರ ಜೀವನವನ್ನು ಅವರ ಕಲೆಯ ಸ್ವರೂಪವನ್ನು ತಿಳಿಸಿಕೊಡುವಲ್ಲಿ ಲೇಖಕರು ತಮ್ಮದೇ ಆದ ಬರವಣಿಗೆಯನ್ನು ಮಾಡಿದ್ದಾರೆ. ಕಥಾನಕ ಬರಹಗಳಂತೆ ಪ್ರತಿಯೊಬ್ಬರ ಚರಿತ್ರೆಯು ವೈಶಿಷ್ಟ್ಯಪೂರ್ಣವಾಗಿ ಮೂಡಿಬಂದಿದೆ. ಬರಹದಲ್ಲಿ ಲೇಖಕರು ವ್ಯಕ್ತಿಯನ್ನು ಚಿತ್ರಿಸುವಲ್ಲಿ ಊಹಾತ್ಮಕತೆಯನ್ನು ಬೆರೆಸಿಕೊಂಡಿದ್ದಾರೆ ಎನ್ನಬಹುದು. ಬರಹ ಯಾವುದೇ ಶೈಲಿಯದ್ದಾಗಿರಲಿ ಅದು ಮೂಲ ಉದ್ದೇಶವನ್ನು ಮರೆತು ಹೋಗಬಾರದು ಆದರೆ ಮರಿಶಾಮಾಚಾರ್‌ರವರ ಪ್ರಸ್ತುತ ಕೃತಿಯು ಅನೇಕ ಜನ ಕಲಾವಿದರ

ಕುರಿತಾಗಿ ವಿವರಣೆಯನ್ನು ವಸ್ತುನಿಷ್ಠವಾಗಿ ಕಂಡರಿಸುವಲ್ಲಿ ಸೋತಿದೆ ಎನ್ನಬಹುದು. ಕಥಾನಕ ಶೈಲಿಯ ನಿರೂಪಣೆಯಲ್ಲಿ ಅನೇಕ ನೈಜ ಅಂಶಗಳನ್ನು ನೇರವಾಗಿಯೇ ಕಂಡರಿಸಬಹುದಾದ ಸಂದರ್ಭಲ್ಲಿಯೂ ಕೂಡಾ ಅವರು ತಮ್ಮ ಬರಹದ ಶೈಲಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಕೆಲವಡೆ ವಿಷಯವು ನೆಪಮಾತ್ರಕ್ಕೆ ಸ್ವೀಕರಿಸಲಾಗಿದೆ.

ಕಲಾವಿದರ ಬದುಕಿನ ಆಂತರಿಕ ಅಂಶಗಳನ್ನು ತೋರ್ಪಡಿಸುವಲ್ಲಿ ಕೃತಿ ಅಸಾಹಯವಾಗಿದೆ. ಕಲಾವಿದರ ಭಾವಚಿತ್ರಗಳನ್ನು ಒಳಗೊಂಡ ಕೃತಿ ಅವರ ಕಲಾಕೃತಿಗಳ ಚಿತ್ರಗಳನ್ನು ಹೊಂದಿರುವ ಮೂಲಕ ಕಲಾವಿದರ ಮುಖಗಳನ್ನು ಪರಿಚಯಿಸಿದೆ. ಸಾಂದರ್ಭಿಕವಾಗಿ ಛಾಯಾಚಿತ್ರಗಳ ಬಳಕೆಯಿಂದ ಕೆಲವುಕಡೆ ಕೃತಿ ನಿರೂಪಿತ ಅಂಶಗಳಿಗೆ ಪೂರಕವಾದಂತಿದೆ.

ಪ್ರಸಿದ್ಧ ಶಿಲ್ಪಕಲಾವಿದ ವೆಂಕಟಾಚಲಪತಿಯವರ ಕುರಿತಾದ ಕೃತಿ 'ವೆಂಕಟಾಚಲಪತಿ' ಯು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ೨೦೧೪ ರಲ್ಲಿ ಪ್ರಕಟಗೊಂಡಿದೆ. ಕೆ.ವಿ.ಸುಬ್ರಹ್ಮಣ್ಯಂ ಅವರು ಈ ಕೃತಿಯನ್ನು ರಚನೆ ಮಾಡಿದ್ದಾರೆ. ಶಿರ್ಷಿಕೆಯಲ್ಲಿಯೇ ಆಧುನಿಕ ಶಿಲ್ಪಕಲೆಯ ಜಕಣಾಚಾರಿ ಎಂದು ಕರೆದಿದ್ದಾರೆ. ಸಮಕಾಲೀನ ಶಿಲ್ಪಕಲೆಯ ನಿರ್ಮಿತಿಯಲ್ಲಿ ಅಪಾರ ಸಾಧನೆಗೈದ ಅವರ ಕಲಾಕೃತಿಗಳ ವಿವಿಧ ಮಾಧ್ಯಮ, ಶೈಲಿ, ತಂತ್ರಗಳ ವೈಶಿಷ್ಟ್ಯವನ್ನು ವಿವರಿಸಿದ್ದಾರೆ. ವೆಂಕಟಾಚಲಪತಿಯವರ ಭಿತ್ತಿಶಿಲ್ಪ, ಭಾವಶಿಲ್ಪ, ಲೋಹಮಾಧ್ಯಮದ ಭಾವಶಿಲ್ಪಗಳ ವಿವರಣೆಯನ್ನು ಕೃತಿಯಲ್ಲಿ ಮಾಡಲಾಗಿದೆ. ವಿವಿಧ ಮಾಧ್ಯಮದಲ್ಲಿ ಸರ್ವಜ್ಞ, ಅ.ನ.ಸುಬ್ಬಾರಾವ್, ಜಿ.ಎಸ್.ಶಿವರುದ್ರಪ್ಪ, ಕೆ.ಎನ್.ಗುರುಸ್ವಾಮಿ (ಪ್ರಜಾವಾಣಿ ಪತ್ರಿಕೆಯ ಸಂಸ್ಥಾಪಕ) ಎಚ್.ಎಲ್.ನಾಗೇಗೌಡ, ಕುಕ್ಕೆ, ಡಾ.ವೆಂಕಟೇಶ ಮೂಡ್ಗೋಡ್ಕರ್, ನಾಲ್ವಡಿ ಕೃಷ್ಣರಾಜ ಒಡೆಯರ್, ದೇವರಾಜ ಅರಸ್, ಹಾನಗಲ್ ಸ್ವಾಮಿಗಳು, ಜನರಲ್ ಕಾರ್ಯಪ್ಪ, ರೆವರೆಂಡ್ ಕಿಟ್ಟಲ್ ಮುಂತಾದವರ ಭಾವಶಿಲ್ಪಗಳು ಕಂಚು ಮಾಧ್ಯಮದಲ್ಲಿ ಮೂಡಿ ಬಂದ ವಿಷಯವನ್ನ ಕೃತಿ ಒಳಗೊಂಡಿದೆ. 'ಹಾರ್ಮೊನಿ' ಎಂಬ ಶೀರ್ಷಿಕೆಯಲ್ಲಿ ಅನೇಕ ಶಿಲ್ಪಗಳು ರಚನೆಗೊಂಡಿವೆ. ಮತ್ತು 'ಫ್ಲೈಯಿಂಗ್ ಫಿಶ್', 'ಸನ್ ಡಾಗ್', 'ಜಾಯ್ ರೆಡಿಂಗ್', 'ನೋವು', 'ಗ್ರೋಥ್' ಮುಂತಾದ ಕಲಾರಚನೆಗಳು ಪ್ರಸಿದ್ಧವಾಗಿರುವ ಕುರಿತು ಕೃತಿಯಲ್ಲಿ ಅವುಗಳ ಛಾಯಾಚಿತ್ರಗಳನ್ನು ಪ್ರಕಟಿಸಿ ವಿವರಿಸಿದ ಲೇಖಕರು ವೆಂಕಟಾಚಲಪತಿಯವರ ಸೃಜನಶೀಲ ಪಾತ್ರವನ್ನು ಹಾಗೂ ಸಮಕಾಲೀನ ಸಂದರ್ಭದಲ್ಲಿ ಅವರ ಕೃತಿಗಳ ವೈಶಿಷ್ಟ್ಯವನ್ನು ಕುರಿತು, ವಿಶ್ಲೇಷಿಸಿದ್ದಾರೆ.

ವೆಂಕಟಾಚಲಪತಿಯವರ ಸಾಂಪ್ರದಾಯಿಕ ಪ್ರತಿಮಾ ಶಾಸ್ತ್ರಬದ್ಧ (ಅಂಗರಚನಾಶಾಸ್ತ್ರ) ಅಧ್ಯಯನದ ಜೊತೆಗೆ ಸಮಕಾಲೀನದಲ್ಲಿ ವ್ಯಾಪಕವಾಗಿರುವ ಆಧುನಿಕ ಕಲೆಯನ್ನು ತಮ್ಮದಾಗಿಸಿಕೊಂಡಿರುವ ಬಗ್ಗೆಯೂ ಕೃತಿಕಾರರು ಗಮನಹರಿಸಿ ಅದನ್ನು ಕೂಡಾ ವಿಶೇಷವಾಗಿ ಕಂಡರಿಸಿದ್ದಾರೆ. ಮುಗ್ಧತೆಯ ಮಾಯೆಯ, ಪಯಣ, ಭೂಮಿಗೀತೆ, ದೇವನಹಳ್ಳಿ, ಶಿಲ್ಪಕಲಾ ಶಾಲೆಯ ಆಕರ್ಷಣೆ, ಆಧುನಿಕತೆಯ ಅನ್ವೇಷಣೆಯಲ್ಲಿ ಎಂಬ ತಲೆಬರಹದಲ್ಲಿ

ವೆಂಕಟಾಚಲಪತಿಯವರ ಒಟ್ಟು ಜೀವನವನ್ನು ಕಂಡರಿಸಿದ್ದಾರೆ. ವೆಂಕಟಾಚಲಪತಿಯವರಿಗೆ ಜಿ.ಎಸ್.ಶಿವರುದ್ರಪ್ಪ, ಕವಿ ಸುಮತೀಂದ್ರ ನಾಡಿಗ್, ಶಿಲ್ಪಿ ಸರ್ಬರಿ ರಾಯ್ ಚೌಧರಿ, ನಟ ಸಿ.ಆರ್.ಸಿಂಹ ಮುಂತಾದವರು ಬರೆದಿರುವ ಪತ್ರಗಳನ್ನು ಇದರಲ್ಲಿ ಪ್ರಕಟಿಸಲಾಗಿದೆ. ಇದರಿಂದ ಕಲಾವಿದರ ಸಾಧನೆಯ ಸಂದರ್ಭಗಳನ್ನು ನಿಖರವಾಗಿ ಗುರ್ತಿಸಲು ಸಾಧ್ಯವಾಗುವ ಅಂಶಗಳನ್ನು ಕಾಣುವಂತಾಗಿದೆ. ವೈವಿಧ್ಯಮಯವಾದ ಛಾಯಾಚಿತ್ರಗಳನ್ನು ಒಳಗೊಂಡ ಕೃತಿಯು ವಸ್ತುನಿಷ್ಠತೆಯನ್ನು ತೋರಿಸುವಂತಿದೆ ಬರಹದ ದೃಷ್ಟಿಯಿಂದ ಪ್ರಾಮುಖ್ಯವಾದ ಈ ಕೃತಿಯು ಒಬ್ಬ ಮಹಾನ್ ಸಮಕಾಲೀನ ಶಿಲ್ಪಿಯೊಬ್ಬನನ್ನ ನಾಡಿಗೆ ಪರಿಚಯಿಸುತ್ತದೆ.

ಮಲ್ಲಿಕಾರ್ಜುನ್ ಸಿ. ಬಾಗೋಡಿಯವರು ರಚಿಸಿರುವ **ನಾಡೋಜ ಡಾ.ಜೆ.ಎಸ್. ಖಂಡೇರಾವ್** ಕೃತಿಯು ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಸಾರಾಂಗದಿಂದ ೨೦೧೩ ರಲ್ಲಿ ಪ್ರಕಟಗೊಂಡಿದೆ. ಸರಳ ಭಾಷೆಯಲ್ಲಿ ನಿರೂಪಿತಗೊಂಡಿರುವ ಕೃತಿಯು ಖಂಡೇರಾವ್ ಅವರ ಜೀವನವನ್ನು ತಿಳಿಸುತ್ತದೆ. ಲೇಖಕರು ಖಂಡೇರಾವ್ ಅವರ ಶಿಸ್ತು, ಸಾಮರ್ಥ್ಯ, ಕಲೆ, ಶಿಕ್ಷಣದಲ್ಲಿ ಸಕ್ರೀಯವಾಗಿ ಪಾಲ್ಗೊಂಡಿರುವಿಕೆ ಹೀಗೆ ಮುಂತಾ ಅನೇಕ ವಿಷಯಗಳನ್ನು ತಿಳಿಸಿಕೊಟ್ಟಿದ್ದಾರೆ. ಉತ್ತರ ಕರ್ನಾಟಕ ಅದರಲ್ಲೂ ಹೈ. ಕ.ದ. ಪ್ರಸಿದ್ಧ ಸಮಕಾಲೀನ ಕಲಾವಿದರಲ್ಲಿ ಪ್ರಸಿದ್ಧರಾದ ಖಂಡೇರಾವ್ ಅವರ ಅಕಾಡೆಮಿಕ್ ಆರ್ಟಿಷ್ಟ[೧೩] ಎಂಬ ಬಿರುದನ್ನು ನೆನಪಿಸಿ ಬರಹವನ್ನು ಪ್ರಾರಂಭಿಸಿದ್ದಾರೆ. ಬಾಲ್ಯ, ಶಿಕ್ಷಣ, ಉನ್ನತ ಕಲಾಧ್ಯಯನ, ವೃತ್ತಿಜೀವನ, ಕಲಾಕೃತಿಗಳ ವೈವಿಧ್ಯ ಕಲಾಯಾನ ಮುಂತಾದ ಶೀರ್ಷಿಕೆಯಡಿಯಲ್ಲಿ ಕಲಾವಿದ ಖಂಡೇರಾವ್ ಅವರ ಕುರಿತಾಗಿ ಬರೆದಿದ್ದಾರೆ. ಅವರ ಸರಳತೆ, ಅವರ ಶಿಸ್ತು, ಕಲೆಯ ಸಂದರ್ಭ, ಪ್ರಸ್ತುತತೆ, ಅವರ ಸಾಂಸ್ಥಿಕ ಕೆಲಸಕಾರ್ಯಗಳು ಹೀಗೆ ಅನೇಕ ವಿಷಯಗಳನ್ನು ಕೃತಿ ವಿವರಿಸುತ್ತದೆ. ಮುಖಪುಟದಲ್ಲಿ ವರ್ಣ ಛಾಯಾಚಿತ್ರದಿಂದ ಕೂಡಿದ ಖಂಡೇರಾವ್ ಅವರ ಭಾವಚಿತ್ರ ಹೊರತು ಪಡಿಸಿದರೆ ಒಳಗಡೆ ಅವರ ಕೃತಿಗಳಾಗಲಿ ಅವರ ಜೀವನ ಸಂಬಂಧಿ ಛಾಯಾಚಿತ್ರಗಳಾಗಲೀ ಬಳಕೆಯಾಗಿಲ್ಲ. ಬರಹದಿಂದ ಸರಳ ನಿರೂಪಣೆ ಹೊಂದಿದ ಕೃತಿಯು ಸುಂದರವಾಗಿದೆ ಎನ್ನಬಹುದು.

ಎಂ.ಪರಮೇಶ್ವರಾಚಾರ್ಯ ಕೃತಿಯು ೨೦೦೪ ರಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯಿಂದ ಪ್ರಕಟಣೆಗೊಂಡಿದೆ. ಡಾ. ಎಂ. ಪೂರ್ವಾಚಾರ್ ಅವರ ರಚನೆಯ ಈ ಕೃತಿಯು ಶಿಲ್ಪಿಗಳಾದ ಎಂ. ಪರಮೇಶ್ವರಾಚಾರ್ಯರ ಜೀವನ ಮತ್ತು ಸಾಧನೆಗಳನ್ನು ವಿವರಿಸುವ ಕೃತಿಯಾಗಿದೆ. ಶಿಲ್ಪಿಗಳ ಲೋಹಕಲೆ, ಶಿಲ್ಪ ಕೆತ್ತನೆ ಮರದ ಮಾಧ್ಯಯಮದ ಕೆತ್ತನೆ ಮುಂತಾಗಿ ವಿವರಿಸುವ ಕೃತಿಯು ಪ್ರಸಿದ್ಧ ವ್ಯಕ್ತಿಗಳ ಭಾವಶಿಲ್ಪ. ಪೂರ್ಣ ಭಾವಶಿಲ್ಪ, ರಥಶಿಲ್ಪ, ಸಾಂಪ್ರದಾಯಿಕ ದೇವತಾ ಮೂರ್ತಿಗಳ ಶಿಲ್ಪ, ಹೊಯ್ಸಳ ಶೈಲಿಯ ಮೂರ್ತಿಶಿಲ್ಪ ಮುಂತಾದವುಗಳನ್ನು ಕುರಿತಾಗಿ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡುತ್ತದೆ. ಚಿಕ್ಕದಾದ ಕೃತಿಯಲ್ಲಿ ಸಂಬಂಧಿಸಿದ ಛಾಯಾಚಿತ್ರಗಳನ್ನು ಒಳಗೊಂಡು ಸರಳ ಭಾಷೆಯಿಂದ ಎಲೆಯ ಮರೆಯ ಕಾಯಿಯಂತೆ ಅಡಗಿದ ಶಿಲ್ಪಿಗಳೊಬ್ಬರನ್ನು ಪರಿಚಯಿಸುತ್ತದೆ.

೨೦೦೭ ರಲ್ಲಿ ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡ 'ಶಂಕರಗೌಡ ಬೆಟ್ಟದೂರು' ಕೃತಿಯು ಅನಿಲ್‌ಕುಮಾರರವರಿಂದ ರಚಿತವಾಗಿದೆ. ಕರ್ನಾಟಕದ ಅನೇಕ ಪ್ರಸಿದ್ಧ ಕಲಾವಿದರಂತೆ ಬೆಂಗಾಲ ಕಲಾಶಾಲೆಯಲ್ಲಿ ಒಬ್ಬರಾದ ಬೆಟ್ಟದೂರರ ಕುರಿತಾದ ಈ ಕೃತಿಯು ವ್ಯಕ್ತಿಕೇಂದ್ರಿತವಾದರೂ, ವ್ಯಕ್ತಿಗಿಂತ (ಕಲಾವಿದ) ಕಲೆಯೇ ದೊಡ್ಡದಾಗಿ ಕಾಣುವಂತೆ ಚಿತ್ರಿತವಾದರೂ, ಆ ಕಲೆಯ ಹಿಂದಿನ ಮಾತು ಕಲಾವಿದ ಕೇಂದ್ರಿತವಾದುದೇ ಎಂಬ ಆಶಯವನ್ನು ಬಿಂಬಿಸಿದೆ. ಎಚ್.ಎ.ಅನಿಲ್‌ಕುಮಾರರು ಕೃತಿಯಲ್ಲಿ ತಮ್ಮ ಮಾತಿನಲ್ಲಿ 'ಕಲೆಗಿಂತ ಕಲಾವಿದನೇ ಮುಖ್ಯ' ಎಂಬುದು ಮುಗ್ಧರ ನಂಬಿಕೆ ಎನ್ನುತ್ತಲೇ ಶಂಕರಗೌಡರನ್ನು ಕುರಿತು ಬರೆಯುವಾಗಲೇ ತಮಗೆ ಕಲೆ ಮತ್ತು ಕಲಾವಿದ ಎಂಬ ಸಂಗತಿಗಳು ಬಹುವಾಗಿ ಕಾಡಿದಂಥವುಗಳು ಎಂದಿದ್ದಾರೆ.

ಎಲೆಯ ಮರೆಯ ಕಾಯಿಯಂತೆ ಇದ್ದ ಶಂಕರಗೌಡರು ಅಂದಿನ ಕಾಲದ ಬೆಂಗಾಲಿ ಶೈಲಿಯ ಕಲಾವಿದರು, ನಂದಲಾಲ್ ಬೋಸ್ , ರಾಮಕಿಂಕರ್ ಬೈಜ್, ಬಿನೋದ್ ಬಿಹಾರಿ ಮುಖರ್ಜಿ ಮುಂತಾದವರ ಶಿಷ್ಯತ್ವದಲ್ಲಿ ಬೆಳೆದ ಶಂಕರಗೌಡರು ತಮ್ಮ ಬದಲಾಗುತ್ತಿರುವ ಕಾಲದಲ್ಲಿ ತಮ್ಮ ಕಲೆಯ ಮೂಲ ಉದ್ದೇಶವನ್ನು (ಕಲಾಪರಂಪರೆಯ) ಬಿಟ್ಟುಕೊಡದ ಕಲಾವಿದರಾಗಿದ್ದರು. ಭಾರತೀಯ ಕಲಾ ಪರಂಪರೆಯೊಂದರ ಪ್ರಸಿದ್ಧ ಕಲಾವಿದರಾದ ಗೌಡರು ಕನ್ನಡದ ರಾಯಚೂರಿನವರು ಎಂಬುದು ಒಂದು ದೊಡ್ಡ ಹೆಗ್ಗಳಿಕೆ- ಇಂತಹ ಕನ್ನಡದ ಕಲಾವಿದನೊಬ್ಬನ ಕುರಿತಾಗಿ ಬರೆದ ಅನಿಲ್‌ಕುಮಾರರೂ ಶಾಂತಿನಿಕೇತನಲ್ಲಿ ಅಧ್ಯಯನ ಮಾಡಿದವರು. ಅದೇ ಪರಿಸರವನ್ನು ಅನುಭವಿಸಿ, ಆಸ್ವಾದಿಸಿ, ಬರವಣಿಗೆಗೆ ತೊಡಗಿಸಿಕೊಂಡವರು. ಶಂಕರಗೌಡರ ಕುರಿತು ಲೇಖಕರು ಚಿತ್ರಿಸುವಾಗ ಅವರ ಕಲಾಜೀವನ ಮತ್ತು ಸಾಮಾಜಿಕ ಜೀವನವನ್ನು ತಮ್ಮದೇಆದ ಬರಹಶೈಲಿಯಲ್ಲಿ ಚಿತ್ರಿಸಿದ್ದಾರೆ. ಕಲಾವಿದನ ಇರುವಿಕೆಯ ಕಾಲಸಂದರ್ಭ, ಸಾಮಾಜಿಕ, ಭೌಗೋಲಿಕ, ರಾಜಕೀಯ ಸ್ಥಿತಿಗತಿಗಳು ಹೇಗೆ ಗೌಡರ ಕಲೆಯ ಮೇಲೆ ಪ್ರಭಾವಿತವಾಗುತ್ತವೆ ಎಂಬುದನ್ನು ಗೌಡರ ಕುರಿತಾಗಿ ಚಿತ್ರಿಸುವಲ್ಲಿ ಕಲೆಯ ಮೇಲೆ ಬಾಹ್ಯ ಪ್ರಪಂಚದ ಪರಿಣಾಮವನ್ನು ವಿವರಿಸಿದ್ದಾರೆ.

ಶಂಕರಗೌಡ ಬೆಟ್ಟದೂರು ತಾವು ಚಿತ್ರಕಲೆಯಲ್ಲಿ ತೊಡಗಿಸಿಕೊಂಡಂತೆ, ಬೇಸಾಯ ಮತ್ತು ವೈದ್ಯ ವೃತ್ತಿಗಳೆರಡರಲ್ಲೂ ತೊಡಗಿಸಿಕೊಂಡವರು. ಅದೆಷ್ಟೋದಿನ ತಮ್ಮ ಊರಿನಲ್ಲೇ ಸಾಮಾಜಿಕ ಬದುಕಿನಲ್ಲಿ ತೊಡಗಿಸಿಕೊಂಡಾಗ್ಯೂ ಚಿತ್ರಕಲೆಯನ್ನು ಬಿಟ್ಟವರಾಗಿರಲಿಲ್ಲ ಎಂದು ಅವರ ಕಲಾ ಅಭಿರುಚಿಯನ್ನು ಅವರ ಕಲೆಯ ಚಿಂತನೆಯನ್ನು ಕುರಿತು ಹೇಳುವಾಗ ಲೇಖಕರು ವಿಮರ್ಶಾತ್ಮಕವಾಗಿ ಬರೆದಿದ್ದಾರೆ. ಕೆಲವೇ ಅವರ ಚಿತ್ರಗಳಲ್ಲಿ ಗ್ರಾಮೀಣ ಬದುಕು ಚಿತ್ರಿತವಾದಂತೆ ಸಾಮಾಜಿಕ, ರಾಜಕೀಯ ಚಳುವಳಿಗಳೂ ಚಿತ್ರಿತವಾದುದು ವಿಶೇಷವಾಗಿದೆ. ಇಂತಹ ಸಮಾಜ, ಮತ್ತು ಕಲೆಗಳ ಸಂಬಂಧವನ್ನು ಚೆನ್ನಾಗಿ ಬಲ್ಲವರಾದ ಶಂಕಗೌಡರು ಕಲೆ ಮತ್ತು ಸಮಾಜಗಳ ಸೂಕ್ಷ್ಮ ಅಂತರ ಹಾಗೂ ಪರಸ್ಪರ ಸಂಬಂಧವನ್ನು ತಮ್ಮ ಜೀವನದಲ್ಲಿ ಅರಿತುಕೊಂಡೆ ಕಲಾಭಿವ್ಯಕ್ತಿಯ ಮೂಲಕ ಹೊರಹಾಕುವ ಅದ್ಭುತ ಕಲಾವಿದರಾಗಿದ್ದರೆಂದು ಲೇಖಕರು ತಮ್ಮ ಈ

ಕೃತಿಯಲ್ಲಿ ಅವರ ಕುರಿತಾಗಿ ಒಟ್ಟು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕಥಾನಕ ಶೈಲಿಯಲ್ಲಿ ನಿರೂಪಿತವಾಗುವ ಬರಹವು ಒಬ್ಬ ಕಲಾವಿದನ ಕಲೆ ಮತ್ತು ಬದುಕನ್ನು ಸಮರ್ಥವಾಗಿ ಚಿತ್ರಿಸುವಲ್ಲಿ ಸಫಲವಾಗಿದೆ. ಕನ್ನಡದ ಕಲಾವಿದರ ರಾಷ್ಟ್ರೀಯ ಖ್ಯಾತಿಯನ್ನು ಪಡೆದ ಕಲಾವಿದನೊಬ್ಬನನ್ನು ಪರಿಚಯಿಸದೇ ಇರುವ ಸಂದರ್ಭಕ್ಕೆ ಪ್ರಸ್ತುತ ಕೃತಿಯು ಕನ್ನಡಿಗರಿಗೆ ಚಿರಪರಿಚಿತರಾದ ಅಚ್ಚಳಿಯದ ಚೇತನವನ್ನು ಪರಿಚಯಿಸುವ ಒಂದು ಅದ್ಭುತ ಪ್ರಯತ್ನದಾಗಿದೆ. ಇವತ್ತಿನ ಕಲಾವಿದರ ಕುರಿತಾದ ಅಧ್ಯಯನಕ್ಕೆ ಇಂತಹ ಕೃತಿಗಳ ಕೊಡುಗೆ ಅನನ್ಯವಾಗಿದೆ ಸರಳ ಭಾಷಾ ಶೈಲಿಯಾದರೂ ನಿರೂಪಣಾ ದೃಷ್ಟಿಯಿಂದ ಸಾಮಾನ್ಯ ಓದುಗನಿಗೆ ಬೇಗನೆ ಅರ್ಥವಾಗದಂತಹ ತುಸು ಜಟಿಲವೆಂದೆನಿಸುವ ಬರವಣಿಗೆ ಶೈಲಿಯನ್ನು ಕೃತಿ ಒಳಗೊಂಡಿದೆ.

ಈ ಅಧ್ಯಾಯದಲ್ಲಿ ವ್ಯಕ್ತಿಕೇಂದ್ರಿತವಾಗಿ ಮೂಡಿಬಂದ ಸಾಹಿತ್ಯ ಕೃತಿಗಳನ್ನು ಪ್ರಾತಿನಿಧಿಕವಾಗಿ ಆಯ್ದುಕೊಂಡು ಅಧ್ಯಯನ ಮಾಡಲಾಗಿದ್ದು, ಹಲವು ಮಹತ್ವದ ಬರಹಗಳ ಹಿನ್ನೆಲೆ ಮತ್ತು ಪ್ರಸಿದ್ಧ ಕಲಾವಿದರ ಹಿನ್ನೆಲೆಯಲ್ಲಿ ಆಯ್ದುಕೊಂಡು ಅಧ್ಯಯನ ಮಾಡಲಾಗಿದೆ.

ಕಲಾವಿದ ಕೇಂದ್ರಿತ ಕೃತಿಗಳು ಕನ್ನಡದಲ್ಲಿ ಅನೇಕ ಪ್ರಸಿದ್ಧ ಕಲಾವಿದರನ್ನು ಪರಿಚಯಿಸುವ ನಿಟ್ಟಿನಲ್ಲಿ ರಚಿತವಾಗಿವೆ. ಕುರಿತಾಗಿ ರಚಿತವಾಗಿವೆ. ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದ ಕಲಾವಿದರ ಕುರಿತು ಮತ್ತು ಕಲಾಕ್ಷೇತ್ರದಲ್ಲಿ ಸಾಧನೆಗೈವರ ಹಾಗೂ ಹಲವಾರು ರಾಜಕೀಯಗಳಿಂದ ಎಲೆಯ ಮರೆಯ ಕಾಯಿಯಂತೆಯೇ ಇದ್ದು, ಪ್ರಚಾರಗೊಳ್ಳದೇ ತಮ್ಮ ಜೀವನವನ್ನು ಪೂರೈಸಿದ ಅನೇಕ ಜನ ಕಲಾವಿದರ ಕುರಿತು ಇಂದು ಬರವಣಿಗೆ ರಚಿತವಾಗುತ್ತಿದೆ. ದಶಕದಲ್ಲಿ ಅನೇಕಜನ ಸಮಕಾಲೀನ ಕಲಾವಿದರ ಕುರಿತು ಬರವಣಿಗೆಗಳು ರಚನೆಗೊಂಡಂತೆ ಸರಿದುಹೋದ ಕಾಲದಲ್ಲಿ ಇತಿಹಾಸವಾದ ಕಲಾವಿದರ ಕುರಿತು ಇಂದು ಕೃತಿಗಳು ರಚಿತವಾಗುತ್ತಿವೆ. ರಾಜಾರವಿವರ್ಮ, ಕೆ.ವೆಂಕಟಪ್ಪ, ಕೆ.ಕೆ.ಹೆಬ್ಬಾರ್ ಮುಂತಾದವರ ಕುರಿತಾಗಿ ಪ್ರಾರಂಭದ ದಶಕದಲ್ಲಿ ರಚಿತಗೊಂಡಿದ್ದು, ಅವು ಕೇವಲ ವ್ಯಕ್ತಿಜೀವನದ ನೇರ ನಿರೂಪಣೆಯಾಗಿರದೆ ವಿಮರ್ಶಾತ್ಮ ನೆಲೆಯಲ್ಲಿಯೂ ಮೂಡಿಬಂದಿದೆ. ೨೦೦೦ಳರಿಂದ ಈಚೆಗೆ ಬಂದ ಕೃತಿಗಳು ಸಮಕಾಲೀನರ ಬದುಕನ್ನು ಚಿತ್ರಿಸಿದಂತೆ ವಿಮರ್ಶಾತ್ಮಕವಾಗಿ ಕಲಾವಿದರನ್ನು ವಿಶ್ಲೇಸುವಲ್ಲಿ ಸಾಫಲ್ಯಗೊಂಡಿವೆ. ಪ್ರಾರಂಭದ ಹಂತದಲ್ಲಿ ಅಂದರೆ ೧೯೭೦-೧೯೯೫ರ ಅವಧಿಯಲ್ಲಿ ರಚಿತವಾದ ಕೃತಿಗಳು, ವೈಚಾರಿಕವಾಗಿ ಬಲುಗಟ್ಟಿಯಾದ ರಚನೆಗಳಾಗಿದ್ದು, ಈ ಅವಧಿಯಲ್ಲಿ ರಚನೆಗೊಂಡ ಕೃತಿಗಳು ವ್ಯಕ್ತಿಜೀವನದ ಉದ್ದೇಶಗಳನ್ನು ಕಲಾವಿದನ ಸಿದ್ಧಾಂತಗಳನ್ನು ಇಟ್ಟುಕೊಂಡು ಕಲೆ, ಸೌಂದರ್ಯ, ಮೀಮಾಂಸೆ ನೆಲೆಯಿಂದ ವಿಮರ್ಶಿಸಿದ ಕೃತಿಗಳಾಗಿವೆ. ೧೯೯೫ ರಲ್ಲಿ ಕೆ.ಎಸ್.ಶ್ರೀನಿವಾಸ ಮೂರ್ತಿಯವರ "ಆನಂದ ಕುಮಾರಸ್ವಾಮಿ" ಪುಸ್ತಕವು ಇಂತಹ ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಬಂದ ಉತ್ತಮ ಕೃತಿಯಾಗಿದೆ. ವ್ಯಕ್ತಿಯ ಜೀವನ ಸಿದ್ಧಾಂತಗಳನ್ನು ಹಲವು ರೀತಿಯ ವಿಶ್ಲೇಷಣಾ ದೃಷ್ಟಿಯನ್ನು ಇಟ್ಟುಕೊಂಡು ರಚಿತವಾದ ಉತ್ತಮ ಕೃತಿಯಾಗಿದೆ. 'ಕೆ.ಕೆ.ಹೆಬ್ಬಾರ್' ವ್ಯಾಸರಾಯ ಬಲ್ಲಾಳರ ಕೃತಿಯಾಗಿದ್ದು, ವಿಮರ್ಶೆಯ ದೃಷ್ಟಿಯಿಂದ

ನೋಡುವ ಅತ್ಯುತ್ತಮ ಕೃತಿಯಾಗಿದೆ. ಹೀಗೆ ಕಲಾ ಸಾಹಿತ್ಯದ ಆರಂಭದ ಮೊದಲಲ್ಲಿ ರಚಿತಗೊಂಡ ಕೃತಿಗಳಿಗೆ ಹೋಲಿಸಿದರೆ. ಇಂದಿನ ಸಂದರ್ಭದಲ್ಲಿ ಭೌತಿಕ ಅಂಶಗಳನ್ನು ಮತ್ತು ಅಲ್ಲಲ್ಲಿ ಸಾಮಾಜಿಕ ಸಂದರ್ಭದ ನೆಲೆಗಳನ್ನು ಕೇಂದ್ರಿಕರಿಸಿಯೇ ವಿವರಣಾತ್ಮಕ ನಿರೂಪಣೆಗಳಾಗಿವೆ ಎಂದೇ ಹೇಳಬಹುದಾಗಿದೆ.

ವ್ಯಕ್ತಿಕೇಂದ್ರಿತ ಸಾಹಿತ್ಯದಲ್ಲಿ ವಸ್ತುನಿಷ್ಠತೆಗೆ ಪ್ರಾಶಸ್ತ್ಯವಿದ್ದಾಗ್ಯೂಕೂಡಾ ಕಲಾವಿದನನ್ನೇ ಒಂದು ಶಕ್ತಿಯನ್ನಾಗಿ ನೋಡಿ, ಅವನು ಬದುಕಿದ ಬದುಕನ್ನೇ ಒಂದು ಸಿದ್ಧಾಂತವಾಗಿ ಗ್ರಹಿಸಿ, ಕಲಾವಿದನ ರೀತಿ ನೀತಿಗಳೊಂದಿಗೆ, ಅವುಗಳ ಆದರ್ಶಗಳನ್ನು ಹೇಳುತ್ತಲೇ, ಕಲಾವಿದನಬಟ್ಟು ಬದುಕಿನಿಂದ ಉಪಲಬ್ಧವಾದ ತತ್ವವನ್ನು ತೋರಿಸುವಲ್ಲಿ ಇಂದಿನ ಕೃತಿಗಳು ಸದೃಢವಾಗಲಾರವು. ವ್ಯಕ್ತಿಜೀವನದ ಹಲವು ಮಜಲುಗಳನ್ನು, ಸಂಶೋಧನ ವಿಧಾನಗಳಿಂದ ಅನುಸರಿಸಿ ಅಧ್ಯಯನಮಾಡಿ ಅದನ್ನು ನಿರೂಪಿಸಿರುವ ಕ್ರಮದಲ್ಲಿ ವಸ್ತುನಿಷ್ಠವಾಗಿ ತೋರಿಸುವಲ್ಲಿ ಕೆಲವೊಮ್ಮೆ, ಭೌತಿಕಅಂಶಗಳೇ ಮುನ್ನೆಲೆಯನ್ನು ಸೇರುವ ಅಪಾಯಗಳೂ ಕೂಡಾ ಇವೆ. ಈ ರೀತಿಯ ಅಂಶಗಳನ್ನು ಜಾಗರೂಕವಾಗಿ ನೋಡಿ, ಅನೇಕ ಅಪಾಯಗಳನ್ನು ತಡೆಯ ಬಹುದಾಗಿದೆ. ಇಂದಿನ ಓದುಗನಿಗೆ ನೇರನಿರೂಪಣೆಯ ಮುಖ್ಯವಾಗುತ್ತಿರುವ ಸಂದರ್ಭಗಳಿಗೇನು ಕೊರತೆಇಲ್ಲವೆಂದೇ ಹೇಳಬಹುದು. ಹೀಗಿರುವಾಗ ಬರವಣಿಗೆಗಳೂ ಕೂಡಾ ಅವರ ಅಪೇಕ್ಷೆಯ ಮೇರೆಯನ್ನು ಮೀರಿ ಹೊರತಾಗಲಾರವು.

ಕಲಾಬರಹದಲ್ಲಿ ವಿಷಯದಷ್ಟೇ ಮಹತ್ವ ಅಲ್ಲಿ ಬಳಕೆಯಾದ ಭಾಷೆಗಿದೆ. ಇಲ್ಲಿ ಭಾಷೆಎಂದರೆ ಬಳಸಿದ ಭಾಷೆ (ಬರಹದ ಶೈಲಿ) ಪ್ರಾರಂಭದಲ್ಲಿ ರಚಿತವಾದ ಕಲಾಸಾಹಿತ್ಯಕ್ಕಿಂತ ಪ್ರಸ್ತುತ ಸಾಹಿತ್ಯವು ಬರಹದ ಶೈಲಿಯಲ್ಲಿ ಹಲವಾರು ಬದಲಾವಣೆಗಳನ್ನು ಕಂಡಿದೆ. ವಿಮರ್ಶೆ ಮಾಡುವಲ್ಲಿ ಬಳಸುವ ಬರಹದ ಕ್ರಮ, ಶೈಲಿಗಳು ಇಂದು ವಿಷಯದ ಮಹತ್ವವನ್ನು ತೋರಿಸುವಲ್ಲಿ ಸಾಫಲ್ಯ ಪಡೆಯದೇ ಕೇವಲ ಶಬ್ದಗಳ ಆಢಂಬರ ಭರಾಟೆಗಳು ಕೆಲವು ಕೃತಿಗಳಲ್ಲಿ ವಿಜೃಂಭಿಸುವಂತಾಗಿದೆ. ಕೃತಿಗೆ ನೀಡಿದ ಶಿರ್ಷಿಕೆಯಂತೆಯೇ ಕೃತಿಯ ಅಂತರಾಳದಲ್ಲಿ ಬರವಣಿಗೆ ಕಂಡುಬರುವುದಿಲ್ಲ. ಸೃಜಲಶೀಲವಾದ ಬರವಣಿಗೆಯಲ್ಲೂ, ವಿಷಯ ಗೌಣ್ಯವಾಗಿ ಹೇಳಬೇಕಾದುದನ್ನೇ ಹೇಳದೆ ಕೇವಲ ವಿವರಣಾತ್ಮಕವಾಗಿ ಭಾಷೆಯನ್ನು ಉನ್ನತೀಕರಿಸುವಲ್ಲಿ ಬರಹ ರೂಪತಳೆಯುತ್ತಿದೆ. ಬರಹದ ಶೈಲಿಯಿಂದಲೂ ಶ್ರೇಷ್ಠವಾಗದೆ ಅಸಂಯೋಜಿತ ಶಬ್ದಗಳ ಗುಚ್ಛದಿಂದ ತುಂಬಿಹೋದ ಕೃತಿಗಳೂ ಇಂದಿನ ಸಾಹಿತ್ಯದಲ್ಲಿ ಅಲ್ಲಲ್ಲಿ ಕಾಣಸಿಗುತ್ತವೆ. ಬರವಣಿಗೆಯಲ್ಲಿ ಗಹನವಾದುದನ್ನು ತೋರಿಸುವ, ಕೆಲವೇ ಮಾತುಗಳಲ್ಲಿ ಒಗಟಿನಂತೆ ಎಲ್ಲವನ್ನು ಒಳಗೊಳ್ಳುವಂತೆ ಬರೆಯುವ ದಿಶೆಯಲ್ಲಿ ಭಾಷೆಯನ್ನು ಔಚಿತ್ಯ ಪೂರ್ಣವಾಗಿ ಬಳಸದೆ ಇರುವ ಸಂದರ್ಭಗಳೂ ಇವೆ. ಯಾವುದೇ ಶೈಲಿಯ ಬರವಣಿಗೆಯಿಂದಲೂ ಸೃಜನಶೀಲವಾಗಿಸುವಲ್ಲಿ ಪ್ರಸ್ತುತ ದಶಕದ ಸಾಹಿತ್ಯ, ಅದರಲ್ಲೂ ಕಲಾವಿದಕೇಂದ್ರಿತ ಸಾಹಿತ್ಯ ಪ್ರಬುದ್ಧವಾದಂತಿಲ್ಲ ಈ ಎಲ್ಲ ಮೇಲಿನ ಅಭಿಪ್ರಾಯಗಳಿಗೆ ಕೆಲವು

ಕೃತಿಗಳು ಅಪವಾದವೆಂಬಂತೆ ಕೆ.ವಿ.ಸುಬ್ರಹ್ಮಣ್ಯಂ, ಡಾ.ಶಿವಾನಂದ ಬಂಟನೂರರ ಕೃತಿಗಳು, ರಚನೆಗೊಂಡು ಮೌಲಿಕವಾಗಿವೆ. ಕೆ.ವಿ.ಸುಬ್ರಹ್ಮಣ್ಯಂ ಅವರ ವೆಂಕಟಾಚಲಪತಿ ಮತ್ತು ವೆಂಕಟಪ್ಪ ಸಮಕಾಲೀನ ಪುನರಾವಲೋಕನ ಕೃತಿಗಳು ಬಂಟನೂರರ ವಿ.ಜಿ.ಅಂದಾನಿ, ಎಂ.ಬಿ.ಲೋಹಾರ್; ಗಣೇಶ ಸೋಮಯಾಜಿ ಅವರ ಪುರುಷೋತ್ತಮ ಕಾರಂತ; ಎಲ್.ಶಿವಲಿಂಗಪ್ಪ ಅವರ ಸುಭಾಷಿಣಿದೇವಿ ಕೃತಿಗಳು ದಶಕದ ಕಲಾಸಾಹಿತ್ಯದಲ್ಲಿ ವ್ಯಕ್ತಿಕೇಂದ್ರಿತವಾಗಿ ರಚಿತವಾದ ಉತ್ತಮ ಕೃತಿಗಳೆನ್ನಬಹುದು. ಇನ್ನುಳಿದಂತೆ ವಿವರಣಾತ್ಮಕ ಕೃತಿಗಳು ರಚಿತಗೊಂಡು ವ್ಯಕ್ತಿಯ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಸಫಲವಾಗಿವೆ ಅಷ್ಟೆ.

ಒಟ್ಟು ದಶಕದಲ್ಲಿ ವಿಮರ್ಶಾತ್ಮಕವಾಗಿ ವ್ಯಕ್ತಿಕೇಂದ್ರಿತ ಸಾಹಿತ್ಯದಲ್ಲಿ, ಸಮಕಾಲೀನ ಕಲೆಯ ಲಕ್ಷಣಗಳನ್ನು ಮುಂದುವರೆಸಿಕೊಂಡು ಆಗಿ ಹೋದ ಕಲಾವಿದರ ಜೀವನವನ್ನು ಕೆಲವೊಮ್ಮೆ ತರ್ಕಿಸಿದರೆ ಮತ್ತೆ ಕೆಲವು ಸಂದರ್ಭದಲಿ ಸಾಹಿತ್ಯವು ಅಂದಿನ ವಸ್ತುಸ್ಥಿತಿ, ಕಲೆಯ ಸಂದರ್ಭನ್ನ ಹೇಗೆ ರೂಪಿಸಿತ್ತು ಎಂಬುದನ್ನು ತಿಳಿಸುವಂತೆ ರಚಿತವಾಗಿವೆ. ಈ ಎಲ್ಲ ಅಂಶಗಳಿಂದ ಪ್ರಸ್ತುತ ವ್ಯಕ್ತಿಕೇಂದ್ರಿತ ಸಾಹಿತ್ಯ ಮುಂಬರುವ ದಿನಗಳಲ್ಲಿ ಹಲವಾರು ಬದಲಾವಣೆಗಳನ್ನುಕಂಡು, ಸೃಜನಾತ್ಮಕ ನೆಲೆಯಲ್ಲಿ ವಿಮರ್ಶೆಯಿಂದ ಕೂಡಿ ರಚಿತವಾಗಬೇಕಿದೆ.

ಟಿಪ್ಪಣಿ :

೧. ಎಸ್.ವೆಂಕಟೇಶ (ಲೇಖಕರು) : ಕೆ. ಕೇಶವಯ್ಯ (ಲಲಿತಕಲಾ ಅಕಾಡೆಮಿ)ಪುಟ.ಸಂ.೨೯

೨. ಡಾ. ಶಿವಾನಂದ ಎಚ್.ಬಂಟನೂರ:ವ್ಹಿ. ಜಿ. ಅಂದಾನಿ (ಲಲಿತಕಲಾ ಅಕಾಡೆಮಿ) ಪು.ಸಂ.–೧೫

೩. ಬಿ. ಗಣೇಶ ಸೋಮಯಾಜಿ : ಪುರುಷೋತ್ತಮ ಕಾರಂತ : ಪು.ಸಂ–೧೧

೪. ಡಾ. ಎಸ್. ಸಿ. ಪಾಟೀಲ : ವ್ಹಿ. ಟಿ. ಕಾಳೆ : ಪು.ಸಂ.–೫

೫. ಶಂಕ್ರಪ್ಪ. ಎಂ. ಕುಂದಗೋಳ್ : ಚಿತ್ರಕಲಾವಿದ ಎಮ್. ಜಿ. ವಾಚೇದಮಠ : ಪು.ಸಂ.೯

೬. ಅದೇ -- „ -- : ಪು.ಸಂ.–೧೧

೭. ಅದೇ ---„---- : ಪು.ಸಂ.–೧೩

೮. ಅದೇ ---„ --- : ಪು.ಸಂ.೧೩

೯. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಡಾ.ಬಿ.ಕೆ. ಹಿರೇಮಠ : ಪು.ಸಂ.–೨೦

೧೦. ಅದೇ ---„--- : ಪುಸಂ.–೨೨,೨೩

೧೧. ಎಲ್. ಶಿವಲಿಂಗಪ್ಪ : ಮೌಲ್ಡರ್ ರಾಜಣ್ಣ : ಪು.ಸಂ.–೧

೧೨. ಚಿ. ಸು. ಕೃಷ್ಣಶೆಟ್ಟಿ : ಲೋಹಫಲಕ ಮಾಂತ್ರಿಕ ಎಲ್. ಪಿ. ಅಂಚನ್ ಪು.ಸಂ.–೨೫

೧೩. ಡಾ.ಮಲ್ಲಿಕಾರ್ಜುನ ಬಾಗೋಡಿ : ನಾಡೋಜ ಡಾ. ಜೆ.ಎಸ್.ಖಂಡೇರಾವ್ ಕ.ವಿ. ಹಂಪಿ ಪ್ರಸಾರಾಂಗ– ಪುಟ.ಸಂ.೨

- ವ್ಯಕ್ತಿಕೇಂದ್ರಿತ ದೃಶ್ಯಕಲಾ ಸಾಹಿತ್ಯ ಕೃತಿಗಳು



- ವ್ಯಕ್ತಿಕೇಂದ್ರಿತ ದೃಶ್ಯಕಲಾ ಸಾಹಿತ್ಯ ಕೃತಿಗಳು



ವ್ಯಕ್ತಿಕೇಂದ್ರಿತ ದೃಶ್ಯಕಲಾ ಸಾಹಿತ್ಯ ಕೃತಿಗಳು



ಅಧ್ಯಾಯ – ಐದು

ಸಂಕೀರ್ಣ ದೃಶ್ಯಕಲಾ ಸಾಹಿತ್ಯ

ಅಧ್ಯಾಯ – ಐದು

ಸಂಕೀರ್ಣ ದೃಶ್ಯಕಲಾ ಸಾಹಿತ್ಯ

ದೃಶ್ಯಕಲಾ ಸಾಹಿತ್ಯದಲ್ಲಿ ಸಂಕೀರ್ಣಸಾಹಿತ್ಯವು ಒಂದು ವಿಶೇಷವಾಗಿ ಗುರ್ತಿಸಲ್ಪಡುತ್ತದೆ. ಈ ಪ್ರಕಾರದ ಸಾಹಿತ್ಯಲ್ಲಿ' ಕಲೆಯ ವಿವಿಧ ಮುಖಗಳನ್ನು ಕಾಣಬಹುದಾಗಿದೆ. ಪ್ರಸ್ತುತದಲ್ಲಿ ಬಹುವಾಗಿ ರಚಿತವಾಗುತ್ತದೆ. ದೃಶ್ಯಕಲಾಸಾಹಿತ್ಯದಲ್ಲಿ ಸಾಮಾನ್ಯವಾಗಿ ವ್ಯಕ್ತಿಕೇಂದ್ರಿತ ಬರವಣಿಗೆ ಕಾಣಸಿಗುವ ಹೊತ್ತಿಗೆ ಸಂಕೀರ್ಣ ಸಾಹಿತ್ಯವು ಕೂಡಾ ಹೇರಳವಾಗಿ ರಚಿತವಾಗುತ್ತಿರುವುದು ಒಂದು ಗಮನಾರ್ಹ ಸಂಗತಿಯಾಗಿದೆ. ಈ ಸಂಕೀರ್ಣಸಾಹಿತ್ಯದಲ್ಲಿ ಕಲೆಯ ವಿಮರ್ಶೆಯೇ ಪ್ರಧಾನವಾಗಿದ್ದು, ಹಲವಾರು ವಿಷಯಗಳನ್ನು ಕಲೆ ಹೇಗೆ ಒಳಗೊಳ್ಳುತ್ತದೆ ಎಂಬ ಅಂಶವನ್ನು ವಿಶೇಷವಾಗಿ ಗಮನಿಸಬಹುದಾಗಿದೆ.

ಕಲೆಯು ಕೇವಲ ಕಲೆಯಾಗಿರದೆ ಅದು ವಿವಿಧ ಸಿದ್ಧಾಂತಗಳ ನಂಟನ್ನು ಹೊಂದಿದೆ. ಕಲೆಯನ್ನು ವಿಮರ್ಶಾ ದೃಷ್ಟಿಯಿಂದ ನೋಡಿದಾಗ ಮಾತ್ರ ಅದರ ಮೌಲ್ಯವನ್ನ ನಿರ್ಧರಿಲು ಸಾಧ್ಯವಾಗುವುದು. ಆಧ್ಯಾತ್ಮ, ಸಮಾಜ, ಮುಂತಾದ ವಿಷಯಗಳೊಂದಿಗೆ ಕಲೆಯಸಂಬಂಧ ಅನನ್ಯವಾದುದು. ಹೀಗೆ ಅನನ್ಯವಾದ ಸ್ವರೂಪಗಳನ್ನು ಯಾವ ಬಗೆಯಲ್ಲಿ ವಿವೇಚಿಸಬೇಕು? ಎಂಬ ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕುವ ನೆಲೆಯಲ್ಲಿ ಕಲೆಯು ಅನೇಕ ಅಂಶಗಳನ್ನು ತನ್ನೊಡಲಿನಲ್ಲಿ ಹುದುಗಿಸಿಕೊಂಡಿದೆ ಎಂಬುದು ಅರಿವಿಗೆ ಬರುತ್ತದೆ. ಈ ಹಿನ್ನೆಲೆಯಲ್ಲಿ ಕಲೆಯ ಬಹುಮುಖವನ್ನು ಪರಿಚಯಿಸುವ ದೃಷ್ಟಿಯಿಂದ ಸೃಷ್ಟಿಯಾದ ಸಂಕೀರ್ಣ ಸಾಹಿತ್ಯವೂ ಕೂಡಾ ವ್ಯಾಪಕ ಅಸ್ತಿತ್ವ ಪಡೆದಿದೆ.

ಕಲೆಯ ತಾತ್ವಿಕತೆ ಹಾಗೂ ಕಲಾಕೃತಿಗಳ ಪ್ರಸ್ತುತತೆ ಮುಂತಾದ ವಿಷಯದನ್ವಯ ಅನೇಕ ವಿಮರ್ಶೆ ವಿಶ್ಲೇಷಣೆಗಳನ್ನು ಈ ಸಂಕೀರ್ಣ ಸಾಹಿತ್ಯ ಒಳಗೊಂಡಿದೆ. ವೈವಿಧ್ಯಮಯ ಭಾಷೆಯ ಬಳಕೆಯನ್ನು ಈ ಸಂಕೀರ್ಣ ಸಾಹಿತ್ಯದಲ್ಲಿ ಕಾಣಲಾಗಿದೆ.

ಕಲಾ ಬರಹಗಾರರಾದ ಎಂ.ಎಚ್.ಕೃಷ್ಣಯ್ಯ, ವಿ.ಸೀತಾರಾಮಯ್ಯ, ಅ.ಲ.ನರಸಿಂಹನ್, ಅ.ಸುಂದರ್, ಅರುಣಿ, ಶಿವರಾಂ ಕಾರಂತ, ಸಿ.ಪಿ.ಕೆ, ಕೆ.ವಿ.ಸುಬ್ರಹ್ಮಣ್ಯಂ, ಬಿ.ವಿ.ಕೆ.ಶಾಸ್ತ್ರಿ, ಕೃಷ್ಣಾನಂದ ಕಾಮತ್, ಎಸ್.ಕೆ.ರಾಮಚಂದ್ರರಾವ್, ಕೆ.ಎಸ್.ಶ್ರೀನಿವಾಸ್ ಮೂರ್ತಿ, ಪಿ.ಆರ್ ತಿಪ್ಪೇಸ್ವಾಮಿ, ಅ.ನ.ಕೃಷ್ಣರಾವ್, ಎಂ.ಎಸ್.ನಂಜುಂಡರಾವ್ ಮುಂತಾದ ಪ್ರಸಿದ್ಧರು ಕಲಾವಿಮರ್ಶೆಯನ್ನು ಮಾಡಿದ್ದಾರೆ. ಪ್ರಾರಂಭದ ಹಂತದಲ್ಲಿ ಕಲೆಯ ವಸ್ತು ವಿಷಯ, ಸಾಮಾಜಿಕ ಸಂಬಂಧ, ಕಲೆಯ ವ್ಯಾಪಕತೆಯನ್ನು ಚರ್ಚಿಸಿದ ವಿದ್ವಾಂಸರು ಕಲೆಯ ಮೀಮಾಂಸಾ ಕ್ಷೇತ್ರದಲ್ಲಿ ಅದ್ವಿತೀಯ ಕಾರ್ಯ ಮಾಡಿದ್ದಾರೆಂದೇ ಹೇಳಬಹುದು. ಕಲಾಸಾಹಿತ್ಯ ಆರಂಭದ ದಶಕದಿಂದ ಹಿಡಿದು ಇಂದೂ ಕೂಡಾ ಈ ವಿಮರ್ಶಾ ಪ್ರಕಾರದಲ್ಲಿ ಕಲೆಯನ್ನು ಪ್ರಸ್ತುತ ಪಡಿಸುವ ನಿಟ್ಟನಲ್ಲಿ ಮಾಡಿದ ಪ್ರಯತ್ನದಿಂದಾಗಿ ಈ ಕಲಾ ಸಾಹಿತ್ಯ ಸಮಕಾಲೀನದಲ್ಲಿ ಸಜೀವವಾಗಿದೆ ಎನ್ನಬಹುದು. ಈ ಪ್ರಕ್ರಿಯೆಯಿಂದ ಕಲಾಸಹಿತ್ಯದ ಅಸ್ತಿತ್ವವೂ ವಿಸ್ತಾರವಾದಂತೆ ಕಲೆಯೂಕೂಡಾ ಪರೋಕ್ಷವಾಗಿ ಜೀವಂತಿಕೆ ಪಡೆಯುವಲ್ಲಿ ಸಂದೇಹವಿಲ್ಲ ಎನ್ನಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸಂಕೀರ್ಣ ಪ್ರಕಾರದಲ್ಲಿ ಅನೇಕ ವಿಷಯಸಂಬಂಧಿ ಕೃತಿಗಳು ಲಭ್ಯವಾಗುತ್ತವೆ.

ಸಂಪಾದನಾಕೇಂದ್ರಿತ ಸಾಹಿತ್ಯದಲ್ಲಿ ಹಲವಾರು ವಿಷಯಗಳನ್ನುಗೊಂಡ ಕೃತಿಗಳು ರಚನೆಯಾಗಿದ್ದರೂ ಏಕವಿಷಯದನ್ವಯ ಕೃತಿರೂಪದಲ್ಲಿ ರಚಿತವಾಗಿರದೆ ಅವು ಹಲವು ಲೇಖನ ರೂಪದಲ್ಲಿ ರಚಿತಗೊಂಡು ಸಂಪಾದಿಸಲ್ಪಟ್ಟಿರುವ ಸಾಧ್ಯತೆಗಳಿರುತ್ತವೆ. ಈ ಹಿನ್ನೆಲೆಯಲ್ಲಿ ಸಂಪಾದನೆಗಿಂತ ಭಿನ್ನವಾಗಿ ಸಂಕೀರ್ಣ ಸಾಹಿತ್ಯವನ್ನು ಕಾಣಬಹುದಾಗಿದೆ.

ಕಳೆದ ದಶಕದಲ್ಲಿ, ಕೆ.ವಿ.ಸುಬ್ರಹ್ಮಣ್ಯಂ, ಅ.ಲ.ನರಸಿಂಹನ್, ಡಿ.ಎ.ಉಪಾಧ್ಯ, ಡಾ ಮಲ್ಲಿಕಾರ್ಜುನ್ ಬಾಗೋಡಿ, ಶಿವಾನಂದ ಬಂಟನೂರ, ಸಿ. ಎಂ ರವಿ, ಕೆ. ರವಿಕುಮಾರ್ ಕಾಶಿ, ಡಾ.ರಂ.ಶ್ರೀ.ಮುಗಳಿ, ಆರ್.ಎಚ್.ಕುಲಕರ್ಣಿ, ಡಾ.ಎಸ್.ಸಿ.ಪಾಟೀಲ, ಎಲ್.ಶಿವಲಿಂಗಪ್ಪ ಮುಂತಾದ ಕಲಾಲೇಖಕರು ಕಲಾವಿಮರ್ಶೆಯ ಜೊತೆಗೆ ಹಲವಾರು ಕಲಾವಿಷಯದ ಕುರಿತಾಗಿ ಬರೆದಿದ್ದಾರೆ. ಅಂತಹ ಕೃತಿಗಳನ್ನು ಇಂದು ಅಧ್ಯಯನ ಕೈಗೊಳ್ಳುವುದು ಅವಶ್ಯವಿದೆ.

ಕೆ.ವಿ.ಸುಬ್ರಣ್ಯಂರವರ, ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ, ಮುಖಗಳೊಂದಿಗೆ ಮುಖಾ ಮುಖಿ, ಶಿಲಾಶ್ರಯ ಕಲೆಯ ದೃಶ್ಯಧ್ಯಾನ, ಆದಿಮ ದೃಶ್ಯ ಸೌಂದರ್ಯದ ಅಧಿಪತ್ಯ, ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ,ಇನ್ನು ಕೆಲವು ಕೃತಿಗಳನ್ನು ಉತ್ತಮ ಕಲಾವಿಮರ್ಶೆಯನ್ನು ಕಾಣಬಹುದಾಗಿದೆ. ಕೆ. ವಿ. ಸುಬ್ರಣ್ಯಂರವರ ಕೃತಿಯಲ್ಲಿ ಆಳವಾದ ಕಲಾವಿಮರ್ಶೆಯ ಅಂಶಗಳಿವೆ. ಸೈದ್ಧಾಂತಿಕ ನೆಲೆಯಲ್ಲಿ ಕಲೆಯನ್ನು ವಿಮರ್ಶಿಸುವ, ಅರ್ಥೈಸುವ ವಿಶ್ಲೇಸುವ ಸಾಮರ್ಥ್ಯ ಕೆ.ವಿ.ಸುಬ್ರಣ್ಯಂರವರ ಬರಹಕ್ಕಿದೆ. ಓದುಗರಿಗೆ ಕೇವಲ ಮೇಲ್ನೋಟಕ್ಕೆ ಸಹಜವಾಗಿ ಕಂಡರೂ, ಅದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ಅದರ ಘನಗಾಂಭೀರ್ಯ ಅರಿವಾಗುತ್ತದೆ. ಹೀಗೆ

ಅಂತರ್ಯದಲ್ಲಿ ವಿಶೇಷವಾದ ಅರ್ಥವನ್ನ ಒಳಗೊಂಡ ಸಾಹಿತ್ಯ ಕೃತಿಗಳಿಗೆ ಶಿರ್ಷಿಕೆ ನೀಡುವುದರಲ್ಲಿಯೂ ಕೆ. ವಿ. ಅವರ ಪ್ರತಿಭೆಯ ವಿಶಿಷ್ಟ್ಯ ಗೋಚರಿಸುತ್ತದೆ.

ಕೆ.ವಿ.ಸುಬ್ರಣ್ಯಂರವರ 'ಮುಖಗಳೊಂದಿಗೆ ಮುಖಾಮುಖಿ' ಕೃತಿಯಲ್ಲಿ ಕೆ. ವಿ.ಯವರು ಪ್ರಾರಂಭದಲ್ಲಿ ಜಿವಂತ ಮುಖಗಳೇ ದಿನನಿತ್ಯ ಮುಖಾಮುಖಿ ಯಾಗುತ್ತಿರುವಾಗ ಗೋಡೆಯ ಮೇಲೆ ಚಿತ್ರಗಳನ್ನೇಕೆ ನೇತು ಹಾಕಬೇಕು? ಭಾವಚಿತ್ರ ಪರಂಪರೆಗೆ ೫೦೦೦ ವರ್ಷಗಳ ಇತಿಹಾಸ ಏಕಿದೆ? ಎಂದು ಪ್ರಶ್ನಿಸುವಲ್ಲಿ ಸಜೀವ ಹಾಗೂ ನಿರ್ಜಿವ ಅಂಶಗಳ ಹಿನ್ನೆಲೆಯ ತತ್ವಗಳ ಜಿಜ್ಞಾಸೆಯಿದೆ. ಕೃತಿ. ಪ್ರತಿಕೃತಿಗಳ ನಡುವಿನ ಪ್ರಶ್ನೆಗಳು ಹುಟ್ಟುತ್ತವೆ. ಹೀಗೆ ವಿಮರ್ಶೆಯಿಂದಲೇ ಕಲಾಕೃತಿಗಳನ್ನು ಕಲಾವಿದರನ್ನು ಪ್ರವೇಶಿಸುವ ಕೆ. ವಿ ಸುಬ್ರಹ್ಮಣ್ಯಂ ಅವರು ತಮ್ಮ ಕೃತಿಯಲ್ಲಿ ಸಾಂದರ್ಭಿಕವಾಗಿ ಕಲೆಯ ಪ್ರಕಾರಗಳನ್ನು ಭಾವಚಿತ್ರಗಳ ಛಾಯಾಚಿತ್ರಗಳನ್ನು ಬಳಸಿಕೊಂಡಿದ್ದಾರೆ. ಮುಖಭಾವ ಚಿತ್ರಗಳ ಸ್ವರೂಪವನ್ನು ತೋರ್ಪಡಿಸುತ್ತ, ಜಾಗತಿಕಮಟ್ಟದ ವಿವಿಧ ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಪ್ರಾಸಂಗಿಕವಾಗಿ ವಿವರಿಸಿದ್ದಾರೆ. ಶಿಲಾಶ್ರಯ ಕಲೆಯ ದೃಶ್ಯಧ್ಯಾನ ಕೃತಿಯಲ್ಲಿ (ಕ.ವಿ. ಹಂಪಿ ಪ್ರಸಾರಾಂಗದಿಂದ ಕೃತಿ) ಕೆ. ವಿ. ಸುಬ್ರಹ್ಮಣ್ಯಂರವರು ಆದಿಮ ಸಂಸ್ಕೃತಿಯ ಪರಿಚಯವನ್ನು ಮಾಡಿಸಿದ್ದಾರೆ. ಆದಿಮಾನವನ ಕಾಲದ ಚಿತ್ರಗಳು ಅವುಗಳ ವಸ್ತುವಿಷಯ, ಸ್ಥಳಗಳು ಅವುಗಳ ಐತಿಹಾಸಿಕ ಹಿನ್ನೆಲೆಯನ್ನ ಕುರಿತು ಬರೆದಿದ್ದಾರೆ. ಭಾರತದ ಹಲವಾರು ಆದಿವಾಸಿ ನೆಲೆಗಳನ್ನು ಸಂದರ್ಶಿಸಿ, ತಮ್ಮ ಕೃತಿಯಲ್ಲಿ ಆದಿಮಕಲೆಯ ಸ್ವರೂಪವನ್ನು ಕಂಡರಿಸಿದ್ದಾರೆ. ಇತಿಹಾಸಕ್ಕೆ ಧಕ್ಕೆ ಬರದಂತೆ ಸುಂದರ ಬರವಣಿಗೆಯ ಮೂಲಕ ನಿರೂಪಿಸಿದ್ದಾರೆ.

ಕೆ. ವಿ. ಸುಬ್ರಹ್ಮಣ್ಯಂ ಅವರ **ಆದಿಮ ದೃಶ್ಯಸೌಂದರ್ಯ ಆದಿಪತ್ಯ** ಕೃತಿಯ ಚಿತ್ರಕಾವ್ಯ ಪ್ರಕಾಶನದಿಂದ ೨೦೧೧ ರಲ್ಲಿ ಪ್ರಕಟವಾದ ಆದಿಮ ಸಂಸ್ಕೃತಿಯ ಚಿತ್ರಕಲೆಯನ್ನು ವಿವರಿಸುವ ಇನ್ನೊಂದು ಕೃತಿಯಾಗಿದೆ. ಭಾರತದ ವಿವಿಧ ಪ್ರದೇಶಗಳ ಆದಿಮಾನವನ ಚಿತ್ರಕಲೆಯನ್ನು ವಿವರಿಸುವ ಕೃತಿಯಾಗಿದೆ. ಕೃತಿಯಲ್ಲಿ ಆದಿಮ ಕಲೆಯನ್ನು ದೇಶ, ಕಾಲ ಮಿರಿದ **'ಕೃತಿ'** ಸೃಷ್ಟಿಯ ಹೊಳಹುಗಳು ನಮ್ಮ ಸಮಕಾಲೀನವಾಗಿಯೂ ಪ್ರಭಾವಶಾಲಿಯಾಗಿವೆ ಎಂದಿದ್ದಾರೆ. ದೃಶ್ಯ ಮತ್ತು ಸಂದರ್ಭಗಳನ್ನು ಸಮಕಾಲೀನವಾಗಿ ಕಾಣುತ್ತೇವೆ[೧] ಎಂದ ಲೇಖಕರು ಇಂದಿನ ಕಲಾವಿದರ ಅಥವಾ ಸಮಕಾಲೀನರ ಪ್ರಶ್ನೆಯೇ ಅಂದಿನ ಆದಿಮರ ಕಲಾ ಸೃಷ್ಟಿಯ ಪ್ರಶ್ನೆಯಾಗಿದೆ ಎಂದು ಅಭಿಪ್ರಾಯ ಪಟ್ಟಿದಾರೆ. ಇಂತಹ ವಿಶೇಷವಾದ ಕುತೂಹಲ ಹುಟ್ಟಿಸುವ ವಿಷಯಗಳನ್ನು ಲೇಖಕರು ಓದುಗರ ಮುಂದಿರಿಸಿದ್ದಾರೆ. ಪ್ರಸ್ತುತ ಕೃತಿಯ ಐತಿಹಾಸಿಕವಾಗಿಯೂ, ಕಲಾ ದೃಷ್ಟಿಯಿಂದಲೂ, ಬರವಣಿಗೆಯಿಂದಲೂ ಪ್ರಾಮುಖ್ಯತೆ ಪಡೆದಿದೆ.

ಕೆ.ವಿ.ಸುಬ್ರಹ್ಮಣ್ಯಂರವರು ಸಮಕಾಲೀನ ಲೇಖಕರಾಗಿ ಸಮಕಾಲೀನ ಕಲೆಯನ್ನೇ ವಿಮರ್ಶಿಸುವುದರರೊಂದಿಗೆ ಸಮಕಾಲೀನವಲ್ಲದ ಕಲೆಯನ್ನು ಕೂಡಾ ತಮ್ಮ ಬರಹಗಳಲ್ಲಿ ವಿಮರ್ಶಿಸಿ ಅವುಗಳ ಇಂದಿನ ಸಾಧ್ಯತೆ, ಪ್ರಸ್ತುತತೆಗಳನ್ನು ಕಂಡರಿಸಿದ್ದಾರೆ.

ಒಂದು ಸಂಪ್ರದಾಯಿಕ ಕಲೆ ಇರಲಿ, ಇನ್ಸ್ಟಾಲೇಷನ್ ಆರ್ಟ್ ಇರಲಿ, ಹೀಗೆ ಅನೇಕ ಪ್ರಕಾರದ ಕಲೆಗಳನ್ನು ಅರಿತು ಕೊಂಡಿರುವ ಸುಬ್ರಹ್ಮಣ್ಯಂರವರು ತಮ್ಮ ಬರಹದ ಮೂಲಕ ಅಅವುಗಳ ಸ್ವರೂಪವನ್ನು ನಿರೂಪಿಸುವುದರ ಮೂಲಕ ಕಲಾಸಾಹಿತ್ಯಕ್ಕೆ ಅತ್ಯುತ್ತಮ ಕೊಡುಗೆ ನೀಡಿದ್ದಾರೆ. ಕಲಾಕೃತಿ, ಕಲಾವಿದಕೇಂದ್ರಿತವಾಗಿ ಬರೆಯುವುದಲ್ಲದೆ ಕಲೆಯ ಕುರಿತಾಗಿ ವಿವಿಧ ಸಿದ್ಧಾಂತಗಳ ನೆಲೆಯಲ್ಲಿ ತರ್ಕಿಸಿ ಕಲಾವಿಮರ್ಶಕರಾಗಿದ್ದಾರೆ. ಒಟ್ಟಾರೆಯಾಗಿ ಕೆ.ವಿ. ಅವರ ಕೊಡುಗೆ ಸಮಕಾಲೀನ ಕಲಾಸಾಹಿತ್ಯಕ್ಕೆ ಅನನ್ಯವಾಗಿದೆ.

ಎನ್. ಮರಿಶಾಮಾಚಾರ್‌ವರೂ ಕೂಡಾ ಸಂಕೀರ್ಣ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಮರಿಶಾಮಾಚಾರ್ ಅವರ **ಕರ್ನಾಟಕದ ಚಿತ್ರಕಲಾ ಪರಂಪರೆ** ಕೃತಿಯ ರಚಿಸಲ್ಪಟ್ಟಿದೆ. ಸಿ.ಎಂ.ಎನ್ ಪ್ರಕಾಶನದಿಂದ ಪ್ರಕಟಣೆಯಾಗಿದೆ. ಪ್ರಾಚೀನ ರಾಜ ಮನೆತನಗಳಿಂದ **ಚಿತ್ರಕಲಾಪರಂಪರೆ** ಹೇಗೆ ರೂಪಿತವಾಯಿತು ಎಂದು ಅರಸು ಮನೆತನದ ಕಾಲಘಟ್ಟವನ್ನು ಉದಾಹರಿಸುತ್ತಾ, ಅವುಗಳ ಅವಧಿಯಲ್ಲಿ ಚಿತ್ರಕಲೆಯ ಸ್ವರೂಪವನ್ನು ಹಲವಾರು ಅಂಶಗಳ ಹಿನ್ನೆಲೆಯಲ್ಲಿ ಹಾಗೂ ವಿವಿಧ ಆಯಾಮಗಳ ನೆಲೆಯಲ್ಲಿ ಲೇಖಕರು ತೋರಿಸಿದ್ದಾರೆ. ಕರ್ನಾಟಕದ ಪ್ರಾಚೀನ ಚಿತ್ರಕಲೆಯು ಚಾಲುಕ್ಯ, ಕದಂಬ, ರಾಷ್ಟ್ರಕೂಟ ಮುಂತಾದ ಅರಸು ಮನೆತನಗಳ ಕಾಲದಲ್ಲಿ ಕಲೆಗೆ ಅನೇಕ ಕಾರಣಗಳಾಗಿ, ಧಾರ್ಮಿಕತೆ, ಸೌಂದರ್ಯಪ್ರಜ್ಞೆ, ದೇಶಿಯತೆ, ಅಂದಿನ ವಸ್ತ್ರವಿನ್ಯಾಸದ ಕಲ್ಪನೆ ಹೀಗೆ ಸಾಂಸ್ಕೃತಿಕ ಅಂಶಗಳು ಪ್ರಭಾವಿಯಾಗಿ ಹೇಗೆ ಕೆಲಸ ಮಾಡಿದವು ಎಂದು ಮುಂತಾಗಿ ಕಲೆಯ ಚರಿತ್ರೆಯನ್ನು, ಪರಂಪರೆಯನ್ನು ತಿಳಿಸುವ ಈ ಕೃತಿಯು ಸಾಂಪ್ರಾಯಿಕ ಚಿತ್ರಕಲೆಯ ಐತಿಹಾಸಿಕ ಅಂಶಗಳನ್ನು ಒಳಗೊಂಡಿದೆ.

೨೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಎನ್. ಮರಿಶಾಮಾಚಾರ್‌ರವರು ಅತಿಹೆಚ್ಚು ಸಂಪ್ರದಾಯಿಕ ಕಲೆ, ಚಿತ್ರಕಲಾ ಪರಂಪರೆಯ ಚರಿತ್ರೆ, ಪ್ರಾಚೀನ ಸಾಹಿತ್ಯಗಳಲ್ಲಿ ಕಲೆ ಮುಂತಾದ ವಿಷಯಗಳನ್ನು ಆಧರಿಸಿದ ಕೃತಿಗಳನ್ನು ರಚಿಸಿದ್ದಾರೆ. ಭಾರತೀಯ ಕಲಾವಿದರಲ್ಲದೆ ಪಾಶ್ಚಾತ್ಯ ಕಲಾವಿದರ ಕುರಿತಾಗಿ ಕಲಾ ಸಾಹಿತ್ಯವನ್ನು ಬರೆದ ಲೇಖಕರು ವ್ಯಕ್ತಿಕೇಂದ್ರಿತವಾಗಿ ಬರಹಗಳನ್ನು ರಚಿಸಿದ್ದಾರೆ. ಇವರ ಬರಹದಲ್ಲಿ ಸಮಕಾಲೀನ ಸಂದರ್ಭದ ಕಲಾವಿಮರ್ಶೆ ಹೆಚ್ಚಾಗಿ ಕಾಣಿಸದೆ, ಕಲೆಯ ನೇರ ಅಂಶಗಳನ್ನು ಕಥಾನಕ ಬರಹದ ರೀತಿಯಲ್ಲಿ ನಿರೂಪಿಸಿದ್ದನ್ನು ನೋಡಬಹುದಾಗಿದೆ. ವ್ಯಕ್ತಿಕೇಂದ್ರಿತವಾದ ಬರಹಗಳಲ್ಲಿ ಯಾವುದೇ ಒಬ್ಬ ಕಲಾವಿದನ ಕುರಿತಾಗಿ ಕಥೆಯ ರೀತಿಯಲ್ಲಿ ಅವನನ್ನು (ಕಲಾವಿದನನ್ನು) ಚಿತ್ರಿಸಿದ್ದಾರೆ. ಸರಳವಾದ ಭಾಷೆಯಿಂದ ಕೂಡಿದ ಮರಿಶಾಮಾಚಾರ್ ಅವರ ಬರಹಗಳಲ್ಲಿ ಭಾಷೆಯ ಪ್ರೌಢಿಮೆ ಕಂಡು ಬರುವುದಿಲ್ಲ. ವೈಚಾರಿಕ ಅಂಶಗಳೂ ಸಹ ಹೆಚ್ಚಾಗಿ ಕಾಣಬರುವುದಿಲ್ಲ. ಬದಲಾಗಿ ಕೃತಿಗಳಲ್ಲಿ ಪರಂಪರೆಯ ಹಿನ್ನೆಲೆಯಲ್ಲಿ ಕಲೆಯ ಚರಿತ್ರೆಯನ್ನು ಕಾಣಬಹುದಾಗಿದೆ. ಕರ್ನಾಟಕವಲ್ಲದೆ ಭಾರತೀಯ, ಪಾಶ್ಚಿಮಾತ್ಯ ಕಲೆಗಳ ಕುರಿತಾದ ಚರಿತ್ರೆಯನ್ನು ನಿರೂಪಿಸಿದ್ದಾರೆ.

ಮರಿಶಾಮಾಚಾರ ಅವರ ಬರವಣಿಗೆ ಕನ್ನಡ ಕಲಾಸಾಹಿತ್ಯದಲ್ಲಿ ಪಾಶ್ಚಿಮಾತ್ಯ ಕಲಾವಿದರ ಹಾಗೂ ಕಲೆಗಳ ಕುರಿತಂತೆ ದಾಖಲೆಯನ್ನು ಒದಗಿಸಿದೆ. ಭಾರತೀಯ ಪ್ರಮುಖ ಭಾಷೆಯಾದ ಸಂಸ್ಕೃತದಲ್ಲಿರುವ ವೇದ- ಉಪನಿಷತ್ತುಗಳಿಂದಾಗಿ ಪ್ರಾಚೀನ ಸಂಸ್ಕೃತಿ ಕಾವ್ಯಗಳಲ್ಲಿ ಪ್ರಸ್ತಾಪವಾಗಿರುವ ಕಲೆಯ ಅಂಶಗಳನ್ನು ಕನ್ನಡದಲ್ಲಿ ಕಂಡರಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುವಲ್ಲಿ ಮರಿಶಾಮಾಚಾರ್ ಅವರ ಕೃತಿಗಳು ಅನನ್ಯವಾಗಿವೆ.

ಖ್ಯಾತ ನೃತ್ಯಗಾರ್ತಿಯಾದ ಚೂಡಾಮಣಿ ನಂದಗೋಪಾಲ ಅವರ **ಶಿಲೆ-ಕಲೆ** ಎಂಬ ಕೃತಿಯು ೨೦೦೭ ರಲ್ಲಿ ಸುಂದರ ಪ್ರಕಾಶನ ಬೆಂಗಳೂರನಿಂದ ಪ್ರಕಟವಾಗಿದೆ. ನಾಟ್ಯಶಾಸ್ತ್ರವನ್ನು ಕುರಿತಾದ ಕೃತಿಯಾಗಿದರೂ ಶಿಲ್ಪದಲ್ಲಿ ನಾಟ್ಯಶಾಸ್ತ್ರದ ಮಹತ್ವವನ್ನು ಕಂಡರಿಸುವಲ್ಲಿ ಮಹತ್ವದ್ದಾಗಿದೆ. ಲೇಖಕರು ಭಾರತೀಯ ವಾಸ್ತುಶಿಲ್ಪದಲ್ಲಿ ನಾಟ್ಯ ಶಿಲ್ಪಗಳನ್ನು ಕುರಿತು ಅಧ್ಯಯನ ಕೈಗೊಂಡು, ಕೃತಿಯಲ್ಲಿ ನಾಟ್ಯಶಾಸ್ತ್ರವು, ಶಿಲ್ಪದಲ್ಲಿ ಹೇಗೆ ಸ್ವರೂಪವನ್ನು ಪಡೆದಿದೆ ಎಂಬುದಾಗಿ ವಿವರಿಸಿದ್ದಾರೆ. ವಿವಿಧ ನಾಟ್ಯ ಭಂಗಿಗಳ ಕುರಿತು ಸಾಹಿತ್ಯದಲ್ಲಿ ಪ್ರಾಸಂಗಿಕವಾಗಿ ಎಲ್ಲೆಲ್ಲಿ ಹೇಗೆ ಹೇಳಲಾಗಿದೆ ಎನ್ನುವುದನ್ನು ಕೆಲವು ಮಹತ್ವದ ಉದಾಹರಣೆಯನ್ನು ನೀಡಿ ವಿವರಿಸಿದ್ದಾರೆ. ವಿವಿಧ ಶಾಸನ, ಹಸ್ತಪ್ರತಿ, ಪ್ರಾಚೀನಕಾವ್ಯ, ಹೀಗೆ ಅನೇಕ ಜ್ಞಾನಶಾಖೆಗಳಿಂದ ನಾಟ್ಯಶಾಸ್ತ್ರದ ಕುರಿತಾಗಿ ವಿಷಯವನ್ನು ಸಂಗ್ರಹಿಸಿ ಬರೆದಿದ್ದಾರೆ. ರತ್ನಾಕರವರ್ಣಿಯ ಭರತೇಶವೈಭವದಲ್ಲಿ ಬರುವ ನಾಟ್ಯಕಲೆಯ ಪ್ರಸಂಗ, ವಿವಿಧ ನಾಟ್ಯಪ್ರಕಾರಗಳ ವೈಭವಗಳ ಕುರಿತಾದ ವರ್ಣನೆಗಳನ್ನು ಈ ಕೃತಿಯಲ್ಲಿ (ಶಿಲೆ-ಕಲೆ) ವಿವರಿಸಲಾಗಿದೆ. ಐತಿಹಾಸಿಕ ಸ್ಥಳಗಳಾದ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಹಂಪಿ, ಬೇಲೂರು, ಕೋನಾರ್ಕ ಮುಂತಾದ ಶಿಲ್ಪಕಲಾ ಕೇಂದ್ರಗಳಲ್ಲಿಯ ನೃತ್ಯಶಿಲ್ಪಗಳನ್ನು ವಿವರಿಸಿ ಅವುಗಳ ಛಾಯಾಚಿತ್ರಗಳನ್ನು ಪ್ರಕಟಿಸಲಾಗಿದೆ.

ನೃತ್ಯ, ಗೀತ, ಶಿಲ್ಪ, ದೃಷ್ಟಿಯಿಂದ ಮಹತ್ವ ಮಾಹಿತಿಯನ್ನು ಒದಗಿಸುವ ಕೃತಿ ಮೂರು ಕಲೆಗಳು ಸಂಧಿಸುವ ಸಂದರ್ಭವನ್ನ ಓದುಗನ ಮುಂದೆ ತೆರೆದಿಡುವಲ್ಲಿ ಸಫಲವಾಗಿದೆ. ಸಾಂದರ್ಭಿಕವಾಗಿ ನಾಟ್ಯಭಂಗಿ, ಹಸ್ತಮುದ್ರೆಗಳ ಕುರಿತಾಗಿ ರೇಖಾ ಚಿತ್ರಗಳನ್ನು ಬಳಸಿದುದು ಕೃತಿಯನ್ನು ಹೆಚ್ಚು ಪ್ರಭಾವಿ ಹಾಗೂ ಮೌಲಿಕವಾಗುವಂತೆ ಮಾಡಿದೆ. ಸುಮಾರು ೩೯೫ ಪುಟಗಳನ್ನು ಕೃತಿ ಒಳಗೊಂಡಿದೆ.

ಡಾ. ಶಿವಾನಂದ ಬಂಟನೂರರ **ಸಮಕಾಲೀನ ಶಿಲ್ಪಕಲೆ** ಕೃತಿಯು ೨೦೧೦ ರಲ್ಲಿ ಕನ್ನಡ ವಿಶ್ವ ವಿದ್ಯಾಲಯದಿಂದ ಪ್ರಕಟಗೊಂಡಿದೆ. ಈ ಕೃತಿಯು ಸಮಕಾಲೀನ ಶಿಲ್ಪಕಲೆಯ ಕುರಿತಾಗಿ ಅನೇಕ ವಿಚಾರಗಳನ್ನು ತಿಳಿಸಿಕೊಡುತ್ತದೆ. ಕೆ. ವೆಂಕಟಪ್ಪ ಅವರಿಂದ ಸಮಕಾಲೀನ ಶಿಲ್ಪವನ್ನು ಕಾಲವನ್ನು ಗುರ್ತಿಸಬಹುದೆಂಬ ಅಭಿಪ್ರಾಯವನ್ನು ಒಳಗೊಂಡು, ಕೃತಿಯಲ್ಲಿ ಅನೇಕ ಸಮಕಾಲೀನ ಕಲಾವಿದರ ಸಾಧನೆ, ಕಲಾರಚನೆಯ ವಿಧಾನ, ಮಾಧ್ಯಮ, ತಂತ್ರ, ಶೈಲಿ, ವಸ್ತುವಿಷಯ ಮುಂತಾಗಿ ವಿವರಿಸಲಾಗಿದೆ. ಈ ಕೃತಿಯ ಮೂಲಕ ಲೇಖಕರು ಅನೇಕ ಲೇಖಕರ ಜೀವನ ಸಾಧನೆಗಳನ್ನು ಸ್ಥೂಲವಾಗಿ ಪರಿಚಯಿಸುವುದರ ಜೊತೆಗೆ ಅವರ ಕೃತಿಗಳನ್ನು ವಿಮರ್ಶಿಸಿದ್ದಾರೆ. ಸಮಕಾಲೀನ ಸಂದರ್ಭದಲ್ಲಿ ಕಲೆಯು ಹೇಗೆ ನಿರೂಪಿತವಾಗಿದೆ ಎಂದು ವಿವರಿಸುತ್ತಾ ಶಿಲ್ಪ ಕಲಾಕೃತಿಗಳ

ಶೀರ್ಷಿಕೆಗಳನ್ನು ವಿವರಿಸಿ ಅವುಗಳ ಹಿನ್ನೆಲೆಯಾಗಿ ಕೃತಿಯ ಸ್ವರೂಪವನ್ನು ಕಂಡರಿಸಿದ್ದಾರೆ. ಆ ಮೂಲಕ ಕಲೆಯ ಕ್ರಮಬದ್ಧ ಚರಿತ್ರೆಯನ್ನು, ಅದು ಬೆಳೆದುಬಂದ ದಾರಿ ಹಾಗೂ ಕ್ರಮಗಳನ್ನು ನಿರ್ದಿಷ್ಟವಾಗಿ ಹೇಳುವಲ್ಲಿ ವಿಷಯದ ಸ್ಪಷ್ಟತೆಯೊಂದಿಗೆ ಭಾವಪೂರ್ಣತೆಯು ಅಡಕವಾಗಿದೆ. ಲೇಖಕರು ಸ್ವತಃ ಶಿಲ್ಪಕಲಾವಿದರಾಗಿಯೂ ಪ್ರಾಸಂಗಿಕವಾಗಿ ಕೃತಿಯ ಸಂದರ್ಭಗಳನ್ನು ವಿವರಿಸುವಲ್ಲಿ ಕೃತಿಗಳ ಸಮಕಾಲೀನ ಪಾತ್ರವನ್ನ ಹಾಗೂ ಸ್ವರೂಪವನ್ನು ಕಂಡರಿಸಿರುವುದು ವಿಶೇಷವಾಗಿದೆ. ಪ್ರಮುಖ ಕಲಾವಿದರಾದ ವೆಂಕಟಾಚಲಪತಿ, ಜಾನ್ ದೇವರಾಜ್, ಅರ್ಕಸಾಲಿ ಸೂತ್ರಧಾರ, ಪೊನ್ನಪ್ಪ ರಾಜಾರಾಂ, ಯುಸೂಫ್ ಅರಕಲ್, ನಂಜಯ ಶಿಲ್ಪಿ, ರಮೇಶಚಂದ್ರ, ಕೆ. ರಾಘವೇಂದ್ರ ಮುಂತಾದವರ ಕಲಾಕೃತಿಗಳ ಛಾಯಾಚಿತ್ರಗಳನ್ನು ಪ್ರಕಟಿಸಿ ವಿವರಿಸಿ ಕೃತಿಗೆ ಮೌಲ್ಯವನ್ನು ತಂದು ಕೊಟ್ಟಿದೆ. ೨೫ ಪುಟಗಳ ಚಿಕ್ಕದಾದ ಕೃತಿಯು ವಿಚಾರದ ದೃಷ್ಟಿಯಿಂದಲೂ ಬರವಣಿಗೆ ದೃಷ್ಟಿಯಿಂದಲೂ ಮೌಲಿಕವಾಗಿದೆ.

ಡಾ. ಶಿವಾನಂದ ಬಂಟನೂರರ **ಮಾಟದೊಳಗಣ ನೋಟ** ಎಂಬ ಕೃತಿಯು ೨೦೧೦ರಲ್ಲಿ ಯಾಜಿ ಪ್ರಕಾಶನದಿಂದ ಹೊರಬಂದಿದೆ. ಕೃತಿಯು ಶಿಲ್ಪಕಲೆಯ ಐತಿಹಾಸಿಕ ಮಹತ್ವ ಪಡೆದಂತೆ ಜಾನಪದ ಹಿನ್ನೆಲೆಯಲ್ಲಿ ರಚಿಸಲಾದ ಶಿಲ್ಪಗಳ ಸ್ವರೂಪವನ್ನು ತಿಳಿಸುತ್ತದೆ. ಲೋಹ, ಕಾಷ್ಠ, ಶಿಲೆ ಮುಂತಾದ ಮಾಧ್ಯಮಗಳಲ್ಲಿ ರಚಿತವಾದ ಜಾನಪದ ಶಿಲ್ಪಗಳ ಕುರಿತಾಗಿ ವಿವರಿಸುವ ಕೃತಿ ಆರಾಧನೆಯಲ್ಲಿ ಲೋಹ ಶಿಲ್ಪಗಳು, ಸಾಂಪ್ರದಾಯಿಕ ಶಿಲ್ಪಕಲೆ, ಶಿಲ್ಪಕಲೆ ಕೆತ್ತನೆಯ ರಚನೆ, ಮನೆಯೆಂಬ ಸುಂದರ ವಾಸ್ತು ಶಿಲ್ಪಗಳು[೩] ಆಚರಣೆಯಲ್ಲಿ ಜನಪದ ಶಿಲ್ಪಗಳು, ಜನಪದ ಮರಶಿಲ್ಪಗಳ ರಚನೆ ಮತ್ತು ಸ್ವರೂಪ,[೪] ಮೆಕ್ಕೆಕಟ್ಟೆ ಶಿಲ್ಪಗಳು, ತುರುಗೋಳ್ ಸ್ಮಾರಕಶಿಲ್ಪಗಳ ದೃಶ್ಯಾನುಭವ, ಸಮಕಾಲೀನ ಶಿಲ್ಪಕಲೆಯ ಒಳನೋಟ ಎಂಬ ಲೇಖನಗಳನ್ನು ಒಳಗೊಂಡಿದೆ. ಈ ಎಲ್ಲ ಲೇಖನಗಳಲ್ಲಿ, ಶಿಲ್ಪಕಲೆಯು ವಿವಿಧ ರಾಜಮನೆತನಗಳ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದ ರೀತಿಯನ್ನು ತಿಳಿಸಲಾಗಿದೆ. ಶಿಲೆ, ಲೋಹ, ಮರ, ಮುಂತಾದ ಮಾಧ್ಯಮಗಳ ಜನಪದ ಸಂಸ್ಕೃತಿಯ ಹಿನ್ನೆಲೆ, ಧಾರ್ಮಿಕ, ಸಾಮಾಜಿಕ ನಂಟು ಮುಂತಾದ ವಿಷಯವಾಗಿ ವಿಮರ್ಶಾತ್ಮಕವಾಗಿ ವಿವರಣೆಗೊಂಡಿದೆ. ಲೇಖಕರು ಶಿಲ್ಪಕಲೆಯ ಸಂದರ್ಭ, ವಸ್ತುವಿಷಯ, ನಂಬಿಕೆ, ಆಚರಣೆ ಮುಂತಾದ ಅಂಶಗಳನ್ನು ಹೇಳುವುದರ ಜೊತೆಗೆ ವಾಸ್ತುಶಿಲ್ಪ, ಮೂರ್ತಿ ಶಿಲ್ಪಗಳ ಕಲಾತ್ಮಕ ಅಂಶಗಳನ್ನು ವಿವರಿಸಿದ್ದಾರೆ. ಗ್ರಾಮೀಣರ ಅನುಭವ ಹೃದಯ ಶ್ರೀಮಂತಿಕೆ, ಸಂಸ್ಕಾರಗಳು ಶಿಲ್ಪದಲ್ಲಿ ಅರಳಿನಿಂತಿವೆ ಎಂದು ಹೇಳುವುದರ ಜೊತೆಗೆ ಪ್ರಕೃತಿಯೊಂದಿಗಿನ ಮನುಷ್ಯನ ಒಡನಾಟ ಅವಿನಾಭಾವವಾದುದೆಂದು ತೋರ್ಪಡಿಸಲಾಗಿದೆ. ಕೃತಿಯು ಜನಪದರ ಜೀವನದ ಹಲವು ಮಜಲುಗಳನ್ನು ಕಂಡರಿಸುವುದರೊಂದಿಗೆ ಶಿಲ್ಪಕಲೆಯ ವೈಶಿಷ್ಟ್ಯವನ್ನು ಹೇಳುವಲ್ಲಿ ಮೌಲಿಕವಾಗಿದೆ.

ದೃಶ್ಯ ಪದ ದೃಶ್ಯ ಕೃತಿಯು ೨೦೧೨ ರಲ್ಲಿ ಅಲಕಾ ಪ್ರಕಾಶನದಿಂದ ಪ್ರಕಟವಾಗಿದೆ. ಒಟ್ಟು ಹದಿನಾರು ಲೇಖನಗಳನ್ನು ಒಳಗೊಂಡ ಕೃತಿಯು ವಿಮರ್ಶಾ ನೆಲೆಯಿಂದ ಮಹತ್ವದ್ದಾಗಿದೆ. ಕಲೆಯ

ಮೂಲಭೂತ ಆಶಯ ಹಾಗೂ ಕಲೆಯ ಮೂಲ ಪ್ರಶ್ನೆಗಳನ್ನು ಮುಂದಿರಿಸಿ, ಹಲವು ಜಿಜ್ಞಾಸೆಗಳೊಂದಿಗೆ ವಿಮರ್ಶೆ ಮಾಡುತ್ತಾ ಲೇಖಕರು ಸಾಂದರ್ಭಿಕವಾಗಿ ಹಲವು ಘಟನೆ ಹಾಗೂ ಕಲಾವಿದರ ಅನುಭವಗಳನ್ನು ಉದಾಹರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೃತಿಯು ವಿಮರ್ಶೆಯ ಜೊತಗೆ ಹಲವು ಮಹತ್ವದ ಕಲಾ ಘಟನೆಗಳನ್ನು ದಾಖಲಿಸುತ್ತದೆ. ಮತ್ತು ವಿಮರ್ಶೆಯಿಂದ ಒದಗಿ, ಲೇಖಕರ ನಿಲುವಿಗೆ ಪುಷ್ಠಿಯಾಗಿ ಘಟನೆಗಳು, ಸಂದರ್ಭಗಳು ಔಚಿತ್ಯ ಪೂರ್ಣವಾಗಿ ಮೂಡಿಬಂದಿವೆ. ಲೇಖಕರು ಕಲೆಯನ್ನು ಒಂದು ಸೃಜನಶೀಲ ಸೃಷ್ಟಿಕ್ರಿಯೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅನುಭವ, ವ್ಯತ್ಪತ್ತಿ, ಕಲ್ಪನೆಗಳು ಇದ್ದರೂ ಅಭಿವ್ಯಕ್ತಿಯಲ್ಲಿ, ಸಾಮಾನ್ಯ ವಿವರಣೆ ಮೀರಿದ ಒಂದು ರೂಪ ಲಯಗಳು ಪ್ರಾಮುಖ್ಯತೆ ಪಡೆಯುತ್ತವೆ ಎನ್ನುವಲ್ಲಿ ಕೃತಿಯ ಆಶಯ ಅಡಕವಾಗಿದೆ. ಬೆಳಕಿನ ಪ್ರಬಂಧದ ಸುಮಧುರ ಅನುಭವ[೮], ಉಡುಗೊರೆ ರೂಪವಾಗಿ ದೃಶ್ಯಕಲಾಕೃತಿಗಳು, ಲೋಹಾರ್ ವರ್ಣ ವೈಭವ, ವಜ್ರ ಲೇಪಿತ ರುದ್ರರಮಣೀಯ ದೃಶ್ಯಗಳು 'ತವಕತಲ್ಲಣಗಳ ದೃಶ್ಯಾಭಿವ್ಯಕ್ತಿ' ಮುಂತಾದ ಶಿರ್ಷಿಕೆಯಡಿಯಲ್ಲಿ ಬಂದ ಲೇಖನಗಳು ತುಂಬಾ ಆಳವಾದ ಮತ್ತು ಕುತೂಹಲವನ್ನು ಪ್ರೇರೆಪಿಸುವಂಥವುಗಳಾಗಿವೆ. ಓದುಗನನ್ನು ತನ್ನತ ಸೆಳೆಯುತ್ತ ಮನಸ್ಸಿಗೆ ಮುದ ನೀಡುತ್ತದೆ. ಗಹನವಾದ ವಿಚಾರಗಳನ್ನು ಅರಿತುಕೊಳ್ಳುವಲ್ಲಿ ಮಹತ್ವದ ಪಾತ್ರವಹಿಸುವ ಕೃತಿ ಪ್ರಬುದ್ಧವಾದ ಬರವಣಿಗೆಯಿಂದ ಕೂಡಿದ್ದು, ವೈಚಾರಿಕವಾಗಿ ಮಹತ್ವದ್ದಾಗಿದೆ.

ರವಿ ಕುಮಾರ ಕಾಶಿ **ಕಣ್ಣೆಲೆ** ಕೃತಿಯು ೨೦೧೨ ರಲ್ಲಿ ಅಕ್ಷರ ಪ್ರಕಾಶನದಿಂದ ಪ್ರಕಟಗೊಂಡಿದೆ. ಇದರಲ್ಲಿ ಒಟ್ಟು ೧೭ ಲೇಖನಗಳಿವೆ. ಲೇಖಕರಾದ ರವಿಕುಮಾರ ಕಾಶಿಯವರು ತಮ್ಮ ಅನುಭವವನ್ನು ಓದುಗರೊಂದಿಗೆ ಹಂಚಿಕೊಂಡಿದ್ದಾರೆ. ತಮ್ಮ ಚಿಂತನೆಯನ್ನು ಹಾಗೂ ಕೆಲವು ಅನುಭವಗಳ ಘಟನೆಗಳನ್ನು ಸಾಂದರ್ಭಿಕವಾಗಿ ಉದಾಹರಿಸಿ ವಿವರಿಸಿದ್ದಾರೆ. ಲೇಖಕರ ಚಿಂತನೆಯು ಸಾಮಾನ್ಯರ ವಿಚಾರದಂತೆಯೇ ಸರಳವಾಗಿಯೇ ಇದೆ ಎಂದೆನಿಸುತ್ತದೆ. ಕಲಾಕೃತಿಗಳ ವಿಮರ್ಶೆ ಅನ್ವಯಿಕ ದೃಷ್ಟಿಯ ನೆಲೆಯನ್ನ ಆಧರಿಸಿ ಚಿಂತನೆಗೆ ತೊಡಗಿದಂತೆ ಅನ್ನಿಸುತ್ತದೆ. ಯಾವುದೇ ಒಂದು ಸ್ಪಷ್ಟ ಚಿತ್ರಣವನ್ನು ತೋರಿಸದ ಅವರ (ಲೇಖಕರು) ವಿಚಾರಧಾರೆಯು ಒಂದೇ ಸಿದ್ಧಾಂತಕ್ಕೆ ಕಟ್ಟು ಬಿದ್ದದ್ದಿಲ್ಲ ಎನ್ನುವ ಹಾಗಿದೆ. ಒಟ್ಟು ಬರಹದಲ್ಲಿ ಮೌಲ್ಯಯುತವಾದ ಅಂಶ ಬರವಣಿಗೆ ಮೊತ್ತಕ್ಕೆ ತಕ್ಕುದಾದುದಲ್ಲವೆಂದೇ ಹೇಳಬಹುದಾಗಿದೆ. ಬರವಣಿಗೆ ಸರಳ ಮಾತಿನ ರೂಪದಲ್ಲಿ ನಿರೂಪಿತಗೊಂಡಿದ್ದು, ಚಿಂತನೆಗೆ ತಕ್ಕ ಹಾಗೆ ಪ್ರಮಾಣದಲ್ಲಿ ಬರವಣಿಗೆಯೇ ಹೆಚ್ಚಾಗಲು ಕಾರಣವೇ....! ಎಂದೆನಿಸುತ್ತದೆ.

ಲೇಖಾವರಣ ಉದಯೋನ್ಮುಖ ಬರಹಗಾರರಾದ ಡಾ.ಮಲ್ಲಿಕಾರ್ಜುನ ಬಾಗೋಡಿಯವರ ಕೃತಿಯಾಗಿದೆ. ೨೦೦೯ ರಲ್ಲಿ ಶರಚಂದ್ರ ಪ್ರಕಾಶನದಿಂದ ಪ್ರಕಟವಾದ ಕೃತಿಯು ಸಂಶೋಧನಾ ಬರಹಗಳನ್ನು ಒಳಗೊಂಡಿದೆ. ಒಟ್ಟು ಹನ್ನೊಂದು ಲೇಖನಗಳನ್ನು ಒಳಗೊಂಡಿದ್ದು, ಕಲಬುರ್ಗಿ, ಸುರಪುರ, ನಾಗಾವಿ ಮುಂತಾದ ಪ್ರದೇಶಗಳ ಕೇಂದ್ರೀಕರಿಸಿ ಇತಿಹಾಸವನ್ನು ಒಳಗೊಳ್ಳುವುದರ

ಜೊತೆಗೆ, ಚಿತ್ರಕಲೆ, ಶಿಲ್ಪಕಲೆ ವಿಷಯವಾಗಿ ಅನೇಕ ಸಂಗತಿಗಳನ್ನು ಹೊಂದಿದೆ. ಚೆನ್ನಬಸವ ಪುರಾಣ ವಿಷಯಾಧಾರಿತ ಹಸ್ತಪ್ರತಿಗಳು, ರಂಗಪೇಟೆಯ ಮಠದ ಭಿತ್ತಿಚಿತ್ರಗಳು, ಮೆಡೋಸ್ ಟೇಲರ್ ರಚನೆಯ ಚಿತ್ರಗಳು ಮುಂತಾದ ಚಿತ್ರಕಲಾ ವಿಷಯವನ್ನು ಕೃತಿ ಒಳಗೊಂಡಿದೆ. ಒಂದು ಪ್ರದೇಶದ ಪರಿಸರ, ಈ ಚಿತ್ರ, ಶಿಲ್ಪ ವಾಸ್ತು ಶಿಲ್ಪಗಳನ್ನು ಪ್ರಮುಖವಾಗಿ ವಿವರಿಸುವುದರ ಜೊತೆಗೆ ಆ ಪ್ರದೇಶದ ಚಿತ್ರಣವನ್ನು ಒಳಗೊಂಡ ಕೃತಿಯು ಸುಂದರ, ಸರಳ ಬರಹದಿಂದ ಕೂಡಿದ್ದು, ಓದುಗರಿಗೆ ಇತಿಹಾಸಪ್ರಜ್ಞೆಯ ಜೊತೆಗೆ ಕಲಾಪ್ರಜ್ಞೆಯನ್ನು ಹುಟ್ಟುಹಾಕುತ್ತದೆ. ಲೇಖಕರು ಈ ಕೃತಿಯಲ್ಲಿ, ಸಾಮಾಜಿಕ, ಧಾರ್ಮಿಕ, ಚಾರಿತ್ರಿಕ, ಅಂಶಗಳೊಂದಿಗೆ ಕಲೆ ಹೇಗೆ ಬೆಸೆದುಕೊಂಡಿದೆ ಎಂಬುದನ್ನು ಕಂಡರಿಸುವ ದಿಶೆಯಲ್ಲಿ ನಿರ್ದಿಷ್ಟ ಪ್ರದೇಶದ ಹಿನ್ನೆಲೆಯನ್ನು ತಿಳಿಸಿಕೊಡುವ ಮೂಲಕ ತಮ್ಮ ಕಲಾಪರವಾದ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಡಿ.ಎಸ್.ಚೌಗುಲೆಯವರ **ಬಣ್ಣ ನನ್ನ ಕಣ್ಣೊಳಗೆ** ಕೃತಿಯ ಮುದ್ದುಶ್ರೀ ಗ್ರಂಥಮಾಲೆಯಿಂದ ೨೦೦೭ ರಲ್ಲಿ ಪ್ರಕಾಶನ ಕಂಡಿದೆ. ಕಲಾವಿಮರ್ಶೆಯ ದೃಷ್ಟಿಯಿಂದ ಪ್ರಮುಖವಾಗುವ ಕೃತಿಯು ಸೈದ್ಧಾಂತಿಕ ನಿಲುವುಗಳನ್ನು ಕಂಡರಿಸುತ್ತದೆ. ಕೆಲವು ಲೇಖನಗಳಲ್ಲಿ ವಸ್ತು, ವಿಷಯ ಪ್ರದೇಶಗಳನ್ನು ನೆಪವಾಗಿಸಿಕೊಂಡು, ಆ ಮೂಲಕ ಕಲೆಯ ಕುರಿತಾಗಿ ತಾವು ಹೇಳಬೇಕಾದುದನ್ನು ಹೇಳಿದ ಲೇಖಕರು, ಸರಳಭಾಷಾ ಪ್ರಯೋಗದ ಮುಖಾಂತರ ಓದುಗರ ಮುಂದೆ ಕಲೆಯ ಹಲವು ಚಾರಿತ್ರಿಕ ಅಂಶಗಳನ್ನು ತೆರದಿಟ್ಟಿದ್ದಾರೆ. ಸ್ತ್ರೀ ಸಂವೇದನೆಯ ಅಂತರಂಗದ ಮೆಲುಕುಗಳು ಎಂಬ ಶೀರ್ಷಿಕೆಯಡಿ ಮೂಲತಃ ಕೊಡುಗಿನ ಕಲಾವಿದರಾದ ಜೆ.ಎಸ್.ಭವಾನಿಯವರ ನಿಲುವುಗಳನ್ನು ಚರ್ಚಿಸಿದ್ದಾರೆ. ಬೆಳಗಾವಿ ಪರಿಸರದ ದೃಶ್ಯಕಲೆ ಈ ಶೀರ್ಷಿಕೆಯಡಿ ಜಿಲ್ಲೆಯ ಪರಿಸರದ ವಾಸ್ತುಶಿಲ್ಪ ದೇವಾಲಯಗಳು ಅವುಗಳ ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯವನ್ನು ವಿವೇಚಿಸುವುದರ ಜೊತೆಗೆ ಅಲ್ಲಿಯ ಕಲಾಶಾಲೆಗಳನ್ನು ಉಲ್ಲೇಖಿಸಿದ್ದಾರೆ. ಕಲಾವಿದನ ಕೃತಿಯನ್ನು ಸಹೃದಯಿ ಗ್ರಹಿಸಿ ಕೊಳ್ಳುವುದು ಹೇಗೆ, ಕಲಾಕೃತಿ ಹಾಗೂ ನೋಡುಗನ ನಡುವಿನ ಸೂಕ್ಷ್ಮತೆಗಳ ಸ್ವರೂಪ ಎಂಥದ್ದು ಎಂದು ತಿಳಿಸುವ ಕೃತಿ ಕಲಾ ಆಸ್ವಾದಕನಿಗೆ ಅದನ್ನು (ಕಲೆಯನ್ನ) ಗ್ರಹಿಸುವಮಾರ್ಗ ಸುಗಮವಾಗಿರಬೇಕೆಂದು ಅಭಿಪ್ರಾಯ ಪಡುತ್ತದೆ ಎನ್ನಬಹುದು.

ಇನ್‌ಸ್ಟಾಲೇಷನ್ ಕಲಾ ಪ್ರಪಂಚ ಕೆ.ವಿ. ಸುಬ್ರಹ್ಮಣ್ಯಂರವರ ಕೃತಿಯಾಗಿದ್ದು ೨೦೦೮ ರಲ್ಲಿ ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡಿದೆ. ಲೇಖಕರಾದ ಕೆ. ವಿ. ಸುಬ್ರಹ್ಮಣ್ಯಂರವರು ದೃಶ್ಯ ಲೋಕದಲ್ಲಿ ವೈವಿಧ್ಯಮಯವಾಗಿ ಅನಾವರಣವಾದ ಪ್ರತಿಸ್ಥಾಪನಾ ಕಲೆಯ ಆಯಾಮವನ್ನು ತೋರ್ಪಡಿಸಿದ್ದಾರೆ. ಪ್ರತಿಸ್ಥಾಪನಾ ಕಲೆಯ ವಿರಾಟಸ್ವರೂಪವನ್ನು ಆಸ್ವಾದಿಸಿ ತಮ್ಮ ಕೃತಿಯ ಮೂಲಕ ವಿವರಿಸಿದ ಲೇಖಕರು ಸಹಜವಾಗಿಯೇ ನಿರ್ಮಾಣವಾಗಿರುವ ಉಪಯೋಗಿ ಸಂಬಂಧಿ ನಿರ್ಮಿತಿಗಳನ್ನು ಕೂಡ ತಮ್ಮ ದೃಷ್ಟಿಯಿಂದ ನೋಡಿದ್ದಾರೆ. ಇಲ್ಲಿ ಪಲ್ಲವ ಕಾಲದ ನಿರ್ಮಿತಿಯಾದ ಸ್ಮಾರಕಗಳೂ ಕೂಡಾ ಅರಸರ ಆಣತಿ– ಆಶ್ರಯ ಕಾರಣಕ್ಕಾಗಿ ಮೂಡಿಬಂದ ಕೃತಿಗಳು ಎಂದು

ಹೇಳುವಾಗ ಇನ್ ಸ್ಟಾಲೇಷನ್ ಕಲಾಪ್ರಜ್ಞೆಯಿಂದ ಕೂಡಿದೆ ಎನ್ನಬಹುದು. ರೈತ ತನ್ನ ತೋಟಕ್ಕೆಂದು ನಿರ್ಮಿಸಿದ ಬಾವಿಯೂ ಕೂಡಾ ಲೇಖಕರ ಸೌಂದರ್ಯದ ನೋಟದಿಂದ ಹೊರತಾಗಿರದೆ ಅದೂ ಕೂಡಾ ಛಾಯಾಚಿತ್ರದ ರೂಪದಲ್ಲಿ ಪ್ರಕಟಿಸಿಗೊಂಡಿದೆ. ಇನಸ್ಟಾಲೇಷನ್ ಅಭಿವ್ಯಕ್ತಿ ಅಲ್ಲ ಕೃಷಿಯ ಉದ್ದೇಶಕ್ಕಾಗಿ ರೈತನೊಬ್ಬನ ಸೃಷ್ಟಿ ಎಂದು ಹೇಳುವಲ್ಲಿ ಪರೋಕ್ಷವಾದರೂ ಅದು ಕಲೆಯೇ ಆಗಿದೆ ಎಂಬ ಆಶಯ ಧ್ವನಿತವಾಗಿದೆ.[೭]

ಯುಸೂಫ್ ಅರಕ್ಕಲ್, ವೇದನಾಯರ್, ಬಿ.ಎಚ್.ಶ್ರೀನಿವಾಸ್ ಪ್ರಸಾದ, ಚಿಂತನ ಉಪಾಧ್ಯಾಯ, ರವಿಕುಮಾರ ಕಾಶಿ, ಶಿಲಾಗೌಡ, ಉದಯವೀರ ಸಿಂಹ, ಶಕುಂತಲಾ ಕುಲಕರ್ಣಿ, ಶಿವಾನಂದ ಬಂಟನೂರ, ಮುಂತದ ಪ್ರಸಿದ್ಧ ಕಲಾವಿದರ ಕಲಾಕೃತಿಗಳನ್ನು ವಿವರಿಸಿ ತಮ್ಮದೇಆದ ವಿಮರ್ಶಾ ನೆಲೆಯಲ್ಲಿ ವ್ಯಕ್ತಪಡಿಸಿದ್ದಾರೆ. ಸಾಂಸರ್ಭಿಕವಾಗಿ ಹತ್ತು ಹಲವು ಕಲಾಕೃತಿಗಳ ಛಾಯಾಚಿತ್ರಗಳನ್ನು ಬಳಸಿದ್ದಾರೆ. ಇನ್‌ಸ್ಟಾಲೇಷನ್ ಆರ್ಟನ ಪ್ರಮುಖ ಲಕ್ಷಣವೆಂದರೆ, ಅದನ್ನು ವೀಕ್ಷಿಸುವ ವೀಕ್ಷಕನ ಭಾಗವಹಿಸುವಿಕೆಯೇ ಆಗಿದೆ. ಎಂದು ಅಭಿಪ್ರಾಯವನ್ನು ಪಡುವ ಲೇಖಕರು ಕಲಾಕೃತಿಗಳಲ್ಲಿ ಅದರಲ್ಲೂ ಈ ಇನ್ ಸ್ಟಾಲೇಷನ್. ವೀಕ್ಷಕರ ಅರ್ಹತೆ ಎಂತಹದ್ದು ಯಾವರೀತಿಯಲ್ಲಿ ಅವನ ಭಾಗವಹಿಸುವಿಕೆ ಇರುತ್ತದೆ ಹೀಗೆ ಮುಂತಾಗಿ ವೈಚಾರಿಕವಾಗಿ ವಿವರಿಸುತ್ತ ಇನ್ಸ್ಟಾಲೇಷನ್ ಕಲೆಯ ಒಟ್ಟು ಕಲ್ಪನೆಯನ್ನು ಓದುಗನ ಮುಂದೆ ಹರವಿದ್ದಾರೆ. ಈ ಎಲ್ಲ ಅಂಶಗಳಿಂದ ಈ ಕೃತಿಯು ಕೇವಲ ಚಿತ್ರಕಲೆ ಶಿಲ್ಪಕಲೆಗಳನ್ನು ಒಳಗೊಂಡ ಕಲೆಯ ಕುರಿತಾಗಿರುವಂಥದಲ್ಲ ಬದಲಾಗಿ ಸಮಕಾಲೀನ ಸಂದರ್ಭದಲ್ಲಿ ವಿಸ್ತೃತಿಯನ್ನು ಪಡೆದ ಕಲೆಯೊಂದರ ಕುರಿತಾಗಿದೆ. ವಿಶಿಷ್ಟ ಕಲೆಯೊಂದರ ಕುರಿತಾಗಿ ಹೊರಬಂದ ಸಾಹಿತ್ಯಕೃತಿಯಾಗಿ ಮಹತ್ವ ಪಡೆದಿದೆ. ಅಂತೆಯೇ ಭಾಷೆ ಹಾಗೂ ವಿಚಾರಗಳ ದೃಷ್ಟಿಯಿಂದ ಮೌಲಿಕವಾಗಿದೆ.

ಡಾ. ಮಲ್ಲಿಕಾರ್ಜುನ.ಸಿ.ಬಾಗೋಡಿಯವರ ಇತ್ತೀಚಿನ ಕೆಲವು ಕೃತಿಗಳಲ್ಲಿ ಸೇಡಂ ಶಿವಶಂಕರ ಸ್ವಾಮಿ ಮಠದಲ್ಲಿನ ಭಿತ್ತಿ ಚಿತ್ರಗಳು" "ಸಗರನಾಡಿನ ಕಲೆ", "ಲೇಖಾವರಣ", "ದೃಶ್ಯ ಸಂಸ್ಕೃತಿ", "ಸುರಪುರ ಚಿತ್ರಕಲೆ" ಪ್ರಮುಖ ಸಂಕೀರ್ಣ ಸಾಹಿತ್ಯ ಕೃತಿಗಳಾಗಿವೆ. ಈ ಕೃತಿಗಳು ಚಾರಿತ್ರಿಕ ಅಂಶಗಳನ್ನು ಒಳಗೊಂಡಿವೆ. ಒಂದು ಪ್ರದೇಶದ ಕಲೆಯನ್ನು ಹೇಳಬೇಕಾದರೆ ಆಭಾಗದ ಭೌಗೋಲಿಕ, ಆರ್ಥಿಕ, ಸಾಮಾಜಿಕ, ಐತಿಹಾಸಿಕ, ಸಾಂಸ್ಕೃತಿಕ ಹಿಗೆ ಹಲವು ಅಂಶಗಳನ್ನು ಗಮನಿಸಿ ಅವುಗಳ ವೈಶಿಷ್ಟ್ಯವನ್ನು ತಮ್ಮ ಬರಹದಲ್ಲಿ ಕಂಡರಿಸುವ ಲೇಖಕ ಬಾಗೋಡಿಯವರು ಕಲೆ ಇತರ ಈ ಎಲ್ಲ ಮೇಲಿನ ಅಂಶಗಳೊಂದಿಗೆ ಹೇಗೆ ಸಂಬಂಧವನ್ನು ಒಳಗೊಂಡಿದೆ ಎಂಬುದಾಗಿಯೂ ಚರ್ಚಿಸಿದ್ದಾರೆ. ಅವರು ಹಿಂದುಳಿದ ಪ್ರದೇಶವೆಂಬ ಅಪಖ್ಯಾತಿಗೆ ಕಾರಣವಾದ ಹೈದರಾಬಾದ ಕರ್ನಾಟಕವು ಹಿಂದೊಂದುದಿನ ಸರ್ವತೋಮುಖ ಅಭಿವೃದ್ಧಿಗೊಂಡಿತೆಂಬ ಅಂಶವನ್ನು ಬಾಗೋಡಿಯವರ ಬರಹದ ಮೂಲಕ ಕಾಣಬಹುದಾಗಿದೆ.

ದೃಶ್ಯ ಸಂಸ್ಕೃತಿ ಕೃತಿಯು ಬಾಗೋಡಿಯವರ ರಚನೆಯ ಕೃತಿಯಾಗಿದ್ದು ೨೦೧೧ ರಲ್ಲಿ ಸರಚಂದ್ರ ಪ್ರಕಾಶನದಿಂದ ಪ್ರಕಟಗೊಂಡಿದೆ. ಇದರಲ್ಲಿ ಗುಲಬರ್ಗಾ ಜಿಲ್ಲಾ ಕೇಂದ್ರಗಳನ್ನೊಳಗೊಂಡಂತೆ ಇತರ ಪ್ರದೇಶಗಳಲ್ಲಿ ಕಾಣಸಿಗುವ, ಶಿಲ್ಪಕಲೆ, ಚಿತ್ರಕಲೆ, ವಾಸ್ತುಶಿಲ್ಪಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಲೇಖನಗಳನ್ನು ಬರೆಯಲಾಗಿದೆ. ವಿಜಯನಗರೋತ್ತರ ಹೈದರಾಬಾದ್ ಕರ್ನಾಟಕ, ಚಿತ್ರಕಲೆ ಸಮಾಜ, ವಿಕಾಸದಲ್ಲಿ ಕಲೆಗಳ ಪಾತ್ರ, ಡಾ.ಜೆ.ಎಸ್.ಖಂಡೇರಾವ್, ಕುಂಚಲೋಕದ ಮಾಂತ್ರಿಕ, ಕಲಾಕೃತಿಗಳನ್ನು ನೋಡುವುದೂ ಒಂದು ಆರ್ಟ, ಚಿತ್ತಾಪುರ ಜೈನ ಬಸದಿಯಲ್ಲಿನ ಭಿತ್ತಿಚಿತ್ರಗಳು ಜಗನ್ನಾಥ ವಾಡೆಯಲ್ಲಿನ ಭಿತ್ತಿಚಿತ್ರಗಳು ಮನೆ: ಒಂದು ಕಲಾನೆಲೆ, ಶನಿವಾರದ ವಾಡೆ : ದೃಶ್ಯಾತ್ಮಕ ನೆಲೆಯಲ್ಲಿ ಇನ್ನೂ ಮುಂತಾದ ಲೇಖನಗಳು ಚಾರಿತ್ರಿಕ ಅಂಶಗಳೊಂದಿಗೆ ದೃಶ್ಯಕಲೆಯ ಮಹತ್ವವನ್ನು ಸಾರುವ ಕೃತಿಯು ಸರಳವಾದ ಬರವಣಿಗೆ ರೂಪವನ್ನು ಹೊಂದಿದೆ.

ಸಗರ ನಾಡಿನ ದೃಶ್ಯಕಲೆ ಕೃತಿ ಗುಲಬರ್ಗಾ ವಿಶ್ವ ವಿದ್ಯಾಲಯದಿಂದ ಪ್ರಕಟವಾಗಿದೆ. ಬಾಗೋಡಿಯವರ ರಚನೆಯಾದ ಇದು ೨೦೧೨ ರಲ್ಲಿ ಪ್ರಕಾಶನ ಕಂಡಿದೆ. ಈ ಕೃತಿಯು ಪ್ರಾಗೈತಿಹಾಸಿಕ ಕಾಲದ ಕಲೆ, ರಾಜಾಶ್ರಿತ ಕಲೆ, ಸುರಪುರ ಸಂಸ್ಥಾನದಲ್ಲಿನ ಕಲೆ, ಸಂಸ್ಥಾನೊತ್ತರ ಕಲೆ ವಿದೇಶಿಗರು ಕಂಡಂತೆ' ಎಂಬ ಶಿರ್ಷಿಕೆಯಡಿ ಲೇಖನಗಳು ಬಂದಿವೆ. ಪಾಚೀನ ಕಾಲದಿಂದಲೂ ಕಲಬುರ್ಗಿ ಪರಿಸರವು ನಾಗರಿಕತೆಯ ನೆಲೆಯಾಗಿತ್ತು. ಅಭಿಪ್ರಾಯವನ್ನು ಒಳಗೊಂಡ ಲೇಖನಗಳು ಅದಕ್ಕೆ ಸಾಕ್ಷೀಭೂತವಾದ ಕುರುಹು ಸ್ಮಾರಕಗಳನ್ನು ಉಲ್ಲೇಖಿಸುತ್ತದೆ. ನಂತರದಲ್ಲಿ ಅಂದರೆ ಆದಿಮ ಸಂಸ್ಕೃತಿಯ ನಂತರದಲ್ಲಿ ರಾಜಮನೆತನಗಳು ಅಲ್ಲಿ ನೆಲೆಗೊಂಡು ತಮ್ಮ ಸಂಸ್ಕೃತಿಯನ್ನು ಈ ನೆಲದೊಂದಿಗೆ ವಿನಿಮಯ ಮಾಡಿಕೊಂಡ ಅಂಶವನ್ನು ವಿವರಿಸುವ ಕೃತಿಯು ಸುರಪುರ ಸಂಸ್ಥಾನದಲ್ಲಿ ಉನ್ನತಿಯನ್ನು ಕಂಡ ಕಲೆಯು ನಾಡಿನ ಶ್ರೀಮಂತ ಯುಗವೊಂದನ್ನು ಅಸ್ತಿತ್ವಕ್ಕೆ ತರುವಲ್ಲಿ ತನ್ನ ಪಾತ್ರವನ್ನು ಹೇಗೆ ನಿರ್ವಹಿಸಿದೆ ಎಂಬುದನ್ನು ದಾಖಲೆಗಳೊಂದಿಗೆ ವಿವರಿಸುತ್ತದೆ. ಸುರಪುರ ಸಂಸ್ಥಾನವನ್ನಾಳಿದ ಗರುಡಾದ್ರಿ ಮನೆತನದ ಕುರಿತು ಹಲವಾರು ವಿಷಯಗಳನ್ನು ಒಳಗೊಂಡಂತೆ ಭಿತ್ತಿಚಿತ್ರ ಕಲೆಯಲ್ಲಿ ಅನೇಕ ಪೌರಾಣಿಕ ಸನ್ನಿವೇಷಗಳನ್ನು ಸೂಚಿಸುತ್ತದೆ. ಜೈಮಿನಿಭಾರತದ ಕವಿಲಕ್ಷ್ಮೀಶ ರಚಿಸಿದ ಹಸ್ತಪ್ರತಿಗಳ ದಾಖಲಾತಿಯನ್ನ ವಿವರಿಸುವ ಕೃತಿ ಕೇವಲ ಕಲಾದೃಷ್ಟಿಯಿಂದ ಮಾತ್ರವಲ್ಲದೆ ಸಾಹಿತ್ಯ, ಇತಿಹಾಸ, ವಾಸ್ತು ಶಿಲ್ಪಗಳ, ಹಿನ್ನೆಲೆಯಲ್ಲಿಯೂ ಮಹತ್ವ ಪಡೆಯುತ್ತದೆ. ಬ್ರಿಟಿಷ್ ಆಗಮನದ ಸಂದರ್ಭದ ಕಾಲ ಅಲ್ಲಿನ ರಾಜಕೀಯ ಏರಿಳಿತಗಳು ಕಲೆಯ ಮೇಲೆ ಏನು ಪ್ರಭಾವಿಸಿದವು ಎಂಬ ಮುಂತಾದ ವಿಷಯಗಳನ್ನು ಚರ್ಚಿಸುವ ಕೃತಿಯು ಸರಳ ಭಾಷೆಯಿಂದ ನಿರೂಪಿತವಾಗಿ ಚಾರಿತ್ರಿಕ ಹಾಗೂ ಕಲಾದೃಷ್ಟಿಯಿಂದ ಮೌಲಿಕವಾಗಿದೆ.

೨೦೧೧ ರಲ್ಲಿ ಸರಚಂದ್ರ ಪ್ರಕಾಶನದಿಂದ ಬಾಗೋಡಿಯವರ ರಚನೆಯ ಕೃತಿಯಾದ **ಭಿತ್ತಿ ಚಿತ್ರಗಳು** (ಸೇಡಂ ಶಿವ ಶಂಕರಸ್ವಾಮಿ ಮಠದಲ್ಲಿನ) ಪ್ರಕಾಶನ ಕಂಡಿದೆ. ಈ ಕೃತಿಯಲ್ಲಿ ಸೇಡಂ ಪರಿಸರದ ಸಾಂಸ್ಕೃತಿಕ ಪರಿಸರವನ್ನ ಧಾರ್ಮಿಕ ಸ್ವರೂಪವನ್ನ ಕಂಡರಿಸುವುದರ ಜೊತೆಗೆ

ಪ್ರಮುಖವಾಗಿ ಭಿತ್ತಿ ಚಿತ್ರಗಳ ವೈಶಿಷ್ಟ್ಯ, ಸ್ಥಳ, ವಿನ್ಯಾಸ, ವಿಷಯ ವಸ್ತು ಮುಂತಾಗಿ ಚರ್ಚಿಸಲಾಗಿದೆ. ಸೇಡಂ ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಜೈನ, ಬೌದ್ಧ, ಶೈವ, ವೈಷ್ಣವ ಧರ್ಮಗಳನ್ನು ವಿವರಿಸುತ್ತಾ ಬಸವಣ್ಣನವರ ಸಮಕಾಲೀನ ಶರಣರಾದ ಬಿಜ್ಜನ ಹಳ್ಳಿಯ ಹರಳಯ್ಯ ದಂಪತಿಗಳು ಈ ಪ್ರದೇಶದಲ್ಲಿ ನೆಲೆಸಿದ್ದಾರೆಂದು ಕೋಡ್ಲಾದಲ್ಲಿನ ಉರಿಲಿಂಗ ಪೆದ್ದಿ ಮಠವು ವೀರಶೈವ ಧರ್ಮಕ್ಕೆ ನಿಡಿದ ಕೊಡುಗೆ ಅನನ್ಯವೆಂದು ಅನೇಕ ಧಾರ್ಮಿಕ ಅಂಶಗಳನ್ನು ವಿವರಿಸುವ ಮೂಲಕ ಕೃತಿಯಲ್ಲಿ ಮಠದಲ್ಲಿನ ಭಿತ್ತಿ ಚಿತ್ರಕಲೆಯೊರೆಗಿನ ಹಲವು ಮಹತ್ವದ ಘಟನೆಗಳನ್ನು ದಾಖಲಿಸಿದ್ದಾರೆ. ಪ್ರಾಸಂಗಿಕವಾಗಿ ಕಲಬುರ್ಗಿ (ಸೇಡಂ)ನೆಲದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ತೋರಿಸುವಲ್ಲಿ ಶಾಸನಗಳು ಹಸ್ತ ಪ್ರತಿ ದಾಖಲೆಗಳನ್ನು ಕೃತಿ ಒಳಗೊಂಡಿದೆ. ಮಠದ ಹಿನ್ನೆಲೆ ಹಾಗೂ ಭಿತ್ತಿಚಿತ್ರಗಳ ತಾಂತ್ರಿಕ ವಿವರಣೆಗಳನ್ನು ಸೂಕ್ಷ್ಮ ಹಾಗೂ ಸಂದರ್ಭೋಚಿತವಾಗಿ ಅಲ್ಲದೆ ಹಾಗೂ ಸ್ಥೂಲವಾಗಿಯೂ ಕಂಡರಿಸುವ ಕೃತಿಯು ವೈಚಾರಿಕವಾಗಿ ಹಾಗೂ ಸರಳ ಸುಂದರವಾದ ಬರವಣಿಗೆ ದೃಷ್ಟಿಯಿಂದ ಮಹತ್ವ ಪಡೆದಿದೆ.

ಸುರಪುರ ಚಿತ್ರಕಲೆ ಡಾ. ಮಲ್ಲಿಕಾರ್ಜುನ ಬಾಗೋಡಿಯವ ರಚಿಸಿದ ಕೃತಿಯಾಗಿದ್ದು ೨೦೦೯ ರಲ್ಲಿ ಸರಚಂದ್ರ ಪ್ರಕಾಶನದಿಂದ ಪ್ರಕಟಗೊಂಡಿದೆ. ಸುರಪುರ ಒಂದು ಸಂಸ್ಥಾನವಾಗಿದ್ದು ಅದರ ಹೆಸರಿನಲ್ಲಿಯೇ ಒಂದು ಸಾಂಪ್ರದಾಯಿಕ ಕಲೆಯಾದ ಸುರಪುರ ಕಲೆ ವಿಜಯನಗರ ಪತನಾ ನಂತರ ಹುಟ್ಟಿಕೊಂಡು ಹಲವು ಕಲೆಗಳ ಪಂಥಗಳಂತೆ ಪ್ರಸಿದ್ಧವಾದ ಸ್ವತಂತ್ರ ಕಲೆಯಾಗಿರುವ ಸುರಪುರ ಕಲೆಯ ಕುರಿತಾದ ಕೃತಿ ತುಂಬಾ ಉಪಯುಕ್ತವಾಗಿದೆ. ಈ ಕೃತಿಯಲ್ಲಿ ಲೇಖಕರು ಕಲೆಯ ರಾಜಾಶ್ರಯ, ಕಲೆಗೆ ಕಾರಣರಾದ ಗರುಡಾದ್ರಿ ಮನೆತನ, ಅದಕ್ಕಾದ, ಪ್ರಭಾವ ಪ್ರೇರಣೆಗಳನ್ನು ಸರಳವಾಗಿ ಸುಂದರವಾಗಿ ಹಂತಹಂತವಗಿ ವಿವರಿಸಿದ್ದಾರೆ. ಸುರಪುರ ಸಾಂಪ್ರದಾಯಿಕ ಶೈಲಿಯ ಒಂದು ಕಾಲಘಟ್ಟದಲ್ಲಿ ತನ್ನ ಸ್ಥಾನವನ್ನು ಹೇಗೆ ಪಡೆದು ಕೊಂಡಿತು ಮತ್ತು ದಖನಿ ಕಲೆಯಲ್ಲಿ ಅದರ ಮಹತ್ವವೇನು? ಎಂಬುದನ್ನು ಕಂಡರಿಸಿದಾರೆ.

ಡಾ.ಮೋಹನರಾವ್.ಬಿ.ಪಂಚಾಳರ **ದೃಶ್ಯಾನುಭವ** ಎನ್ನುವ ಕೃತಿಯು ೨೦೧೦ ರಲ್ಲಿ ಅನ್ನಪೂರ್ಣ ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಕೃತಿಕಾರರು ಜನಪದ ಕಲೆಗಳಾದ ಶಿಗಿ ಕಲೆ, ಹಚ್ಚೆ ಚಿತ್ರಕಲೆಗಳನ್ನು ಕುರಿತು ಬರದಿದ್ದಾರೆ. ಅದೇರೀತಿ ಲೋಹ ಶಿಲ್ಪ ಕಲೆಯಾದ ಬಿದರಿ ಕಲೆಯೂ ಕೂಡಾ ಒಂದು ಕರಕುಶಲ ಕಲೆಯಾಗಿ, ಭಾರತದಲ್ಲಿ ಹೇಗೆ ರೂಪಗೊಂಡಿತು. ಮತ್ತು ಅದು ತನ್ನ ಸ್ವರೂಪ ಪಡೆದುಕೊಳ್ಳುವಲ್ಲಿ ನಡೆದ ಹಲವಾರು ಘಟನೆಗಳನ್ನು ಕಣ್ಣಿಗೆಕಟ್ಟುವಂತೆ ವಿವರಿಸಿದ್ದಾರೆ. "ಬಿದರಿ ಕಲೆಯ" ಹೆಸರಿನ ಹಿನ್ನೆಲೆಯಲ್ಲಿ ವಿದ್ವಾಂಸರ ಅನೇಕ ವಿಮರ್ಶಾತ್ಮಕ ನಿಲುವುಗಳನ್ನು ಕಂಡರಿಸಿದ್ದಾರೆ. ಕೃತಿಯಲ್ಲಿ ದೇಶಿಕಲೆ, ಸಂಪ್ರದಾಯಿಕ ಕಲೆ, ಕರಕುಶಲ ಕಲೆ ಮುಂತಾದ ವಿಷಯವನ್ನಾಧರಿಸಿ, ಅಲ್ಲದೆ ಪ್ರಸಿದ್ಧ ಜಾಗತಿಕಮಟ್ಟದ ಕಲಾವಿದನಾದ ಪಿಕಾಸೋನ

ಜೀವನವೂ ಕೂಡಾ ಮೂಡಿ ಬಂದಿದೆ. ಸರಳ ಭಾಷೆಯಲ್ಲಿ ನಿರೂಪಿತವಾದ ಕೃತಿಯು ಓದುಗನಿಗೆ ಸರಳವಾಗಿ ವಿಷಯವನ್ನು ತಲುಪಿಸುತ್ತದೆ.

ಪಾಶ್ಚಾತ್ಯ ದೃಶ್ಯಕಲಾ ಸಿದ್ಧಾಂತ ಭೂಮಿಕಾ ಆರ್ಟ ಮೈಸೂರುನಿಂದ ೨೦೦೫ ಪ್ರಕಟಗೊಂಡು, ಡಿ.ಎ.ಉಪಾಧ್ಯಯ ಅವರಿಂದ ರಚಿತಗೊಂಡಿದೆ. ಈ ಕೃತಿಯಲ್ಲಿ ಲೇಖಕರು ಪಾಶ್ಚಿಮಾತ್ಯ ಕಲಾಸಿದ್ಧಾಂತದ ವೈವಿಧ್ಯಮಯವಾದ ಆಯಾಮವನ್ನು ತೊರಿಸಿದ್ದಾರೆ. ಅನುಕರಣಾತ್ಮಕ ವಿಧಾನ, ಆಕಾರ ಸೂಚಿ ಸಿದ್ಧಾಂತ, ಎಡ್ವರ್ಡ ಬುಲ್ಲೋನ ಮಾನಸಿಕ ದೂರ ಸಿದ್ಧಾಂತ, ಕ್ರೋಚೆಯ ಕಲೆಗಾಗಿಕಲೆ ಸಿದ್ಧಾಂತ ಅಸ್ತಿತ್ವವಾದ ಹೀಗೆ ಮುಂತಾದ ಜಿಜ್ಞಾಸುಗಳ ಹಿನ್ನೆಲೆಯಲ್ಲಿ ಹರಡಿಕೊಂಡ ನಿಲುವುಗಳನ್ನು ತಮ್ಮ ಬರಹದ ಮೂಲಕ ತೋರ್ಪಡಿಸಿದ್ದಾರೆ. ಕಲಾವಿಮರ್ಶೆಯನ್ನು ವಿದೇಶಿ ಸಿದ್ಧಾಂತಗಳು, ತತ್ವಜ್ಞಾನಿಗಳು ಹೇಗೆ ನಿರ್ವಹಿಸುತ್ತಾರೆ. ಅವರ ವಿಷಯ ಮಂಡನೆಗಳು ಕಾವ್ಯಮೀಮಂಸೆ ಕ್ಷೇತ್ರಗಳಂತೆ ಕಲಾಮೀಮಾಂಸೆಯೂ ಕೂಡಾ ಹೇಗೆ ತನ್ನದೇ ಆದ ಸಂದರ್ಭಗಳನ್ನು ಒಳಗೊಂಡಿರುತ್ತದೆ ಎಂದು ವಿವೇಚಿಸಲಾಗಿದೆ. ಈ ರೀತಿಯ ವಿಮರ್ಶಾ ಕೃತಿಗಳು ಇತ್ತೀಚಿನ ದಿನಗಳಲ್ಲಿ ಬಹಳ ವಿರಳವೆಂದೇ ಹೇಳಬಹುದು. ಇಂತಹ ಸಂದರ್ಭದಲ್ಲಿ ಕಲೆಯ ವ್ಯಾಕರಣ, ಕಲೆಯ ಸಿದ್ಧಾಂತ, ಹೀಗೆ ಮುಂತಾದ ಮೂಲತತ್ವಜ್ಞಾನವನ್ನ ಒಳಗೊಂಡ ಕೃತಿ ವಿಮರ್ಶೆ ದೃಷ್ಟಿಯಿಂದ ಕಲಾಸಾಹಿತ್ಯದಲ್ಲಿ ಅನನ್ಯವಾಗಿದೆ.

೬೪೭ ಕಲೆಗಳಿಂದ ದೃಶ್ಯಕಲೆಗಳವರೆಗೆ ಎಂಬ (ಸಂಶೋಧನಾ ಪ್ರಬಂಧ) ವು ೨೦೦೫ ಭೂಮಿಕಾ ಆರ್ಟ ನಿಂದ ಪ್ರಕಟಣೆಗೊಂಡಿದೆ. ಡಿ.ಎ.ಉಪಾಧ್ಯಾಯವರು ಕೃತಿಗಾರರಾಗಿದ್ದಾರೆ. ೬೪ ಕಲೆಗಳಿಂದ ಇಂದಿನ ದೃಶ್ಯಕಲೆಯವರೆಗಿನ ಕಲೆಯ ಚಾರಿತ್ರಿಕ ಹಿನ್ನೆಲೆ ಹಾಗೂ ಅವುಗಳ ಸ್ವರೂಪವನ್ನು ಲೇಖಕರು ವಿವರಿಸುತ್ತಾರೆ. ವಾತ್ಸಾಯನನ ೬೪೬ ಕಲೆಗಳು ೬೪ ಕಲೆಗಳಾಗಿ ಮಾರ್ಪಾಟಾದುದನ್ನು ವಿಶೇಷವಾಗಿ ಕಂಡರಿಸಿಲಾದ ಅಂಶವು ಓದುಗನ ಕುತೂಹಲವನ್ನು ಕೆರಳಿಸುತ್ತದೆ. ಕಲೆಗಳನ್ನು ವಿವಿಧ ಚಿಂತನೆಯ ನೆಲೆಯಲ್ಲಿ ವರ್ಗೀಕರಿಸಿದ ಬಗೆಯೂ ಮನೋಜ್ಞವಾಗಿದೆ. ವಾತ್ಸಾಯನ ಮುನಿಯ ಪ್ರಕಾರ ಮತಧರ್ಮದ ಮೂಲದಲ್ಲಿ, ಇಂದ್ರಿಯ ಮೂಲದಲ್ಲಿ ಕ್ರಿಯೆಗಳ ಮೂಲದಲ್ಲಿ ಹೀಗೆ ಅನೇಕ ವಿಧಗಳಲ್ಲಿ ವರ್ಗೀಕರಿಸಿ ಕಲೆಗಳನ್ನ ನಾನಾ ನೆಲೆಗಳಿಂದ ಕಂಡು ಅವುಗಳು ಅಸ್ತಿತ್ವಕ್ಕೆ ಬಂದಿರುವ ಬಗೆಯಲ್ಲಿ ಒಂದು ರೀತಿಯ ಅಚ್ಚರಿ ಮೂಡಿಬಂದಿದೆ. ಬರಹ ಹಾಗೂ ಸಿದ್ಧಾಂತಗಳ ನೆಲೆಯಿಂದ ಕೃತಿ ಸುಂದರವಾಗಿ ಮೂಡಿ ಬಂದಿದೆ.

ಡಾ.ಡಿ.ಎ.ಉಪಾಧ್ಯಾಯ ಅವರ ಪಾಶ್ಚಾತ್ಯ ದೃಶ್ಯಕಲೆಗಳು ಕೃತಿಯು ೨೦೧೧ ರಲ್ಲಿ ಶಿಲ್ಪಕಲಾ ಅಕಾಡೆಮಿಯಿಂದ ಪ್ರಕಾಶನ ಕಂಡಿದೆ. ಗ್ರೀಕ್, ರೋಮನ್, ಆದಿಯಾಗಿ ಹಲವು ದೇಶಗಳಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕಲಾಪಂಥಗಳಾದ, ಭಾವಮುದ್ರತಾಪಂಥ (Impressionism), ಸ್ತ್ರೀವಾದಕಲೆ (Feminism),ಅಭಿವ್ಯಕ್ತಿಪಂಥ(Expressionism), ಅಸ್ಪಷ್ಟಕಲೆ(Abstract) ಜನತಾಕಲೆ(Pop), ಘನಾಕೃತಿ ಪಂಥ(Cubism), ಪ್ರತಿಸ್ಥಾಪನಾ

ಕಲೆ(Installation) ಮುಂತಾದ ಪ್ರಮುಖ ಕಲಾಪಂಥಗಳನ್ನು ಪರಿಚಯಿಸುವ ಕೃತಿ ಅವುಗಳಿಗೆ ಸಂಬಂಧಿಸಿ ಛಾಯಾಚಿತ್ರಗಳಿಂದ ಪೂರ್ಣಗೊಂಡಿದೆ. ಇಂದಿನ ಸಮಕಾಲೀನ ಸಂದರ್ಭಕ್ಕೆ ಹಲವಾರು ಕಲಾಪಂಥಗಳ ವೈಶಿಷ್ಟ್ಯವನ್ನು ಅರಿತುಕೊಳ್ಳುವಲ್ಲಿ ಕಲಾವಿದ ಮುಂದುವರೆಯಬೇಕಾದ ಸಮಯಕ್ಕೆ ಕೃತಿಯು ಮಹತ್ವ ಪಡೆದುಕೊಳ್ಳುತ್ತದೆ. ಇತರ ಕ್ಷೇತ್ರದ ವಿಮರ್ಶಕರಿಗೆ ಅಥವಾ ಓದುಗರಿಗೆ ಕಲಾಕ್ಷೇತ್ರದಲ್ಲಿಯೂ ಸ್ತ್ರೀವಾದ, ಬಂಡಾಯದ ಪಂಥ ಎಂಬ ಈ ಸಂಘಗಳಿವೆ ಎಂದರೆ ಅಚ್ಚರಿ ತರುವಂತಾಗುತ್ತದೆ. ಇಂತಹ ಪುಸ್ತಕಗಳಿಂದ (ಕೃತಿ) ಕಲೆಯು ಸಮಾಜದ ಹಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಅದೂ ಕೂಡಾ ಸಮಜ ಪರೋಕ್ಷ ಹಾಗೂ ಪ್ರತ್ಯಕ್ಷ ಸಂಪರ್ಕವನ್ನು ಒಳಗೊಂಡಿದೆ ಎಂಬ ಮುಂತಾದ ವಿಷಯಗಳು ತಿಳಿದು ಬರುತ್ತಿವೆ. ಈ ಎಲ್ಲ ಮಹತ್ವದ ಅಂಶಗಳ ಹಿನ್ನೆಲೆಯಲ್ಲಿ ಕಲಾಸಾಹಿತ್ಯ ಕ್ಷೇತ್ರದಲ್ಲಿ ಇಂತಹ ಕೃತಿಗಳು ಕುತೂಹಲ ತರುತ್ತವೆ.

ಶಿವಾನಂದ ಬಂಟನೂರ ಅವರ **ದೃಷ್ಟಿ ಸೃಷ್ಟಿ** ಕೃತಿಯು ೨೦೦೯ ರಲ್ಲಿ ಅಲಕಾ ಪ್ರಕಾಶನದಿಂದ ಪ್ರಕಟಗೊಂಡಿದೆ. ಒಟ್ಟು ೧೩ ಲೇಖನಗಳನ್ನು ಒಳಗೊಂಡ ಕೃತಿಯು ಕಲೆಯೊಂದು ಜಿಜ್ಞಾಸೆ ಕಲೆ ಮತ್ತು ಮಾನಸಿಕದೂರ ಕರ್ನಾಟಕ ಚಳುವಳಿಯ ಆರಂಭಿಕ ಘಟ್ಟ ಕಲಾವಿಮರ್ಶೆಯ ಪರಿಭಾಷೆ ಮತ್ತು ವಿಮರ್ಶಕ, ದೃಶ್ಯಕಲೆಯ ಒಲವುಗಳು ಬೇಂದ್ರೆ ಕಾವ್ಯಕ್ಕೆ ಹೆಬ್ಬಾರರ ರೇಖಾಚಿತ್ರಗಳು, ಆಧ್ಯಾತ್ಮನುಭವದ ಚಿತ್ರಸರಣಿ, ವಿನ್ಸೆಂಟ್ ವ್ಯಾನ್‌ಗೊ ಎಂಬ ಅದ್ಭುತ ವಿಕರ್ಷಣಶಕ್ತಿ, ಎಂಬ ಶಿರ್ಷಿಕೆಯ ಬರಹಗಳು ತುಂಬಾ ಮೌಲ್ಯಯುತವಾಗಿದೆ. ಕಲಾವಿಮರ್ಶೆಯ ಪರಿಭಾಷೆ ಮತ್ತು ವಿಮರ್ಶಕ ಎಂಬ ಲೇಖನದಲ್ಲಿ ಸೃಜನಶೀಲತೆಯು ಇಂದೇ ಹುಟ್ಟಿದುದು ಹಿಂದಿನಿಂದಲ್ಲ ಎಂದು ತರ್ಕಿಸುವ ವಾದವು ತಪ್ಪು ಎಂಬ ಅಭೀಪ್ರಾಯಪಡಲಾಗಿದ್ದು, ಹಿಂದೆ- ಇಂದುಗಳ ಶ್ರೇಷ್ಠ ಕನಿಷ್ಠಗಳ ಲೆಕ್ಕಾಚಾರ ಸರಿಯಲ್ಲ. ಈ ರೀತಿಯ ಚಿಂತನೆಗಳು, ಮನೋಧರ್ಮಗಳು ಕಲೆಯ ಸಾರ್ವತ್ರಿಕ ಬೆಳವಣಿಗೆಗೆ ಮಾರಕವಾಗಬಲ್ಲವು ಎಂದು ತಮ್ಮ ನಿಲುವನ್ನು ಪ್ರತಿಪಾದಿಸುತ್ತಾ ಸಂಪ್ರದಾಯಿಕ ಕಲೆ ಅಂದು ಸೃಜನಶೀಲ ಕಲೆಯೇ ಆಗಿತ್ತು ಎಂಬ ಅಭಿಪ್ರಾಯವನ್ನ ಓದುಗರೊಂದಿಗೆ ಹಂಚಿಕೊಳ್ಳುತ್ತಾರೆ.

ವಿಮರ್ಶಕನ ಲಕ್ಷಣಗಳನ್ನು ಈ ಕೃತಿಯ ಲೇಖನಗಳಲ್ಲಿ ಪ್ರಸ್ತಾಪಿಸಲಾಗಿದೆ. ನಿಜವಾದ ವಿಮರ್ಶಕ ತನ್ನ ಮೃದುಧೋರಣೆಯ ಸ್ವಭಾವದಿಂದ ಕಲಾವಿದನ ತಾಳ್ಮೆ ಅಭಿರುಚಿಗೆ ತಕ್ಕಂತೆ ಕೃತಿಗಳನ್ನು ವಿಮರ್ಶಿಸಿ ಮೃದುವಾಗಿ ದಾಖಲಿಸುತ್ತಾನೆ ಎಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ. ವಿಮರ್ಶೆಯ ಉದ್ದೇಶ, ಒಂದೇ ಮಾತಿನಲ್ಲಿ ಅನೇಕ ಅಂಶಗಳನ್ನು ಕಂಡರಿಸುವಂತೆ ಸಹೃದಯರಿಗೂ ಕಲಾವಿದನಿಗೂ ನಡುವೆ ಇರುವ ಕಂದರವನ್ನು ಕಿರಿದಾಗಿಸುವಂತಿರಬೇಕೆಂದು ತಮ್ಮ ಕೃತಿಯಲ್ಲಿ ವಿಮರ್ಶೆಯ ಲಕ್ಷಣ ಮತ್ತು ಉದ್ದೇಶಗಳನ್ನು ವಿವರಿಸಿದ್ದಾರೆ. ಸ್ವತಃ ವಿಮರ್ಶಕರಾದ ಡಾ. ಶಿವಾನಂದ ಬಂಟನೂರರು ತಮ್ಮ ಕೃತಿಯಲ್ಲಿ ದೃಶ್ಯಕಲೆಯ ಸಿದ್ಧಾಂತಗಳು ಅದರ ರಚನೆ ಸಂಬಂಧ ಹಾಗೂ ಅಂತರಗಳ ಸ್ವರೂಪವನ್ನು ಕಂಡರಿಸಿದ್ದಾರೆ. ಕೆಲವು ಲೇಖನಗಳ ಮುಖಾಂತರ ಕಲೆಯ ಆಸ್ವಾದನಾ ನೆಲೆಗಳನ್ನು ಸೂಕ್ಷ್ಮವಾಗಿ ಕಂಡರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ದೃಷ್ಟಿ ಸೃಷ್ಟಿ ಕೃತಿಯ

ವೈಚಾರಿಕವಾದ ಕೃತಿಯಾಗಿ, ಸುಂದರ ಹಾಗೂ ಸರಳ ನಿರೂಪಣೆಯಿಂದ ಕೂಡಿದ್ದು, ತುಂಬಾ ಮೌಲಿಕವಾಗಿದೆ.

ಬಸವರಾಜ.ಎಸ್.ಕಲೆಗಾರರ **ಕಲಾನ್ವೇಷಣೆ** ರೇಖಾಚಿತ್ರ ಪ್ರಕಾಶನದಿಂದ ೨೦೧೪ ರಲ್ಲಿ ಪ್ರಕಟನಗೊಂಡಿದೆ. ಒಟ್ಟು ೧೬ ಲೇಖನಗಳನ್ನು ಕೃತಿ ಒಳಗೊಂಡಿದ್ದು, ಸುತ್ತಲಿನ ಪರಿಸರ ಪ್ರಪಂಚದಲ್ಲಿ ಕಲೆಯನ್ನೇ ಹುಡುಕುತ್ತಾ ಹೊರಟು, ಬರವಣಿಗೆಗೆ ಮಾಡಿದ ಲೇಖಕರು ತಮ್ಮ ಕುತೂಹಲವನ್ನು ಓದುಗರೊಂದಿಗೆ ಹಂಚಿಕೊಂಡಿದ್ದಾರೆ. ನಾಡೋಜ ಪ್ರಶಸ್ತಿ ವಿಜೇತ ಕಲಾವಿದರು, ಎಂ.ಎಸ್.ಹುಸೇನ್, ಪಾಶ್ಚಾತ್ಯ ಕಲಾವಿದರಾದ ರಾಬರ್ಟ ಹಿರಿಯ ಕಲಾವಿದ ಶಂಕರಗೌಡ ಬೆಟ್ಟದೂರ–ಹೀಗೆ ಕಲಾವಿದರ ಕುರಿತು ಅವರ ಸಾಧನೆ ಕುರಿತು ಲೇಖಕರು ಚಿತ್ರಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಶಿಲ್ಪವನ, ರಾಷ್ಟ್ರೀಯ ಕಲ್ಲು ಬಂಡೆಗಳು, ಶಹಪುರ ತಾಲೂಕಿನ ದೃಶ್ಯಕಲಾ ಪರಂಪರೆ, ಯಾದಗಿರಿ ಜಿಲ್ಲೆಯ ಚಿತ್ರಕಲೆ, ಹೀಗೆ ಅನೇಕ ಶಿರ್ಷಿಕೆಯಡಿ ಲೇಖನಗಳು ಮೂಡಿ ಬಂದಿವೆ. ಲೇಖಕರು ತಮ್ಮ ವೈಯಕ್ತಿಕ ನೆಲೆಯಲ್ಲಿಯ ಅನುಭವಗಳನ್ನು ಜೀವನದ ಘಟನೆಗಳನ್ನು ಮುಂದಿರಿಸಿ ಕಲಾನ್ವೇಷಣೆಯನ್ನು ಮಾಡಿದ್ದಾರೆ. ಕೆಲವು ಸ್ವಅನುಭವದ ಉದಾಹರಣೆಗಳನ್ನು ಉಲ್ಲೇಖಿಸುತ್ತಾ, ಕಲೆ ಮತ್ತು ಸಮಾಜದ ಅವಿನಾಭುವವನ್ನು ನಿರೂಪಿಸುವ ಪ್ರಯತ್ನವನ್ನು ಮಾಡಿದಾರೆ. "ನನ್ನಜ್ಜಿಯ ಶವಸಂಸ್ಕರಾದ ಸುತ್ತ ಒಂದು ಕಲಾತ್ಮಕ ನೋಟ"[೮] ಎಂಬ ಶಿರ್ಷಿಕೆಯಲ್ಲಿರುವ ಲೇಖನದಲ್ಲಿ ನೋವಿನಲ್ಲೂ ಒಂದು ಬಗೆಯ ಆನಂದವನ್ನು ಕಾಣುವ ಅವರ ದೃಷ್ಟಿ ಅಮೋಘವಾದುದಾಗಿದೆ.

ಪ್ರಸ್ತುತ ಕೃತಿಯು ಲೇಖಕರ ಬರವಣಿಗೆಯ ಪ್ರಾರಂಭಿಕ ಹಂತವನ್ನು ಸೂಚಿಸುತ್ತದೆ ಎನ್ನಬಹುದು. ಕೆಲವು ಲೇಖನಗಳಲ್ಲಿ ಕಥಾನಕ ಶೈಲಿಯ ಬರವಣಿಗೆ ಕಂಡುಬರುತ್ತದೆ. ಕೃತಿಯಲ್ಲಿ ಆಯ್ದುಕೊಂಡ ವಿಷಯಗಳು ವಿಶೇಷವಾಗಿದ್ದು, ಅವುಗಳನ್ನು ಸಮರ್ಪಕವಾಗಿ ನಿರೂಪಿತವಾಗುವಲ್ಲಿ ಯಶಸ್ಸನ್ನು ಕಂಡಿಲ್ಲವೆನ್ನಬಹುದು. ಸಮಕಾಲೀನ ಬರವಣಿಗೆಯ ಜೊತೆಗೆ ವಿವರಣಾತ್ಮಕ ಬರಹವಾಗಷ್ಟೇ ತೋರ್ಪಡುವ ಕೃತಿಯು ಸರಳ ಭಾಷೆಯಿಂದ ಕೂಡಿದ್ದು, ಕಲಾ ದೃಷ್ಟಿಯಿಂದ ವಿಮರ್ಶಾತ್ಮಕವಾಗಿ ರೂಪಪಡೆಯುವಲ್ಲಿ ಸೋತಿದೆ ಎನ್ನಬಹುದು.

ಕಲಾಸಂಸ್ಕೃತಿ ೨೦೧೨ರಲ್ಲಿ ಸ್ವಪ್ನ ಬುಕ್‌ಹೌಸ್‌ನಿಂದ ಪ್ರಕಟವಾದ ಕೃತಿ ಖ್ಯಾತ ಲೇಖಕರಾದ ನಾಡೋಜ ಎಂ.ಎಚ್.ಕೃಷ್ಣಯ್ಯ ಅವರಿಂದ ರಚಿತವಾಗಿದೆ. ಹಲವು ವಿಮರ್ಶಾ ಲೇಖನಗಳಿಂದ ಕೂಡಿದ ಕೃತಿಯು ಸೌಂದರ್ಯಶಾಸ್ತ್ರದ ಹಿನ್ನೆಲೆಯಲ್ಲಿ ವೈಚಾರಿಕವಾಗಿ ಮುಡಿಬಂದಿದೆ. ಕಲೆ ಮತ್ತು ವಿಮರ್ಶೆ, ಶೃಂಗಾರರಸ (ಭಾರತೀಯ ಚಿತ್ರಕಲೆಯಲ್ಲಿ ಶ್ರಂಗಾರ ಲಹರಿ) "ಅಮೂರ್ತತೆ ಮತ್ತು ಅಮೂರ್ತಕಲೆ" ಸಂಯೋಜನೆ : ಒಂದು ಟಿಪ್ಪಣಿ ದೃಶ್ಯಕಲೆಯ ಒಲವು ನಿಲುವುಗಳು. ಕಲೆಯ ಸಂಕೀರ್ಣತೆ ವಿವಿಧ ಕಲೆಗಳ ನಡುವಿನ ಸಂಬಂಧ ಡಿ.ವಿ.ಜಿ.ಯವರ ಸೌಂದರ್ಯ ಮೀಮಾಂಸೆ ಎಂಬ ಲೇಖನಗಳು ತುಂಬಾ ಉಪಯುಕ್ತವಾಗಿವೆ. ಕಲೆಯನ್ನು ಬುದ್ಧಿಯಿಂದ ಅರ್ಥಮಾಡಿಕೊಳ್ಳಲು

ಸಾಧ್ಯವಿಲ್ಲ ಬದಲಾಗಿ ಅದನ್ನು ಸಂವೇದನೆಯಿಂದ ಅದು ಆಸ್ವಾದಿತವಾಗುವಂತಹದ್ದು" ಎಂಬ ನಿಲುವನ್ನು ವ್ಯಕ್ತಪಡಿಸುವಂತೆ ಲೇಖನಗಳು ಮೂಡಿಬಂದಿವೆ.

ಡಿ.ವಿ.ಜಿಯವರ ಸೌಂದರ್ಯ ಮಿಮಾಂಸೆ ಲೇಖನದಲ್ಲಿ ಡಿವಿಜಿಯವರು ಹೇಳಿದ ತ್ರಿಕೂಟ ಅಂಶಗಳನ್ನು ಪ್ರಸ್ತಾಪಿಸಿ, ಅವರ ಪ್ರಕಾರ ೧. ಸೃಷ್ಟಿ, ಸೌಂದರ್ಯ ೨. ಕಲಾಕಲ್ಪಿತ ಸೌಂದರ್ಯ. ೩. ಜೀವ ಸಂಸ್ಕಾರ ಸೌಂದರ್ಯ ಗಳನ್ನು ವಿಮರ್ಶಾತ್ಮಕವಾಗಿ ಲೇಖಕರು ಚರ್ಚಿಸಿದ್ದಾರೆ. "ಅಮೂರ್ತತೆ ಮತ್ತು ಅಮೂರ್ತ ಕಲೆ" "ದೃಶ್ಯ ಕಲೆಯ ಒಲವು ನಿಲುವುಗಳು" ಮುಂತಾದ ಲೇಖನಗಳು ದೃಶ್ಯಕಲೆಯ ಕುರಿತಾಗಿ ತುಂಬಾ ಮಹತ್ವದ ವಿಷಯಗಳನ್ನು ಪ್ರಸ್ತಾಪಿಸುತ್ತವೆ. ಮೀಮಾಂಸೆನೆಲೆಯಲ್ಲಿ, ಕಲೆಯ ಆಂತರ್ಯದ ಅರಿವನ್ನು ತೋರಿಸಿಕೊಡುವಲ್ಲಿ ಕೃತಿ ತುಂಬಾ ಉತ್ಕೃಷ್ಟವಾಗಿದೆ. ಸಮಕಾಲೀನ ಸಂದರ್ಭದಲ್ಲಿ ಮೀಮಾಂಸೆಯ ಹಿನ್ನೆಲೆಯಾಗಿ ರಚಿತಗೊಂಡ ಪುಸ್ತಕ ಮೌಲಿಕವಾಗಿದೆ. ಕವಿ, ಡಿ.ವಿ.ಜಿಯ ಮೀಮಾಂಸಾ ಪ್ರಜ್ಞೆಯನ್ನು ಚರ್ಚಿಸಿದ ಲೇಖಕರು ದೃಶ್ಯಕಲಾವಿದರಿಗೆ, ಕಲಾಅಧ್ಯಯನಕಾರರಿಗೆ ಕವಿಯೊಬ್ಬರ ಸಿದ್ಧಾಂತವನ್ನು ಉದಾಹರಿಸಿ ಸರಳವಾಗಿ ಅರ್ಥವಾಗುವಂತೆ ನಿರೂಪಿಸಿರುವುದು ತುಂಬಾ ವಿಶೇಷವಾಗಿದೆ. ಈ ಎಲ್ಲ ಅಂಶಗಳಿಂದ ಕೃತಿ ಇಂದು ತುಂಬಾ ಸೊಗಸಾಗಿ ಅಚ್ಚು ಕಟ್ಟಾಗಿ ಮೂಡಿಬಂದಿದೆ ಎನ್ನಬಹುದು.

ಸಂಕೀರ್ಣ ದೃಶ್ಯಕಲಾ ಸಾಹಿತ್ಯವು ದೃಶ್ಯಕಲೆಯ ಅನೇಕ ವಿಷಯಗಳನ್ನು ಒಳಗೊಂಡ ಸಾಹಿತ್ಯವಾಗಿದೆ. ಕಲೆ ಎಂದರೇನು? ಕಲೆಯ ಬಗೆಗಳು ಎಂಥಹ ಸ್ವರೂಪದ್ದು, ಕಲೆಯ ಉಪಯೋಗಳೇನು? ಕಲೆಯ ಕುರಿತಾದ ಅನೇಕ ವಿದ್ವಾಂಸರ ನಿಲುವುಗಳು, ಅವರು ವಿವರಿಸಿದ ವ್ಯಾಖ್ಯೆಗಳೇನು? ಎಂಬುತ್ಯಾದಿ ಪ್ರಶ್ನೆಗಳಿಗೆ ಅಲ್ಲಲ್ಲಿ ಉತ್ತರವನ್ನು ಕಂಡರಿಸುವ ಸಾಹಿತ್ಯ ಈ ಸಂಕೀರ್ಣ ಮಾದ್ಯಮದ್ದಾಗಿದೆ. ಕಲೆಯ ಗುಣಲಕ್ಷಣ, ಮೀಮಾಂಸೆ, ಆಧುನಿಕ ವಿಮರ್ಶೆ ಪ್ರಾಚೀನರ ದೃಷ್ಟಿ ಮುಂತಾದ ಅಂಶಗಳನ್ನು ಅನೇಕ ಜಿಜ್ಞಾಸೆಗಳನ್ನು ಒಳಗೊಂಡಂತೆ ಪ್ರಶ್ನೆ ಉತ್ತರಗಳನ್ನು ತನ್ನೊಡಲ್ಲೂ ಅಡಗಿಸಿಕೊಂಡು, ಇಂದಿನ ಹಲವು ಕ್ಷೇತ್ರಗಳೊಂದಿಗೆ ಕಲೆ ಹೇಗೆ ಅಸ್ತಿತ್ವ ಪಡೆದಿದೆ ಎನ್ನುವುದನ್ನು ವಿವರಣಾತ್ಮಕವಾಗಿ ವಿಶ್ಲೇಷಿಸುವ ಸಂಕೀರ್ಣ ಸಾಹಿತ್ಯ ವೈವಿಧ್ಯಮಯ ಅಂಶಗಳೊಂದಿಗೆ ವೈಶಿಷ್ಟ್ಯತೆ ಪಡೆಯುತ್ತದೆ.

ಕಳೆದ ದಶಕದಲ್ಲಿ ಅನೇಕ ಕೃತಿಗಳಲ್ಲಿ ವೈವಿಧ್ಯಮಯವಾದ ವಿಷಯಗಳ ಒಳಗೊಳ್ಳುವಿಕೆ ಕಂಡು ಬರುತ್ತದೆ. ಸಮಕಾಲೀನ ಬರಹಗಾರರಾದ ಕೆ.ವಿ.ಸುಬ್ರಹ್ಮಣ್ಯಂ, ಚಿ.ಸು.ಕೃಷ್ಣ ಶೆಟ್ಟಿ, ಡಾ. ಶಿವಾನಂದ ಬಂಟನೂರ, ರವಿಕುಮಾರ ಕಾಶಿ, ಮಲ್ಲಿಕಾರ್ಜುನ ಬಾಗೋಡಿ ಮುಂತಾದವರು ತಮ್ಮ ಕೃತಿಗಳಲ್ಲಿದೃಶ್ಯ ಕಲೆಯ ವಿಮರ್ಶೆಯನ್ನು ಮಾಡಿದ್ದಾರೆ. ಕಲೆಯ ಸಿದ್ಧಾಂತಗಳನ್ನು ಕುರಿತು ಡಿ.ಎ.ಉಪಾಧ್ಯಾಯ ಅವರ **ಪಾಶ್ಚಾತ್ಯ ದೃಶ್ಯ ಕಲೆಗಳು, ಪಾಶ್ಚಾತ್ಯ ದೃಶ್ಯ ಕಲಾ ಸಿದ್ಧಾಂತ** ೭೦ ಮತು ೬೪ಳಳ ಕಲೆಗಳವರಗೆ ಈ ಕೃತಿಗಳು ಕಲಾ ಕ್ಷೇತ್ರದಲ್ಲಿ ಕೆಲವು ಮಹತ್ವದ ದಾಖಲೆಗಳನ್ನು ಪರಿಚಯಿಸುವುದರ ಜೊತೆಗೆ ಕನ್ನಡದಲ್ಲಿ ಪಾಶ್ಚಾಮಾತ್ಯರ ಸಿದ್ಧಾಂತಗಳನ್ನು ಒದಗಿಸುತ್ತವೆ.

ಸರಳವಾದ ಭಾಷೆಯಿಂದ ಕೂಡಿದ ಕೃತಿಗಳು ಕಲಾಸಾಹಿತ್ಯದಲ್ಲಿ ಸಿದ್ಧಾಂತಗಳನ್ನು ಕುರಿತು ಬರೆಯುವಲ್ಲಿ ತೀರಾ ಹಿಂಜರಿಯುವ ಬರಹಗಾರರ ಮಧ್ಯೆ ಉಪಾಧ್ಯಾಯ ಅವರು ದಿಟ್ಟನಿಲುವನ್ನು ತಳೆದು ಕೃತಿಗಳನ್ನು ಬರೆದಿದ್ದಾರೆ. ಎನ್ನಬಹುದು.

ಎನ್.ಮರಿಶಾಮಾಚಾರ್ ರವರ ಪಾರಂಪಾರಿಕ 'ಚಿತ್ರಕಲೆ' ಎನ್ನುವ ಕೃತಿಯು ಚಿತ್ರಕಲೆಯು ಬೆಳೆದುಬಂದ ಹಂತಗಳನ್ನು, ರಾಜಮನೆತನಗಳಲ್ಲಿ ಅದುಕಂಡ ಬದಲಾವಣೆಗಳನ್ನು ವಿವರಿಸುತ್ತದೆ. ಕರ್ನಾಟಕದ ಪರಂಪರಾನುಗತ ಕಲೆ ಇಂದು ಇಲ್ಲದಿರುವ ಸಂದರ್ಭಕ್ಕೆ, ಇಂತಹ ಕೃತಿಗಳು ಮರಳಿ ನೆನಪಿಸುವ ದಿಶೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಇತಿಹಾಸದ ಕಾಲಗರ್ಭದಲ್ಲಿ ಹುದುಗಿಹೋದ ಕಲೆಯನ್ನು ಮತ್ತೆ ಅವುಗಳ ಕುರಿತಾಗಿ ನಿಖರವಾದ ಅಧ್ಯಯನ ಕೈಗೊಂಡು ಪೀಳಿಗೆಯಿಂದ ಪೀಳಿಗೆಗೆ ಕಲಾ ಪರಂಪರೆಯನ್ನು ತಲುಪಿಸುವ ಪ್ರಯತ್ನ ಮರಿಶಾಮಾಚಾರ್ ರವರದ್ದಾಗಿದೆ.

ಕಲಾ ಪರಿಸರವನ್ನು ತಮ್ಮ ಕೃತಿಯಲ್ಲಿ ಸುಂದರವಾಗಿಯೂ ವಸ್ತುನಿಷ್ಠವಾಗಿಯೂ ಚಿತ್ರಿಸುವ ಬಾಗೋಡಿಯವರು ಭಾಗದ ಉದಯೊನ್ಮುಖ ಬರಹಗಾರರಾಗಿದ್ದಾರೆ. ಇವರ ಕೃತಿಗಳು ಕಲೆ ಮತ್ತು ಅದರ ಇತಿಹಾಸವನ್ನು ಎರಡನ್ನು ವಿವರಿಸುತ್ತದೆ. ಗ್ರಾಮೀಣ ಪರಿಸರದಲ್ಲಿ ಈಗಲೂ ಅಸ್ತಿತ್ವದಲ್ಲಿ ಉಳಿದ ಮತ್ತು ಕೆಲವಡೆ ಅಳಿದು ಹೋಗುತ್ತಿರುವ ಕಲೆಯನ್ನು ಅದರ ಸಾಂಪ್ರದಾಯಿಕ ಶೈಲಿ, ವಸ್ತು ವಿಷಯ, ಮಾಧ್ಯಮ ಮುಂತಾದ ಅಂಶಗಳನ್ನು ಕುರಿತಾಗಿ ವಿವರಿಸುವಲ್ಲಿ ಬಾಗೋಡಿಯವರು ವಿಮರ್ಶಾತ್ಮಕವಾಗಿ ಬರದಿದ್ದಾರೆ. ಪ್ರಾದೇಶಕ ಹಿನ್ನೆಲೆಯಲ್ಲಿ ಹುಟ್ಟಿದ ಕಲೆಯೊಂದನ್ನು ವಿವರಿಸುವಲ್ಲಿ ಅದಕ್ಕೆ ಕಾರಣವಾದ ರಾಜಮನೆತನ, ಅದು ಬೆಳೆದುಬರಲು ಕಾರಣವಾದ ಅನೇಕ ಅಂಶಗಳು ಹೀಗೆ ಅವುಗಳ ಕುರಿತಾಗಿ ಬರಹ ಮಾಡಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಬಾಗೋಡಿಯವರರ ಕೃತಿಗಳು ಸಂಶೋಧನಾತ್ಮಕ ಬರವಣಿಗೆಯ ಸ್ವರೂಪವನ್ನು ಪಡೆದಿದೆ ಎನ್ನಬಹುದು. ಮತ್ತು ಈ ರೀತಿಯ ಬರವಣಿಗೆ ಇಂದು ಹೆಚ್ಚು ಸೂಕ್ತವಾಗಬಲ್ಲವು. ಲೇಖಾವರಣ, ಹೈ.ಕ.ದೃಶ್ಯ ಸಂಸ್ಕೃತಿ, ಸುರಪುರ ಚಿತ್ರಕಲೆ, ಸಗರ ನಾಡಿನ ಕಲೆ, ಮುಂತಾದ ಕೃತಿಗಳು ಈ ದಶಕದ ಪ್ರಮುಖ ಕೃತಿಗಳಾಗಿದ್ದು" ಸುರಪುರ ಚಿತ್ರಕಲೆ" ಕೃತಿಯು ಇಂದು ರಾಜ್ಯಾದ್ಯಾಂತ ಪರಿಚಿತವಿರುವ ಕೃತಿಯಾಗಿದೆ. ದಖನಿ ಕಲೆಗಳಲ್ಲಿ ಒಂದಾದ ಸುರಪುರ ಪಾಳೆಗಾರರ (ನಾಯಕ) ಕಾಲದಲ್ಲಿ ಅಸ್ತಿತ್ವವನ್ನು ಪಡೆದುಕೊಂಡ ಸುರಪುರ ಕಲೆಯ ಕುರಿತಾಗಿ ಹೊರಬಂದ ಕೃತಿಯು ಅನೇಕ ವಿದ್ಯಾರ್ಥಿಗಳಿಗೆ ಪಠ್ಯದ ಕೃತಿಯಂತೆ ಅನಿವಾರ್ಯವಾಗಿದೆ. –ಸಂಕೀರ್ಣ ವಿಷಯಗಳ ಕುರಿತಾಗಿ ಐತಿಹಾಸಿಕ ಹಿನ್ನೆಲೆಯಲ್ಲಿಯೂ ಅನೇಕ ಸ್ಥಳಗಳ ಹಿನ್ನೆಲೆಯಲ್ಲಿ ಬೆಳೆದುಬಂದ ಕಲೆಗಳ ಕುರಿತಾಗಿ ಇಂದು ಬರವಣಿಗೆ ಅನಿವಾರ್ಯವಾಗಿದ್ದು ಈ ದಿಶೆಯಲ್ಲಿ ಇವರ ಕೃತಿಗಳು ಮಹತ್ವ ಪಡೆಯುತ್ತವೆ.

ಮೇಲಿನ ಕೆಲ ಉದಾಹರಣೆಗಳಿಂದ ಕೃತಿಗಳ ಸ್ವರೂಪವನ್ನು ಸ್ಪಷ್ಟವಾಗಿ ಕಾಣಲಾಗುವುದಿಲ್ಲ. ಸಮಗ್ರವಾದ ಒಟ್ಟು ದಶಕದಲ್ಲಿ ರಚನೆಗೊಂಡ ಸಾಹಿತ್ಯಕೃತಿಗಳ ಕುರಿತಾಗಿ ಸಂಶೋಧನೆ ಕೈಗೊಳ್ಳಲಾಗಿ

ಸಂಕೀರ್ಣ ಸಾಹಿತ್ಯವು ದೃಶ್ಯಕಲಾ ಸಾಹಿತ್ಯದಲ್ಲಿ ಒಂದು ರೀತಿಯ ಬಹುತ್ವವನ್ನು ಒಳಗೊಳ್ಳುವಲ್ಲಿ ದಾಪುಗಾಲು ಇಡುತ್ತಿರುವ ಅಂಶವು ಪ್ರಸ್ತುತವಾಗುತ್ತಿದೆ. ಸಾಹಿತ್ಯ, ಭಾಷೆ, ಮೀಮಾಂಸೆ, ಸಾಮಾಜಿಕ ಆಯಾಮ ಮುಂತಾದ ನೆಲೆಗಳಿಂದ ಕಳೆದ ದಶಕದಲ್ಲಿ ಹಲವಾರು ಪ್ರಯೋಗಗಳು ನಡೆಯುತ್ತವೆ. ಪ್ರೌಢ ಭಾಷೆ, ಗಹನವಾದ ವಿಷಯದ ಆಯ್ಕೆಯು ಲೋಪದ ಮಧ್ಯೆಯೂ ಇಂದಿನ ಒಂದು ಅಗೋಚರ ಮಾನದಂಡದಿಂದ ಅಳೆಯುವ ಹೊಸಯುಗದ ನವ್ಯವ್ಯಾಕರಣದಿಂದ ಕೂಡಿದ ಕಲೆಯನ್ನು ವಿಮರ್ಶಿಸಲು ಹೊಸ ಮಾರ್ಗಗಳು ತೆರೆದುಕೊಂಡಿವೆ ಎನ್ನಬಹುದು.

ಟಿಪ್ಪಣಿ :

೧. ಕೆ.ವಿ.ಸುಬ್ರಹ್ಮಣ್ಯಂ : ಆದಿಮ ದೃಶ್ಯ ಸೌಂದರ್ಯದ ಅಧಿಪತ್ಯ : ಚಿತ್ರಕಾವ್ಯ ಪ್ರಕಾಶನ ಪು.ಸಂ.೧

೨. ಡಾ. ಶಿವಾನಂದ ಎಚ್. ಬಂಟನೂರ : ಸಮಕಾಲೀನ ಶಿಲ್ಪಕಲೆ : ಪು.ಸಂ–೩

೩. ಡಾ. ಶಿವಾನಂದ ಎಚ್. ಬಂಟನೂರ : ಮಾಟದೊಳಗಣ ನೋಟ : ಪು.ಸಂ–೩೧

೪. ಅದೇ.. ಪು.ಸಂ.–೪೯

೫. ಡಾ. ಶಿವಾನಂದ ಬಂಟನೂರ : ದೃಶ್ಯ ಪದದೃಶ್ಯ (ಅಲಕಾ ಪ್ರಕಾಶನ): ಪು.ಸಂ.೧೦

೬. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಲೇಖಾವರಣ (ಸರಚಂದ್ರ ಪ್ರಕಾಶನ) ಪು.ಸಂ.೫೯

೭. ಕೆ.ವಿ. ಸುಬ್ರಹ್ಮಣ್ಯಂ : ಇನ್‌ಸ್ಟಾಲೇಷನ್ ಕಲಾಪ್ರಪಂಚ : ಪು.ಸಂ.–೨

೮. ಬಸವರಾಜ್ ಎಸ್. ಕಲೆಗಾರ : ಕಲಾನ್ವೇಷಣೆ ರೇಖಾಚಿತ್ರ ಪ್ರಕಾಶನ ಕೊಂಕಲ್: ಪು.ಸಂ.–೯೧

೯. ಎಂ. ಎಚ್. ಕೃಷ್ಣಯ್ಯ : ಕಲಾ ಸಂಸ್ಕೃತಿ : (ಸ್ವಪ್ನ ಬುಕ್ ಹೌಸ್ ಪ್ರಕಾಶನ): ಪು.ಸಂ.೮೩

೧೦. ಅದೇ.. ಪು.ಸಂ.– ೯೩

● ಸಂಕೀರ್ಣ ದೃಶ್ಯಕಲಾ ಸಾಹಿತ್ಯಕೃತಿಗಳು



• ಸಂಕೀರ್ಣ ದೃಶ್ಯಕಲಾ ಸಾಹಿತ್ಯಕೃತಿಗಳು



ಅಧ್ಯಾಯ – ಆರು

ಅನುವಾದ ದೃಶ್ಯಕಲಾ ಸಾಹಿತ್ಯ

ಅಧ್ಯಾಯ – ಆರು

ಅನುವಾದ ದೃಶ್ಯಕಲಾ ಸಾಹಿತ್ಯ

ದೇಶ ಒಂದು ವ್ಯವಸ್ಥೆಯಾದಂತೆ ಭಾಷೆಯೂ ಒಂದು ವ್ಯವಸ್ಥೆಯಾಗಿ ಸಂವಹನ ಪೂರಿತವಾದ ಅಭಿವ್ಯಕ್ತಿಯಾಗಿದೆ. ದೇಶದ ಸಂಸ್ಕೃತಿ, ಕಲೆ, ವಿಜ್ಞಾನ ಮುಂತಾದ ಜ್ಞಾನಶಿಸ್ತಿನಲ್ಲಿ ಅಡಕವಗಿರುವ ವಿಷಯಗಳನ್ನು ಅರಿತುಕೊಳ್ಳುವಲ್ಲಿ ಅಭಿವ್ಯಕ್ತಿಯ ಒಂದು ಮಧ್ಯಮವಾದ ಭಾಷೆಯ ಅರಿವು ಇರಬೇಕಾದುದು ಅನಿವಾರ್ಯವೇ ಸರಿ. ಯಾವುದೇ ಎರಡು ಪ್ರದೇಶಗಳ ಭಾಷೆಗಳಲ್ಲಿ ಪರಸ್ಪರ ವಿನಿಮಯ ಮಾಡಿಕೊಳ್ಳುವಲ್ಲಿ ಎರಡು ಸಂಸ್ಕೃತಿಗಳು ಒಂದಕ್ಕೊಂದು ಕೊಡು ಕೊಳ್ಳುವಿಕೆ ಪ್ರಕ್ರಿಯೆಯು ಸಹಜವಾದುದು. ಹೀಗೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ತಲುಪುವ ಮತ್ತು ಆ ಭಾಷೆಯು ಅನ್ಯಭಾಷೆಯಿಂದ ವಿಷಯಗಳನ್ನು ಪಡೆದುಕೊಳ್ಳುವ ಬಹು ದೊಡ್ಡಪ್ರಕ್ರಿಯೆಯಲ್ಲಿ ನಡೆಯುವ ಅನನ್ಯಕ್ರಿಯೆ ಎಂದರೆ ತರ್ಜುಮೆ– ಈ ತರ್ಜುಮೆ ಎನ್ನುವುದು ಸುಲಭದಲ್ಲಿ ವಿವಿಧ ಭಾಷೆಯಲ್ಲಿ ಅಡಕವಾದ ವಿಷಯವನ್ನು ಅರಿತು ಕೊಳ್ಳುವಲ್ಲಿ ಆತ್ಯಂತಿಕ ಪಾತ್ರವನ್ನು ವಹಿಸುತ್ತದೆ.

ಪ್ರಸ್ತುತ ಜಾಗತೀಕರಣ ಸಂದರ್ಭದಲ್ಲಿ ಹಲವು ಸಂಸ್ಕೃತಿಗಳು ಒಂದಕ್ಕೊಂದು ಸಂಕರವಾಗುವ ಸಮಯಕ್ಕೆ ಬಹುಭಾಷಾ ಕಲಿಕೆ ಅಗತ್ಯವಾಗುತ್ತದೆ. ಆದಾಗ್ಯೂ ಕೂಡಾ ಸ್ಥಳೀಯ ಭಾಷೆಗಳಲ್ಲಿ ಮಾಹಿತಿ ಲಭ್ಯವಾದಾಗ ಬಹುಭಾಷೆ ಕಲಿಕೆಯ ಸಂದರ್ಭ ಗೌಣವಾಗಬಹುದು. ಈ ಹಿನ್ನೆಲೆಯಲ್ಲಿ ಅನುವಾದ ಪ್ರಕ್ರಿಯೆಯು ವಿಷಯಗಳನ್ನು ಅರಿತುಕೊಳ್ಳುವಲ್ಲಿ ಪ್ರಮುಖ ಅಂಶವಾಗುತ್ತದೆ. ಸ್ಥಳೀಯ ಭಾಷೆಗಳ ವಿಷಯವನ್ನು ವಿಶ್ವಮುಖಿಯಾಗಿಸುವುದು ಮತ್ತು ಜಾಗತಿಕ ವಿಷಯಗಳನ್ನು ಸ್ಥಳೀಯರಿಗೆ (ಪ್ರಾದೇಶಿಕರಿಗೆ) ತಲುಪಿಸುವ ಉದ್ದೇಶ ಒಂದೆಡೆಯಾದರೆ, ಬಹುಮುಖಿ ಸಂಸ್ಕೃತಿಯನ್ನೊಳಗೊಂಡ ಭಾರತದ ಸಂದರ್ಭದಲ್ಲಿ ಅನೇಕ ಪ್ರದೇಶಗಳ ಸಂಸ್ಕೃತಿಯನ್ನು ಉತ್ತಮವಾಗಿ ಗ್ರಹಿಸಿಕೊಳ್ಳುವುದು ಪ್ರಾದೇಶಿಕ ಭಾಷೆಯಲ್ಲಿ ಮಾಹಿತಿ ಲಭ್ಯವಾದಾಗ ಮಾತ್ರ ಸಾಧ್ಯವಾಗಬಲ್ಲದು.

ಇಂದು ಕತೆ, ಕಾದಂಬರಿ, ಅನುವಾದಗಳಲ್ಲದೆ ಕವನಸಂಕಲನಗಳೂ ಕೂಡಾ ಅನುವಾದ ಗೊಳ್ಳುತ್ತಿವೆ. ಯಾವುದೇ ಸಂಗತಿ, ಕತೆ, ಕಾವ್ಯ, ಸಂದರ್ಭ, ಕಾಲ, ವಸ್ತು ಮುಂತಾದ ಅಂಶಗಳನ್ನು ಆಧರಿಸಿ ಅನುವಾದವು ರೂಪಗೊಳ್ಳುತ್ತದೆ. ಈ ಬಗೆಯ ಅನುವಾದದಲ್ಲಿ ವಿಶ್ವಭಾಷೆಯಾದ ದೃಶ್ಯಕಲೆಯ ಕುರಿತಾದ ಸಾಹಿತ್ಯವೂ ಕೂಡಾ ಈ ಹೊತ್ತಿನಲ್ಲಿ ಔಚಿತ್ಯ ಪೂರ್ಣವಾಗಿದೆ.

ಚಿತ್ರಕಲಾ ಅನುವಾದ ಸಾಹಿತ್ಯದಲ್ಲಿ ಅಧ್ಯಯನಕ್ಕೆ ತಿಳಿದಂತೆ ಸಂಸ್ಕೃತ, ಇಂಗ್ಲೀಷ್, ಹಿಂದಿ, ತೆಲುಗು, ಭಾಷೆಯ ಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ. ಸಂಸ್ಕೃತದಲ್ಲಿ ವಿಶ್ವಕೋಶಾತ್ಮಕ ಗ್ರಂಥಗಳು ರಚನೆಗೊಂಡಿದ್ದು, ಅವುಗಳಲ್ಲಿ ಚಿತ್ರಕಲೆಯ ಕುರಿತಾದ ಭಾಗಗಳೂ ಕಲಾಅಧ್ಯಯನ ದೃಷ್ಟಿಯಿಂದ ಮಹತ್ವ ಪಡೆದಿವೆ. ಹೀಗೆ ಸಂಸ್ಕೃತದಲ್ಲಿರುವ ಗ್ರಂಥಗಳೂ ಕನ್ನಡಕ್ಕೆ ಮೂಲರೂಪದೊಂದಿಗೆ ಅನುವಾದಗೊಂಡಿವೆ. ಅಲ್ಲದೆ ಶ್ಲೋಕಗಳ ಅರ್ಥ ವಿವಣೆಯಿಂದ ಕೂಡಿದ ಸಂಪಾದನ ಕೃತಿಗಳು ಕೂಡ ಇಂದು ರಚಿತವಾಗುತ್ತಿವೆ. ಚಿತ್ರಕಲೆ ಶಿಲ್ಪಕಲೆ, ವಿಷಯಗಳನ್ನು ಸಾಂದರ್ಭಿಕವಾಗಿ ಒಳಗೊಂಡ ವಿಶ್ವಕೋಶಾತ್ಮಕ ರಚನೆಗಳು ತರ್ಜುಮೆಗೊಳ್ಳುವಲ್ಲಿ ಕಲೆಯ ಅಂಶಗಳೂ ಕೂಡಾ ಕನ್ನಡದಲ್ಲಿ ಉಪಲಬ್ಧವಾಗುತ್ತಿವೆ. ಶಿವತತ್ವ ರತ್ನಾಕರ, ಮಾನಸೋಲ್ಲಾಸ, ಶ್ರೀತತ್ವನಿಧಿ, ನಾರದಶಿಲ್ಪ, ಶಿಲ್ಪರತ್ನ, ವಾತ್ಸಾಯನನ ಕಾಮಸೂತ್ರ, ಶ್ರೀ ಬ್ರಾಹ್ಮೀ ಚಿತ್ರಕರ್ಮ ಶಾಸ್ರಂ, ಸೌಗಂಧಿಕಾ ಪರಿಣಯ, ಮುಂತಾದ ಕೃತಿಗಳು ಕನ್ನಡಕ್ಕೆ ಬಂದಿದ್ದು ಪ್ರಮುಖ ದ್ವಿಭಾಷಾ ಹಾಗೂ ಬಹುಭಾಷಾ ವಿದ್ವಾಂಸರು ಕನ್ನಡಕ್ಕೆ ತರುವಲ್ಲಿ ಶ್ರಮಿಸಿದ್ದಾರೆ.

ವಿಷ್ಣುಧರ್ಮೋತ್ತರ ಪುರಾಣ ಕೃತಿಯು ಮೂಲ ಸಂಸ್ಕೃತದ್ದಾಗಿದ್ದು, ಕ್ರಿ.ಶ. ೪ನೇ ಶತಮಾನದಲ್ಲಿ ರಚನೆಗೊಂಡಿರಬಹುದಾಗಿ, ವಿಶ್ವಕೋಶಾತ್ಮಕ ಮಾದರಿಯಲ್ಲಿದೆ.ಕಥಾನಕ ರೂಪದಲ್ಲಿ ರಚಿತವಾದ ಕೃತಿಯಲ್ಲಿ ವಜ್ರಮಹಾರಾಜ ಕೇಳಿದ ಪ್ರಶ್ನೆಗಳಿಗೆ ಮಾರ್ಕಂಡೆಯ ಮಹಾಮುನಿಯು ಉತ್ತರಿಸುತ್ತಾನೆ. ಪ್ರಶ್ನೋತ್ತರ ರೂಪದಲ್ಲಿ ಕೃತಿಯು ಸಾಗುತ್ತಾ, ಶ್ಲೋಕಗಳಿಂದ ರಚಿತಗೊಂಡದೆ. ಎಂಥಕರ್ಮಗಳಿಂದ ಲೋಕ ಮತ್ತು ಪರಲೋಕದಲ್ಲಿರುವ ಮನುಷ್ಯನಿಗೆ ಶ್ರೇಷ್ಠತೆ ದೊರಕುತ್ತದೆ. ಮೋಕ್ಷಪ್ರಾಪ್ತಿಯಾಗುತ್ತದೆ. ಎಂದು ಮಹಾರಾಜ ಪ್ರಶ್ನಿಸುತ್ತಾನೆ. ಅದಕ್ಕೆ ಉತ್ತರವಾಗಿ ಮಾರ್ಕಂಡೆಯಮುನಿ ಉತ್ತರ ಕೊಡುತ್ತಾ ಚಿತ್ರಕಲೆಯ ಕುರಿತು ಹೇಳುತ್ತಾನೆ. ಮೋಕ್ಷಕ್ಕೆ ಚಿತ್ರಕಲೆ ಅಗತ್ಯವೆಂದೂ ವಿವರಿಸಲಾದ ಗ್ರಂಥವು ಚಿತ್ರಲಕ್ಷಣ ಪ್ರಮಾಣ ಷಡಂಗ, ಬಣ್ಣಗಾರಿಕೆ ಮುಂತಾದ ವಿಷಯಗಳನ್ನು ಪ್ರಸ್ತಾಪಿಸುತ್ತದೆ.

ಕ್ರಿ. ಶ. ೪ನೇ ಶತಮಾನದಲ್ಲಿ ವಾತ್ಸಾಯನ ಮುನಿಯ ಕಾಮಸೂತ್ರ ಗ್ರಂಥವು ರಚಿತವಾಗಿದ್ದು, ಮೂಲ ಸಂಸ್ಕೃತದಲ್ಲಿ ಶ್ಲೋಕ ರೂಪದಲ್ಲಿದೆ. ಜಯಮಂಗಲಿನಿಂದ ಭಾಷ್ಯವನ್ನ ಬರೆಯಲ್ಪಟ್ಟ ಈ ಗ್ರಂಥವನ್ನ ೧೯೨೦ ರಲ್ಲಿ ಬನಾರಸ ಚೌಕಾಂಬಾ ಸಂಸ್ಕೃತ ಗ್ರಂಥಾಲಯದವರು ಪ್ರಕಟಿಸಿದ್ದಾರೆ. ಕನ್ನಡದಲ್ಲಿ ಈ ಕೃತಿಯನ್ನು ೧೯೪೪ ರಲ್ಲಿ ವೆಂಕಟಬಸ್ಮೆಯವರು ಅನುವಾದಿಸಿ ಪ್ರಕಟಿಸಿದ್ದಾರೆ. (ಸಮಾಜ ಪುಸ್ತಕಾಲಯ ಧಾರವಾಡ) ಚಿತ್ರಕಲಾ ಸಾಹಿತ್ಯದಲ್ಲಿ ಅನುವಾದಗೊಂಡ ಪ್ರಾಚೀನ ಕೃತಿಗಳಲ್ಲಿ ಬಹಳಷ್ಟು ಸಂಸ್ಕೃತದಿಂದ ಬಂದಂಥವುಗಳಾಗಿವೆ.. ೧೧೨೯ ರ ಸುಮಾರಿಗೆ

ರಚಿತವಯಿತೆನ್ನಲಾದ ಇಮ್ಮಡಿ ಸೋಮೇಶ್ವರನ ಮಾನಸೋಲ್ಲಾಸ ಕನ್ನಡದಲ್ಲಿ ಅನುವಾದಗೊಂಡಿದ್ದು ಡಾ. ಎಂ. ಎಂ. ಕಲಬುರ್ಗಿಯವರು ಪ್ರಸಾರಾಂಗ ಧಾರವಾಡದಿಂದ ಸಂಪಾದಿಸಿ ಪ್ರಕಟಿಸಿದ್ದಾರೆ. ಶ್ರೀತತ್ವನಿಧಿ ಎಂಬ ಗ್ರಂಥವನ್ನು ಸಾ.ಕೃ. ರಾಮಚಂದ್ರರಾವ್ ಅವರು ಸಂಪಾದಿಸಿ ಕ. ವಿ. ಹಂಪಿ ಪ್ರಸಾರಾಂಗದಿಂದ ಪ್ರಕಟಿಸಿದ್ದಾರೆ. ಕಶ್ಯಪ ಶಿಲ್ಪಶಾಸ್ತ್ರಂ-ಸುಮಾರು ಕ್ರಿ.ಶ. ೫ನೇ ಶತಮಾನದಲ್ಲಿ ರಚಿತವಾಗಿದೆ.ಎನ್ನಲಾದ ಕೃತಿಯನ್ನು ಜಿ. ಜ್ಞಾನಾನಂದ ಅವರು ಕನ್ನಡದಲ್ಲಿ ಸಂಪಾದಿಸಿದ್ದಾರೆ. ೧೬೯೩ -೧೭೧೫ ರಲ್ಲಿ ರಚಿತವಾದ ಗ್ರಂಥವನ್ನು ಶಿವರತ್ನಾಕರ- ಕೆಳದಿಯ ಬಸವರಸನಿಂದ ಮಲ್ಲೇಪುರಂ ಜಿ. ವೆಂಕಟೇಶರವರು ಎರಡು ಸಂಪುಟಗಳಲ್ಲಿ ಸಂಪಾದಿಸಿದ್ದಾರೆ. ಸೌಗಂಧಿಕಾ ಪರಿಣಯ ಎಂಬ ಕೃತಿಯು ಗದ್ಯ ಶೈಲಿಯದಾಗಿದ್ದು ಕನ್ನಡಕ್ಕೆ ಅನುವಾದ ಗೊಂಡಿದೆ. - ಹೀಗೆ ಅನೇಕ ಸಂಸ್ಕೃತದ ಪ್ರಾಚೀನ ಗ್ರಂಥಗಳು ಕನ್ನಡಕ್ಕೆ ಇಂದು ತರ್ಜುಮೆ ಗೊಂಡಿವೆ.

ಕನ್ನಡದಲ್ಲಿ ಇಂಗ್ಲೀಷ ತೆಲುಗು, ಹಿಂದಿ, ಭಾಷೆಗಳಿಂದ ಹಲವು ಕೃತಿಗಳು ಅನುವಾದಗೊಂಡಿದ್ದು ನವ್ಯ ಸಿದ್ಧಾಂತಗಳನ್ನು ಕುರಿತಾಯೂ ಮೂಡಿ ಬಂದಿವೆ. ಆಧುನಿಕ ವಿಷಯ ವಸ್ತುವನ್ನು ವಿಮರ್ಶಿಸುವ ಕೃತಿಗಳು ಅಮೂಲ್ಯವಾದವುಗಳಾಗಿ ಕನ್ನಡದಲ್ಲಿ ಅನುವಾದಿಸಲ್ಪಟ್ಟು ಅನೇಕ ವಿಷಯಗಳನ್ನು ಪ್ರಸ್ತುತ ಸಂದರ್ಭಕ್ಕೆ ಪ್ರಸ್ತಾಪಿಸಿದೆ. ಹೀಗೆ ಅಗತ್ಯವಾದ ಕೃತಿಗಳಲ್ಲಿ ಕೆಲವು ಪ್ರಮುಖವಾದವುಗಳನ್ನು ಪ್ರಾತಿನಿಧಿಕವಾಗಿ ನೋಡ ಬಹುದಾಗಿದೆ.

೧೯೦೦ರ ಪ್ರಾರಂಭದ ದಶಕದಲ್ಲಿ ಅನೇಕ ಕೃತಿಗಳು ಕನ್ನಡಕ್ಕೆ ಬಂದಿವೆ. ಉತ್ತಮ ವಿಮರ್ಶೆಯನ್ನುಒಳಗೊಂಡು ಕನ್ನಡದ ಓದುಗರಿಗೆ ಅತ್ಯಮೌಲ್ಯ ಗ್ರಂಥ ಕೃತಿಗಳಾಗಿವೆ. ೧೯೨೧ ರಲ್ಲಿ ವಿಶ್ವಕವಿ ರವೀಂದ್ರನಾಥ ಟ್ಯಾಗೊರರು ಕಲೆಯನ್ನು ಕುರಿತು ಬರೆದ ಇಂಗ್ಲೀಷ ಪ್ರಬಂಧ ಕನ್ನಡದಲ್ಲಿ ಕಲೆಯ ಅರ್ಥ ಎಂಬ ಶಿರ್ಷಿಕೆಯಲ್ಲಿ ಎಚ್.ಎಸ್. ಶ್ರೀಮತಿಯವರು ಬರೆದಿದ್ದಾರೆ.

ರಸರೇಖೆ(೧೯೭೬) ಎನ್ನುವ ಕನ್ನಡದ ಕೃತಿಯು ಮೂಲ ತೆಲುಗಿನದ್ದಾಗಿದ್ದು ತೆಲುಗಿನಲ್ಲಿ ಸಂಜಿವನ್ ಎನ್ನುವವರು ರಚಿಸಿದ್ದಾರೆ. ಪಾಲ್‌ಕ್ಲೇನ್ ಕುರಿತಾದ ಇಂಗ್ಲೀಷ ಕೃತಿಯೊಂದನ್ನು ಕನ್ನಡಕ್ಕೆ ಶ್ರೀನಿವಾಸ ಮುರ್ತಿಯವರು ಅನುವಾದ ಮಾಡಿದ್ದಾರೆ. **ಆನಂದ ಕುಮಾರಸ್ವಾಮಿ** ಯವರ ಕುರಿತಾದ ಕೃತಿಯನ್ನು ಶ್ರೀನಿವಾಸ ಮೂರ್ತಿಯವರು ಕನ್ನಡಿಕರಿಸಿದ್ದಾರೆ. ಡಾ.ಮಮತಾ ಚರ್ತುವೇದಿಯವರ **ಸೌಂದರ್ಯ ಶಾಸ್ತ್ರ** ಹಿಂದಿಯಿಂದ ಅನುವಾದಗೊಂಡ ಕೃತಿಯಾಗಿದ್ದು ಕಾಶೀನಾಥ ಅಂಬಲಗೆಯವರು ಅನುವಾದ ಮಾಡಿದ್ದಾರೆ. ಟಾಲಸ್ಟಾಯ್ ಅವರ **ವಾಟೀಸ್ ಆರ್ಟ** ಎನ್ನುವ ಕೃತಿಯು ಸಿ.ಪಿ.ಕೆಯವರಿಂದ ಅನುವಾದಗೊಂಡಿದೆ. ಕೆ.ವಿ. ಸುಬ್ರಹ್ಮನ್ಯಂರವರ **ಮ್ಯೂಜಿಕ್ ಆಫ್ ಮೇಕಿಂಗ್** ಆಟ- ಮಾಟ ಕೃತಿಯು ಕೆ.ಎಸ್.ಶ್ರೀನಿವಾಸ ಮುರ್ತಿರವರಿಂದ ತರ್ಜುಮೆಗೊಂಡಿದೆ. ಹೀಗೆ ಇನ್ನೂ ಅನೇಕ ಕೃತಿಗಳು ದೃಶ್ಯಕಲಾ ಸಾಹಿತ್ಯದ ಆರಂಭಿಕ ಹಂತದಲ್ಲಿ ಕಾಣುತ್ತೇವೆ.

ಈ ದಶಕದ ಸಾಹಿತ್ಯದಲ್ಲಿ ಅನುವಾದಗೊಂಡು ಕನ್ನಡೀಕರಣಗೊಂಡ ಕೃತಿಗಳಸಂಖ್ಯೆ ಬಹಳ ವಿರಳವೆಂದೇ ಹೇಳಬಹುದು. ಇಂಗ್ಲೀಷಮೂಲದ ಕೆಲವು ಕೃತಿಗಳು ಕನ್ನಡಕ್ಕೆ ಅನುವಾದಗೊಂಡು

ಅಮೂಲ್ಯವಾದ ಕೃತಿಗಳಾಗಿವೆ. ಅಂಥವುಗಳಲ್ಲಿ ನೋಡುವ ಬಗೆ, ಜಾನ್ ಬರ್ಜರ್‌ರವರ ಕೃತಿಯಾಗಿದು, ಕನ್ನಡದ ಕಲಾವಿಮರ್ಶಕರಾದ ಎಚ್.ಎ. ಅನಿಲ ಕುಮಾರ್ ರವರಿಂದ ೨೦೧೨ ರಲ್ಲಿ ಅನುವಾದಗೊಂಡಿದೆ. ಅದೇ ರೀತಿ ಇರ್ವಿಂಗ್ ಸ್ಟೋನರವರ ಮೈಕೆಲೇಂಜಿಲೊ ಜೀವನ ಚರಿತ್ರೆ ಕೃತಿಯನ್ನು ಕನ್ನಡಕ್ಕೆ ಎನ್.ಎಸ್. ನಾಗರಾಜ್ ಅವರು ಅನುವಾದ ಮಾಡಿದ್ದಾರೆ. ವ್ಯಕ್ತಿ ಜೀವನವನ್ನು ಆಧರಿಸಿ ಸುದೀರ್ಘವಾದ ಕತೆಯಾದ ಮೈಕೆಲೆಂಜಿಲೋ ಜೀವನಚರಿತ್ರೆ ಕೃತಿ ಕನ್ನಡದಲ್ಲಿಯ ಮಹತ್ವದ ಕೃತಿಯಾಗಿದೆ. ಸ್ವೆತಾಸ್ಲೋವ್ ರೋರಿಕ್ ಅವರ ಕಲೆಯಲ್ಲಿ ಮಾನವತಾವಾದ ಕೃತಿಯು ಎಚ್.ಎಸ್. ರಾಘವೇಂದ್ರರಾವ್ ರಿಂದ ಅನುವಾದಗೊಂಡಿದು, ಕಲೆಯಲ್ಲಿ ಒಂದು ಹೊಸರೀತಿಯ ಚಿಂತನೆಯಿಂದ ಕೂಡಿದ ಈ ಕೃತಿಯದ್ದಾಗಿದೆ. ಹೀಗೆ ಪ್ರಾಮುಖ್ಯವಾಗಿ ಕನ್ನಡಕ್ಕೆ ಅನುವಾದ ಗೊಂಡ ಕೃತಿಗಳನ್ನು ಕಾಣಬಹುದಾಗಿದೆ.

ನೋಡುವಬಗೆ ಕೃತಿಯು ಮೂಲ ಜಾನ್ ಬರ್ಜರ್ ಅವರದ್ದಾಗಿದ್ದು ಕನ್ನಡಕ್ಕೆ ೨೦೧೨ ರಲ್ಲಿ ಕಡಲು ಪ್ರಕಾಶನದಿಂದ ಪ್ರಕಟಗೊಂಡಿದೆ. ಎಚ್.ಎ.ಅನಿಲಕುಮಾರ್ ರವರು ಕೃತಿಯನ್ನು ಅನುವಾದಿಸಿದ್ದಾರೆ. ಸೃಷ್ಟಿ ದೃಷ್ಟಿಗಳ ನಡುವಿನ ಜಿಜ್ಞಾಸೆಯ ಮೂಲಬಿಂದುವನ್ನೆ ಮುಂದಿರಿಸಿಕೊಂಡು ಕಲೆಯನ್ನು, ಪ್ರಕೃತಿಯನ್ನು ವೀಕ್ಷಿಸುವ ದಿಶೆಯಲ್ಲಿ ತಮ್ಮ ವಿಚಾರ ಲಹರಿಯನ್ನು ಹರಿಬಿಟ್ಟ ಲೇಖಕರು, ಸೃಷ್ಟಿ ಕೆಲಸದಷ್ಟೆ ದೃಷ್ಟಿ ಕ್ರಿಯೆಯೂ ಹೇಗೆ ಮಹತ್ವ ಪಡೆಯಬಲ್ಲದು ಎಂಬುದನ್ನು ಕೆಲವು ವಿದೇಶಿ ದೃಶ್ಯಕಲೆಯ ಛಾಯಾಚಿತ್ರಗಳನ್ನು ಸಚಿತ್ರವಾಗಿ ಉದಾಹರಿಸುತ್ತಾ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಲಿಯೋನಾಡೊ ಡ. ವಿಂಚಿಯ 'ವರ್ಜಿನ್ ಆಫ್ ದ ರಾಕ್ಸ್'[೧] ೧೪೫೨-೧೫೧೯, ವ್ಯಾನಗೋ ಆತ್ಮಹತ್ಯೆಗೆ ಮುನ್ನ ರಚಿಸಿದ ಕಲಾಕೃತಿ, ರುಬೆನ್ಸನ ಹೆಲೆನ್ ಫಾರ್ಮೆಂಟ್, ರೊಮ್ಮಿಯು ರಚಿಸಿದ 'ಬಿಯವೋಟ್ ಸಂಸಾರ'[೨] (೧೭೩೪-೧೮೦೨), ಮುಂತಾದ ಪ್ರಸಿದ್ಧ ಕಲಾಕೃತಿಗಳನ್ನು ಉದಾಹರಿಸುತ್ತಾ ಕೃತಿಯಲ್ಲಿ ತಮ್ಮ ಸಂದರ್ಭಗಳಿಗನ್ವಯ ಬಳಸಿಕೊಂಡಿದ್ದಾರೆ. ಸೌಂದರ್ಯ, ಸತ್ಯ, ಮೇಧಾವಿತನ, ನಾಗರಿಕತೆ, ಆಕಾರ, ಅಂತಸ್ತು, ರುಚಿ, ಇತ್ಯಾದಿ ಅಂಶಗಳನ್ನು ಪೂರ್ವಾಗ್ರಹಗಳೆಂದು ಚರ್ಚಿಸಿದ ಲೇಖಕರು ಇವುಗಳು ಜಗತ್ತಿನ ಸ್ಥಿತಿಗಳೊಂದಿಗೆ ತಾಳೆಯಾಗುವ ಸಂದರ್ಭವನ್ನು ವಿವರಿಸುತ್ತಾರೆ. ಇದರಲ್ಲಿ ಲೇಖಕರು ಪ್ರಾಚೀನಕಾಲ (ಇತಿಹಾಸ) ಮತ್ತು ಪ್ರಸ್ತುತತೆಗಳ ನಡುವಿನ ಕಾಲದ ಅಂತರವನ್ನು ಆಳವಾಗಿ ಕಂಡಿದ್ದಾರೆ ಎನ್ನಬಹುದಾಗಿದೆ.

ಐರೋಪ್ಯರ ಸಂದರ್ಭದಲ್ಲಿ ಗಂಡು ಹೆಣ್ಣುಗಳ ಪಾತ್ರವನ್ನು ಹೇಗೆ ಅಂದಿನ ಕಲಾವಿದರು ಚಿತ್ರಿಸುತ್ತಿದ್ದರು ಎಂದು ಹೇಳುತ್ತಾ ಯುರೋಪದ ಚಿತ್ರಗಳನ್ನು ಆಧರಿಸಿ ಅಂದಿನ ಸಾಮಾಜಿಕ ಮತ್ತು ಕಲಾತ್ಮಕ ದೃಷ್ಟಿಕೋನಗಳನ್ನು ಅಳೆಯುವಲ್ಲಿ ಗಮನ ಹರಿಸಿದ ಲೇಖಕರು ಚಿತ್ರಗಳ ಮುಖಾಂತರ ಅಲ್ಲಿನ ವಸ್ತು ಸ್ಥಿತಿಯನ್ನು ಶೋಧಿಸಿದ್ದಾರೆ. ಯುರೋಪದಲ್ಲಿಯೂ ಕೂಡಾ ಪುರುಷ ತನ್ನ ಅತಿಕಾಮದ ಪಾರಮ್ಯಮೆರೆದ ಉದಾಹರಣೆಗಳನ್ನು ತಗೆದು ತೋರಿಸಿದ ಲೇಖಕರು, ಸ್ತ್ರೀಯರು ಕೇವಲ ಭೋಗದ ವಸ್ತುವಾದ ಅಂಶವನ್ನು ಮುನ್ನಲೆಗೆ ತಂದು ಐರೋಪ್ಯದ ನಿಲುವುಗಳೂ ಕೂಡಾ

ಸ್ತ್ರೀಪರವಾಗಿರದ ಸಂದರ್ಭವನ್ನು ತೋರಿಸಿದ್ದಾರೆ. ಕಲೆ ಮತ್ತು ನೈತಿಕತೆ ಎಂಬ ಅಂಶಗಳನ್ನು ಮುಂದಿರಿಸಿಕೊಂಡು ವಿಷಯವನ್ನು ಬೆಳೆಸುತ್ತಾ ಕಲೆಯ ನೀತಿ, ಮಾನದಂಡಗಳು ಯಾವಾಗ ಅವು ಸಾರ್ವತ್ರಿಕವಾದಾಗ ಅಲ್ಲಗಳೆಯಲ್ಪಡುತ್ತವೆ. ಅಥವಾ ಮಾನ್ಯತೆ ಪಡೆಯುತ್ತವೆ ಎಂಬುದನ್ನು ಸೂಕ್ಷ್ಮವಾಗಿ ಗ್ರಹಿಸಿಕೊಳ್ಳಬೇಕೆಂದು ಓದುಗರೊಂದಿಗೆ ತಮ್ಮ ಸಿದ್ಧಾಂತವನ್ನು ಹಂಚಿಕೊಳ್ಳುವ ಲೇಖಕರು ಈ ಕೃತಿಯ ಮೂಲಕ ನೋಡುಗನ ನೋಟವು ಹೇಗೆ ಸಂಸ್ಕಾರಯುತವಾಗಿರಬೇಕೆಂಬ ಅಂಶವನ್ನು ಪರೋಕ್ಷವಾಗಿ ಉದಾಹರಣೆಯನ್ನು ನೀಡುತ್ತಾ ತೋರಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಸುಲಭ ಭಾಷೆಯಿಂದ ಕೂಡಿದಾಗ್ಯೂ ಒಮ್ಮೊಮ್ಮೆ ಸುತ್ತಿಬಳಸಿ ಬರೆಯಲ್ಪಟ್ಟು ಕೆಲವೊಮ್ಮೆ ನೇರವಾಗಿ ವಿವರಿಸುವಲ್ಲಿ ಬಾಷೆಯ ಮೌಲ್ಯ ಕುಸಿದಂತಿದೆ. ಸರಳವಾಗಿ ಕಂಡರೂ ಬೇಗನೆ ಅರ್ಥವಾಗದೆ ಎರಡು ಮೂರುಬಾರಿ ಓದಿದಾಗ ಅದು ಅರ್ಥವಾಗುವ ಕೃತಿಯಾಗಿದೆ. ವಿಷಯ ಹಾಗೂ ಕನ್ನಡಿಕರಣದ ಅಂಶವು ಪ್ರಸ್ತಾಪವಾದಾಗ ಮಾತ್ರ ಬಾಷೆಯ ಜ್ಞಾನ ಮತ್ತು ಔಚಿತ್ಯಗಳು ಕಾಣಸುಗುತ್ತವೆ ಎನ್ನಬಹುದು.

ಕಲೆಯಲ್ಲಿ ಮಾನವತಾವಾದ ಕೃತಿಯು ಸ್ವೆತಾಸ್ಲೊ ರೋರಿಕ್‌ರ ಇಂಗ್ಲೀಷ್ ಕೃತಿ ಕನ್ನಡಕ್ಕೆ ಎಚ್.ಎಸ್. ರಾಘವೇಂದ್ರರಾವ್ ಅವರು ತಂದಿದ್ದಾರೆ. ಹೆಸರಾಂತ ಕಲಾವಿದ ಸ್ವೆತಾಸ್ಲೋ ರೋರಿಕ್‌ನು 'ಹ್ಯುಮಾನಿಸಂ ಇನ್ ಆರ್ಟ' ಎಂಬ ಪುಸ್ತಕದ ಅನುವಾದ ಈ ಕೃತಿಯಲ್ಲಿ ಕಲೆಯಲ್ಲಿ ಮಾನವತಾವಾದ ಕೃತಿಯಾಗಿದೆ. ಅನುವಾದ ಸಾಹಿತ್ಯ ಕೃತಿಗಳಲ್ಲಿ ತುಂಬಾ ಮೌಲ್ಯಯುತ ಕೃತಿಯಾದ ಇದು ೨೦೦೪ ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟಗೊಂಡಿದೆ.

ಸಾರ್ವತ್ರಿಕ ಹಾಗೂ ಸಮಕಾಲೀನ ಒಲವು ಮತ್ತು ನಿಲುವುಗಳಿಗೆ ಅಂತರಾಳದ ಶಕ್ತಿಯಾಗಿ ಕಲೆ ಹೇಗೆ ಪ್ರೇರಕವಾಗುತ್ತದೆ. ಮನುಷ್ಯನ ಮನುಷ್ಯತ್ವದ ರೂಪಕ್ಕೆ ಮೂಲ ಕಾರಣವಾಗುತ್ತದೆ ಎಂಬ ಚಿಂತನೆಯನ್ನು ಒಳಗೊಂಡ ಕೃತಿಯು ಮಾನವತಾವಾದ ಎಂದರೇನು? ಅದರ ಸ್ವರೂಪದಲ್ಲಿ ಕಲೆ, ಅಭಿವ್ಯಕ್ತಿ, ಸೌಂದರ್ಯಗಳ ಅನನ್ಯತೆ ಎಂಥಹದ್ದು ಮುಂತಾಗಿ ಚರ್ಚಿಸುತ್ತದೆ. ಪುನರುಜ್ಜೀವನ ಕಾಲದ ದೃಷ್ಟಿಯಲ್ಲಿ ಒಂದು ಪರಿಪೂರ್ಣ ಸ್ವರೂಪಪಡೆದ ಮಾನವತಾವಾದವು ಅಭಿವ್ಯಕ್ತಿ ಎಂಬ ಮಹಾ ಚೈತನ್ಯದಿಂದಲೇ ಸ್ಥಾಪಿತವಾದಂಥದ್ದು[1] ಎನ್ನುವ ಲೇಖಕರ ವೈಚಾರಿಕತೆಯಿಂದ ಕೂಡಿದೆ. ಇಲ್ಲಿ ಲೇಖಕರು ಮನುಷ್ಯನನ್ನಯ ವಿಶ್ವದಕೇಂದ್ರ ಬಿಂದುವೆಂದು ಪರಿಗಣಿಸುವುದೇ ಮಾನವತಾವಾದವಾಗುತ್ತದೆ ಎಂದಿದ್ದಾರೆ.

ಮನುಷ್ಯನ ಜೀವನವು ವಿಶ್ವಪ್ರಜ್ಞೆಯಿಂದ ಕೂಡಿದಾಗ ಮಾತ್ರ ಮನುಷ್ಯತ್ವ ಎಂಬುದು ಪೂರ್ಣಗೊಳ್ಳುಂಥಹದ್ದು ಎಂದು ಲೇಖಕರು ತಮ್ಮ ವಿಚಾರವನ್ನು ಈ ಕೃತಿಯಲ್ಲಿ ವ್ಯಕ್ತ ಪಡಿಸಿದ್ದಾರೆ. ಕಲೆಯಿಂದಲೇ ವಿಶ್ವದ ಸೃಜನಶೀಲ ನೈತಿಕತೆ, ಮಾನವೀಯ ಮೌಲ್ಯಗಳು ಸೃಷ್ಟಿಯಾಗಲು ಸಾಧ್ಯ. ಇಡಿ ಜೀವನದ ಒಟ್ಟು ವ್ಯವಸ್ಥಿತ ಸೌಂದರ್ಯಕ್ಕೆ ಮೂಲ ಕಾರಣವಾಗಿ ಕಲೆಯು ಕಾಣದಂತೆ

ಕೆಲಸಮಾಡುತ್ತದೆ ಎಂಬ ಅಭಿಪ್ರಾಯಕ್ಕೆ ಬಂದಿರುವ ಲೇಖಕರು ಹಲವಾರು ವಿದ್ವಾಂಸರ ನಿಲುವುಗಳನ್ನು ಅಲ್ಲದೆ ಮಾನವತಾವಾದ ಮತ್ತು ಕಲೆಗಳೆರಡರ ಅನನ್ಯತೆಯ ಕುರಿತಾಗಿ ಹೇಳಿರುವ ವ್ಯಾಖ್ಯೆಗಳನ್ನು ಪರಿಶೀಲಿಸಿದ್ದಾರೆ. ಕಲೆಯನ್ನು ದ್ವೇಶಿಸುವವನು ಜಗತ್ತನ್ನು ಕುರಿತಾದ ಸಂವೇದನಾ ಶೀಲವಾದ ತಾತ್ವಿಕ ಚಿಂತನೆಯನ್ನು ದ್ವೇಷಿಸಿದಂತೆ[೬] ಎಂದು ಡ.ವಿಂಚಿಯ ವ್ಯಾಖ್ಯೆಯನ್ನು ಲೇಖಕರು ಉದಾಹರಿಸುವಲ್ಲಿ, ಕಲೆಯು ನಾಗರೀಕತೆಯ ಒಟ್ಟು ಪ್ರಜ್ಞೆಯನ್ನು ಒಳಗೊಳ್ಳದೆ ಇರುವುದಿಲ್ಲವೆಂದೇ ಹೇಳುತ್ತಾರೆ. ಅವರ ಚಿಂತನಾಕ್ರಮ, ಇಂದಿನ ಬಹುಶಿಸ್ತೀಯ ನೆಲೆಯಲ್ಲಿ ಹಲವುಗಳನ್ನು ವಿಭಾಗಿಸಿ ಸಂಕೀರ್ಣವಾಗಿ ಅಭ್ಯಾಸ ಮಾಡುವವರಿಗೆ ಒಂದು ರೀತಿಯ ಮಾರ್ಗದರ್ಶನವನ್ನ ನೀಡುವಂಥದ್ದಾಗಿದೆ. ಇಂದು ಜೀವನವೇ ಬೇರೆ ಕಲೆಯೇ ಬೇರೆ ಎನ್ನುವವರಿಗೆ ಸರಿಯಾದ ರೀತಿಯಲ್ಲಿ, ಅವೆರಡರ ಕುರಿತು ವಿವರಿಸುತ್ತದೆ. ಎರಡೂ ಇಂದಿನ ಮಾನವಿಕ, (ಮಾನವತಾವಾದ) ಚಿಂತನೆಯಲ್ಲಿ ಹೇಗೆ ತಮ್ಮ ಪಾತ್ರವನ್ನ ನಿರ್ವಹಿಸುತ್ತವೆ ಎಂಬುದನ್ನು ವಿವರಿಸುವಲ್ಲಿ ಈ ಕೃತಿ ಬಹುಉಪಯುಕ್ತವಾಗುತ್ತದೆ.

ನೈತಿಕತೆ ಮತ್ತು ಕಲೆಗಳೆರಡರ ನಡುವೆ ಮಾನವತಾವಾದ ಹೇಗೆ ರೂತಳೆಯುತ್ತದೆ, ಹೃದಯದ ಶುದ್ಧ ಸಂಸ್ಕಾರಕ್ಕೆ ಸೌಂದರ್ಯಪ್ರಜ್ಞೆ ಹೇಗೆ ಕೆಲಸ ಮಾಡುತ್ತದೆ ಮುಂತಾದ ಚಿಂತನೆಗೆ ಉತ್ತರವನ್ನು ಕೊಡುವ ದಿಶೆಯಲ್ಲಿ ಈ ಕೃತಿ ಬಲು ಉಪಯುಕ್ತವಾಗಿದೆ. ಬಾಷೆಯಿಂದಲೂ ಉತ್ತಮವಾದ ಕೃತಿ ಕಲೆಯ ಆಸಕ್ತ ಚಿಂತನೆಗೆ ಹೊಸ ವಿಷಯವಾಗಿ, ನವಗ್ರಹಿಕೆಗಳಿಗೆ ಕಾರಣವಾಗಿವೆ. ವಿಶಾಲವಾದ ವ್ಯಾಪಕವಾದ ಕಲಾ ಸಿದ್ಧಾಂತಗಳ ಮುಖೇನ ಮಾನವತಾವಾದವನ್ನು ಸ್ಥಾಪಿಸುವ, ನೆಲೆಗೊಳಿಸುವ ಕುರಿತಾಗಿ ವಿಶೇಷವಾಗಿ ಹೊಸ ದಿಕ್ಕಿನಿಂದ ಚಿಂತನೆ ಮಾಡುವುದರಲ್ಲಿ ಸತ್ಯಾಂಶವಿದೆ ಎನ್ನುಬಹುದು.

ಮೈಕೆಲೆಂಜಿಲೋ ಜೀವನ ಚರಿತ್ರೆ

ಇರ್ವಿಂಗ್ ಸ್ಟೋನ್ ರವರ "ಆಗೋನಿ ಅಂಡ್ ಎಕ್ಸಟಸಿ" ಎಂಬ ಕೃತಿಯನ್ನು ಕನ್ನಡಕ್ಕೆ ಎಸ್.ಎಸ್. ನಾಗರಾಜ ನುಗ್ಗೆಹಳ್ಳಿಯವರು "ಮೈಕೆಲೆಂಜಿಲೋ ಜೀವನ ಚರಿತ್ರೆ"[೭] ಎಂದು ಅನುವಾದಿಸಿದ್ದಾರೆ. ಸುಮಾರು ೭೭೩ ಪುಟಗಳಿಂದ ಕುಡಿದ್ದ ಕೃತಿಯನ್ನು ಕನ್ನಡಕ್ಕೆ ೩೦೦ ಪುಟಗಳಲ್ಲಿ ತಂದಿದ್ದಾರೆ (ಮೈಕೆಲೆಂಜಿಲೋ ಕೃತಿ) ಅಂಕಿತ ಪುಸ್ತಕದಿಂದ ೨೦೧೧ ರಲ್ಲಿ ಪ್ರಕಟಗೊಂಡಿದೆ.

ಪ್ರಸ್ತುತ ಕೃತಿಯ ವಿಶ್ವವಿಖ್ಯಾತ ಕಲಾವಿದ ಮೈಕೆಲೆಂಜಿಲೋನ ಆತ್ಮಚರಿತ್ರೆಯನ್ನ ಆಧರಿಸಿದ ಕತೆಯಾಗಿದ್ದು, ಸುಧೀರ್ಘವಾಗಿ ಅವನ ಜೀವನ ಚರಿತ್ರೆಯನ್ನು ಕಂಡರಿಸುತ್ತದೆ. ಹದಿನೈದನೆಯ ಶತಮಾನದಲ್ಲಿ ನಡೆದ ಹಲವಾರು ಬದಲಾವಣೆಗಳಿಂದ ಯುರೋಪಖಂಡ ಅನೇಕ ಸಾಂಸ್ಕೃತಿಕ, ರಾಜಕೀಯ ಸ್ಥಿತ್ಯಂತರಗಳನ್ನು ಕಂಡಿತು. ಇಟಲಿ ರಾಜ್ಯದ ರೋಂ, ಫ್ಲಾರೆನ್ಸಗಳು ತುಂಬಾ ಪ್ರಾಮುಖ್ಯತೆ ಪಡೆದ ನಗರಗಳಾಗಿವು. ಅನೇಕ ಕಲಾವಿದರು ತಮ್ಮ ಅಭಿವ್ಯಕ್ತಿಯನ್ನು ವಿವಿಧ

ಮಾಧ್ಯಮದಲ್ಲಿ ವ್ಯಕ್ತಪಡಿಸುತ್ತಿದ್ದರು. ಕಲಾವಿದರೇ ಅಲ್ಲಿನ ಸಾಂಸ್ಕೃತಿಕ ರಾಯಭಾರಿಗಳಾಗಿದ್ದರು. ವಿಶ್ವವಿಖ್ಯಾತ ಕಲಾವಿದನಾದ ಮೈಕೆಲೆಂಜಿಲೊ ರೋಮ್ ನಲ್ಲಿ, ಫ್ಲಾರೆನ್ಸ ನಲ್ಲಿ ತನ್ನ ಪ್ರತಿಭೆಯಿಂದ ಏಸುಸ್ವಾಮಿಯ ಬದುಕಿನ ಘಟನಾವಳಿಗಳನ್ನು ಅದ್ಭುತವಾಗಿ ಚಿತ್ರಿಸಿದ್ದ, ಶಿಲ್ಪಿಸಿದ್ದ. ಜೊತೆಗೆ ತನ್ನ ಬದುಕನ್ನ ರೂಪಿಸಿಕೊಳ್ಳಲು ಹವಣಿಸುತ್ತಿದ್ದ. ಇಂತಹ ಅದ್ಭುತ ದೈತ್ಯ ಪ್ರತಿಭೆಯ ಜೀವನ ಚರಿತ್ರೆಯನ್ನು ಕನ್ನಡದ ಓದುಗರಿಗೆ ಅರ್ಪಿಸಿದ ಕೀರ್ತಿ ಲೇಖಕ 'ಎನ್ ಎಸ್. ನಾಗರಾಜ್ ನುಗ್ಗೆ ಹಳ್ಳಿಯವರಿಗೆ ಸಲ್ಲುತ್ತದೆ.

ಒಂದು ಪ್ರಸಿದ್ಧ ನಗರವಾದ ಇಟಲಿಯ ಫ್ಲಾರೆನ್ಸನಲ್ಲಿ ವಾಸವಾಗಿದ್ದ ಮೈಕೆಲೆಂಜಿಲೋ ಇಟಲಿಯ ಪ್ರಸಿದ್ಧ ನಗರಗಳಾದ ರೋಮ್, ಮತ್ತು ಫ್ಲಾರೆನ್ಸನಲ್ಲಿ ಅದ್ಭುತ ಚಿತ್ರ, ಶಿಲ್ಪ ರಚನೆಯನ್ನು ಮಾಡಿದ. ಅವನ ಕಾಲದಲ್ಲಿ ಫ್ಲಾರೆನ್ಸ, ರೋಮ್ ನಗರಗಳ ದೊಡ್ಡ ದೊಡ್ಡ ಚರ್ಚಗಳು, ಭವ್ಯವಾದ ವಾಸ್ತು ವಿನ್ಯಾಸದಿಂ ಕೂಡಿದ್ದವು. ಅವುಗಳಿಗೆಲ್ಲ ಶಿಲ್ಪ ಮತ್ತು ಚಿತ್ರಗಳನ್ನು ಮಾಡಿ, ಸುಂದರಗೊಳಿಸಿ ಎಲ್ಲರ ಗಮನವನ್ನು ತನ್ನತ್ತ ಸೆಳೆದ ಮೈಕೆಲ್ ಪ್ರಸ್ತುತ ಕೃತಿಯಲ್ಲಿ ಚಿತ್ರಿತವಾದ ಕಥಾನಾಯಕ, ಮೈಕೆಲ್‌ನ ಕುರಿತಾಗಿ ಲೇಖಕರು ಅವನ ಆತ್ಮ ಚರಿತ್ರೆಯನ್ನುಧರಿಸಿ ಬಂದ ಇಂಗ್ಲೀಷ ಕೃತಿಯನ್ನು ಮುಂದಿರಿಸಿಕೊಂಡು ಕನ್ನಡೀಕರಿಸಿ ಲೇಖಕರು ಮೈಕೆಲೆಂಜಿಲೋನ ಸಮಗ್ರ ಜೀವನವನ್ನ ತಮ್ಮ ಕೃತಿಯಲ್ಲಿ ಚಿತ್ರಿಸಿದ್ದಾರೆ. ಇಲ್ಲಿ ಕಾದಂಬರಿ ಎಷ್ಟೇ ಸೃಜನಶೀಲವಾದರೂ ವಾಸ್ತವಿಕ ಬದುಕನ್ನು ಚಿತ್ರಿಸುವಲ್ಲಿ ಹಿಂಜರಿದಿಲ್ಲ. ಮೈಕೆಲ್‌ನ ಕಲಾ ಶ್ರೀಮಂತಿಕೆ, ಅವನ ಸಾಮಾಜಿಕ ಬದುಕು, ಅವನ ಆರ್ಥಿಕ ಪರಿಸ್ಥಿತಿಗಳನ್ನು ಯಥಾವತ್ತಾಗಿ ಕಂಡರಿಸುವ ಪ್ರಯತ್ನ ಮಾಡಿದ್ದಾರೆ. ಮೈಕೆಲ್ ಒಬ್ಬ ಸಾಮಾನ್ಯನಾಗಿ ಬದುಕಿದವ. ಕಲಾವಿದನಾದರೂ ಬದುಕಿನಲ್ಲಿ ಅನೇಕ ನೋವುಗಳನ್ನು ಅನುಭವಿಸಿದವ. ಎಷ್ಟೇ ಕಷ್ಟದ ಬದುಕಿನಲ್ಲೂ ಕಲೆಯನ್ನು ಬಿಡದೆ ಅದರಲ್ಲಿಯೇ ಆನಂದವನ್ನು ಪಡೆದವ. ಇಂಥಹ ಅತ್ಯದ್ಭುತ ವ್ಯಕ್ತಿತ್ವವು ಕೃತಿಯಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

ವಿಶ್ವವೇ ಬೆರಗಾಗಿ ಫ್ಲಾರನ್ಸ, ರೋಮ್ ನಗರಗಳನ್ನು ನೊಡುವಂತೆ ಮಾಡಿದ ಮೈಕೆಲ್ ಕತೆಯಲ್ಲಿ ಒಬ್ಬ ಸೌಮ್ಯ ಸ್ವಭಾವದ ವ್ಯಕ್ತಿಯಾಗಿ ಚಿತ್ರಿತವಾಗಿದ್ದಾನೆ. ತಂದೆ ಬುವ್ವನರ್ರೋಟಿ, ಲೋಡೊವಿಕೊನ ಹಣದಾಹದಿಂದಾಗಿ ನಲುಗಿದ ಮೈಕೆಲ್ ಫ್ಲಾರೆನ್ಸ್, ರೋಮ್ ಅರಸರ ಒತ್ತಡಗಳಿಂದಲೂ ತುಂಬಾ ನಲುಗಿ ಹೋಗುವ ಪರಿ ಸವಿವರವಾಗಿ ಚಿತ್ರಿತಗೊಂಡಿದೆ. ಮೈಕೆಲ್ ಪರಿಸ್ಥಿತಿಯನ್ನ ಕಂಡರಿಸುವ ಕೃತಿ ಓದುಗನ ಮನಸ್ಸನ್ನು ಮಿಡಿಯುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಮೈಕೆಲ್ ಕಲೆಗಾಗಿ ಇಡೀ ಜೀವನವನ್ನ ಮುಡುಪಾಗಿಟ್ಟ ಅಂಶವನ್ನ ಸಂದರ್ಭಕ್ಕನ್ವಯವಾಗಿ ಅನೇಕ ಘಟನಾವಳಿಗಳನ್ನು ಲೇಖಕರು ವಿವರಿಸುತ್ತಾರೆ. ಅಂಗರಚನಾ ಶಾಸ್ತ್ರದ ಅಧ್ಯಯನಕ್ಕಾಗಿ ಶವಾಗಾರದಲ್ಲಿಯೇ ವಾಸಿಸಿ ಅಧ್ಯಯನ ಕೈಗೊಂಡು ಲೋರೆಂಜೋನ ಪ್ರತಿಮೆಯನ್ನು ಮಾಡಿದುದು ಅವನ ಕಲಾತಪಸ್ಸಿಗೆ ಹಿಡಿದ ಕನ್ನಡಿಯಾಗಿದೆ ಎಂಬಂತೆ ಪ್ರಸ್ತುತ ಕೃತಿಯಲ್ಲಿ ಬದುಕಿನ ಚಿತ್ರಣ ಕಂಡು ಬರುತ್ತದೆ. ಮೈಕೆಲ್‌ನ ಜೀವನದಲ್ಲಿ ಅನೇಕ ವ್ಯಕ್ತಿಗಳು ಬಂದು ಹೊಗುತ್ತಾರೆ. ಹಾಗೆ ಬಂದವರು ತಮ್ಮ ಪ್ರಭಾವದಿಂದ

ಅವನನ್ನ ಒಂದಲ್ಲಾ ಒಂದು ರೀತಿಯಲ್ಲಿ ನೋವು ನೀಡಿ ಹೋದವರ ಹೆಚ್ಚು. ಅದರಲ್ಲೂ ಟೊರ್ರಿಗಿಯಾಗಿ ಲೋರೆಂಜೋನ ಮಗ ಪಿಯರೋಬ್ರುಮಂಟಯಂತಹ ವ್ಯಕ್ತಿಗಳು ಅವನ್ನು ಪರಿಪರಿಯಾಗಿ ಕಾಡಿದವರು –ಹೀಗೆ ಅನೇಕ ಜನರ ಪ್ರಭಾವವನ್ನು ಅಭಿಪ್ರಾಯವನ್ನಗಳನ್ನು ಅರಗಿಸಿಕೊಂಡು, ತಾನು ಒಬ್ಬ ಮೌಲಿಕ ಮತ್ತು ನೈತಿಕ ಕಲಾವಿದನಾಗಿ ಉಳಿದು ಕೊನೆಯವರೆಗೂ ಕಲೆಗಾಗಿ ತನ್ನನ್ನು ತಾನು ಅರ್ಪಿಸಿಕೊಂಡ ಮೈಕೆಲ್‌ನ ಸಾವು ಒಂದು ದುರಂತ ಚಿತ್ರಣ. ತಾನು ಏಸುವಿನಲ್ಲಿ ಶ್ರದ್ಧೆ ಉಳ್ಳವನಾಗಿ, ಕಲೆಯಲ್ಲಿ ತೊಡಗಿ ಏಸುವಿನ ಜೀವನದ ಘಟನಾವಳಿಗಳನ್ನು ತನ್ನ ಪ್ರತಿಭಾ ಸಾಮರ್ಥದಿಂದ ರೂಪಿಸಿದ ಶಿಲ್ಪ, ಚಿತ್ರಗಳು ಇಟಲಿ ಪರಿಸರದ ಮೇಲೆ ತಾತ್ವಿಕ ಪ್ರಭಾವವನ್ನು ಬೀರಿದವು. ಕೆಲವೊಮ್ಮೆ ಕಲೆಯ ಮೇಲೆ ರಾಜಕೀಯ ಹಾಗೂ ಧರ್ಮಗುರುಗಳ ಒತ್ತಡಗಳು ಪ್ರಭಾವಿಸಲ್ಪಟ್ಟ ಅಂಶಗಳೂ ಉಂಟು. ಈ ಎಲ್ಲ ಘಟನೆಗಳನ್ನು ಓದುಗರ ಮನಮುಟ್ಟುವಂತೆ ಕೃತಿಯನ್ನು ರಚಿಸಿದ ಲೇಖಕರು ಮೈಕೆಲ್‌ನನ್ನು ಒಬ್ಬ ಆದರ್ಶ ಮಾದರಿಪಾತ್ರವನ್ನಾಗಿ ಚಿತ್ರಿಸಿದ್ದಾರೆ. ನೂರಾರು ವರ್ಷಗಳ ಹಿಂದೆ ಇರುವ ವ್ಯಕ್ತಿಯೊಬ್ಬನನ್ನ ಸಮಕಾಲೀನಗೊಳಿಸಿ ಅವನ ಕಲೆಯ ಪ್ರಸ್ತುತತೆಯನ್ನು ಮೆಲುಕು ಹಾಕುವಂತೆ ಮಾಡಿದ್ದಾರೆ.

ಸೃಜನಶೀಲ ಬರಹವಾದ ಇದು, ಒಬ್ಬ ಜಾಗತಿಕಮಟ್ಟದ ಕಲಾವಿದನನ್ನು ಪರಿಚಯಿಸುತ್ತದೆ. ಅಂದಿನ ಕಲಾವಿದನ ಆದರ್ಶಮಯ ಜೀವನವನ್ನ ಪರೋಕ್ಷವಾಗಿ ಕಂಡರಿಸುವಲ್ಲಿ ಕೃತಿಯ ಚಮತ್ಕಾರ ಅದ್ಭುತವಾದುದಾಗಿದೆ. ಪಾಶ್ಚಮಾತ್ಯ ದೇಶದ ಕತೆಯಾದ ಇದುಕೂಡಾ ದುರಂತ ಕತೆಯಾಗಿ ಗೋಚರಿಸುತ್ತದೆ. ಗ್ರೀಕ್ ನಂತೆ ಇತರ ಪಾಶ್ಚಿಮಾತ್ಯ ಕತೆಗಳು ಬಹುತೇಕ ರುದ್ರ ಮತ್ತು ದುರಂತ ಸನ್ನಿವೇಶದಿಂದ ಕೂಡಿದಂತೆ ಮೈಕೆಲೆಂಜಿಲೊನ ಪಾತ್ರವೂ ಚಿತ್ರಣವಾಗಿದೆ.

ಮೈಕೆಲೆಂಜಲೋನ ಫ್ಲಿದ್ ಶಿಲ್ಪಗಳ ಬಗ್ಗೆ ಸುದೀರ್ಘ ಮಾಹಿತಿಯನ್ನು ಕತೆ ಒದಗಿಸುತ್ತದೆ. ಸುಪ್ರಸಿದ್ಧ ಕಲಾವಿದ ಡ.ವಿಂಚಿ, ಖ್ಯಾತ ಕವಿ ದಾಂಟೆಯ ಸಮಕಾಲೀನನಾದ 'ಮೈಕೆಲೆಂಜಿಲೋ' ನನ್ನ ಒಬ್ಬ ಚಾರಿತ್ರಿಕ ಕಲಾವಿದನನ್ನಾಗಿ ಚಿತ್ರಿಸಿದ ಕೃತಿ, ಭಾಷೆಯಿಂದ ಪ್ರೌಢಿಮೆಯಿಂದಕೂಡಿ, ಓದುಗರಿಗೊಂದು ಕುತೂಹಲವನ್ನ ಹುಟ್ಟಿಸುವ ಬರಹ ಶೈಲಿಯು ತುಂಬಾ ಸುಂದರವಾಗಿದೆ. ತನ್ನ ಭಾವಪೂರ್ಣವಾದ ಸಾಲುಗಳಿಂದ ಓದುಗರನ್ನು ಕಲೆಯತ್ತ ಕರೆದೊಯ್ಯುವಲ್ಲಿ ಕೃತಿ ಯಶಸ್ವಿಯಾಗಿದೆ. ಅಲ್ಲಲ್ಲಿ ಕರುಣೆ, ವೀರ, ಶೃಂಗಾರದ ಸನ್ನೀವೇಶಗಳನ್ನು ಕಂಡರಿಸುವಲ್ಲಿ ಬರವಣಿಗೆಯ ಚಾಕಚಕ್ಯತೆ ಕಂಡು ಬರುತ್ತದೆ. ಇಂದಿನ ಓದುಗಿಗೆ ಕಲಾವಿದನ ಕುರಿತಾದ ಮಾಹಿತಿ ಅಷ್ಟೇ ಅಲ್ಲದೆ ಕತೆ, ಸಾಹಿತ್ಯಗಳತ್ತ ಚಿಂತನೆಗೆ ತೊಡಗುವಂತೆ ಮಾಡುವ ಕೃತಿ ಕಲಾಕ್ಷೇತ್ರದ ಸಾಹಿತ್ಯಲ್ಲಿ ಒಂದು ಉತ್ತಮ ಅನುವಾದ ಕೃತಿಯಾಗಿದೆ ಎನ್ನಬಹುದು. ಮುಂಬರುವ ಬರಹಗಾರರಿಗೆ ಒಂದು ಆದರ್ಶಪ್ರಾಯವಾಗಬಲ್ಲ ಮಾದರಿ ಕೃತಿಯಾಗಿದೆ ಎಂದರೆ ಅತಿಶಯವಾಗಲಾರದು. ವ್ಯಕ್ತಿಕೇಂದ್ರಿತವಾಗಿ ಮೂಡಿಬಂದ ಕಾದಂಬರಿಯೊಂದು ಪ್ರಸ್ತುತ ದಶಕದಲ್ಲಿ ಮುಖ್ಯವಾಗಿ ನಿಲ್ಲುತ್ತದೆ.

ರೂಪದರ್ಶಿ ಕೃತಿಯಂತೆ ಚಿಕ್ಕದಾಗಿರದೆ, ವಿನ್ಯಾಸದಲ್ಲಿ ವಸ್ತು ವಿಷಯಗಳು ವಿಸ್ತಾರವಾಗಿ ಚಾಚಿಕೊಂಡಿವೆ.

ಕಲಾನುವಾದ ಸಾಹಿತ್ಯದಿಂದ ಅನೇಕ ಸಂಗತಿಗಳು ತಿಳಿದುಬರುತ್ತವೆ. ಭಾರತದ ಪ್ರಾಚೀನ ಭಾಷೆಗಳಲ್ಲೊಂದು ಸಂಸ್ಕೃತ ಭಾಷೆಯಲ್ಲಿಯ ಕೃತಿಗಳನ್ನು ಕನ್ನಡಕ್ಕೆ ತರುವುದರಿಂದ, ಪ್ರಾಚೀನ ಭಾರತದ ಕಲೆಯ ಕುರಿತಾದ ಅಂಶಗಳು ತಿಳಿದುಬರುತ್ತವೆ. ಪ್ರಾಚೀನದಲ್ಲಿರುವ ಕಲಾಪ್ರಕಾರಗಳು, ಚಿತ್ರಕಲಾ ಪರಿಕರಗಳು, ವರ್ಣಗಳ ತಯಾರಿಕೆ, ರಚನಾಕ್ರಮಗಳು ಅಂದಿನ ಚಿತ್ರಕಲೆಯ ವಸ್ತು ವಿಷಯಗಳು ಅಲ್ಲದೆ ಕಲಾವಿದರ ಕುರಿತಾಗಿಯೂ ತಿಳಿದುಬರುತ್ತದೆ. ಅಲ್ಲದೆ ಅನುವಾದಿತ ಕೃತಿಗಳ ಅಧ್ಯಯನದಿಂದ ಮೂಲ ಭಾಷೆಯಲ್ಲಿ ಬಳಸಲಾದಭಾಷೆ, ಸಂಸ್ಕೃತಿಗಳನ್ನು ತಿಳಿಯಬಹುದಾಗಿದೆ. ಅನುವಾದಿತ ಕೃತಿಗಳಿಂದ ಬೇರೆ ಭಾಷೆಯ ಬೇರೆ ನಾಡಿನ ಸಂಸ್ಕೃತಿಯನ್ನ ಸುಲಭದಲ್ಲಿ ಅರಿತುಕೊಳ್ಳಬಹುದಾಗಿದೆ. ಸಂಸ್ಕೃತದಲ್ಲಿ ರಚಿತವಾದ ಕೃತಿಗಳಲ್ಲಿ ಸಾಂದರ್ಭಿಕವಾಗಿಯಾದರೂ ಕಲೆಯು ಉಲ್ಲೇಖವಾಗಿದೆ ಎನ್ನಬಹುದಾಗಿದೆ. ಸಾಂದರ್ಭಿಕ ಉಲ್ಲೇಖದಲ್ಲಿಯ ಕಲೆಯ ಅಂಶಗಳನ್ನು ತಿಳಿದುಕೊಳ್ಳುವಲ್ಲಿ ಅನುವಾದ ಸಾಹಿತ್ಯ ಮಹತ್ವಪಡೆದಿದೆ. ಮೂಲ ಭಾಷೆಯಲ್ಲಿಯ ಚಿತ್ರಕಲಾ ಸಂದರ್ಭಗಳನ್ನು ಒಂದೆಡೆ ಕಲೆಹಾಕಿ ಕಲೆಯ ಕುರಿತಾದ ವಿಷಯವನ್ನು ಒಟ್ಟಾಗಿ ಕಟ್ಟಿಕೊಡುವ ಪ್ರಯತ್ನಗಳೂ ಕನ್ನಡ ಕಲಾಸಾಹಿತ್ಯಲ್ಲಿ ನಡೆದಿವೆ. ಈ ಹಿನ್ನೆಲೆಯಲ್ಲಿ ಸಂಶೋಧನಾ ಕೃತಿಗಳು ಮಹತ್ವವನ್ನು ಪಡೆಯುತ್ತವೆ.ಅಲ್ಲದೆ ಸಂಪಾದಿತ ಕೃತಿಗಳಲ್ಲಿ ಲೇಖನ ರೂಪಲ್ಲಿಯ ಸಾಹಿತ್ಯವನ್ನು ಇಂದು ನಾವು ಗ್ರಹಿಸಬಹುದಾಗಿದೆ. ಮೂಲ ಭಾಷೆಯ ಕೃತಿಗಳನ್ನು ಅಧ್ಯಯನ ಮಾಡಿದ ವಿದ್ವಾಂಸರು ಕನ್ನಡಕ್ಕೆ ತಮ್ಮ ದ್ವಿಭಾಷಾ ಜ್ಞಾನದ ಮೂಲಕ ಸಮರ್ಥವಾಗಿ ಕಲಾ ಅನುವಾದ ಸಾಹಿತ್ಯವನ್ನು ರಚಿಸಿದ್ದಾರೆ. ಎನ್ನಬಹುದು. ವಿ.ಕ್, ಗೋಕಾಕ್, ಸಿ.ಪಿ. ಕೃಷ್ಣಕುಮಾರ್, ಸಾ.ಕೃ. ರಾಮಚಂದ್ರರಾವ್ ಮುಂತಾದವರು ಅನುವಾದಕರಾಗಿದ್ದು, ಕಲಾ ಸಾಹಿತ್ಯಕ್ಕೆ ತಮ್ಮೇ ಆದ ಕೊಡುಗೆಯನ್ನು ನಿಡಿದ್ದಾರೆ. ವಿಪರ್ಯಾಸವೆಂದರೆ ಕಲೆಯನ್ನು ಅಧ್ಯಯನ ಮಾಡಿದವರಾರೂ ಪ್ರಾಚೀನ ಕಾವ್ಯಗಳನ್ನು ಕಲಾದೃಷ್ಟಿಯಿಂದ ಓದಿ, ಗ್ರಹಿಸಿಕೊಂಡು ಬರವಣಿಗೆ ಮಾಡಿಲ್ಲವೆಂಬುದು. ಸಾಹಿತ್ಯ ಹಾಗೂ ವಿವಿಧ ಸಿದ್ಧಾಂತಗಳ ನೆಲೆಯಿಂದ ಇತರ ಭಾಷಾ ಕೃತಿಗಳನ್ನು ಅಧ್ಯಯನ ಕೈಗೊಳ್ಳಲಾದಂತೆ ಕಲೆಯ ಸಿದ್ಧಾಂತಗಳನ್ನು ಹುಡುಕುವ ದಿಶೆಯಲ್ಲಿ ಪ್ರಯತ್ನಗಳು ನಡೆದಿವೆ. ಯಾವುದೇ ಭಾಷೆಯ ಕೃತಿಗಳು ನೇರವಾಗಿ ತರ್ಜುಮೆಗೊಂಡ ನಂತರ ಅನುವಾದಿತ ಕೃತಿಯಲ್ಲಿ ಅಡಗಿರುವ ಕಲೆಯ ಸಂಗತಿಗಳನ್ನು ಅರಿತುಕೊಳ್ಳುವ ಇಂದಿನ ಸಂದರ್ಭದಲ್ಲಿ ಆ ಅನುವಾದಿತ ಕೃತಿಯನ್ನಾದರೂ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸಂಸ್ಕೃತದಿಂದ ಅನುವಾದಗೊಂಡ ಕೃತಿಗಳಲ್ಲಿ ಕಲೆಯನ್ನು ಅದರ ಸ್ವರೂಪವನ್ನು ಅರಿತು ಕೊಳ್ಳುವುದು ಮಹತ್ವ ಪಡೆದಿದೆ.

ಇಂಗ್ಲೀಷ, ತೆಲುಗು, ಹಿಂದಿ, ಇತರ ಭಾಷೆಗಳಿಂದ ಬಂದ ಕೃತಿಗಳು ಕನ್ನಡದಲ್ಲಿ ಇದ್ದು ಇಂಗ್ಲೀಷದಿಂದ ಪಾಶ್ಚಿಮಾತ್ಯ ಕಲೆಯ ಅರಿವು ಸುಲಭದಲ್ಲಿ ಆಗುತ್ತದೆ. ಜಾಗತಿಕ ಕಲೆಯ ವಿಚಾರವಾಗಿ ತಿಳಿದುಕೊಳ್ಳುವಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಕಲಾ ಚಟುವಟಿಕೆಗಳು ಹಾಗೂ ಅದರ ಐತಿಹಾಸಿಕ ಘಟನೆಗಳನ್ನು ತಿಳಿದುಕೊಳ್ಳುವಲ್ಲಿ ಈ ಇಂಗ್ಲೀಷ ಮೂಲದ ಅನುವಾದ ಅತ್ಯಂತ ಮಹತ್ವ ಪಡೆದಿದೆ.

ಕಳೆದ ದಶಕದಲ್ಲಿ ಕನ್ನಡದಲ್ಲಿ ಅತಿಕಡಿಮೆ ಅನುವಾದಿತ ಕೃತಿಗಳು ರಚಿತವಾಗಿವೆ. ಪ್ರಾರಂಭದ ಅಂದರೆ ಕಲಾ ಬರವಣಿಗೆ ಸ್ವತಂತ್ರ್ಯ ಅಸ್ತಿತ್ವಪಡೆವ ಹೊತ್ತಿಗೆ ಅನುವಾದವು ಅಲ್ಲಲ್ಲಿ ಪ್ರಾರಂಭದ ಲಕ್ಷಣಗಳನ್ನು ಹೊಂದಿದೆ ಅಂದರೆ ೧೯೨೦- ಈಚೆಗೆ ಕನ್ನಡದಲ್ಲಿ ಅನೇಕ ಕೃತಿಗಳು ಅನುವಾದ ಗೊಂಡಿರುವುದು ಕಂಡುಬರುತ್ತದೆ. ಕಲಾವಿದ ಕೇಂದ್ರಿತವಾದ ಕೃತಿಗಳು ಅಲ್ಲದೆ ಸೌಂದರ್ಯ ಸಿದ್ಧಾಂತ ಹಿನ್ನೆಲೆಯಾಗಿ ಅನೇಕ ಕೃತಿಗಳು ತರ್ಜುಮೆಗೊಂಡಿವೆ. ಮೊದಲ ಹಂತದ ಸಾಹಿತ್ಯ ರಚನೆಯ ಕಾಲಕ್ಕೆ ಹೋಲಿಸಿದರೆ ಕಳೆದ ದಶಕದಲ್ಲಿ ಅನುವಾದಿತ ಕೃತಿಗಳು ತೀರಾ ಕಡಿಮೆ ಎಂದೇ ಹೇಳಬೇಕು. ಹಾಗೆ ಪ್ರಸ್ತುತಕ್ಕೆ ಉಪಲಬ್ಧವಾಗುವ ಕೃತಿಗಳಲ್ಲಿ ನೋಡುವ ಬಗೆ ಎಂಬ ಕೃತಿಯು ಜಾನ್ ಬರ್ಜರ್ ಅವರ ಇಂಗ್ಲೀಷ ಕೃತಿಯಾಗಿದ್ದು ಎಚ್.ಎ. ಅನಿಲಕುಮಾ ರವರಿಂದ ಕನ್ನಡಕ್ಕೆ ಅನುವಾದ ಗೊಂಡಿದೆ. ೨೦೧೨ ರಲ್ಲಿ ಕಡಲು ಪ್ರಕಾಶನದಿಂದ ಮುದ್ರಣ ಕಂಡ ಕೃತಿಯಾಗಿದೆ. ಅದೇ ರೀತಿ ಇವಿಂಗ್ ಸ್ಟೋನನ ಮೈಕೆಲೆಂಜಿಲೋ (ಜೀವನ ಚರಿತ್ರೆ) ಕೃತಿಯು ಎನ್.ಎಸ್.ನುಗ್ಗೆಹಳ್ಳಿ ನಾಗರಾಜರಿಂದ ಅನುವಾದಗೊಂಡಿದ್ದು, ಅಂಕಿತ ಪ್ರಕಾಶನದಿಂದ ಪ್ರಕಟಗೊಂಡಿದೆ. ವಿಶ್ವವಿಖ್ಯಾತ ಕಲಾವಿದ ಮೈಕೆಲೆಂಜಿಲೋನ ಜೀವನ ಚರಿತ್ರೆಯನ್ನು ಒಳಗೊಂಡ ಕೃತಿಯು ಒಂದು ದೊಡ್ಡದಾದ ಸುದೀರ್ಘ ಕತೆಯಾಗಿದೆ. ವಿಶ್ವಮಾನ್ಯ ಕಲಾವಿದನೊಬ್ಬನ ಆತ್ಮ ಚರಿತ್ರೆಯನ್ನು ಪರೋಕ್ಷವಾಗಿ ತೋರಿಸುವ ಕೃತಿ ೩೪೦ ಪುಟಗಳ ಅನುವಾದಿತ ಕೃತಿಯಾಗಿದೆ. ಸ್ವೆತಾಸ್ಲೋವ್ ರೋರಿಕ್‌ರ ಕಲೆಯಲ್ಲಿ ಮಾನವತಾವಾದ ಕೃತಿ ಕನ್ನಡದಲ್ಲಿ ಎಚ್.ಎಸ್.ರಾಘವೇಂದ್ರರಾವ್ ಅವರಿಂದ ಅನುವಾದಿತವಾಗಿದೆ. ವಿಮರ್ಶಾ ದೃಷ್ಟಿಯಿಂದ ಬಹುಮೌಲ್ಯಯುತವಾದುದಾಗಿದೆ. ಅನುವಾದಿತ ಸಾಹಿತ್ಯದ ಅಧ್ಯಯನ ಇಂದು ಅನನ್ಯವೆಂದೇ ಹೇಳಬಹುದು. ಅನುವಾದಿತ ಕೃತಿಯಲ್ಲಿ ಮೂಲ ಕೃತಿಯ ಆಶಯಕ್ಕೆ ಎಷ್ಟರ ಮಟ್ಟಿಗೆ ನ್ಯಾಯ ಒದಗಿಸಬಲ್ಲದು ಎಂಬುದನ್ನು ಅರಿತುಕೊಳ್ಳಲು ಅದರ ಅಧ್ಯಯನ ಅನಿವಾರ್ಯವಾದಂತೆ ವ್ಯಕ್ತಿಕೇಂದ್ರಿತ, ವಸ್ತುಕೇಂದ್ರಿತವಾದ ಅನುವಾದದಲ್ಲಿ ನಿರೂಪನಾ ಶೈಲಿ (ಕಥಾನಕ ಶೈಲಿ)ಯನ್ನು ಮೂಲ ಭಾಷೆಯ ಪದಗಳಿಗೆ ಪರ್ಯಾಯವಾಗಿ ಕನ್ನಡದಲ್ಲಿ ಅರ್ಥೈಸುವ ಶಬ್ದಗಳ ಕುರಿತಾಗಿ, ಅವುಗಳು ಸೃಷ್ಟಿಸುವ ಸಾಧ್ಯತೆಗಳ ಕುರಿತಾಗಿ ಅರಿತುಕೊಳ್ಳುವುದು ಮುಖ್ಯವಾಗುತ್ತದೆ. ಭಾಷೆ, ಬರಹದ ಶೈಲಿ, ವಸ್ತುವಿಷಯ ವಿಮರ್ಶೆ ಮುಂತಾದ ಆಯಾಮಗಳೊಂದಿಗೆ ಕಲೆಯ ಅಸ್ತಿತ್ವವನ್ನು ನಮ್ಮದಾಗಿಸಿಕೊಳ್ಳಬಹುದಾಗಿದೆ. ಕಲೆಯನ್ನು ನಿರೂಪಿಸುವ ದಿಶೆಯಲ್ಲಿ ರೂಪಿತವಾದ ಸಿದ್ಧಾಂತ ಮುಂತಾದ ಸಂಗತಿಗಳನ್ನು ಸೂಕ್ಷ್ಮವಾಗಿ

ಗ್ರಹಿಸಿಕೊಂಡು ಮುಂದಿನ ಅಧ್ಯಯನ ಕೈಗೊಳ್ಳುವಲ್ಲಿ ಕಲಾರಚನೆ ಮತ್ತು ಕಲಾಸಾಹಿತ್ಯವಲಯದ ಏಳಿಗೆಗಳು ಸಾಧಿತವಾಗಬಲ್ಲವು ಎನ್ನಬಹುದು.

ಟಿಪ್ಪಣಿ :

೧. ಎಚ್.ಎ. ಅನಿಲ್‌ಕುಮಾರ : ನೋಡುವ ಬಗೆ : ಪು.ಸಂ.–೨೯


೨. ಅದೇ... ಪು.ಸಂ.–೧೦೮

೩. ಎಚ್.ಎಸ್. ರಾಘವೇಂದ್ರರಾವ್ : ಕಲೆಯಲ್ಲಿ ಮಾನವತಾವಾದ : ಪು.ಸಂ.–೧

೪. ಅದೇ... ಪು.ಸಂ.–೧೨

- ಅನುವಾದಕೇಂದ್ರಿತ ಸಾಹಿತ್ಯ ಕೃತಿಗಳು





ಡಾ.ಕೆ.ಶಿವಾರಾಮ ಕಾರಂತ

ಸಮಕಾಲೀನ ಕಲಾ ಬರಹಗಾರರು


ಅ.ಲ.ನರಸಿಂಹನ್



ಎನ್.ಮರಿಶಾಮಾಚಾರ್


ಎಮ್.ಎಚ್.ಕೃಷ್ಣಯ್ಯ


ಕೆ.ವಿ.ಸುಬ್ರಹ್ಮಣ್ಯಂ


ಚಿ.ಸು.ಕೃಷ್ಣಶೆಟ್ಟಿ


ಡಾ.ಆರ್.ಎಚ್.ಕುಲಕರ್ಣಿ


ಡಾ.ಎಸ್.ಸಿ ಪಾಟೀಲ್


ಎಮ.ಎಸ್.ಮೂರ್ತಿ


ಡಾ.ಶಿವಾನಂದ.ಎಚ್.ಬಂಟನೂರ


ಎಚ್.ಎ.ಅನಿಲ್ಕುಮಾರ್


ಡಾ.ಮಲ್ಲಿಕಾರ್ಜುನ ಬಾಗೋಡಿ

ಅಧ್ಯಾಯ – ಏಳು

ಸಮಾರೋಪ

ಅಧ್ಯಾಯ – ಏಳು

ಸಮಾರೋಪ

ಲಲಿತಕಲೆಗಳಲ್ಲಿ ಪ್ರಮುಖವಾಗಿರುವ ದೃಶ್ಯಕಲೆಗಳಾದ ಚಿತ್ರ, ಶಿಲ್ಪಕಲೆಗಳು ದೇಶಬದ್ಧ ಕಲೆಗಳೆಂದು ಗುರ್ತಿಸಲ್ಪಡುತ್ತವೆ. ಈ ನೇತ್ರೇಂದ್ರಿಯ ಸಂಬಂಧಿ ಕಲೆಗಳನ್ನು ನೋಡಿಯೇ ಆಸ್ವಾದಿಸಬೇಕು ಹೀಗೆ ಆಸ್ವಾದಿಸಿ, ಆನಂದಿಸಿದ ಸೌಂದಯಾನುಭುತಿಯನ್ನು ಬರಹರೂಪದಲ್ಲಿ ಹಿಡಿದಿಡುವುದು ಒಂದು ಚಮತ್ಕಾರವೇ ಸರಿ. ಇಲ್ಲಿ ಆಸ್ವಾದಿತ ಅನುಭವವು ಶಬ್ದರೂಪದ ಮಾತು ಅಥವಾ ಬರಹಕ್ಕಿಳಿದಾಗ ಸಹಜವಾಗಿಯೇ ವಿಮರ್ಶೆ ಜನ್ಮತಳೆಯುತ್ತದೆ.

ದೃಶ್ಯಕಲಾ ವಿಮರ್ಶೆಯಲ್ಲಿ ದೃಶ್ಯಾನುಭವದ ಸ್ವರೂಪವನ್ನು ಅದರ ವ್ಯಾಪ್ತಿಯ ಪರಿಧಿಯಲ್ಲಿಯೇ ಪರಿಗಣಿಸಿ ಅಧ್ಯಯನ ಮಾಡಲಾಗುತ್ತದೆ. ಪ್ರಕೃತಿಯನ್ನು ಅಥವಾ ಲೋಕಾನುಭವವನ್ನು ಕಲಾಕೃತಿಯನ್ನಾಗಿ ರೂಪಿಸುವಲ್ಲಿ, ಒಂದು ಸೃಜನಾತ್ಮಕ ಪ್ರಕ್ರಿಯೆ ನಡೆಯುತ್ತದೆ. ಅದೇರೀತಿ ದೃಶ್ಯಕಲೆಯ ಕುರಿತಾದ ಬರವಣಿಗೆಯೂ ಕೂಡಾ ಒಂದು ಸೃಜನಾತ್ಮಕ ಪ್ರಕ್ರಿಯೆಯೇ ಆಗುತ್ತದೆ. ಈ ಸೃಜನಾತ್ಮಕ ಪ್ರಕ್ರಿಯೆ ದೃಶ್ಯಕಲೆಯ ಹೊಸ ಆಯಾಮವು ಮತ್ತು ಕಲೆಯ ವಿಸ್ತರಣೆಯ ಮಾಧ್ಯಮವೂ ಆಗುತ್ತದೆ. ಮನುಷ್ಯನ ಧ್ವನಿಯು ಕಾಲಗಳ ಅಂತರದಲ್ಲಿ ಲಿಪಿ, ಭಾಷೆಗಳಿಂದ ಮಾಧ್ಯಮರೂಪ ಪಡೆದಂತೆ ನೋಟದಿಂದ ಪಡೆದ ಗ್ರಹಿಕೆಯು ಶಬ್ದರೂಪದಿಂದ ಉಂಟಾದ ಒಂದು ಕ್ರಾಂತಿಕಾರಕವಾದ ಮಾಧ್ಯಮವನ್ನು ಮತ್ತು ಕಲೆಯ ಆಯಾಮವನ್ನು ರೂಪಿಸಬಲ್ಲದು. ಈ ಹಿನ್ನೆಲೆಯಲ್ಲಿ ಕಲಾಸಾಹಿತ್ಯ ಇಂದು ಮಹತ್ವವನ್ನು ಪಡೆಯುತ್ತದೆ. ಅದೇ ರೀತಿ ವಿಶೇಷವಾಗಿ ಅಧ್ಯಯನದ ವಿಷಯವೂ ಆಗಿದೆ.

ಈ ವರೆಗಿನ ಅಧ್ಯಯನಗಳು (ದೃಶ್ಯ ಕಲಾಕ್ಷೇತ್ರದಲ್ಲಿ) ವ್ಯಕ್ತಿಕೇಂದ್ರಿತ, ವಸ್ತುಕೇಂದ್ರಿತ, ಕಲಾಇತಿಹಾಸ ಕೇಂದ್ರಿತವಾಗಿ ಯಥೇಚ್ಛವಾಗಿ ನಡೆದಿವೆ. ಕೆಲವು ಅಧ್ಯಯನಗಳು "ಸಾಹಿತ್ಯದಲ್ಲಿ" ಚಿತ್ರಕಲೆಯ ಸಂಬಂಧಗಳ ವಿಷಯವಾಗಿ ನಡೆದಿವೆ. ಆದರೆ ಪ್ರಸ್ತುತಸಂದರ್ಭದಲ್ಲಿ ದೃಶ್ಯಮಾಧ್ಯಮವೊಂದು ಸಾಹಿತ್ಯ ಕೃತಿಗಳಲ್ಲಿ ಹೇಗೆ ಪ್ರತಿನಿಧಿಸುತ್ತದೆ. ಅಥವಾ ಕಲೆಯ ವಿವರಣೆಯಲ್ಲಿ ಸಾಹಿತ್ಯದ ಪಾತ್ರವೆಂಥದ್ದು ಅದರ ಸ್ವರೂಪ ಎಂತಹದ್ದು, ಎಂಬುದನ್ನು ಇಂದು ಚಿಂತನೆ ಮಾಡುವುದು ಅಗತ್ಯವಾಗುತ್ತದೆ. ಸೌಂದರ್ಯ ಮಿಮಾಂಸೆ ನೆಲೆಯಲ್ಲಿ ಕಲಾವಿಮರ್ಶೆಯನ್ನು ಮಾಡುವುದು ಇಂದಿನ ಅಗತ್ಯವಾದ ಅಂಶವಾಗಿದೆ. ಅದರಲ್ಲೂ ಸಮಕಾಲೀನ ಸಂದರ್ಭದ ಸಾಹಿತ್ಯವನ್ನು ಮುಂದಿರಿಸಿಕೊಂಡು ಕಲಾಸಾಹಿತ್ಯದ ಹಲವು ಮಗ್ಗಲುಗಳನ್ನು ವಿವೇಚಿಸುವುದು ಒಂದು ಬಗೆಯ ಸಿಂಹಾವಲೋಕನ ಕ್ರಮವೇ ಆಗಿದೆ. ಈ ರೀತಿಯ ಕಲಾಸಿದ್ಧಾಂತಗಳನ್ನು ಅಧ್ಯಯನ ವಿಷಯವಾಗಿ ವಿಮರ್ಶಾ ನೆಲೆಯಲ್ಲಿ ವಿಶ್ಲೇಷಿಸುವುದು ಮಹತ್ವಪಡೆಯುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಹಲವು ಹೊಸ ಬಗೆಯ ಚಿಂತನೆಯ ಸಾಧ್ಯತೆಗಳಿಗೆ ಅನುವು ಮಾಡಿಕೊಡಬಲ್ಲದು.

ದೈನಂದಿನ ಅಗತ್ಯತೆಯೊಂದಿಗೆ ಮಾನವ ನಾಗರೀಕತೆ ನಿರಂತರತೆಯನ್ನು ಮೈಗೂಡಿಸಿಕೊಂಡಿರುವಂತೆ ಸದಾ ಚಲನಶೀಲವಾದ, ಚೇತನಾಸ್ವರೂಪವಾದ ಕಲೆಯು ಕಾಲದ ಮಿತಿಯನ್ನು ಮೀರಲಾರದು ಅಂತೆಯೇ ಪ್ರಸ್ತುತದಲ್ಲಿ ರಚಿತಗೊಳ್ಳುವ ಕಲೆ, ಇಂದಿನ ಸಮಯದ ಒಟ್ಟು ಸಂಸ್ಕೃತಿಯನ್ನು ನಿರ್ದೇಶಿಸುತ್ತದೆ. ಇಲ್ಲಿ ಅರ್ವಾಚೀನ ಎಂಬುದು ಅನನ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಆಧುನಿಕಕಾಲದಲ್ಲಿ ಮಹತ್ವಪಡೆದ ಕಲಾಸಾಹಿತ್ಯವಿಮರ್ಶೆ, ವಿಶ್ಲೇಷಣೆಗಳಿಂದಲೂ ಹೊರತಾಗಲಾರದು. ಕಳೆದ ದಶಕದಲ್ಲಿ ಸೃಷ್ಟಿಗೊಂಡ ಸಾಹಿತ್ಯವು ಹಲವು ವೈವಿಧ್ಯಮಯ ಅಂಶಗಳಿಂದ ಕೂಡಿ, ಅನೇಕ ಪ್ರಕಾರಗಳಲ್ಲಿ ರಚನೆಗೊಂಡು, ಈ ಹಿಂದಿಗಿಂತಲೂ ಹೆಚ್ಚು ಜನಮುಖಿಯಾಗುತ್ತಿದೆ. ವಿಶ್ವಮುಖಿಯಾಗುತ್ತಿದೆ. ಹೀಗೆ ಸ್ಥೂಲ ಹಾಗೂ ಸೂಕ್ಷ್ಮದೃಷ್ಟಿಕೋನದ ಹಿನ್ನೆಲೆಯಲ್ಲಿ ವ್ಯಾಪಕ ಮತ್ತು ಪ್ರಸ್ತುತವಾಗುತ್ತಿರುವ ಕಲಾಸಾಹಿತ್ಯ ಇಂದು ಊಹೆಗೂ ನಿಲುಕದ ಹೊಸ ಹೊಸ ಆಯಾಮಗಳನ್ನು ಒಳಗೊಳ್ಳುತ್ತದೆ. ಅಂತೆಯೇ ಅದರ ಮೂಲ ಬಿಂದುವಾದ ಕಲೆಯು ಕೂಡಾ ಈ ಅಂಶಕ್ಕೆ ಹೊರತಾಗಲಾರದು.

ಪ್ರಾರಂಭದ ದಶಕದಲ್ಲಿ ತೆಳುವಾಗಿ ಆರಂಭವಾದ ಕಲಾಸಾಹಿತ್ಯರಚನೆ ಕ್ರಮೇಣ ಬರಬರುತ್ತ ಹೆಚ್ಚು ಹೆಚ್ಚು ರಚಿತವಾಗಿದೆ. ಆರಂಭದಲ್ಲಿ ಕವಿಗಳು, ಸಾಹಿತಿಗಳು ವಿಮರ್ಶಕರಿಂದ ರಚಿಸಲ್ಪಟ್ಟ ಸಾಹಿತ್ಯವು, ಒಂದು ಸ್ಪಷ್ಟರೂಪ ಪಡೆದದ್ದು, ಕವಿಗಳೊಂದಿಗೆ ಕಲಾವಿದರೂ ಬರವಣಿಗೆಗೆ ತೊಡಗಿದಾಗಲೇ ಎನ್ನಬಹುದು. ಕಲಾವಿದರು ಸ್ವತಃ ಕಲೆಯ ಅನುಭವನ್ನು ರಚನಾತ್ಮಕವಾಗಿಸಿ, ಅದರ ಕುರಿತಾಗಿ ಬರೆದಾಗ ಕಲಾಸಾಹಿತ್ಯ ಹೆಚ್ಚು ವಾಸ್ತವಿಕವಾಗಿ ರೂಪಗೊಂಡಿತು. ಕಲೆಯಲ್ಲಿ ತಾತ್ವಿಕ ಮತ್ತು ರಾಚನಿಕ ಎಂಬ ವಿಭಾಗೀಕರಣ ಅಸಿಂಧುವಾದುದು ಎನ್ನಬಹುದು. ಅವುಗಳ

ಅನನ್ಯತೆಯನ್ನ ಹೇಳುವಾಗ ಡಾ. ಶಿವಾನಂದ ಬಂಟನೂರರ ಮಾತುಗಳು ಸ್ಮರಣೀಯವಾಗುತ್ತವೆ. ಕವಿಗಳ ಹೊಗಳಿಕೆ, ಉತ್ಪ್ರೇಕ್ಷೆ, ವಿಸ್ಮಯದ ಸಂಗತಿಗಳಲ್ಲಿ, ಅನುಭವದಿಂದ ಕೂಡಿರದೆ, ವಸ್ತುಸ್ಥಿತಿ ಮರೆಯಾಗಿ ಕೇವಲ ಕಾವ್ಯಾತ್ಮಕವಾಗಿ ಮೂಡಿಬರುತ್ತಿದ್ದ ಕಲೆ, ಕಲಾವಿದರ ಬರವಣಿಗೆಯಿಂದ ಒಂದು ನಿರ್ದಿಷ್ಟತೆ, ನಿಖರತೆ ಅಂಶಗಳೊಂದಿಗೆ ರಚಿತವಾಯಿತು. ಆದರೆ ಕಲೆಯನ್ನು ಶಾಬ್ದಿಕಗೊಳಿಸಿ ಅದಕ್ಕೊಂದು ಸಂವಹನ ರೂಪಕೊಟ್ಟವರಲ್ಲಿ ಸಾಹಿತಿಗಳೇ ಮೊದಲಿಗರೆನ್ನಬಹುದು.

ಹಾಗೆನೋಡಿದರೆ ಕವಿ ಹಾಗೂ ಕಲಾವಿದ ಇಬ್ಬರೂ ಅದ್ಭುತ ಸೃಷ್ಟಿಕರ್ತರು. ಪ್ರತಿಭಾಸಂಪನ್ನರು, ಇಬ್ಬರ ಅನುಭವವು ಒಂದೇ ಅಂತರಂಗಕ್ಕೆ ಸಂತಸತರುವ ಆಸ್ವಾದನೆ ಲಹರಿಗಳೂ ಒಂದೇ. ಅದರಿಂದ ಜನ್ಯವಾದ ಅಭಿವ್ಯಕ್ತಿ ಮಾಧ್ಯಮಗಳು ಬೇರೆ ಬೇರೆ. ಈ ಹಿನ್ನೆಲೆಯಲ್ಲಿ ಸಾಹಿತಿಯೂ ಕೂಡಾ ಕಲಾಸಾಹಿತ್ಯ ರಚನೆಯಲ್ಲಿ ಕಲ್ಪನೆಯ ಬಲೆಯನ್ನು ವಿಸ್ತಾರವಾಗಿ ಹರಡಿ ಅನ್ಯ ರಂಗದ ಜನರನ್ನ, ಕಲಾಕ್ಷೇತ್ರಕ್ಕೆ ಮತ್ತು ಅದರ ಜಿಜ್ಞಾಸೆಯ ಕಡೆಗೆ ಮುಖಮಾಡುವಂತೆ ಮಾಡಿದ ಪ್ರಯತ್ನ ಅಮೋಘವೆಂದೇ ಹೇಳಬಹುದು. ಈ ಹಿನ್ನೆಲೆಯಲ್ಲಿ ಕಲಾಸಾಹಿತ್ಯ ಪ್ರಾರಂಭದ ಹಂತದಲ್ಲಿ ಗಾತ್ರದಲ್ಲಿ ಕಿರಿದಾಗಿಯೂ ವಿಷಯದ ಆಳದಲ್ಲಿ (ಸಾಹಿತ್ಯಆಯಾಮದಲ್ಲಿ) ಗಹನವಾಗಿಯೂ ಗೋಚರಿಸುತ್ತದೆ. ಶಿವರಾಮಕಾರಂತ, ವಿ. ಕೃ. ಗೋಕಾಕ, ಅ.ಲ. ನರಸಿಂಹನ್, ಅ.ನ.ಕೃ, ಸಿ.ಪಿ.ಕೆ ಮುಂತಾದ ಮೇಧಾವಿಗಳಿಂದ ಪ್ರಾರಂಭವಾಗಿ ಎಂ.ಎಚ್. ಕೃಷ್ಣಯ್ಯ, ಶ್ರೀನಿವಾಸಮೂರ್ತಿ ಮುಂತಾದವರಿಂದ ವಿಸ್ತಾರವಾಯಿತು. ಹೀಗೆ ವಿಸ್ತಾರವಾಗಿ ಬೆಳೆದ ಸಾಹಿತ್ಯ ಕಳೆದ ದಶಕದಲ್ಲಿ ಹಲವು ವೈಶಿಷ್ಟ್ಯಪೂರ್ಣ ಆಯಾಮಗಳನ್ನು ಒಳಗೊಂಡಿತು. ಕಲೆಯು ಸಾಮಾಜಿಕ, ನೈತಿಕ, ಧಾರ್ಮಿಕ, ಪಾರಂಪಾರಿಕ, ವೈಚಾರಿಕ, ರಾಜಕೀಯ, ಸಾಂಸ್ಕೃತಿಕಮುಂತಾದ ನೆಲೆಗಳಿಂದ ಪರೋಕ್ಷ ಪ್ರಭಾವದಿಂದ ನಿರೂಪಿತವಾಗಿದೆ. ಹೀಗಾಗಿಯೇ ಕಲೆ ಸಮಕಾಲೀನವಾಗುತ್ತಿರುವ ಹೊತ್ತಿಗೆ ವಿವಿಧ ದಿಕ್ಕುಗಳಿಂದ ವಿವಿಧ ಮುಖದ ನೆಲೆಯಲ್ಲಿ ವಿಚಾರಿಸಿ, ವಿಮರ್ಶಿಸಿ, ವಿಶ್ಲೇಷಣೆಯನ್ನ ಹೊಂದುತ್ತಿದೆ. ಕಲೆ ಮತ್ತು ಸಮಾಜ, ಕಲೆ ಮತ್ತು ನೈತಿಕತೆ ಎಂಬಂತಹ ನೆಲೆಗಳಲ್ಲಿ ವೈಯಕ್ತಿಕ ಹಾಗೂ ಸಾರ್ವತ್ರಿಕ ಅಂಶಗಳು ಪರಸ್ಪರ ಮುಖಾ ಮುಖಿಯಾಗುವ ಸಂದರ್ಭಗಳನ್ನು ಸೃಷ್ಟಿಸುತ್ತವೆ. ಈ ಸಂಘರ್ಷ ಇಂದು ನಿನ್ನೆಯದಲ್ಲ ಆದಿಯಿಂದಲೂ ನಡೆದು ಬಂದಿರುವುದು. ಈ ಪ್ರಕ್ರಿಯೆಯಲ್ಲಿ ಆಸ್ವಾದಕನ (ಸಾಮಾಜಿಕನ) ಪಾತ್ರ ಕಲಾವಿದನಷ್ಟೇ ಪ್ರಮುಖ. ಇಲ್ಲಿ ಇಬ್ಬರೂ ನಿರ್ಣಾಯಕರು, ಅದರಲ್ಲೂ ಕಲೆಯ ಕುರಿತಾದ ಸಾಹಿತ್ಯ ರಚನೆಯ ಸಂದರ್ಭದಲ್ಲಿ ಇಬ್ಬರೂ ಕುಡಾ ಒಂದಿಲ್ಲಾ ಒಂದು ಬಗೆಯಲ್ಲಿ ಮುಖಾಮುಖಿಯಾಗುತ್ತಾರೆ. ಆಧುನಿಕ ಸಂದರ್ಭವು ಇಬ್ಬರ ಆಶಯವನ್ನು ಪೂರಕವಾಗಿಸಿಕೊಂಡು ರಚಿತವಾದ ಸಾಹಿತ್ಯಕ್ಕೆ ಕಾರಣವಾಗಿದೆ ಎನ್ನಬಹುದು. ಪ್ರಸ್ತುತ ಅಧ್ಯಯನದಲ್ಲಿ ಕಲಾಸಾಹಿತ್ಯವು ವಿವಿಧ ನೆಲೆಯಲ್ಲಿ ವಿಭಾಗಿಸಲ್ಪಟ್ಟು ಅಧ್ಯಯನಗೊಂಡಿದೆ. ಕಲಾಸಾಹಿತ್ಯವು ಸಾಹಿತ್ಯದ ಪ್ರಕಾರಗಳಂತೆ ವ್ಯಕ್ತಿಕೇಂದ್ರಿತ, ಸಂಕೀರ್ಣ, ಅನುವಾದ, ಸಂಪಾದನೆ, ಪ್ರವಾಸ ಮುಂತಾಗಿ ವಿಂಗಡನೆಗೊಂಡಿದೆ.

ಪ್ರಸ್ತುತ ಪ್ರಬಂಧದ ಮೊದಲನೆ ಅಧ್ಯಾಯದಲ್ಲಿ "ದಶಕದ ದೃಶ್ಯಕಲಾ ಸಾಹಿತ್ಯದ ವಿಮರ್ಶಾತ್ಮಕ ಅಧ್ಯಯನದ" ಹಿನ್ನೆಲೆಯಾಗಿ ಉದ್ದೇಶ, ಸ್ವರೂಪ ವ್ಯಾಪ್ತಿ ಮತ್ತು ವಿಧಾನಗಳನ್ನು ವಿವರಿಸಲಾಗಿದೆ. ದಶಕದ ಅಧ್ಯಾಯದ ಪ್ರಸ್ತುತತೆ ಏಕಿದೆ? ಎಂಬುದು ಇದರಲ್ಲಿ ಚರ್ಚೆಗೊಂಡಿದೆ. ಅರ್ವಾಚೀನ ದೃಷ್ಟಿಯಿಂದ ಮಾತ್ರ ನಮ್ಮ ನಿಜವಾದ ಶೋಧನೆ ಮತ್ತು ಬದಲಾವಣೆ ಸಾಧ್ಯ ಎನ್ನುವ ಆಶಯ ಈ ಅಧ್ಯಾಯನದ್ದಾಗಿದೆ. ಕಲೆ ಹೇಗೆ ಶಾಬ್ದಿಕವಾಯಿತು? ಅದಕ್ಕೆ ಕಾರಣಗಳೇನು? ಇದರಿಂದ ದೃಶ್ಯಕಲೆಯ ಪ್ರಸ್ತುತ ಸ್ವರೂಪವೇನು? ಹಾಗೇ ಕಲೆ ಬರಹರೂಪ ಪಡೆದಾಗ ಅದರ ಸಾಹಿತ್ಯ ಸೃಷ್ಟಿಯಾಗಿ ಅದರ ಒಟ್ಟು ಸ್ವರೂಪ ಎಂತಹದ್ದು? ಹೀಗೆ ಮುಂತಾಗಿ ಚರ್ಚಿತವಾಗಿದೆ.

ಕಲಾಸಾಹಿತ್ಯದ ತಾತ್ವಿಕತೆಯ ಸ್ವರೂಪವನ್ನು ಮತ್ತು ಅದರ ಐತಿಹಾಸಿಕ ಅಂಶಗಳನ್ನು ಎರಡನೆಯ ಅಧ್ಯಯನದಲ್ಲಿ ಕಂಡರಿಸಲಾಗಿದೆ. ಕಲಾಸಾಹಿತ್ಯ ಪ್ರಾರಂಭದ ಹಂತದಲ್ಲಿ ಎಷ್ಟು ಪ್ರೌಢಿಮೆ ಪಡೆದಿತ್ತು ಮತ್ತು ಎಷ್ಟರ ಮಟ್ಟಿಗೆ ಅದು ವ್ಯಾಪಕತೆ ಪಡೆದಿತ್ತು ಎಂದು ಚರ್ಚಿತವಾಗುವ ಅಧ್ಯಾಯದಲ್ಲಿ ಪ್ರಾಚೀನ ಸಂಸ್ಕೃತ, ಕನ್ನಡ ಶಾಸನಗಳಲ್ಲಿ ಉಲ್ಲೇಖಗೊಂಡ ಚಿತ್ರಕಲೆಯ ಕುರಿತಾದ ಸಾಹಿತ್ಯ ಅಲ್ಲದೆ ಆದಿಮ ಸಂಸ್ಕೃತಿಯ ಗೀರು ಮತ್ತು ಕುಟ್ಟು ಚಿತ್ರಗಳು ವರ್ಣಚಿತ್ರಗಳು ಕೂಡಾ ಒಂದು ರೀತಿಯ ಸಂವಹನ ಚಿತ್ರಗಳೇ ಎಂದು ಪರಿಗಣಿಸಿ ಅಲ್ಲಿಂದಲೇ ಚಿತ್ರಸಂಸ್ಕೃತಿ ಅದರ ಬರಹಸಂಸ್ಕೃತಿ ಆರಂಭವಾಯಿತೆಂಬ ಅಂಶವನ್ನು ಚರ್ಚಿಸಲಾಗಿದೆ. ಮತ್ತು ಇಂದಿನ ಸಾಹಿತ್ಯದ ವರೆಗಿನ ಸ್ಥೂಲ ಕಲ್ಪನೆಯನ್ನು ಕೆಲವಡೆ ಪ್ರಾತಿನಿಧಿಕ ಉದಾಹರಣೆಯನ್ನು ದಾಖಲಿಸಿ ಸೂಕ್ಷ್ಮದಲ್ಲಿಯೂ ಕಂಡು ಅಭ್ಯಾಸಿಸಲಾಗಿದೆ. ಹಳೆಗನ್ನಡ ನಡುಗನ್ನಡ, ವಚನಸಾಹಿತ್ಯ, ಕೀರ್ತನೆ, ಜನಪದ ನವ್ಯ, ನವೋದಯ ಮುಂತಾದ ಸಾಹಿತ್ಯ ಘಟ್ಟದಲ್ಲಿ ಕಲೆಯ ಕುರಿತಾಗಿ ದಾಖಲೆಗಳನ್ನು ಕೆಲವು ಸಂದರ್ಭಕ್ಕೆ ಉದಾಹರಣೆಯಾಗಿ ಬಳಸಿಕೊಳ್ಳಲಾಗಿದ್ದು, ದಶಕದ ಕಲಾ ಸಾಹಿತ್ಯ ಒಟ್ಟು ಚಾರಿತ್ರಿಕ ಸ್ವರೂಪವನ್ನು ತೆಳುವಾಗಿಯಾದರೂ ಸ್ಪಷ್ಟವಾದ ರೀತಿಯಲ್ಲಿ ಚರ್ಚಿಸಲಾಗಿದೆ.

ಸಂಪಾದನಾಕೇಂದ್ರಿತ ಸಾಹಿತ್ಯದಲ್ಲಿ ವಿವಿಧ ಸಂಘಸಂಸ್ಥೆಯಿಂದ ಅನೇಕ ಕೃತಿಗಳು ಪ್ರಕಟವಾಗಿದ್ದು, ರಾಜ್ಯದ ಬಹುತೇಕ ಕೃತಿಗಳು ಲಲಿತಕಲಾ ಅಕಾಡೆಮಿ, ಶಿಲ್ಪಕಲಾ ಅಕಾಡೆಮಿಯಿಂದ ಪ್ರಕಟಗೊಂಡಿವೆ. ಅವುಗಳನ್ನು ಅಭಿನಂದನೆ ಹಿನ್ನೆಲೆಯಲ್ಲಿ, ಸ್ಮರಣಸಂಚಿಕೆ ಹಾಗೂ ಸಂಕೀರ್ಣ ಮಾಧ್ಯಮದ ದೃಶ್ಯಕಲಾ ಸಾಹಿತ್ಯ, ಸಂಪಾದನೆಯ ಹಿನ್ನೆಲೆಯಲ್ಲಿ ವಿಭಾಗಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಇವುಗಳಲ್ಲಿ ಸಂಕೀರ್ಣ ಕಲಾಸಾಹಿತ್ಯದ ಹಿನ್ನೆಲೆಯಲ್ಲಿ ಸಂಪಾದಿತವಾದ ಕೃತಿಗಳು ಹೇರಳವಾಗಿದ್ದು, ಅವುಗಳನ್ನು ವಿಮರ್ಶಾತ್ಮವಾಗಿ ಅಧ್ಯಯನ ಕೈಗೊಳ್ಳಲಾಗಿದೆ. ಕೇವಲ ವಿವರಣೆಗಳನ್ನು ಮಾಡಲಾಗದೆ ವಿವರಣೆಯನ್ನು ಮಾಡುತ್ತಲೇ ವಿಮರ್ಶೆ ವಿಶ್ಲೇಷಣೆಗಳಿಂದ ಸಾಹಿತ್ಯಕೃತಿಗಳನ್ನು ಒಂದೊಂದಾಗಿ ಚರ್ಚಿಸಲಾಗಿದೆ. ಮತ್ತು ಒಟ್ಟಾರೆ ಸಂಪಾದನಾ ಸಾಹಿತ್ಯ ಕುರಿತಂತೆ ವಿಮರ್ಶಾತ್ಮಕವಾಗಿ ಚಿಂತನೆ ಮಾಡಲಾಗಿದೆ ಒಟ್ಟು ಸಂಪಾದನಾ ಸಾಹಿತ್ಯದಲ್ಲಿ ಜನಪದ ಶಿಲ್ಪಕಲೆ, ನವ್ಯಕಲೆ, ಹಿನ್ನೆಲೆಯಲ್ಲಿ ಕೃತಿಗಳು ರಚನೆಗೊಂಡಿದ್ದು, ಐತಿಹಾಸಿಕ ಸಾಮಾಜಿಕ

ನೆಲೆಯಲ್ಲಿಯೂ ಅಲ್ಲದೆ ಸೌಂದರ್ಯಮಿಮಾಂಸೆ, ವ್ಯಕ್ತಿಕೇಂದ್ರಿತ ಸಂಪಾದನೆಗಳು ಕಂಡು ಬರುತ್ತಿದ್ದು ಅವು ಕೇವಲ ವಿಷಯದ ನಿರೂಪಕ ಬರಹಗಳಾಗಿರದೆ, ಕೆಲವೊಮ್ಮೆ ವಿಮರ್ಶಾತ್ಮಕವಾಗಿ ರಚಿಸಲ್ಪಟ್ಟಿವೆ ಎಂಬ ಅಂಶವು ಈ ಅಧ್ಯಾಯದಿಂದ ತಿಳಿದು ಬರುತ್ತದೆ.

ಅಧ್ಯಾಯ ನಾಲ್ಕರಲ್ಲಿ ವ್ಯಕ್ತಿಕೇಂದ್ರಿತವಾದ ಸಾಹಿತ್ಯವನ್ನು ಪರಾಮರ್ಶನ ಮಾಡಲಾಗಿದೆ. ಕಲಾ ಸೃಷ್ಟಿಕರ್ತನಾದ ಕಲಾವಿದನು ಅಭಿವ್ಯಕ್ತಿಯಿಂದ ಸಾಧಿತವಾದ ಅದ್ಭುತ ಸೃಷ್ಟಿಯ ಹಿಂದಿನ ಚೇತನಾಶಕ್ತಿ ಈ ಚೇತನಾ ಶಕ್ತಿಯಿಂದಲೇ ಪ್ರಪಂಚದಲ್ಲಿ ವಿಸ್ಮಯವಾಗುವಂತೆ ಮಾಡುವ ಕಲೆಯ ಉದಯ ಸಾಧ್ಯ. ಕಲಾವಿದನ ಅದ್ಭುತ ಪ್ರತಿಭಾನದಿಂದ ನಿರ್ಮಿತವಾದ ರಸಪಾಕ ಅಸಂಖ್ಯ ಸಮಾನ ಹೃದಯಿಗಳ ಆಸ್ವಾದನಾ ಸ್ವಾದಕ್ಕೆ ಕಾರಣವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಕಲಾವಿದ ಮೂಲ ಬಿಂದುವಾಗುತ್ತಾನೆ. ಅವನ ಕುರಿತಾದ ಸಾಹಿತ್ಯ ಕಳೆದ ದಶಕದಲ್ಲಿ ಹಿಂದಿನಂತೆಯೇ ಹೇರಳವಾಗಿ ರಚಿತವಾದುದು ಕಂಡುಬರುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಕಲಾವಿದಕೇಂದ್ರಿತವಾಗಿ ರಚನೆಗೊಂಡ ಸಾಹಿತ್ಯವನ್ನು ಪರಾಮರ್ಶಿಸಿಲಾಗಿದೆ. ವ್ಯಕ್ತಿಕೇಂದ್ರಿತ ಸಾಹಿತ್ಯ ಕೇವಲ ಐತಿಹಾಸಿಕ ಮಹತ್ವವನ್ನಷ್ಟೆ ಉಳ್ಳದ್ದಾಗಿರದೆ. ಅದು ವಿಮರ್ಶೆಯ ಮಗ್ಗುಲನ್ನು ಹೊಂದಿರಲು ಸಾಧ್ಯ.

ಅಧ್ಯಾಯ ಐದರಲ್ಲಿ ಸಂಕೀರ್ಣ ದೃಶ್ಯಕಲಾಸಾಹಿತ್ಯದ ಕುರಿತಾಗಿ ಅನೇಕ ವಿಷಯಗಳು ಆಧರಿಸಿ ಪ್ರಕಟಗೊಂಡ ಕೃತಿಗಳು ಚರ್ಚಿತವಾಗಿವೆ. ಜಾನಪದ, ಶಿಷ್ಟಪದ ನೆಲೆಯಲ್ಲಿಯ ಕಲೆಗಳ ಕುರಿತಾಗಿ, ಪ್ರದರ್ಶನಾತ್ಮಕ ಕಲೆಗಳಲ್ಲಿ ದೃಶ್ಯಕಲೆಯ ಪಾತ್ರದ ಕುರಿತಾಗಿ, ದೇಶಬದ್ಧ ಹಾಗೂ ಕಾಲಬದ್ಧ ನೆಲೆಯಲ್ಲಿ ಕಲೆಯ ಅಸ್ತಿತ್ವದ ಹಲವು ಆಯಾಮಗಳ ಹಿನ್ನೆಲೆಯಲ್ಲಿ, ವ್ಯಕ್ತಿ ವಿಮರ್ಶೆ, ಕಲಾತತ್ವಶಾಸ್ತ್ರ ಮುಂತಾದ ವಿಷಯಗಳ ನೆಲೆಯಲ್ಲಿ ರಚಿತವಾದ ಕೃತಿಗಳನ್ನು ಸಂಕೀರ್ಣ ದೃಶ್ಯಕಲಾ ಸಾಹಿತ್ಯವೆಂದು ವಿಭಾಗಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಾಯ ಆರು ಅನುವಾದ ದೃಶ್ಯಕಲಾ ಸಾಹಿತ್ಯವಾಗಿದ್ದು, ದಶಕದಲ್ಲಿ ಅನುವಾದಿತವಾದ ಕಲಾಸಾಹಿತ್ಯ ಕೃತಿಗಳನ್ನು ಆಯ್ದುಕೊಂಡು ವಿಮರ್ಶಾತ್ಮವಾಗಿ ಚರ್ಚಿಸಲಾಗಿದೆ.ಇಂಗ್ಲೀಷ ಮೂಲದಿಂದ, ಕೃತಿಗಳು ಅನುವಾದಗೊಂಡ ಕೃತಿಗಳಲ್ಲಿ ಮೈಕಲೆಂಜಿಲೋ ಜೀವನಚರಿತ್ರೆ, ಕಲೆಯಲ್ಲಿ ಮಾನವತಾವಾದ, ಕೃತಿಗಳು ಪ್ರಮುಖ ಅನುವಾದಿತ ಕೃತಿಗಳಾಗಿವೆ. ಇತರ ಅಧ್ಯಾಯದ ವ್ಯಾಪ್ತಿಗೆಹೊಲಿಸಿದರೆ ಈ ಅಧ್ಯಾಯವು ಚಿಕ್ಕದಾಗಿದೆ. ಅನುವಾದದಲ್ಲಿ ವಿಷಯದೊಂದಿಗೆ ಭಾಷಾ ನೆಲೆಯಲ್ಲಿಯೂ ವಿಚಾರಿಸಿ ವಿಮರ್ಶೆ ಕೈಗೊಳ್ಳಲಾಗಿದೆ. ಕಲಾಸಾಹಿತ್ಯದ ಪ್ರಾರಂಭೀಕ ಹಂತದಿಂದ ಇಲ್ಲಿಯವರೆಗೆ ಅನೇಕ ಕೃತಿಗಳು ತೆಲುಗು, ಮರಾಠಿ, ಹಿಂದಿ, ಇಂಗ್ಲೀಷ್ ಮೂಲದಿಂದ ಕನ್ನಡಕ್ಕೆ ತರ್ಜುಮೆಗೊಂಡಿದ್ದು, ಪ್ರಾರಂಭದ ದಶಕಕ್ಕೆ ಹೋಲಿಸಿದಾಗ ಪ್ರಸ್ತುತ ದಶಕದ ಕೃತಿಗಳ ಸಂಖ್ಯೆ ಹೆಚ್ಚಾಗಬೇಕಿತ್ತು. ಅದು ಸಾಧ್ಯವಾಗಿದೆ ಸಂಕೀರ್ಣ ಹಾಗೂ ವ್ಯಕ್ತಿಕೇಂದ್ರಿತ ಸಾಹಿತ್ಯ ಹೆಚ್ಚಾಗಿ ರಚನೆಗೊಂಡಿದೆ ಎನ್ನಬಹುದು. ಪ್ರಸ್ತುತ ಅನುವಾದಿತ ಕೃತಿಗಳಲ್ಲಿ ರಾಘವೇಂದ್ರರಾವ್ ಅವರು ಅನುವಾದಿಸಿದ ಸೆತಾಸ್ಲೋವ್ ರೋರಿಕ್ ಅವರ ಕೃತಿಯು 'ಕಲೆಯಲ್ಲಿ ಮಾನವತಾವಾದವೆಂದು'

ಪ್ರಕಟವಾಗಿದೆ. ಕೃತಿಯಲ್ಲಿ ಭಾಷೆ ಬರವಣಿಗೆಯಲ್ಲಿ ತುಂಬಾ ಪ್ರೌಢಿಮೆ ಇರುವುದುಕಂಡು ಬರುತ್ತದೆ. ಅದರಂತೆ ಮೈಕೆಲೆಂಜಿಲೊ ಜೀವನಚರಿತ್ರೆ ಕೃತಿಯು ಎನ್. ಎಸ್. ನಾಗರಾಜ್ ನುಗ್ಗೆಹಳ್ಳಿಯವರಿಂದ ಅನುವಾದಗೊಂಡಿದ್ದು, ಇಂಗ್ಲೀಷ ಮೂಲದ ಕೃತಿಯಾಗಿದೆ. ಇದು ಸುಧೀರ್ಘ ಕತೆಯಿಂದ ಕೂಡಿದ್ದು, ಮೈಕೆಲೇಂಜಿಲೊನ ಆತ್ಮಚರಿತ್ರೆಯನ್ನು ಧರಿಸಿ ರೂಪಿತವಾದ ಕೃತಿಯ ಅನುವಾದವಾಗಿದೆ. ಈ ಕೃತಿಯನ್ನು ಪರಾಮರ್ಶನದಿಂದ ಸ್ಪಷ್ಟವಾಗುವ ಅಂಶವೆಂದರೆ ಇಂಗ್ಲೀಷ್ ಭಾಷೆಯಿಂದ ನೇರವಾಗಿಯೇ ಕನ್ನಡದಲ್ಲಿ ಭಟ್ಟಿ ಇಳಿಸಿದಂತೆ ಅನುವಾದಗೊಂಡಿದೆ ಎನ್ನಬಹುದಾಗಿದೆ. ಆದ್ದರಿಂದಲೇ ಅದು ೩೫೦ ಕ್ಕೂ ಹೆಚ್ಚು ಪುಟಗಳ ವಿಸ್ತೃತಿಯನ್ನು ಪಡೆದಿದೆ. ಈ ಎರಡು ಕೃತಿಗಳಿಗೆ ಹೋಲಿಸಿದರೆ ಅನಿಲಕುಮಾರರ ಕೃತಿ ಭಾಷೆಯಲ್ಲಿ ಹೆಚ್ಚು ಗಹನತೆ ಕಾಣದಿದ್ದರೂ ವಿಷಯಗಳ ಪ್ರಸ್ತಾಪದ ಸಂದರ್ಭಕ್ಕೆ ಅನ್ವಯಿಸಿ ಭಾಷೆ ಏರಿಳಿತಗಳನ್ನು ಕಂಡಿದೆ ಮತ್ತು ಕಲಾಕ್ಷೇತ್ರದ ಮಿಮಾಂಸೆಯಲ್ಲಿ ನವ್ಯದ ಹುಡುಕಾಟದ ವೈಖರಿಗಳನ್ನು, ಅನೇಕ ಸಾಧ್ಯತೆಯ ಹೊಳಹುಗಳನ್ನು ತೋರಿಸುತ್ತದೆ. ಅನುವಾದಕೇಂದ್ರಿತ ಸಾಹಿತ್ಯಕ್ಕೆ ಇನ್ನೂ ಹೆಚ್ಚು ಕೃತಿಗಳು ತರ್ಜುಮೆಗೊಳ್ಳುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಇತರ ಕ್ಷೇತ್ರಗಳಿಗೆ ಹೋಲಿಸಿದರೆ ಕಲಾಕ್ಷೇತ್ರಲ್ಲಿ ಇತ್ತಿಚೆಗೆ ಅನುವಾದಿತ ಸಾಹಿತ್ಯ ತೀರಾ ಕೃಶವಾಗಿದೆ ಎನ್ನಬಹುದಾಗಿದೆ. ಇದಕ್ಕೆ ಅನೇಕ ಕಾರಣಗಳು ನಮ್ಮೆದುರಿಗೆ ಬಿಚ್ಚಿಕೊಳ್ಳುತ್ತವೆ. ಇತರ ಭಾಷಿಕರು ಕನ್ನಡದಲ್ಲಿ ಸಾಹಿತ್ಯ ರಚನೆ ಮಾಡದಿರುವುದು ಅಥವಾ ನಮ್ಮ ಕನ್ನಡಿಗರು ಇತರ ಯಾವುದೇ ಭಾಷೆಗಳಲ್ಲಿ ಪ್ರಾವಿಣ್ಯತೆ ಇದ್ದಾಗ್ಯೂ ಕಲೆಯ ಕುರಿತಾದ ಜ್ಞಾನವಿಲ್ಲದಿರುವುದು ಮತ್ತು ಇತ್ತಿಚೀನ ದಿನಗಳಲ್ಲಿ ವ್ಯವಹಾರಿಕ ಭಾಷೆಯಾಗಷ್ಟೆ ಇಂಗ್ಲೀಷನ್ನ ವಾಡಿಕೆಯಂತೆ ಬಳಸುವ ಸಂದರ್ಭಕ್ಕೆ ಇಂಟರ್ನೆಟ್ ಜಾಲದಲ್ಲಿ ಇಂಗ್ಲೀಷ್ನಲ್ಲಿಯೇ ಕಲೆಯ ಕುರಿತಾದ ಅಂಶಗಳನ್ನು ಮಾಹಿತಿ ರೂಪದಲ್ಲಿ ಪಡೆದು ಸಂಶೋಧನೆಗೆ ತೊಡಗುವುದು ಹೀಗೆ ಒಟ್ಟಿನಲ್ಲಿ ಅನೇಕ ಅಂಶಗಳು ಅನುವಾದ ಸಾಹಿತ್ಯ ಕಡಿಮೆಯಾಗಿ ರಚನೆಯಾಗಲು ಕಾರಣವಾಗಿವೆ.

ಕಲಾವಿದರ ಜೀವನದ ಸರಳ ವಿವರಣೆಯೂ ವಿಮರ್ಶೆಯೇ ಆಗಿದೆ. ಕಲಾವಿದ ಬೆಳೆದು ಬಂದ ದಾರಿ, ತಳೆದನಿಲುವು ಬದುಕಿದ ರೀತಿಗಳನ್ನು ಕಂಡರಿಸುವ ನಿಟ್ಟಿನಲ್ಲಿ ಒಂದು ರೀತಿಯವಿಮರ್ಶೆಯೇ ಹುಟ್ಟಿಕೊಳ್ಳುತ್ತದೆ. ಯಾವುದೇ ಒಬ್ಬ ಕಲಾವಿದನ ಜೀವನವನ್ನು ತನ್ನದೃಷ್ಟಿಯಲ್ಲಿ ನೋಡಿ, ನಿರೂಪಿಸುವ ವಿಮರ್ಶಕ, ಅವನ ಜೀವನದ ಓರೆಕೋರೆಗಳು, ಕಲಾವಿದನ ಜೀವನದ ತಿರುವುಗಳು ಮುಂತಾಗಿ ಟೀಕಿಸುವ ಒಬ್ಬ ಬರಹಗಾರ ಅವರ ಕೃತಿಗಳನ್ನು ವಿಮರ್ಶಿಸುವ ತಾತ್ವಿಕನೆಲೆಯಲ್ಲಿ, ತೌಲನಿಕ ನೆಲೆಯಲ್ಲಿ ವಿಚಾರಿಸಿ ವಿಮರ್ಶೆ ಮಾಡುವುದು ಆರೋಗ್ಯವಂತ ವಿಮರ್ಶೆಗೆ ದಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ದಶಕದ ಕಲಾಸಾಹಿತ್ಯದಲ್ಲಿ ವ್ಯಕ್ತಿಕೇಂದ್ರಿತ ಕೃತಿಗಳಲ್ಲಿ ವಿಮರ್ಶೆಗಳು ನಡೆದಿದ್ದು, ಬರಹಗಾರರು ಕಲಾವಿದರನ್ನು ಕಲೆಯನ್ನು ಮುಂದಿರಿಸಿಕೊಂಡುಪರೋಕ್ಷವಾಗಿ, ಪ್ರತ್ಯಕ್ಷವಾಗಿಯೂ ವಿಮರ್ಶಿಸಿ ವಿಶ್ಲೇಶಿಸಿದ್ದಾರೆ. ಪ್ರಸ್ತುತ

ಅಧ್ಯಯನದಲ್ಲಿ ಹೀಗೆ ವಿಮರ್ಶಾತ್ಮಕವಾಗಿ ಮೂಡಿಬಂದ ವ್ಯಕ್ತಿ ಕೇಂದ್ರಿತ ಕೃತಿಗಳು ಪರಾಮರ್ಶನಗೊಂಡಿದೆ. ಶಂಕರಗೌಡ ಬೆಟ್ಟದೂರು, ವೆಂಕಟಪ್ಪ, ವಿ.ಜಿ.ಅಂದಾನಿ, ಎಂ.ಬಿ. ಲೋಹಾರ, ಸುಭಾಷಿಣೀದೇವಿ, ಪುರುಷೋತ್ತಮ ಕಾರಂತ, ಕೆ. ಕೇಶವಯ್ಯ, ವಿ.ಟಿ.ಕಾಳೆ, ಎಸ್.ಎಂ.ಪಂಡಿತ್ ಮುಂತಾದ ಹೆಸರಾಂತ ಕಲಾವಿದರ ಕುರಿತು ಬಂದ ಕೃತಿಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳು ಸಮಾರೋಪವಾಗಿದ್ದು, ಎಲ್ಲ ಅಧ್ಯಾಯಗಳ ಅಧ್ಯಾಯನದ ಒಟ್ಟಾರೆ ಸಂಕ್ಷಿಪ್ತ ವಿವರಣೆ ಒಳಗೊಂಡಿದ್ದು, ಒಟ್ಟು ಫಲಿತಗಳನ್ನು ಸಮೀಕ್ಷಿಸಲಾಗಿದೆ.

ಪ್ರಸ್ತುತ ಅಧ್ಯಯನದಿಂದ ಕಂಡುಕೊಂಡ ಕೆಲವು ಪ್ರಮುಖ ಫಲಿತಗಳು

೧. ದೃಶ್ಯಕಲಾವಿದರೇ ಸ್ವತಃ ಬರವಣಿಗೆಗೆ ತೊಡಗಿರುವ ಅಂಶ ಪ್ರಸ್ತುತ ಅಧ್ಯಯನದಲ್ಲಿ ಕಂಡು ಬರುತ್ತದೆ.

೨. ರಚನಾತ್ಮಕ ಮತ್ತು ತಾತ್ವಿಕ (ಥಿಯರಿ) ಎಂಬ ಸೂಕ್ಷ್ಮ ಭಿನ್ನತೆಯಲ್ಲಿ ಕಲಾವಿದನು ಸ್ವತಃ ವಿಮರ್ಶಕನಾದ ಸಂದರ್ಭ ಪ್ರಸ್ತುತದಲ್ಲಿ ಗಮನಕ್ಕೆ ಬರುತ್ತದೆ.

೩. ದೃಶ್ಯಕಲೆಯ ಕುರಿತು ಬರವಣಿಗೆಯ ಲೋಕವು ದೃಶ್ಯಭಾಷೆಗೆ ಶಾಬ್ದಿಕ ಆಯಾಮ ದೊರೆತಿರುವುದನ್ನು ಸೂಚಿಸುವುದಲ್ಲದೆ ದೃಶ್ಯಕಲಾಕ್ಷೇತ್ರದ ಒಂದು ಸ್ವತಂತ್ರ್ಯಭಾಷಾ ಸ್ವರೂಪವು ಉದಯಿಸುವಂತೆ ಮಾಡಿದೆ. ಇದರಿಂದ ಕಲಾ ಭಾಷಾವಲಯವೇ ಸೃಷ್ಟಿಗೊಂಡ ಅಂಶ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

೪. ಹಲವು ಪಾರಿಭಾಷಿಕ ಪದಗಳು, ಕಲಾ ಸಾಹಿತ್ಯದ ಸಂದರ್ಭದಲ್ಲಿ, ಪ್ರಸ್ತುತದಲ್ಲಿ ಹುಟ್ಟಿಕೊಂಡಿರುವುದು ತೋರಿಬರುತ್ತದೆ.

೫. ದಶಕದ ಸಾಹಿತ್ಯವು ನವ್ಯಸಾಹಿತ್ಯವಾಗಿದೆ. ಕಲಾಸಾಹಿತ್ಯ ಪ್ರಾರಂಭದಲ್ಲಿ ನವೋದಯದ ಲಕ್ಷಣಗಳನ್ನು ಹೊಂದಿದ್ದು , ಅದಕ್ಕೆ ಹೋಲಿಸಿದರೆ, ಕಲಾಸಾಹಿತ್ಯದ ಹೊಸ ರೂಪಗಳನ್ನ ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿ ಒಳಗೊಳ್ಳುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

೬. ಸಮಕಾಲೀನ ಕಲೆಯ ಸಾಹಿತ್ಯದಂತೆ ಜನಪದ ಕಲೆಗಳಲ್ಲೂ ಕಲೆಯ ಪಾತ್ರವನ್ನು ಕಂಡರಿಸುವಲ್ಲಿ ಸಾಹಿತ್ಯ ಕೃತಿಗಳು ಮುಂದಾಗಿವೆ. ಇದರಿಂದ ಕಲೆಯ ವ್ಯಾಪಕ ಅಸ್ತಿತ್ವವನ್ನು ತೋರುವಂತೆ ಮಾಡಿದುದು ಗಮನಾರ್ಹವಾಗಿದೆ.

೭. ಭೌತಿಕ ನೆಲೆಯಲ್ಲಿ ಸಮಕಾಲೀನ ಚಿಂತಕರು ವಿಮರ್ಶಿಸಿ, ಆಮೂಲಕ ಕಲೆ, ಅಸ್ತಿತ್ವವನ್ನು ಗುರ್ತಿಸಿರುವುದು ಮತ್ತು ವಾಸ್ತವಿಕ ಅಂಶಗಳನ್ನು ಪ್ರಧಾನವಾಗಿಸಿಕೊಂಡ ಸಂಗತಿಯು ಗಮನಕ್ಕೆ ಬರುತ್ತದೆ.

೮. ಆರಂಭದ ದಿನಗಳಲ್ಲಿ ಸಾಹಿತ್ಯವು ಇಂದ್ರಿಯಸುಖಪ್ರಜ್ಞೆಯ ನೆಲೆಯಲ್ಲಿ ಅಲ್ಲದೆ ಅದರಾಚೆಗೂ ಸುಪ್ತವಾಗಿ ಅಡಗಿರುವ ತತ್ವಗಳ ಜಿಜ್ಞಾಸೆಯಲ್ಲಿ 'ಕಲೆ' ಎಂಬುದನ್ನು ಕೇಂದ್ರವಾಗಿಸಿಕೊಂಡು ರಚಿತವಾಗಿರುತ್ತಿತ್ತು. ಲೌಕಿಕ, ಅಲೌಕಿಕ, ಆತ್ಮ, ಜೀವ, ಸೃಷ್ಟಿ–ದೃಷ್ಟಿ, ಪ್ರಕೃತಿ– ಪ್ರತಿಕೃತಿ, ಹೀಗೆ ಅನೇಕ ಸಿದ್ಧಾಂತಗಳ ನೆಲೆಯಲ್ಲಿ ವಿಮರ್ಶಿಸಲಾಗುತ್ತಿತ್ತು. ಇದಕ್ಕೆ ಹೋಲಿಸಿದರೆ ಪ್ರಸ್ತುತ ಸಾಹಿತ್ಯ ಸಾಮಾಜಿಕ, ಸ್ತ್ರೀವಾದ, ಯಾಂತ್ರಿಕರಣ, ಜಾಗತಿಕರಣ ಮುಂತಾದ ನೆಲೆಯಲ್ಲಿ ವಿಮರ್ಶೆಗೊಂಡಿರುವ ಅಂಶವು ಅಧ್ಯಯನದಿಂದ ಸ್ಪಷ್ಟವಾಗಿದೆ.

೯. ಪ್ರಸ್ತುತ ಅಧ್ಯಯನವು, ಕಲೆಯು ಒಳಗೊಂಡ ಪೂರಕ ಕ್ಷೇತ್ರಗಳ ಸಂಬಂಧವನ್ನು ತೋರಿಸುವಲ್ಲಿ ರಚನೆಗೊಂಡ ಪುಸ್ತಗಳು ನೃತ್ಯ, ನಾಟಕ, ಯಕ್ಷಗಾನ, ತೊಗಲುಗೊಂಬೆಯಾಟ, ಮುಂತಾದ ಪ್ರದರ್ಶನಾತ್ಮಕ ಕಲೆಗಳನ್ನು, ಸಂಗೀತ ಸಾಹಿತ್ಯಗಳಂತಹ ಶಾಬ್ದಿಕ ಸಂಬಂಧಗಳನ್ನು ಹೊಂದಿರುವುದನ್ನು ತೋರಿಸುತ್ತದೆ ಎಂದು ಹೇಳಬಹುದು.

ಪ್ರಸ್ತುತ ದಶಕದ ದೃಶ್ಯ ಕಲಾಸಾಹಿತ್ಯವು ಒಂದು ವಿಮರ್ಶಾತ್ಮಕ ನೆಲೆಯಲ್ಲಿ ಅಧ್ಯಯನ ಗೊಂಡಿದೆ. ವಿಮರ್ಶೆ ನಿರಂತರ ಪ್ರಕ್ರಿಯೆ ಆದ್ದರಿಂದ ಈ ವಿಷಯವನ್ನು ಹಲವಾರು ಸಂಶೋಧಕರು ಹಲವಾರು ದೃಷ್ಟಿಕೋನದಿಂದ ಅಧ್ಯಯನ ಮಾಡಬಹುದಾಗಿದೆ. ವಿಮರ್ಶಕರ ಚಿಂತನಾಕ್ರಮಗಳು ಹಲವಾರು. ಒಬ್ಬರಿಗಿಂತ ಮತ್ತೊಬ್ಬರ ಚಿಂತನೆಯಲ್ಲಿ ಭಿನ್ನತೆ ಇರುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವನ್ನು ಇನ್ನೂ ಹಲವು ಕೋನಗಳಿಂದ ಪ್ರವೇಶಿಸಬಹುದಾಗಿದ್ದು ಮುಂಬರುವ ಸಂಶೋಧಕರಿಗೆ ಈ ಅಧ್ಯಯನವು ಒಂದು ಬಗೆಯ ಮಾರ್ಗದರ್ಶನವಾಗಬಲ್ಲದು. ವಿಷಯ, ಭಾಷೆ, ತಾತ್ವಕತೆ, ಮೀಮಾಂಸೆ ನೆಲೆಯಲ್ಲಿ ಕೈಗೊಂಡ ಈ ಅಧ್ಯಯನ ಸಮಕಾಲೀನ ಸಂದರ್ಭಕ್ಕೆ ಹೆಚ್ಚು ಪ್ರಸ್ತುತವಾಗಬಹುದೆಂದು ಹೇಳಬಯಸುತ್ತೇನೆ.

ಅನುಬಂಧಗಳು

೧. ಗ್ರಂಥ ಋಣ

೨. ಛಾಯಾಚಿತ್ರಗಳು

ಗ್ರಂಥಋಣ

೧. **ಕರ್ನಾಟಕ ಚಿತ್ರಕಲೆ** : ಶಿವರಾಮ ಕಾರಂತ

ಪ್ರಸಾರಾಂಗ ಮೈಸೂರ ೧೯೭೧

೨. **ಜಾಗತಿಕ ಚಿತ್ರಕಲೆ** : ಬಿ. ಪಿ. ಬಾಯಿರಿ

ಪ್ರತಿಭಾ ಗ್ರಂಥಮಾಲೆ ಧಾರವಾಡ ೧೯೮೫

೩. **ಕಲೆ ಮತ್ತು ರಸಸ್ವಾದನೆ** : ಪ್ರೊ. ಎಂ. ಎಚ್. ಕೃಷ್ಣಯ್ಯ (ಸಂ) :

ಕರ್ನಾಟಕ ಲಲಿತಕಲಾ ಅಕಾಡೆಮಿ : ೧೯೮೯

೪. **ವೆಂಕಟಪ್ಪ : ಸಮಕಾಲೀನ ಪುನರಾವಲೋಕನ** : ಕೆ. ವಿ. ಸುಬ್ರಹ್ಮಣ್ಯಂ

ಕರ್ನಾಟಕ ಲಲಿತಕಲಾ ಅಕಾಡೆಮಿ : ೧೯೯೦

೫. **ರೇಖಾಚಿತ್ರ** : ಬಿ. ವಿ. ಕೆ. ಶಾಸ್ತ್ರಿ

ಕರ್ನಾಟಕ ಲಲಿತಕಲಾ ಅಕಾಡೆಮಿ : ೧೯೯೧

೬. **ಸಿ. ಪಿ. ರಾಜಾರಾಂ** : ಕೆ. ವಿ. ಸುಬ್ರಹ್ಮಣ್ಯಂ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ : ೨೦೦೪

೭. **ವಿ.ಜಿ. ಅಂದಾನಿ** : ಡಾ. ಶಿವಾನಂದ ಎಚ್. ಬಂಟನೂರ

ಕರ್ನಾಟಕ ಲಲಿತಕಲಾ ಅಕಾಡೆಮಿ :೨೦೦೪

೮. **ಪುರುಷೋತ್ತಮ ಕಾರಂತ** : ಬಿ. ಗಣೇಶ ಸೋಮಯಾಜಿ

ಕರ್ನಾಟಕ ಲಲಿತಕಲಾ ಅಕಾಡೆಮಿ : ೨೦೦೪

೯. **ವ್ಹಿ.ಟಿ.ಕಾಳೆ** : ಡಾ. ಎಸ್. ಸಿ. ಪಾಟೀಲ

ಕರ್ನಾಟಕ ಲಲಿತಕಲಾ ಅಕಾಡೆಮಿ : ೨೦೦೪

೧೦. **ಕೆ. ಕೇಶವಯ್ಯ** : ಎಸ್. ವೆಂಕಟೇಶ

ಕರ್ನಾಟಕ ಲಲಿತಕಲಾ ಅಕಾಡೆಮಿ : ೨೦೦೪

೧೧. **ರಘೋತ್ತಮ ಪುಟ್ಟಿ** : ದಿಲೀಪಕುಮಾರ ಕಾಳೆ

ಕರ್ನಾಟಕ ಲಲಿತಕಲಾ ಅಕಾಡೆಮಿ :. ೨೦೦೪

೧೨. **ಎಂ. ಆರ್. ಬಾಳಿಕಾಯಿ** : ಸುರೇಶ ಡಿ. ಹಾಲಭಾವಿ

ಕರ್ನಾಟಕ ಲಲಿತಕಲಾ ಅಕಾಡೆಮಿ : ೨೦೦೪

೧೩. **ಧನಂಜಯ ಶಿಲ್ಪಿ** : ವಿರೇಶ. ಎಸ್. ಬಡಿಗೇರ್

ಕರ್ನಾಟಕ ಶಿಲ್ಪಕಲಾ ಅಕಾಡೆಮಿ : ೨೦೦೪

೧೪. **ಬೆಳದಿಂಗಳ ಚಿತ್ರಕಲೆ** : ಆನಂದ ಕೆ. ಪೂಜಾರ

ಕರ್ನಾಟಕ ಲಲಿತಕಲಾ ಅಕಾಡೆಮಿ: ೨೦೦೪

೧೫. **ನಾಗಾರಾಧನೆ ಮತ್ತು ಚಿತ್ರಕಲೆ** : ಉಪಾಧ್ಯಾ ಮೂಡಬೆಳೆ

ಕರ್ನಾಟಕ ಲಲಿತಕಲಾ ಅಕಾಡೆಮಿ : ೨೦೦೪

೧೬. **ಚಿತ್ತಾರದ ಗೊಂಬೆ ಚಿತ್ರಕಲೆ** : ಡಾ. ಟಿ. ಗೋವಿಂದರಾಜು

ಕರ್ನಾಟಕ ಲಲಿತಕಲಾ ಅಕಾಡೆಮಿ : ೨೦೦೪

೧೭. **ಹಚ್ಚೆ ಚಿತ್ರಕಲೆ** : ಡಾ. ಎಸ್. ಸಿ. ಪಾಟೀಲ

ಕರ್ನಾಟಕ ಲಲಿತಕಲಾ ಅಕಾಡಮಿ : ೨೦೦೪

೧೮. **ಪಾಶ್ಚಾತ್ಯ ದೃಶ್ಯಕಲಾ ಸಿದ್ಧಾಂತ** : ಡಿ. ಎ. ಉಪಾಧ್ಯಾ

ಭೂಮಿ ಆರ್ಟ ಮೈಸೂರು : ೨೦೦೫

೧೯. **೬೪೭ ಕಲೆಗಳಿಂದ ದೃಶ್ಯಕಲೆಗಳವರೆಗೆ** : ಡಿ. ಎ. ಉಪಾಧ್ಯಾ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ : ೨೦೦೬

೨೦. **ಶಿಲ್ಪಿ ವೆಂಕಟಾಚಾರ್** : ಎಲ್ ಶಿವಲಿಂಗಪ್ಪ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ : ೨೦೦೬

೨೧. **ಲೋಹಫಲಕ ಮಾಂತ್ರಿಕ ಎಲ್. ಪಿ. ಅಂಚನ್** : ಚಿ. ಸು. ಕೃಷ್ಣ ಶೆಟ್ಟಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ : ೨೦೦೬

೨೨. **ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ** : ಕೆ. ವಿ. ಸುಬ್ರಹ್ಮಣ್ಯಂ

ಕರ್ನಾಟಕ ಶಿಲ್ಪಕಲಾ ಅಕಾಡಮಿ : ೨೦೦೮

೨೩. **ಡಾ. ಬಿ. ಕೆ. ಹಿರೆಮಠ** : ಡಾ ಸಿದ್ಧಲಿಂಗ ಸ್ವಾಮಿ ಹಿರೇಮಠ

ಕರ್ನಾಟಕ ಶಿಲ್ಪಕಲಾ ಅಕಾಡಮಿ : ೨೦೦೮

೨೪. **ಬಾದಾಮಿ ಚಾಲುಕ್ಯರ ಶಿಲ್ಪಕಲೆ** : ಡಾ. ಶೀಲಾಕಾಂತ ಪತ್ತಾರ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ : ೨೦೦೮

೨೫. **ಕಲೆ ಮತ್ತು ಕಲಾನುಭವ** : ಚಂದ್ರಕಾಂತ ಕುಸನೂರ

ಕರ್ನಾಟಕ ಲಲಿತಕಲಾ ಅಕಾಡೆಮಿ : ೨೦೦೮

೨೬. **ಕೆ.ಕೆ. ಹೆಬ್ಬಾರ್** : ಎನ್. ಮರಿಶಾಮಾಚಾರ

ಕರ್ನಾಟಕ ಲಲಿತಕಲಾ ಅಕಾಡೆಮಿ : ೨೦೦೮

೨೭. **ಸುರಪುರ ಚಿತ್ರಕಲೆ** : ಡಾ. ಮಲ್ಲಿಕಾರ್ಜುನ ಬಾಗೊಡಿ

ಶರಚಂದ್ರ ಪ್ರಕಾಶನ ಚಿತ್ತಾಪುರ : ೨೦೦೯

೨೮. **ಲೇಖಾವರಣ** : ಡಾ. ಮಲ್ಲಿಕಾರ್ಜುನ ಬಾಗೋಡಿ

ಶರಚಂದ್ರ ಪ್ರಕಾಶನ ಚಿತ್ತಾಪುರ : ೨೦೦೯

೨೯. **ಕಲಾದಿಗ್ಗಜರು** : ಎನ್. ಮರಿಶಾಮಾಚಾರ್

ಸಿ.ಎಂ.ಎನ್. ಪ್ರಕಾಶನ ಬೆಂಗಳೂರು ೨೦೦೯

೩೦. **ದೃಶ್ಯ** : (ಸಂ) ಮಂಜುನಾಥ

ನಮ್ಮ ಸಂಸ್ಕೃತಿ ಪ್ರಕಾಶನ : ೨೦೦೯

೩೧. **ಸಮಕಾಲೀನ ಶಿಲ್ಪಕಲೆ** : ಡಾ. ಶಿವಾನಂದ ಎಚ್. ಬಂಟನೂರ

ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ : ೨೦೧೦

೩೨. **ರೇಷಾಋಷಿ** ವಿ. ಬಿ. ಹಿರೇಗೌಡರ್ : ಎಸ್. ಎಂ. ಜಂಬುಕೇಶ್ವರ

ಕರ್ನಾಟಕ ಲಲಿತಕಲಾ ಅಕಾಡೆಮಿ : ೨೦೧೦

೩೩. **ಎಂ. ಜಿ. ವಾಚೇದಮಠ** : ಶಂಕರಪ್ಪ ಎಂ. ಕುಂದಗೋಳ್

ಕರ್ನಾಟಕ ಲಲಿತಕಲಾ ಅಕಾಡೆಮಿ : ೨೦೧೦

೩೪. **ದೃಶ್ಯಾನುಭವ** : ಡಾ. ಮೋಹನರಾವ್ ಬಿ. ಪಂಚಾಳ

ಅನ್ನಪೂರ್ಣ ಪ್ರಕಾಶನ ಬೀದರ : ೨೦೧೦

೩೫. **ದೃಶ್ಯಕಲಾ ಪ್ರಶಸ್ತಿ ಪುರಸ್ಕೃತರು** : (ಸಂ) ಡಾ. ವ್ಹಿ. ಜಿ. ಅಂದಾನಿ ಮತ್ತು ಡಾ. ಡಿ. ಬಿ. ನಾಯಕ

ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೬. **ಶಾಂತಿನಿಕೇತನವೆಂಬ ಮತ್ತೊಬ್ಬನದಲ್ಲದ ಆತ್ಮ ಚರಿತ್ರೆ** : ಎಚ್. ಎ. ಅನಿಲ್ ಕುಮಾರ್

೩೭. **ಚಿತ್ರಕಲಾವಿದ ಎಸ್. ಎಂ. ಪಂಡಿತ್** : ಡಾ. ಮೋಹನರಾವ್ ಬಿ. ಪಾಂಚಾಳ

ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೮. **ಆದಿಮ ದೃಶ್ಯ ಸೌಂದರ್ಯದ ಅಧಿಪತ್ಯ** : ಕೆ.ವಿ. ಸುಬ್ರಹ್ಮಣ್ಯಂ

ಚಿತ್ರಕಾವ್ಯ ಪ್ರಕಾಶನ : ೨೦೧೧

೩೯. **ಶಿಲಾಶ್ರಯ ಕಲೆಯ ದೃಶ್ಯಧ್ಯಾನ** : ಕೆ .ವಿ. ಸುಬ್ರಹ್ಮಣ್ಯಂ

ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ : ೨೦೧೧

೪೦. **ದೃಶ್ಯ ಪದದೃಶ್ಯ** : ಶಿವಾನಂದ ಎಚ್. ಬಂಟನೂರ

ಅಲಕಾ ಪ್ರಕಾಶನ ಖೈನೂರ : ೨೦೧೩

೪೧. **ಎಂ. ವೀರಪ್ಪ** : ಎಲ್. ಶಿವಲಿಂಗಪ್ಪ

ಜಗದ್ಗುರು ಶಿವರಾತ್ರಿಶ್ವರ ಗ್ರಂಥಮಾಲೆ ಮೈಸೂರು : ೨೦೧೪

೪೨. **ಕರ್ನಾಟಕ ಜನಪದ ಶಿಲ್ಪಕಲೆ** : ಡಾ. ಶಿವಾನಂದ ಎಚ್. ಬಂಟನೂರ

ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ : ೨೦೧೫

೪೩. **ಕಲಾ ಸಂಸ್ಕೃತಿ** : ಎಂ. ಎಚ್. ಕೃಷ್ಣಯ್ಯ

ಸ್ವಪ್ನ ಬುಕ್ ಹೌಸ್ : ೨೦೧೪

೪೪. **ಆನಂದ ಕುಮಾರಸ್ವಾಮಿ** : ಕೆ. ಎಸ್. ಶ್ರೀನಿವಾಮೂರ್ತಿ

ಅಕ್ಷರ ಚಿಂತನ : ೧೯೯೫

೪೫. **ಕಲೆಯ ದರ್ಶನ** : ಕೆ. ಶಿವರಾಮ ಕಾರಂತ

131599

AKSHARA GRANTHALAYA
ACC.NO. 131599

